ಸಂಪುಟ : ೨೪
ಸಂಚಿಕೆ : ೧

ಕರ್ನಾಟಕ ಭಾರತಿ

ಡಾ. ವಿ. ಕೃ. ಗೋಕಾಕ ವಿಶೇಷಾಂಕ

೧೯೯೧

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕರ್ನಾಟಕ ಭಾರತಿ

ತ್ರೈಮಾಸಿಕ ಪತ್ರಿಕೆ

ಸಂಪುಟ: ೨೪ ಸಂಚಿಕೆ: ೨

ಗೌರವ ಸಂಪಾದಕರು

ಡಾ. ಎಸ್. ರಾಮೇಗೌಡ

ಕುಲಪತಿಗಳು

ಸಂಪಾದಕರು

ಡಾ. ವೀರಣ್ಣ ರಾಜೂರ

ಡಾ. ಬಿ. ಆರ್. ಹಿರೇಮಠ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕರ್ನಾಟಕ ಭಾರತಿ

ಕರ್ನಾಟಕ ವಿಶ್ವವಿದ್ಯಾಲಯದ ತ್ರೈಮಾಸಿಕಪತ್ರಿಕೆ

ಸಂಪುಟ : ೨೪ ಸಂಚಿಕೆ : ೨

ನವ್ಹೆಂಬರ ೧೯೯೧

ರಾಜ್ಯೋತ್ಸವ ಸಂಚಿಕೆ

ಪ್ರಕಾಶಕರು

ಶ್ರೀ ಸದಾನಂದ ಕನವಳ್ಳಿ

ನಿರ್ದೇಶಕರು, ಪ್ರಸಾರಾಂಗ, ಕ. ವಿ. ವಿ., ಧಾರವಾಡ

ಮುದ್ರಕರು

ಮ. ಇಂಪ್ರೆಶನ್ಸ್,

3524, ನಾರ್ವೇಕರ ಗಲ್ಲಿ, ಬೆಳಗಾಂವ.

ದೂರವಾಣಿ : 24849

ಪರಿವಿಡಿ

Citation

Bharatiya Jnanpith presents the Jnanpith Award for the year 1990 to Prof. Vinayak Krishna Gokak for his outstanding contribution to Indian literature during the period 1970-84.

Prof. Gokak, born in 1909, appeared on the literary scene in 1934 with his lyrical composition *Kalopasaka*. This heralded a revolutionary change in Kannada poetry and his *Navya Kavitegalu* (1950) made him a pioneer in the field of modern poetry in Kannada. His *Dyava Prithivi* (1957), for which he received the Sahitya Akademi Award, marks the beginning of his epic expedition leading to his magnum opus, *Bharata Sindhu Rashmi* (1982). His major works during this period like *Bhagavata Nimishagalu* (1972) and *Rigvedadalli Kranta Drishti* (1977) paved the way for the emergence of this epic.


An author of about 50 works in Kannada and about 25 in English, spread over a period of six decades and covering almost all fields of literary expression like poetry, novel, plays, travelogues, aesthetics and contemplative prose, Prof. Gokak has been a strong advocate of integral vision in all his writings. What makes Gokak a legend in his own lifetime is *Bharata Sindhu Rashmi*, an epic running to more than 35000 lines of blank verse in Kannada. The theme is taken from the Rigveda, but the treatment is modern. The vedic vision and modern wisdom intersect and interact in epic contours, resulting in a scintillating synthesis of the basic streams and beams of life characterising the terrestrial point called *Bharat*.

We pray for his long life and lasting involvement in the world of letters.

KARAN SINGH	SRIYANS PRASAD JAIN	ASHOK KUMAR JAIN
Chairman	President	Managing Trustee
Selection Board	Bharatiya Jnanpith	

Bombay, 1 November, 1991

ಜ್ಞಾನಪೀಠ ಪ್ರಶಸ್ತಿ ವಿಜೇತರಾದ



ಡಾ. ವಿ. ಕೃ. ಗೋಕಾಕ ಅವರು

ಡಾ. ವಿನಾಯಕ ಕೃಷ್ಣ ಗೋಕಾಕ
(ಒಂದು ವಿಮರ್ಶಾತ್ಮಕ ಪರಿಚಯ)

ಇಂಗ್ಲೀಷ ಮೂಲ : ಶಾಂತಿನಾಥ ದೇಸಾಯಿ
ಕನ್ನಡಕ್ಕೆ : ಸದಾನಂದ ಕನವಳ್ಳಿ

ಡಾ. ವಿನಾಯಕ ಕೃಷ್ಣ ಗೋಕಾಕ (ಜನನ ೧೯೦೯) ನಿಸ್ಸಂದೇಹವಾಗಿ ಕನ್ನಡದ ಅತ್ಯಂತ ಮಹತ್ತರ ಸಾಹಿತಿಗಳಲ್ಲೊಬ್ಬರು. ಕವಿ, ಕಾದಂಬರಿಕಾರ, ವಿಮರ್ಶಕ, ನಾಟಕಕಾರ, ಮತ್ತು ಪ್ರಬಂಧಕಾರರಾಗಿ ಅವರ ಸಾಹಿತ್ಯಯಾತ್ರೆ ೧೯೩೪ ರಲ್ಲಿ ಹೊರ ಬಂದ **ಕಲೋಪಾಸಕ** ಕವನಸಂಕಲನದಿಂದ ಆರಂಭಗೊಂಡು ಅರ್ಧ ಶತಮಾನಕ್ಕಿಂತ ದೀರ್ಘವಾಗಿದೆ. ಗಮನಾರ್ಹವಾಗಿ ವಿಪುಲವಾಗಿರುವ ಅವರ ಸಾಹಿತ್ಯಸಂಪದದಲ್ಲಿ ೨೧ ಕವನಸಂಕಲನಗಳು, ೩೫೦೦೦ ಪಂಕ್ತಿಗಳುಳ್ಳ ಮಹಾ-ಕಾವ್ಯ, ೧೨೦೦ ಪುಟಗಳ ಮಹಾಕಾದಂಬರಿ, ೪ ನಾಟಕಗಳು, ೩ ಪ್ರವಾಸಕಥನಗಳು, ೧೦ ವಿಮರ್ಶಾಗ್ರಂಥಗಳು, ೨ ಪ್ರಬಂಧ ಸಂಕಲನಗಳು ಮತ್ತು ೩ ದಾರ್ಶನಿಕ ಚಿಂತನ ಗ್ರಂಥಗಳು ಸೇರಿವೆ. ಮೂರು ದಶಕಗಳಿಂದ ಹೆಚ್ಚು ಕಾಲ ಎದ್ದುಕಾಣುವ ಇಂಗ್ಲಿಷ ಪ್ರಾಧ್ಯಾಪಕರಾಗಿದ್ದ ಡಾ. ಗೋಕಾಕರು ಇಂಗ್ಲಿಷಿನಲ್ಲೂ ಬರೆದಿದ್ದಾರೆ. ಅವರ ಇಂಗ್ಲಿಷ ಕೃತಿಗಳಲ್ಲಿ ೩ ಕವಸಂಕಲನಗಳು (ಮೂಲ ಮತ್ತು ಅನುವಾದಿತ), ೧ ಕಾದಂಬರಿ (ಸಮರಸವೇ ಜೀವನದ ಮುಂದುವರಿದ ಭಾಗ), ೮ ವಿಮರ್ಶಾ-ಗ್ರಂಥಗಳು , ೧ ಜೀವನಚರಿತ್ರೆ, ೧ ಭಾರತೀಯ ಸಂಸ್ಕೃತಿ ಕುರಿತ ಗ್ರಂಥ, ೧ ಭಾರತದಲ್ಲಿ ಇಂಗ್ಲಿಷ ಕುರಿತ ಗ್ರಂಥ ಮತ್ತು ೩ ಸಂಪಾದಿತ ಸಾಹಿತ್ಯಸಂಕಲನಗಳು ಇವೆ.

ಡಾ. ಗೋಕಾಕರ ಜೀವನ ಒಂದು ಕಾವ್ಯಶಾಲೆಯೇ ಆಗಿದ್ದು, ಅವರ ಸೃಜನಾತ್ಮಕ

ಪ್ರತಿಭೆ ಸದಾ ಕ್ರಿಯಾಶೀಲವಾಗಿದೆ. ಆದರಿಂದಾಗಿ ಅವರು ಸಹಜಾಕಾರಕ್ಕಿಂತಲೂ ದೊಡ್ಡ ನವೋದಯ ವ್ಯಕ್ತಿಯಾಗಿದ್ದಾರೆ. ಅವರ ಸೃಜನಾತ್ಮಕ ಲೇಖಕ-ಬದುಕು, ಅಷ್ಟೇ ಗಮನಾರ್ಹವಾಗಿರುವ ಪ್ರಾಧ್ಯಾಪಕ, ಪ್ರಾಚಾರ್ಯ, ನಿರ್ದೇಶಕ, ಕುಲಪತಿ-ಗಳಾಗಿ ಅವರ ಶೈಕ್ಷಣಿಕ ಜೀವನದೊಂದಿಗೆ ಹಾಸುಹೊಕ್ಕಾಗಿದೆ.

ಇಂಗ್ಲಿಷ ಮತ್ತು ಕನ್ನಡ ರಮ್ಯಪಂಥ ಹಾಗೂ ಇಂಗ್ಲಿಷ ಮತ್ತು ಐರಿಷ್ ಆಧುನಿಕತಾವಾದಗಳಲ್ಲಿ ಪಳಗಿದ ಅವರು ಕನ್ನಡ ಕಾವ್ಯಕ್ಕೆ ಹೊಸ ಬಗೆಯ ಸ್ವಾತಂತ್ರ್ಯಗಳನ್ನು ತಂದುಕೊಡುವ ಮೂಲಕ ಹೊಸ ದಿಗಂತಗಳನ್ನು ಮತ್ತು ಹೊಸ ಸಾಧ್ಯತೆಗಳ ಬಾಗಿಲನ್ನು ತೆರೆದರು. ಸಮನ್ವಯ ತತ್ವಕ್ಕೆ ನಿಷ್ಠರಾಗಿರುವ ಗೋಕಾಕರು ತಮ್ಮ ಜೀವನದುದ್ದಕ್ಕೂ ಪೂರ್ವ ಮತ್ತು ಪಶ್ಚಿಮ, ಭೂತ ಮತ್ತು ವರ್ತಮಾನ, ವರ್ತಮಾನ ಮತ್ತು ಭವಿಷ್ಯ, ಮಾನವತಾವಾದ ಮತ್ತು ಆಧ್ಯಾತ್ಮ, ರಾಷ್ಟ್ರೀಯತೆ ಮತ್ತು ವೈಶ್ವಿಕತೆಗಳ ಕ್ರಿಯಾತ್ಮಕ ಸಂಶ್ಲೇಷಣೆಯಲ್ಲಿ ನಿರತರಾಗಿದ್ದಾರೆ. ತಮ್ಮ ಗುರುಗಳಲ್ಲೊಬ್ಬರಾದ ಅರವಿಂದರಂತೆ, ವಿಶ್ವಮಾನವನಾಗಿ ವಿಕಸಿಸಲು ಮಾನವನಲ್ಲಿರುವ ಆಂತರಿಕ ಶಕ್ತಿಯಲ್ಲಿ ಗಾಢ ನಂಬಿಕೆಯನ್ನು ಇಟ್ಟಿದ್ದಾರೆ.

೨

ಮೂವತ್ತರ ದಶಕದ ಆರಂಭದಲ್ಲಿ, ಒಬ್ಬ ಉಜ್ವಲ ಶೈಕ್ಷಣಿಕ ಮತ್ತು ಕಾವ್ಯಕ ಒಲವುಗಳುಳ್ಳ ಯುವಕನಾಗಿದ್ದ ಗೋಕಾಕರು ಅನಿವಾರ್ಯವಾಗಿಯೇ ವರಕವಿ ಬೇಂದ್ರೆಯವರ ಪ್ರಭಾವಕ್ಕೆ ಒಳಗಾದರು. ಬೇಂದ್ರೆಯವರ ನೇತೃತ್ವದಲ್ಲಿ ಒಂದು ಹೊಸ ಕಾವ್ಯಯುಗವನ್ನು ರೂಪಿಸಲುದ್ಯುಕ್ತವಾಗಿದ್ದ **ಗೆಳೆಯರ ಗುಂಪಿನ** ಸದಸ್ಯರಾಗಿ ಗೋಕಾಕರು ಕನಸು ಮತ್ತು ಆದರ್ಶಗಳನ್ನು, ಆಧ್ಯಾತ್ಮಿಕ ಹಂಬಲ ಮತ್ತು ಕಾವ್ಯಾಕಾಂಕ್ಷೆಗಳನ್ನು ಕುರಿತಂತೆ ರಮ್ಯಕಾವ್ಯ ಬರೆದರು. **ಕಲೋಪಾಸಕ** (೧೯೩೪) ದಲ್ಲಿ ನವೋದಯ ಶೈಲಿಯ ಭಾವಗೀತೆಗಳಿವೆ. ಇಲ್ಲಿಯೂ ಸರಳ ರಗಳೆಯಲ್ಲಿ ಪ್ರಯೋಗಗಳ ಮೂಲಕ ಗೋಕಾಕರು ತಮ್ಮದೇ ಆದ ಕಾವ್ಯ-ಭಾಷೆಯನ್ನು ರೂಪಿಸಿಕೊಳ್ಳಲೆತ್ನಿಸಿರುವರು. ತಮ್ಮ ಚಿಂತನಶೀಲ ಸಂವೇದನೆಗೆ ಒಗ್ಗುವಂಥ ನವ್ಯ ಕಾವ್ಯಭಾಷೆಯನ್ನು ರೂಪಿಸಿಕೊಳ್ಳುವುದೇ ಅವರ ಉತ್ಕಟೇಚ್ಛೆಯಾಗಿದೆ.

ಸಮುದ್ರವನ್ನು ಅದರ ಎಲ್ಲ ಭಾಗಗಳಲ್ಲಿ ವರ್ಣಿಸುವ ಹೊಸ ಸರಳ ರಗಳೆಯಲ್ಲಿ ಅವರು ಕಾವ್ಯ ಬರೆದುದು ಎಸ್. ಎಸ್. ಸ್ಟ್ರಾಟ್‌ಹೈರ್ಡ ನೌಕೆಯಲ್ಲಿ ಇಂಗ್ಲೆಂಡಿಗೆ ಯಾನ ಬೆಳೆಸಿದ ಕಾಲದಲ್ಲಿ. **ಸಮುದ್ರಗೀತೆಗಳು** (೧೯೪೦) ಸಂಕಲನದಲ್ಲಿರುವ ಕವನಗಳು ಶುದ್ಧ ತಾಜಾತನ ಹೊಂದಿವೆ. ಅವುಗಳಲ್ಲಿ ಗೋಕಾಕರ ಧ್ವನಿ ತನ್ನಿಂದ ತಾನಾಗಿಯೆ ಅಭಿವ್ಯಕ್ತಿಗೊಂಡುದನ್ನು ಕಾಣುತ್ತೇವೆ.

ಮತ್ತು ಅವರ ಎಂದಿನ ಧ್ಯಾನಶೀಲ ಗೀತಾತ್ಮಕತೆಯನ್ನು ತೋರೆದುದನ್ನು ಕಾಣುತ್ತೇವೆ. **ತ್ರಿವಿಕ್ರಮನ ಆಕಾಶಗಂಗೆ** (೧೯೪೫) ಒಂದೆಡೆ ಗೋಕಾಕರಲ್ಲಿ ಹುದುಗಿದ್ದ ಮಹಾಕಾವ್ಯದೆಡೆಗಿನ ಒಲವನ್ನು ಪ್ರಥಮ ಬಾರಿಗೆ ಹೊರಗೆಡವುತ್ತದೆ. ಇನ್ನೊಂದೆಡೆ ಕಥನಕ್ಕಾಗಲಿ ಚಿಂತನಕ್ಕಾಗಲಿ ಪ್ರಾಚೀನ ಚಂಪೂ ರೀತಿಯ ಆಧುನಿಕ ಕಾವ್ಯಭಾಷೆಯನ್ನು ರೂಪಿಸುವ ಯತ್ನವನ್ನು ತೋರುತ್ತದೆ. **ಅಭ್ಯುದಯ** (೧೯೪೬) ಮತ್ತು **ಹಿಗ್ಗು** (೧೯೫೦) ಗಳಲ್ಲಿ ಗೋಕಾಕರು ಬರಗಾಲ ಕ್ಷಾಮ ಮತ್ತು ವಸಾಹತುಶಾಹಿ ಶೋಷಣೆಯಂಥ ಸಮಕಾಲೀನ ವಸ್ತುಗಳ ಬಗೆಗೆ ಬರೆಯುವುದನ್ನು ಕಾಣುತ್ತೇವೆ.

ಸ್ವಾತಂತ್ರ್ಯೋತ್ತರ ಭಾರತದ ಹೊಸ ಪ್ರವೃತ್ತಿಗಳು ಒಂದು ಹೊಸ ರೀತಿಯ ಕಾವ್ಯವನ್ನು ಅಪೇಕ್ಷಿಸುತ್ತಿದ್ದವು. ಆಗ ಗೋಕಾಕರು ಎಲಿಯಟ್, ಪೌಂಡ್ ಮತ್ತು ಫ್ರೆಂಚ್ ಸಂಕೇತವಾದಿಗಳ ರೀತಿಯಲ್ಲಿ ಆಧುನಿಕ ಕಾವ್ಯದ ಪ್ರವರ್ತಕರಾದರು. ಅದನ್ನವರು 'ನವ್ಯ' ಎಂದು ಕರೆದರು. **ನವ್ಯ ಕವಿತೆಗಳು** (೧೯೫೦) ಹೊಸ ವಸ್ತು, ಹೊಸ ಪ್ರತಿಮೆಗಳು, ಹೊಸ ಲಯಗಳು, ಹೊಸ ವ್ಯಂಗ್ಯ ಮತ್ತು ವಿಡಂಬನ ಛಾಯೆಗಳು, ಅಲೌಕಿಕ ಮತು ಲೌಕಿಕಗಳ ಸೋಜಿಗಕಾರಕ ಜೋಡಣೆ ಮುಂತಾದವುಗಳಲ್ಲಿ ತನ್ನ ಪ್ರಯೋಗಗಳಿಂದಾಗಿ ಕನ್ನಡದಲ್ಲಿ ಒಂದು ನೂತನ ಕಾವ್ಯಯುಗವನ್ನೂ ಆರಂಭಿಸಿತು. ಗೋಕಾಕರು 'ನವ್ಯ'ವನ್ನು ಮುಖ್ಯವಾಗಿ ಹೊಸ ಕಾವ್ಯಭಾಷೆಯ ದೃಷ್ಟಿಯಿಂದ ವ್ಯಾಖ್ಯಾನಿಸಿದರು. ಆದರೆ, ರೋಷ, ನಿರಾಸೆ ಮತ್ತು ಭ್ರಮನಿರಸನಗಳ ಹೊಸ ಸಂವೇದನೆಯ ದೃಷ್ಟಿಯಿಂದ ವ್ಯಾಖ್ಯಾನಿಸಿದ ಗೋಪಾಲಕೃಷ್ಣ ಅಡಿಗರಂಥವರೂ ಇದ್ದರು.

ಗೋಕಾಕರು ತಮ್ಮ **ಬಾಳದೇಗುಲದಲ್ಲಿ** (೧೯೫೭) ಕೃತಿಯಲ್ಲಿ ಮಹಾಕಾವ್ಯ ಪ್ರಕಾರದತ್ತ ಹೊರಳಿದರು. ಮತ್ತು ಅದನ್ನು ಆಧುನೀಕರಿಸಲೆತ್ನಿಸಿದರು. ಅದರಲ್ಲವರು ನಾಯಕರ ಬದಲು ತಮ್ಮದೇ ಅಂತರ್ದೃಷ್ಟಿಗನುಗುಣವಾಗಿ ಜೀವನೋಪಾಸನೆಯಲ್ಲಿ ನಿರತರಾದ ವಿಶಿಷ್ಟ ವ್ಯಕ್ತಿಗಳನ್ನು ಚಿತ್ರಿಸಿದ್ದಾರೆ. ೧೯೬೦ ರಲ್ಲಿ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಗಳಿಸಿದ **ದ್ಯಾವಾ ಪೃಥಿವಿ** (೧೯೫೭) ಯಲ್ಲಿ ದಾರ್ಶನಿಕ ವಿಚಾರಗಳನ್ನು ಭಾವಗೀತಾತ್ಮಕತೆಯೊಂದಿಗೆ ಬೆಸೆಯುವಲ್ಲಿ ಗೋಕಾಕರ ಪ್ರಯತ್ನ ಘನ ಸಫಲತೆ ಪಡೆದಿದೆ. ೧೯೬೦ ರಲ್ಲಿಯೆ ಅವರಿಗೆ ಪದ್ಮಶ್ರೀ ನೀಡಿ ಗೌರವಿಸ-ಲಾಯಿತು. ವ್ಯಕ್ತ ಮತ್ತು ಅವ್ಯಕ್ತಗಳ ತಾಯಿಯಾದ ಪರಾಶಕ್ತಿಯ ದರ್ಶನವನ್ನು ಇಂದ್ರನಿಂದ ಪಡೆಯಲೆತ್ನಿಸುವ ಇಕ್ಷ್ವಾಕುವಿನ ಪುರಾಣಕಥೆಯ (ಗೋಕಾಕರು ಭಾರತೀಕರಿಸಿದ ಗ್ರೀಕ ಪುರಾಣಕಥೆ ಇದು) ಸುತ್ತ ಈ ಕೃತಿಯಲ್ಲಿಯ ಕವಿತೆಗಳನ್ನು ಹೆಣೆಯಲಾಗಿದೆ.

ಗೋಕಾಕರ ಆಧುನಿಕತಾವಾದದಲ್ಲಿ ರಮ್ಯವಾದ ಆಶಾವಾದಿ ಬೆಳ್ಳಿರೇಖೆ ಇತ್ತು. ಶೂನ್ಯವಾದ ಮತ್ತು ಅಸಂಗತವಾದಗಳ ಮೋಡ ಮುಸುಕಿದ್ದ ಇನ್ನುಳಿದ ಆಧುನಿಕತಾವಾದಿಗಳಿಗೆ ಇದು ರುಚಿಸಲಿಲ್ಲ. ಗೋಕಾಕರು ಜೀವನದ ಸಮಗ್ರ ದೃಷ್ಟಿಯುಳ್ಳ ಸಮನ್ವಯ ಮಾರ್ಗ ಹಿಡಿದರು. ಅವರ ನಂತರದ ಕಾವ್ಯಗಳಾದ **ಊರ್ಣನಾಭ** (೧೯೬೧) ಮತ್ತು **ಸಿಮ್ಲಾ ಸಿಂಫನಿ** (೧೯೭೨) ಗಳಲ್ಲಿ ವಿಪುಲವಾಗಿ ಪ್ರತಿಫಲಿತವಾಗಿದೆ.

೩

ಗೋಕಾಕರ ಮಹಾಕಾವ್ಯ **ಭಾರತ ಸಿಂಧುರಶ್ಮಿ**ಯನ್ನು ಸಂಕ್ಷಿಪ್ತವಾಗಿ ಅವಲೋಕಿಸುವ ಮುನ್ನ ಸಮಾನಾಂತರ ಸಾಧನೆಯಾಗಿರುವ ಅವರ ಗದ್ಯಕೃತಿಗಳನ್ನು ನೋಡೋಣ. ೧೯೩೪ ರಷ್ಟು ಹಿಂದೆಯೇ ಅವರು ಬರೆದ ಅಪರೂಪವಾದ, ವಾಸ್ತವಿಕವಾದ **ಇಜ್ಜೋಡು** ಕಾದಂಬರಿ ಮಧ್ಯಮವರ್ಗದ ಬ್ರಾಹ್ಮಣರ ಸಮಸ್ಯೆಗಳನ್ನು ನಿರೂಪಿಸುತ್ತದೆ. ಬಳಿಕ ಅವರು ಕಥಾನಾಯಕ ನರಹರಿಯ ಕಥೆಯನ್ನು, ಯೌವನದಿಂದ ಪ್ರೌಢತೆಯೆಡೆಗೆ ಅವನ ಬೆಳವಣಿಗೆಯನ್ನು ಚಿತ್ರಿಸಲೋಸುಗ ಮುಂದುವರಿಸಿದರು ಮತ್ತು ೧೯೬೧ ರಲ್ಲಿ ಆ ಮಾಲಿಕೆಯನ್ನು ಮುಕ್ತಾಯಗೊಳಿಸಿದರು. ಇವೆಲ್ಲ ಕಾದಂಬರಿಗಳಿಗೆ ಒಟ್ಟಾರೆ **ಸಮರಸವೇ ಜೀವನ** ಎಂದು ಹೆಸರಿಟ್ಟರು. ಸೋಜಿಗವೆಂದರೆ, ಕಾದಂಬರಿಯ ಅಂತಿಮ ಸಂಪುಟವನ್ನು ಇಂಗ್ಲೀಷಿನಲ್ಲಿ Narahari, the Prophet of New India (೧೯೭೨) ಎಂಬ ಹೆಸರಿಟ್ಟು ಬರೆಯಲಾಗಿದೆ. ಅದನ್ನು ಅಮೆರಿಕೆಯಲ್ಲಿ ಇತ್ತೀಚೆಗೆ ಪುನರ್ಪ್ರಕಟಿಸಿದ್ದಾರೆ. ಕನ್ನಡದಲ್ಲಿ ಈ ರೀತಿಯ ಪ್ರಥಮ ಕೃತಿಯಾಗಿರುವ ಈ ಗಾಥೆ ವಾಸ್ತವಿಕ ಮತ್ತು ಆದರ್ಶಗಳ ವಿಶಿಷ್ಟ ಸಮ್ಮಿಳನವಾಗಿದೆ. ಇಲ್ಲಿಯ ಆದರ್ಶವಾದ ಅರವಿಂದರ ದರ್ಶನದಿಂದ ಪ್ರೇರಿತವಾದುದಾಗಿದೆ.

ಅವರ ಎರಡು ನಾಟಕಗಳು **ಜನನಾಯಕ** (೧೯೩೯) ಮತ್ತು **ಯುಗಾಂತರ** (೧೯೪೭) ಉಲ್ಲೇಖನೀಯವಾಗಿವೆ. ಮೊದಲನೆಯದು ಶೇಕ್ಸ್‌ಪಿಯರ ಮಾದರಿಯ ನಾಟಕ. ಅದರ ನಾಯಕ ಊಳಿಗಮಾನ್ಯ ದಬ್ಬಾಳಿಕೆಯ ವಿರುದ್ಧ ಹೋರಾಡಿ ಅಸುನೀಗಿದ ಕ್ರಾಂತಿಕಾರಿ ರಾಷ್ಟ್ರೀಯವಾದಿ. ಸ್ವಾತಂತ್ರ್ಯ ಪಡೆಯುತ್ತಿದ್ದ ಕಾಲದಲ್ಲಿ ಭಾರತೀಯ ಪ್ರಜ್ಞೆಯಲ್ಲಿ ಬೇರೂರಲು ಒಂದೊಂದೂ ಸ್ಪರ್ಧಿಸುತ್ತಿದ್ದ ನಾಲ್ಕು ಮೌಲ್ಯಗಳನ್ನು ಪ್ರತಿನಿಧಿಸುವ ವಿಚಾರಗಳ ನಾಟಕ **ಯುಗಾಂತರ**. ಈ ಸರಳ ರೂಪಕಾತ್ಮಕ ನಾಟಕದಲ್ಲಿ ನಾಲ್ಕು ಪಾತ್ರಗಳಿವೆ.: ಒಬ್ಬ ಸಮಾಜಸೇವಕ, ಒಬ್ಬ ಸಾಧಾರಣ ಒಳ್ಳೆಯ ವರ್ತಕ, ಒಬ್ಬ ಕಮ್ಯುನಿಸ್ಟ್ (ಇಲ್ಲಿ ಹುಡುಗಿ) ಮತ್ತು ಅವಳ ಪ್ರಿಯಕರನಾಗಿರುವ ಕವಿ. ನಾಟಕದ ಸಂದೇಶವೇನೆಂದರೆ ಸಾಮಾಜಿಕ ಶಾರ್ಕ್‌ಗಳ

ಬಗೆಗೆ ಎಚ್ಚರದಿಂದಿದ್ದು ಕವಿಯ ಉತ್ತಮ ಜಗತ್ತಿನ ಕಲ್ಪನೆಯ ಬೆಳಕಿನಲ್ಲಿ ಎಲ್ಲರೂ ಒಗ್ಗಟ್ಟಿನಲ್ಲಿ ದುಡಿಯಬೇಕು.

ಗೋಕಾಕರನ್ನು ಕನ್ನಡದ ಆಧುನಿಕ ವಿಮರ್ಶೆಯ ಜನಕನೆಂದು ಕರೆದರೆ ಅತಿಶಯೋಕ್ತಿಯಾಗಲಾರದು. ಅವರ ಪ್ರಾರಂಭಿಕ ವಿಮರ್ಶಾ ಬರಹಗಳು ಪಾಶ್ಚಿಮಾತ್ಯ ಶಿಕ್ಷಣದ ಗಾಢ ಛಾಯೆ ಹೊಂದಿರುವುದಾದರೂ ಅವರು ಬೇಗನೆ ತಮ್ಮದೇ ಸಿದ್ಧಾಂತವನ್ನು ರೂಪಿಸಿಕೊಂಡರು. ಇದು ಕೋಲ್‌ರಿಜ್‌ರ, ಅರವಿಂದರ ಮತ್ತು ಭಾರತೀಯ ಕಾವ್ಯಮೀಮಾಂಸೆಗಳ ಸಮನ್ವಯವಾಗಿದೆ. ಇದನ್ನವರು 'ಸಾಹಿತ್ಯದ ಸಮಗ್ರ ದೃಷ್ಟಿ' ಎಂದು ಕರೆಯುತ್ತಾರೆ. ಅವರು ವಿಮರ್ಶೆಯಲ್ಲಿ ಸಮನ್ವಯಪಥವನ್ನು ಸ್ಥಾಪಿಸಲೆತ್ನಿಸಿದರು. ಅದು ಪಾಶ್ಚಿಮಾತ್ಯ ಮತ್ತು ಪೌರ್ವಾತ್ಯ ಪದ್ಧತಿಗಳನ್ನು, ನವೋದಯ ಮತ್ತು ನವ್ಯವನ್ನು, ರಮ್ಯವಾದ ಮತ್ತು ಆಧುನಿಕತಾವಾದಗಳನ್ನು ಕಲೆಯ ಮೂಲಭೂತ ತತ್ವಗಳನ್ನಾಧರಿಸಿ ಸಮನ್ವಯಿಸಲು ಯತ್ನಿಸಿದರು.

೪

ಗೋಕಾಕರ ಮೇರುಕೃತಿ **ಭಾರತ ಸಿಂಧುರಶ್ಮಿ** ಮಹಾಕಾವ್ಯ. ಅದನ್ನು ಪೂರ್ತಿಗೊಳಿಸಲು ಏಳು ವರ್ಷಗಳ ಸುದೀರ್ಘ, ಸತತ ತಪಶ್ಚರ್ಯೆಗೈದರು.

ಒಂದು ಸ್ತರದಲ್ಲಿ, ಈ ಮಹಾಕಾವ್ಯ ಋಷಿಯಾಗಿ ಮಾರ್ಪಾಡಾದ ಮತ್ತು ಗಾಯತ್ರಿಯ ದ್ರಷ್ಟಾರನಾದ ಕ್ಷತ್ರಿಯ ರಾಜ ವಿಶ್ವಾಮಿತ್ರನ ಕಥೆಯನ್ನು ಹೇಳುತ್ತದೆ. ಇನ್ನೊಂದು ಸ್ತರದಲ್ಲಿ, ಅದು ಆರ್ಯ ದ್ರಾವಿಡ ಸಂಸ್ಕೃತಿಗಳ ಸಂಶ್ಲೇಷಣೆಯ ಹಾಗೂ ಭರತವರ್ಷದ ಉದಯದ ಕಥೆಯಾಗಿದೆ. ವಿಶ್ವಾಮಿತ್ರ ವರ್ಣಗಳ ಸಂಶ್ಲೇಷಣೆಯ ಪ್ರತೀಕವಾಗಿರುವಂತೆಯೇ ಇನ್ನೊಬ್ಬ ನಾಯಕನಾದ ರಾಜಾ ಸುದಾಸ ಕುಲಗಳ ಸಂಶ್ಲೇಷಣೆಯ ಪ್ರತೀಕವಾಗಿದ್ದಾನೆ. ಉನ್ನತ ಆಧ್ಯಾತ್ಮಿಕ ಸ್ತರದಲ್ಲಿ, ವಿಶ್ವಾಮಿತ್ರನ ಕತೆ ಅರವಿಂದರು ಹೇಳುವ "ದೈವತ್ವದೆಡೆ ಮಾನವನ ಸಫಲ ಆರೋಹ"ವನ್ನು ಸಂಕೇತಿಸುತ್ತದೆ. ತ್ರಿಶಂಕು, ಸ್ಮರಣೆ, ಬುದ್ಧಿ ಮತ್ತು ಕಲ್ಪನೆಗಳ ಮೇಲೆ ಪ್ರಭುತ್ವ ಸಂಪಾದಿಸಿದ, ಆದರೆ ಅಂತರ್ದೃಷ್ಟಿ ಮಾತ್ರ ಸಾಫಲ್ಯಕ್ಕೆ ಮಾರ್ಗವೆಂಬುದನ್ನು ಇನ್ನೂ ಅರಿಯಬೇಕಿರುವ ಆಧುನಿಕ ಮಾನವನ ಸಂಕೇತವಾಗಿದ್ದಾನೆ. ವಿಶ್ವಾಮಿತ್ರನ ಅತಿಮಾನವ ಪ್ರಯತ್ನಗಳಿದ್ದಾಗ್ಯೂ ಸಶರೀರಿ-ಯಾಗಿ ಸ್ವರ್ಗ ಸೇರುವ ಗುರಿ ಸಾಧಿಸುವಲ್ಲಿ ತ್ರಿಶಂಕು ವಿಫಲನಾಗುತ್ತಾನೆ. ಕೊನೆಗೆ ಅಂತರ್ದೃಷ್ಟಿಯ ಮೂಲಕ ಮೋಕ್ಷ ಸಾಧ್ಯವೆಂದು ಕಂಡುಕೊಳ್ಳುತ್ತಾನೆ. ಮತ್ತು ಬಳಿಕ ನಕ್ಷತ್ರವಾಗುತ್ತಾನೆ. ಮಹಾಕಾವ್ಯ ಮೂರ್ತೀಕರಿಸುವ ಭೌತಪ್ರಪಂಚದ ಸ್ತರದಲ್ಲಿ ಪಾತ್ರಗಳ ಅದ್ಭುತ ವೈವಿಧ್ಯವಿದೆ. ಶಿಷ್ಟರು ಹಾಗೂ ದುಷ್ಟರು, ದೇವತೆಗಳು,

ಋಷಿಗಳು ; ಶಾಂತಿ ಮತ್ತು ಸಮರ, ಪ್ರೀತಿ ಮತ್ತು ವೈರ, ಪಯಣ ಮತ್ತು ಸಾಹಸ, ಯಜ್ಞ ಮತ್ತು ತಪಸ್ಸು, ವೈಫಲ್ಯ ಮತ್ತು ಸಾಫಲ್ಯ ಸಂದರ್ಭಗಳಲ್ಲಿ ಮತ್ತು ಸ್ತ್ರೀ ಪುರುಷರಿಗೆ ಸಾಧ್ಯವಿರುವ ಎಲ್ಲ ಭಾವ ಮನೋಭಾವಗಳಲ್ಲಿ ಕಾಣಿಸಿಕೊಳ್ಳುವ ರಾಜರು ಮತ್ತು ಇತರರಿದ್ದಾರೆ. ಒಟ್ಟಂದದಲ್ಲಿ, ಸಮಕಾಲೀನಕ್ಕೆ ಮತ್ತು ಸರ್ವಕಾಲೀನಕ್ಕೆ ಪ್ರಸ್ತುತವಾಗುವ ರೀತಿಯಲ್ಲಿ ಈ ಮಹಾಕಾವ್ಯ ವೈದಿಕ ಸಂಸ್ಕೃತಿ ಮತ್ತು ಅದರ ಮಾರ್ಪಡುತ್ತಿರುವ ಮೌಲ್ಯಗಳನ್ನು ಪುನರ್‌ಸೃಷ್ಟಿಸುತ್ತದೆ. ನಿಜಕ್ಕೂ **ಭಾರತ ಸಿಂಧುರಶ್ಮಿ** ಪ್ರಪಂಚದ ಮಹಾಕಾವ್ಯ ಪರಂಪರೆಯಲ್ಲಿ ವಿಶಿಷ್ಟ ಸ್ಥಾನ ಪಡೆದಿದೆ. ಅಷ್ಟೇ ಅಲ್ಲ, ರಾಷ್ಟ್ರೀಯ ಪ್ರಜ್ಞೆಯ ಮಹಾಕಾವ್ಯವನ್ನು ಆಂತರಿಕ ದರ್ಶನದ ಮಹಾಕಾವ್ಯದೊಂದಿಗೆ ಬೆಸೆಯುವ ವಿಶಿಷ್ಟಾರ್ಥದಲ್ಲಿ ಆ ಪರಂಪರೆಯನ್ನು ಶ್ರೀಮಂತಗೊಳಿಸುತ್ತದೆ. **ಭಾರತ ಸಿಂಧುರಶ್ಮಿ**ಯಲ್ಲಿ ಅತ್ಯಂತ ಅರ್ಥವತ್ತಾದುದೆಂದರೆ ಭಾರತದ ಅದೃಷ್ಟದ ವಸ್ತು ಮಾನವನ ಅಂತಿಮ ದೈವದೊಂದಿಗೆ ಅರ್ಥಪೂರ್ಣವಾಗಿ ಹೆಣೆಯಲ್ಪಟ್ಟಿರುವದು.*

❑ ❑

* ಭಾರತೀಯ ಜ್ಞಾನಪೀಠಕ್ಕಾಗಿ ಬರೆದುದು.

ಗೋಕಾಕ : ಪ್ರತಿಭಾಸ್ವರೂಪ

– *ಶ್ರೀನಿವಾಸ ಕುಲಕರ್ಣಿ*

ಕವಿಯ ವ್ಯಕ್ತಿತ್ವವನ್ನು ನಿಗ್ರಹಿಸುವ, ನಿಯಂತ್ರಿಸುವ ಹಾಗೂ ವಿಸ್ತರಿಸುವ ಮಹಾಶಕ್ತಿ, ಅವನ ಚೈತನ್ಯದಲ್ಲಡಗಿರುವ ಪ್ರತಿಭೆ. ವಿಶ್ವವನ್ನು ನೋಡುವ, ವಿಶ್ವದ ಸಮಸ್ಯೆಗಳನ್ನು, ಸಂಘರ್ಷಗಳನ್ನು ಅರ್ಥಮಾಡಿಕೊಳ್ಳುವ ಹಾಗೂ ಅವುಗಳಲ್ಲಿ ತರ-ತಮಭಾವವನ್ನುಂಟು ಮಾಡುತ್ತ ಅವನ ಅನುಭವದ ತೆರೆಯೊಳಗೆ ವಿಶ್ವದ ವಸ್ತುಗಳು ಬಂದು ನಿಲ್ಲಲು ಅವನ ವಿಶಿಷ್ಟ ಪ್ರತಿಭೆಯೇ ಕಾರಣ. ಹೀಗೆ ತನಗೆ ದಕ್ಕಿದ ಅನುಭವಪ್ರಪಂಚವನ್ನು ಮರಳಿ ಭಾಷೆಯಲ್ಲಿ ಕಟ್ಟಿಕೊಡುವ ಪುನಃ ಸಂಯೋಜಿಸುವ ಕಾರ್ಯವೂ ಈ ಪ್ರತಿಭೆಯನ್ನೇ ಅವಲಂಬಿಸಿದೆ. ಕವಿಯ ಸೃಜನಶಕ್ತಿಯ ಕೇಂದ್ರಬಿಂದುವಾದ ಈ ಪ್ರತಿಭೆ ಒಟ್ಟು ಅವನ ಕವಿತ್ವಶಕ್ತಿಯ ಮೂಲಸ್ಥಾನ. ಈ ಪ್ರತಿಭೆ ಒಂದು ವಿಶಿಷ್ಟ ಪ್ರಜ್ಞೆ. ಈ ಪ್ರಜ್ಞಾಸ್ಥಿತಿಯಲ್ಲಿ ಕವಿಮನಸ್ಸಿಗೆ ಹೊಸ-ಹೊಸ ಅರ್ಥಗಳು ಹೊಳೆಯುತ್ತವೆ. ಹಾಗೆ ಹೊಳೆದ, ತಿಳಿದ ಹೊಸ ಹೊಸ ಅರ್ಥಗಳು ಹೊಸ ಹೊಸ ಮಾತುಗಳಲ್ಲಿ, ಮಾತುಗಳ ರೀತಿಗಳಲ್ಲಿ ಪುನರ್‌ಸೃಷ್ಟಿಪಡೆಯುತ್ತವೆ. ಹೀಗೆ ಅಪೂರ್ವವಸ್ತುವನ್ನು ನಿರ್ಮಾಣ ಮಾಡುವ ಸಾಮರ್ಥ್ಯವೇ ಪ್ರತಿಭೆ. ಆದುದರಿಂದ ಪ್ರತಿಭಾಕ್ರಿಯೆ ಒಂದು ವಿಶೇಷವಾದ ಮಾನಸಿಕ ಸ್ಥಿತಿ. "ಕವಿಯ ವ್ಯಕ್ತಿತ್ವಸಮಸ್ತವೂ ತನ್ನೆಲ್ಲ ಶಕ್ತಿ-ಸಾಮರ್ಥ್ಯಗಳೊಂದಿಗೆ ಕೇಂದ್ರ ಬಿಂದುವೊಂದಕ್ಕೆ ಬಂದು ಕ್ರಿಯಾಶೀಲವಾಗುವ ವಿಧಾನ ಇದು'. [೧] ಈ ಪ್ರತಿಭೆಯಲ್ಲಿ ಹಾಗೂ ಪ್ರತಿಭೆಯ ಧೋರಣೆಯಲ್ಲಿ ಅನನ್ಯತೆ, ವಿವಿಧತೆ ಹಾಗೂ ವಿಶಿಷ್ಟತೆಗಳು ಮೈದೋರಿ ಕವಿಯನ್ನು, ಅವನ ಕಾವ್ಯಧೋರಣೆಯನ್ನು ರೂಪಿಸುತ್ತವೆ. ಎಂತಲೇ ಪಂಪನ

---

೧. Coleridge - Biographia Litereria - Vol. II - P. 12

ಪ್ರತಿಭೆ, ಕುಮಾರವ್ಯಾಸನ ಪ್ರತಿಭೆ, ಬೇಂದ್ರೆ ಪ್ರತಿಭೆ, ಗೋಕಾಕ ಪ್ರತಿಭೆ ಮುಂತಾದ ಮಾತುಗಳು ಔಚಿತ್ಯಪೂರ್ಣವಾಗಿರುವುದನ್ನು ಕಾಣುತ್ತೇವೆ.

ಡಾ. ವಿನಾಯಕ ಕೃಷ್ಣ ಗೋಕಾಕ ಹೊಸಗನ್ನಡ ಸಾಹಿತ್ಯದ ಮೈಲಿಗಲ್ಲು. ನವೋದಯ ಸಾಹಿತ್ಯ ಕಾಲದಲ್ಲಿ ಮೂಡಿಬಂದ ಈ ಕವಿ ಆ ಯುಗದ ಸತ್ವ, ಶಕ್ತಿಗಳನ್ನು ಮೈಗೂಡಿಸಿಕೊಂಡು ಬೆಳೆಬೆಳೆಯುತ್ತ ನವ್ಯ ಪ್ರಪಂಚಕ್ಕೂ ಕಾಲಿಟ್ಟು ಅಲ್ಲಿಯೂ ತನ್ನ ಅಸ್ತಿತ್ವದ ಗಾಢ ಪ್ರಭಾವವನ್ನುಂಟು ಮಾಡಿ ಕೊನೆಗೆ ಆ ರೇಖಾವಲಯವನ್ನೂ ಮೀರಿ ಬೆಳೆದು ನಿಂತ ಅನುಪಮ ವ್ಯಕ್ತಿ. ವೈವಿಧ್ಯಮಯ-ವಾದ ಜೀವನಾನುಭವ, ತಲಸ್ಪರ್ಶಿಯಾದ ಚಿಂತನಶೀಲತೆ, ವಿಸ್ತಾರವಾದ, ಗಂಭೀರ-ವಾದ ಜೀವನಧೋರಣೆ ಹಾಗೂ ಅನಂತಮುಖವಾದ ಪ್ರವೃತ್ತಿಗಳು ಗೋಕಾಕರ ವ್ಯಕ್ತಿತ್ವವನ್ನು, ವ್ಯಕ್ತಿತ್ವದ ಪ್ರತಿಭೆಯನ್ನು ವಿಶಿಷ್ಟವಾಗಿಸಿವೆ. ಬಾಳಿನಲ್ಲಿಯ ಏಳು-ಬೀಳುಗಳು, ವೃತ್ತಿಯಲ್ಲಿನ ಬಹುಬಗೆಯ ಬದಲಾವಣೆಗಳು, ಸಿದ್ಧಿಗಳು, ಹಾಗೂ ದರ್ಶನಗಳ ವೈವಿಧ್ಯಮಯವಾದ ಶ್ರದ್ಧಾಸ್ಥಾನಗಳು ಅವರ ವ್ಯಕ್ತಿತ್ವರೂಪಿಸಿದ ಮಹತ್ವದ ಅಂಶಗಳು. ಪ್ರಾಧ್ಯಾಪಕರಾಗಿ, ಪ್ರಾಂಶುಪಾಲರಾಗಿ, ಆಡಳಿತಗಾರರಾಗಿ, ಕುಲಪತಿಯಾಗಿ, ನಿರ್ದೇಶಕರಾಗಿ ಹಲವು ಸ್ಥಾನ-ಮಾನಗಳನ್ನು ಗಳಿಸಿದ ಸಮೃದ್ಧ ಜೀವನ ಅನುಭವ ಒಂದೆಡೆ, ಬಾಳೇಕುಂದ್ರಿಯ ಮಹಾರಾಜರು, ಶ್ರೀ ಅರವಿಂದರು ಹಾಗೂ ಶ್ರೀ ಸತ್ಯಸಾಯಿಬಾಬಾ ಅವರುಗಳು ಅವರ ಶ್ರದ್ಧಾ ಕೇಂದ್ರದ ಮೂಲಸ್ಥಾನದಲ್ಲಿ ನಿಂತು ಅವರ ಮನೋಭಾವ ರೂಪಿಸಿದ್ದು ಮತ್ತೊಂದೆಡೆ ಗೋಕಾಕರ ಬದುಕಿಗೆ ಅನುದಿನವೂ ಹೊಸತನ್ನು ನೀಡಿವೆ. ಮಹಾರಾಷ್ಟ್ರ, ಕರ್ನಾಟಕ, ಗುಜರಾತ, ಆಂಧ್ರಪ್ರದೇಶ, ಕಾಶ್ಮೀರ ಹಾಗೂ ಉತ್ತರ ಭಾರತದ ಹೃದಯ ಸ್ಥಾನವಾದ ದೆಹಲಿ ಮುಂತಾದ ಪ್ರದೇಶಗಳಲ್ಲಿಯಲ್ಲದೇ ಪಾಶ್ಚಾತ್ಯ ವಿಶ್ವದ ಹಲವು ಪ್ರದೇಶಗಳಲ್ಲಿ ದುಡಿದು, ಕಲಿತು ಅನುಭವ ಸಂಪಾದಿಸಿ ಶ್ರೀಮಂತವಾದ ಪರಂಪರೆಯನ್ನು ಹೊಂದಿದುದು ಅವರ ಮತ್ತೊಂದು ವಿಶೇಷ. ಕನ್ನಡ, ಇಂಗ್ಲೀಷ, ಸಂಸ್ಕೃತ, ಮರಾಠಿ ಹಿಂದಿ ಮುಂತಾದ ಹಲವಾರು ಭಾಷಾ-ಸಾಹಿತ್ಯಗಳ ನೇರವಾದ ಅಧ್ಯಯನ, ಅನುಸಂಧಾನಗಳ ಮೂಲಕ ಪರಿಪಕ್ವವಾದ ಅವರ ಮನಸ್ಸು ಅವರ ಪ್ರತಿಭೆಯನ್ನು ರೂಪಿಸಿದೆ.

ವೈವಿಧ್ಯ ಹಾಗೂ ಪ್ರಯೋಗಶೀಲತೆ ಗೋಕಾಕ ಅವರ ವ್ಯಕ್ತಿತ್ವದ ಹಾಗೂ ಅವರ ಪ್ರತಿಭೆಯ ಎರಡು ಪ್ರಧಾನ ಗುಣಗಳು. ಗದ್ಯಬರವಣಿಗೆಯಲ್ಲಿ ಪ್ರಬಂಧ, ಪತ್ರಬರಹ, ಹರಟೆ, ದಿನಚರಿ, ಪ್ರವಾಸ ಸಾಹಿತ್ಯ, ಚಿಂತನಪರ ಪ್ರಬಂಧ, ವಿಮರ್ಶೆ, ವಿಚಾರಲಹರಿ, ನಾಟಕ, ಕಾದಂಬರಿ ಚಂಪೂಕಾವ್ಯದ ಗದ್ಯ, ಚರಿತ್ರೆ, ಜೀವನಚಿತ್ರ, ವ್ಯಕ್ತಿಚಿತ್ರ – ಇತ್ಯಾದಿ ಹತ್ತು ಹಲವು ದಿಕ್ಕಿನಿಂದ ಕನ್ನಡ ಗದ್ಯವನ್ನು ದುಡಿಸಿ-ಕೊಂಡಿದ್ದಾರೆ. ಕಾವ್ಯ ರಚನೆಯಲ್ಲಿ ಈ ವೈವಿಧ್ಯ ಇನ್ನೂ ಮಿಗಿಲಾದುದು. ಭಾವಗೀತೆ, ನವ್ಯಕಾವ್ಯ ಸ್ವಚ್ಛಂದ ಕಾವ್ಯ, ಸಮನ್ವಯ ಕಾವ್ಯ, ಚಂಪೂಕಾವ್ಯ, ನೀಳ್ಗವನಗಳು,

ಕಥನಕಾವ್ಯ, ಮಹಾಕಾವ್ಯದ ಮಿಡಿಗಳು, ಮಹಾಕಾವ್ಯ, ಇತಿಹಾಸ ಕಾವ್ಯ, ಗದ್ಯಕಾವ್ಯ,- ಮುಂತಾದ ಹಲವಾರು ಪ್ರಯೋಗಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು, ಯಶಸ್ಸಿನ ಉತ್ತುಂಗ ಶಿಖರವನ್ನು ತಲುಪಿರುವ ಅದ್ವಿತೀಯ ವ್ಯಕ್ತಿ ಗೋಕಾಕರು. ಸ್ವತಃ ಗೋಕಾಕರು "ಕಾವ್ಯ ಜೀವವೆಂದರೆ ಸಂಕೀರ್ಣತೆಯ ಕಡೆಗೆ ಸಾಗಿದ ಯಾತ್ರೆ," ಎಂದು ಒಂದೆಡೆ ಹೇಳಿದ್ದಾರೆ. ಗೋಕಾಕರ ಸಾಹಿತ್ಯವನ್ನಾಗಲಿ, ಪ್ರತಿಭೆಯನ್ನಾಗಲಿ ಹೀಗೆಯೇ ಇಷ್ಟೇ ಎಂದು ಖಚಿತವಾಗಿ, ನಿಸ್ಸಂಶಯವಾಗಿ ಹೇಳುವುದೇ ಅಸಾಧ್ಯ. ಅಷ್ಟರಮಟ್ಟಿಗೆ ಅವರ ಪ್ರತಿಭೆ ಸಂಕೀರ್ಣವಾಗಿದೆ. ಸಶಕ್ತವಾಗಿದೆ. ಸಾಹಿತ್ಯದಲ್ಲಿ ಸಂಕೀರ್ಣತೆ ಉಂಟಾಗುವುದು ಪರಸ್ಪರ ಭಿನ್ನ ಅಥವಾ ವಿರುದ್ಧವಾದ ವಿಚಾರಗಳು, ಧೋರಣೆಗಳು ಕಲ್ಪನೆಗಳು, ರಚನಾರೂಪಗಳು, ಶೈಲಿ ವಿಶೇಷಗಳು ಒಂದೆಡೆ ಕೂಡಿ 'ಸಮಯೋಗ' ಸ್ಥಿತಿ ಮೂಡಿದಾಗ "ಪರಸ್ಪರ ಭಿನ್ನ ಇಲ್ಲವೆ ವಿರುದ್ಧ ಭಾಷೆ, ಛಂದ, ಅರ್ಥ, ಅಲಂಕಾರ, ಶಿಲ್ಪ, ಭಾವ, ಜೀವನದೃಷ್ಟಿ, ಇಲ್ಲವೆ ದರ್ಶನಗಳು ಕವಿಯ ಅನುಭವದಲ್ಲಿ ಇಲ್ಲವೆ ಅಭಿವ್ಯಕ್ತಿಯಲ್ಲಿ ಒಂದೆಡ ಉಪಸ್ಥಿತವಿದ್ದಾಗ ಸಂಕೀರ್ಣತೆ ಹುಟ್ಟಿಕೊಳ್ಳುತ್ತದೆ."[೧] ಎಂದು ಅವರೇ ಒಂದೆಡೆ ಹೇಳಿದುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು.

ಗೋಕಾಕರ ಪ್ರತಿಭೆ ಒಮ್ಮೆ ಪೃಥಿವಿಸದೃಶವಾಗಿ ಗಟ್ಟಿಮುಟ್ಟಾಗಿ ನೆಲೆನಿಂತು ಕಂಡರೆ, ಮತ್ತೊಮ್ಮೆ ನಭೋಸದೃಶವಾಗಿ ಗಾಬರಿಪಡಿಸುವಂತಹ ವಿಸ್ತಾರವನ್ನು ಪಡೆದುಕೊಂಡುದನ್ನು ಕಾಣುತ್ತೇವೆ. ಇನ್ನೊಮ್ಮೆ ಸಮುದ್ರ ಸದೃಶ ವೈವಿಧ್ಯ, ಆಳ-ಅಗಲಗಳು ಅವರ ಪ್ರತಿಭೆಯಲ್ಲಿ ಮನೆಮಾಡಿದ್ದು ಗೋಚರಿಸುತ್ತದೆ. ಅವರ ಬಹುಮಹತ್ವದ ಕವನ ಸಂಕಲನ 'ದ್ಯಾವಾ-ಪೃಥಿವಿ' ಹೆಸರೇ ಸೂಚಿಸುವ ಹಾಗೆ ಭೂಮಿ-ಆಕಾಶಗಳೇ ಇಲ್ಲಿಯ ವಸ್ತು. ಇಲ್ಲಿರುವ ಎರಡು ಭಾಗಗಳಲ್ಲಿ - ನೀರದ, ಇಳಾಗೀತ - ನೆಲದಲ್ಲಿ ನಿಂತು ಆಕಾಶವನ್ನು, ಅಕಾಶದಿಂದ ನೆಲವನ್ನು ನೋಡುವ, ಪರಿಭಾವಿಸುವ, ಅನನ್ಯ ಅನುಭವ ವಿಶೇಷ ಮೂಡಿಬಂದಿದೆ. ಜೊತೆಗೆ ಪೂರ್ವ-ಪಶ್ಚಿಮಗಳ ಪ್ರತಿನಿಧಿಗಳೆಂಬಂತಿರುವ ಷೆಲ್ಲಿ - ಅರವಿಂದರ ವಿಚಾರಗಳ, ದರ್ಶನಗಳ ಸಮನ್ವಯ ಸಿದ್ಧಾಂತ ಇಲ್ಲಿ ಎಡೆಪಡೆದಿದೆ.

ಅವರ 'ಸಮುದ್ರಗೀತಗಳು' 'ಸಮುದ್ರದೀಚೆಯಿಂದ', 'ಸಮುದ್ರದಾಚೆ-ಯಿಂದ' - ಮುಂತಾದ ಕೃತಿಗಳ ಹೆಸರನ್ನು ಅವಲೋಕಿಸಿದರೆ ಅವರ ಸಮುದ್ರ ಸದೃಶ ಪ್ರತಿಭೆಯ ಒಂದು ಸರಳ ತರ್ಕ ನಮಗೆ ಉಂಟಾಗುತ್ತದೆ. ಉಚ್ಚ ಶಿಕ್ಷಣಕ್ಕಾಗಿ ಇಂಗ್ಲೆಂಡಿಗೆ ಹಡಗು ಪಯಣ ಕೈಕೊಂಡ ಮೂರು ವಾರಗಳ ಆ ಕಾಲ ಗೋಕಾಕರ ಮನಸ್ಸನ್ನು, ಹಾಗೇ ಪ್ರತಿಭೆಯನ್ನು ವಿಶೇಷವಾಗಿ ಸಂಸ್ಕರಿಸಿತು. ಯಂತ್ರ ದೈತ್ಯನಂತಿದ್ದ ಆ ಹಡಗು, ಅದರ ಕಪ್ತಾನ, ಅದರಲ್ಲಿ ದುಡಿಯುವ ಯಾಂತ್ರಿಕ ಜೀವನದ ಕೂಲಿಯಾಳುಗಳು, ಆ ವಿವಿಧ ರಾಷ್ಟ್ರೀಯತೆ ಜನಾಂಗಗಳಿಗೆ ಸೇರಿದ ಜನಸಮೂಹ, ಆ ವಿಶಾಲ ಸಮುದ್ರ, ಅದರ ತೆರೆಗಳ ತುಮುಲ, ಬಹುವಿಧ

೧. ವಿ.ಕೃ.ಗೋಕಾಕ - ಸಾಹಿತ್ಯ ವಿಮರ್ಶೆಯ ಕೆಲವು ತತ್ವಗಳು - ಪುಟ ೧೫೭

ಜಲಚರಗಳ ಅಬ್ಬರದ ಅಲೆದಾಟ - ಇವೆಲ್ಲ ಕವಿ ಗೋಕಾಕರ ಹೃದಯದಲ್ಲಿ ಹೊಸ ಹೊಸ ಅಲೆಗಳನ್ನು ಎಬ್ಬಿಸಿ, ವಿಶಿಷ್ಟ ಸಂವೇದನೆಗಳನ್ನು ಮೂಡಿಸಿದವು. ಸಮುದ್ರದ ನವನವ ಉನ್ಮೇಷಶಾಲಿನಿಯಾದ ರೂಪಗಳನ್ನು ಕಂಡು ಉಂಡಾಗ, ತನ್ನ ಈ ಅನುಭವಗಳಿಗೆ ಯಾವ ರೂಪ ಕೊಡಲಿ ಎಂಬ ಪ್ರಶ್ನೆ ಮನದಲ್ಲಿ ಮೂಡಿ , ಕಾಡಿ 'ಸಮುದ್ರದ ಸೆರೆ ಹಿಡಿದವರುಂಟೆ?' ಎನ್ನಿಸುತ್ತದೆ.

'ಬೇಡಯ್ಯ ಬಂಧಗಳ ಬಂದಿವಾಸ,
ಬರೆದದ್ದೆ ಬಂಧುರವಾಗಬಹುದು.
ಸಾಕಯ್ಯ ವೃತ್ತಗಳಾವರ್ತ
ನಿನ್ನ ಮಣಿತವಿರಲಿ ಸಮುದ್ರದ ಕುಣಿತದಂತೆ'

ಎಂಬ ಹೊಸನೋಟ ಕವಿಯ ಮನಸ್ಸಿನಲ್ಲಿ ಅಂಕುರಿಸಿ, ತಾನೇ ಸಮುದ್ರ-ವಾಗುವ ಬಯಕೆ ಮೂಡುತ್ತದೆ. 'ಕೊಡದಿರು ಶರಧಿಗೆ ಷಟ್ಪದಿಯ ದೀಕ್ಷೆಯನು' ಎಂದು ತಮ್ಮನ್ನೇ ಎಚ್ಚರಿಸುತ್ತಾರೆ.

'ಉಕ್ಕಲಿ ಚಿಮ್ಮಲಿ ಸಮುದ್ರ ಸ್ವಾತಂತ್ರ್ಯ
ಮಿಕ್ಕಲಿ ಮೀರಲಿ ಮುನ್ನೀರ ನಿರ್ವಯಲು
ಜರ್ಜರವಾದುದೆಲ್ಲ ಮುಳುಗಿ ಹೋಗಲಿ ಜಲಸಮಾಧಿಯಲಿ
ಹೊಸದೆಲ್ಲ ಹುಟ್ಟಿ ಬರಲಿ, ಹೃದಯದಾಳದಲ್ಲಿ'

ಎಂದು ಹೊಸ ಪ್ರತಿಜ್ಞೆ ಮಾಡುತ್ತಾರೆ.

'ಮುಗಿಲಿಗಿಂತ ಮಿಗಿಲು ಸಾಗರದ ನೀಲಿ
ಸಾಗರದ ತುದಿತಟ್ಟಿ ಮುಗಿಲೆಲ್ಲ ನೀಲಿಯಾಗಿಹುದು
ಮುಗಿಲಿನನಂತತೆಯಲ್ಲಿ ಮುನ್ನೀರ ಗರ್ಭಒಂಡ'

ಎಂದು ಕಡಲು-ಮುಗಿಲುಗಳ ಈ ಅನ್ಯೋನ್ಯಾನ್ವಯವು ಕವಿಯ ಈ ಸಮುದ್ರ ಸದೃಶ ಪ್ರತಿಭೆಯ ಪ್ರತಿಫಲನ. "ನಿನ್ನ ಉಪ್ಪುಂಡು ಬೆಳೆದ ಕವಿ' 'ಉಪ್ಪಿಲ್ಲದೇ ಒಪ್ಪಿಲ್ಲ' ಎಂದು ಸಮುದ್ರವನ್ನು ಮೆಚ್ಚಿ ಮಾತನಾಡುವ ಗೋಕಾಕರು "ನಿನ್ನ ಸಾವಿರ ಭಂಗಿಗಳನ್ನು ಕೀರ್ತಿಸಲು ಸ್ವರವಿಲ್ಲ, ನಿನ್ನ ಬಣ್ಣಬಣ್ಣಗಳ ಬಣ್ಣಿಸುವ ಕುಸುರಿಲ್ಲ ನನ್ನ ಕಲೆಗೆ" ಎಂದು ಕವಿ ಮರುಗುವಲ್ಲಿ ತಾನೂ ಸಮುದ್ರವಾಗಬೇಕೆಂಬ ಅವರ ಪ್ರತಿಭೆಯ ಮಿಡುಕಾಟ ಕಾಣುತ್ತದೆ.

ದ್ಯಾವಾ-ಪೃಥಿವಿ - ಸಮುದ್ರ - ಇವು ಮೂರೂ ವಿಶ್ವದ ಚಿರಂತನ ವಸ್ತುಗಳು. ಕಾಲದಿಂದ ಕಾಲಕ್ಕೆ ಬದಲಾಗಬಹುದಾದ, ಅವಿನಾಶಿಯಾದ ಈ ವಸ್ತುಗಳಂತೆಯೇ ಗೋಕಾಕರ ಪ್ರತಿಭೆ ಭದ್ರವಾಗಿದೆ ; ಚಿರಂತನವಾಗಿದೆ. ಆದುದರಿಂದಲೇ ಸಂಪ್ರ-ದಾಯ ನಿರ್ಮಾಣದಲ್ಲಿ ಅವರು ಶ್ರದ್ಧೆಯನ್ನು ಕಳೆದುಕೊಳ್ಳಲಿಲ್ಲ. ಅವರ ಪ್ರಯೋಗಗಳು ಸಂಪ್ರದಾಯದ ವಿರುದ್ಧವಾಗಿ ನಡೆದ ಪ್ರತಿಕ್ರಿಯೆಗಳಲ್ಲ. ಹೀಗಾಗಿ

ಅವರ ಕಾವ್ಯ ಪ್ರಯೋಗದಲ್ಲಿ ಪ್ರತಿಕ್ರಿಯಾರೂಪದ ರಭಸ-ಆವೇಶಗಳಿಲ್ಲ. ಹಾಗಾಗಿ ಅವರು ಸಂಪ್ರದಾಯದೊಳಗಿನಿಂದಲೇ ದಾರಿ ಮಾಡಿಕೊಂಡು ಹೊಸತನ್ನು ಸೃಷ್ಟಿ ಮಾಡುತ್ತಾರೆ. ಸಾರ್ವಕಾಲಿಕ ಸತ್ವದಿಂದ ಹಾಗೂ ಐತಿಹಾಸಿಕ ಮಹತ್ವದಿಂದ ಕೂಡಿದ ಅವರ ಪ್ರಯೋಗಗಳು ದ್ಯಾವಾ-ಪೃಥವಿ ಹಾಗೂ ಸಮುದ್ರಗಳಂತೆ ಚಿರಂತನ-ವಾಗಿವೆ. ಅವರು ಕಥೆ ಬರೆಯಲಿ, ಕಾದಂಬರಿ ಬರೆಯಲಿ, ಕವನ ಬರೆಯಲಿ, ಕಾವ್ಯ ಬರೆಯಲಿ ಇಲ್ಲವೆ ಮಹಾಕಾವ್ಯ ಬರೆಯಲಿ ಅವೆಲ್ಲದರ ವಸ್ತು ಚಿರಂತನ ಸಮಸ್ಯೆ, ಸಂಘರ್ಷ. ನೆಲದಂತೆ ಗಟ್ಟಿಯಾಗಿ, ಪಾತಾಳದವರೆಗೂ ಇಳಿವ, ಆಗಸದಂತೆ ವಿಸ್ತಾರವಾಗಿ ವ್ಯಾಪಿಸುವ, ಸಮುದ್ರದಂತೆ ವೈವಿಧ್ಯಮಯವಾಗಿ ಸಾಗುವ ಅವರ ಪ್ರತಿಭೆ ಕಾರಣವಾಗಿ ಈ ಎಲ್ಲ ಸಾಹಿತ್ಯ ಪ್ರಕಾರಗಳಲ್ಲಿ ಆ ಗುಣಗಳು ಮೈವೆತ್ತಿವೆ. ಅವರ ಮಹಾಕಾದಂಬರಿ ಸಮರಸವೇ ಜೀವನ ಹಾಗೂ ಮಹಾಕಾವ್ಯ 'ಭಾರತ ಸಿಂಧುರಶ್ಮಿ' ಕೃತಿಗಳನ್ನು ಈ ಹಿನ್ನಲೆಯಿಂದ ಪರಿಭಾವಿಸಬೇಕು.

ಪ್ರಯೋಗಪರತೆ ಅಂದರೆ ಹೊಸದರ ಆವಿಷ್ಕರಣದ ತುಡಿತ ಗೋಕಾಕ ಪ್ರತಿಭೆಯ ಒಂದು ಮಹತ್ವದ ಅಂಶ. ಕಾವ್ಯಶೈಲಿಯಲ್ಲಿ, ಭಾಷಾ ಬಳಕೆಯಲ್ಲಿ ಛಂದೋಪ್ರಯೋಗದಲ್ಲಿ, ವಸ್ತುವಿನ ಆಯ್ಕೆಯಲ್ಲಿ, ಹಾಗೂ ಸಾಹಿತ್ಯ ರೂಪದಲ್ಲಿ - ಎಲ್ಲೆಲ್ಲಿಯೂ ಈ ಪ್ರಯೋಗಶೀಲಪ್ರತಿಭೆ ಕಾರ್ಯಪ್ರವೃತ್ತವಾಗಿರುವುದನ್ನು ಕಾಣುತ್ತೇವೆ. ಪಯಣ, ಕಲೋಪಾಸಕ - ಕವನ ಸಂಗ್ರಹಗಳಲ್ಲಿ ಅವರ ಕನಸುಗಾರಿಕೆ, ಕಣಸುಗಾರಿಕೆ ಕಾವ್ಯಧೋರಣೆಯ ಮುಖ್ಯಧೋರಣೆಗಳು ಭಾವಗೀತಾತ್ಮಕ ರೂಪದಲ್ಲಿ ಪ್ರಕಟವಾಗಿದ್ದರೆ, 'ಸಮುದ್ರಗೀತೆಗಳು' ನವ್ಯಕವಿತೆಗಳು ಸಂಕಲನದಿಂದ ಮುಂದೆ ಸಾಮಾಜಿಕಪ್ರಜ್ಞೆಯ, ಮಾನವಜೀವನದ ಸಂಘರ್ಷಗಳ ಅನುಭವ ನವ್ಯಕಾವ್ಯದ ಅವತಾರ ತಾಳಿತು. ಜೊತೆಜೊತೆಗೆ ಚಂಪೂಕಾವ್ಯ, ಸರಳರಗಳೆ, ಅಷ್ಟಷಟ್ಪದಿ, ಷಟ್ಪದಿ, ಮುಂತಾದ ಅನೇಕ ಛಂದೋರೂಪಗಳನ್ನು ಬಳಸಿಕೊಂಡಿದೆ. ಗದ್ಯ, ಪದ್ಯ, ಮಿಶ್ರ - ಯಾವ ಭೇದವೂ ಗೋಕಾಕ ಪ್ರತಿಭೆಗಿಲ್ಲ. ಎಲ್ಲದರಲ್ಲೂ ಅದೇ ಕಸುವು, ಅದೇ ತಾಜಾತನ.

ನಿರ್ಲಿಪ್ತತೆ (Detached) ಗೋಕಾಕ ಪ್ರತಿಭೆಯ ಮತ್ತೊಂದು ಮುಖ. ಜೀವನವು ದೈವವೊಡ್ಡಿದ ಸಿಹಿ-ಕಹಿಗಳ, ಆಗು-ಹೋಗುಗಳ ಏಳು-ಬೀಳುಗಳ, ನಿರಂತರ ನಡೆತ. 'ತ್ರಿವಿಕ್ರಮರ ಆಕಾಶಗಂಗೆ' ಎಂಬ ಚಂಪೂಕಾವ್ಯ, 'ಸಮರಸವೇ ಜೀವನ' ಎಂಬ ಕಾದಂಬರಿ ಹಾಗೂ 'ಭಾರತ ಸಿಂಧುರಶ್ಮಿ' ಎಂಬ ಮಹಾಕಾವ್ಯಗಳ ಒಡಲೊಳಗೆ ಈ ನಿರ್ಲಿಪ್ತ ಪ್ರತಿಭೆಯ ವಿಲಾಸ ಮೈದೋರಿದೆ. 'ಬರುವುದೆಲ್ಲ ನನ್ನ ಜೀವ ಪ್ರಜ್ಞೆಯ ವಿಕಾಸಕ್ಕೆ ಬರುವುದೆಂಬುದೇ ನನ್ನ ಮೂಲ ವಿಶ್ವಾಸ' ಎಂಬ 'ತ್ರಿವಿಕ್ರಮರ ಆಕಾಶಗಂಗೆ' ಯಲ್ಲಿನ ಮಾತನ್ನು ಈ ದೃಷ್ಟಿಯಿಂದ ಗಮನಿಸಬೇಕು. ಹೀಗಾಗಿ ಆಧ್ಯಾತ್ಮವೇ ಸ್ಥಾಯಿಯಾಗಿ ನಿಂತ ಹಲವಾರು ಕವನಗಳು, ಮನೋಭಾವ-ಗಳು, ಪಾತ್ರಗಳು ಅವರ ಸಾಹಿತ್ಯದಲ್ಲಿ ಕಾಣುತ್ತವೆ.

ಹಾಡಿದರೆ ಆನಂದ ! ಇಲ್ಲದಿರೆ ಬಲುಚಂದ
ನುಡಿದರೇನದು ನುಡಿಯದಿದ್ದರೇನು

***

ದನಿಗೂಡಿಸಿರೆ ಗಾನ ! ಇಲ್ಲದಿರೆ ಬರೆ ಮೌನ
ದನಿಯ ನೀಡುವ ಸ್ಫುರಣ ಎದೆಯೊಳಿರಲು
ಆ ಶಕ್ತಿಯೊಂದಿರಲು ! ಜೀವನವ ಹೊಂದಿರಲು
ನುಡಿಸಬಹುದದು ತನ್ನ ಕಾಲ ಬರಲು

ಹೀಗೆ ಕವಿಪ್ರತಿಭೆ ತನ್ನತನದ ಸ್ವರೂಪವನ್ನು ವಿವರಿಸುತ್ತದೆ. ಇಲ್ಲೆಲ್ಲ ತಾಟಸ್ಥ್ಯ, ನಿರ್ಭಾವುಕತನ ಕವಿಪ್ರತಿಭೆಯ ಸ್ಥಾಯಿಯಾಗಿದೆ. ಆದುದರಿಂದಲೇ ಗೋಕಾಕರ ಸಾಹಿತ್ಯ ಪ್ರಪಂಚದಲ್ಲಿ ಅನುಭೂತಿಜನ್ಯವಾದ ಭಾವಕಲ್ಪಗಳು ಒಮ್ಮೆಲೇ ಉದ್ರೇಕಕ್ಕೆ ಬಂದು ಉದ್ಗಾರಗೊಳ್ಳುವದು ವಿರಳ. ನಿಸರ್ಗದ, ಜೀವನದ, ಸೌಂದರ್ಯ-ಗಾಂಭೀರ್ಯಗಳ ಚಿತ್ರವೇಧಕ ಮರ್ಮಬೋಧಗಳಿಂದ ಗೋಕಾಕರು ಪಾರವಶ್ಯ-ವನ್ನಾಗಲಿ ನಿರ್ಭರತೆಯನ್ನಾಗಲಿ ಪಡೆದು ಉದ್ವೇಗ ಆವೇಗಗಳಿಂದ ಅದನ್ನು ಕಾವ್ಯದಲ್ಲಿ ತೊಡಗಿಸಿಕೊಳ್ಳುವದು ಕಡಿಮೆ. ಹೀಗಾಗಿ ತಟಸ್ಥ ಸಾಕ್ಷಿ ಪ್ರಜ್ಞೆಯ ಅವರ ಪ್ರತಿಭೆ ಅವರ ಸಾಹಿತ್ಯಕ್ಕೆ ಚಿಂತನಶೀಲ ಮನೋಧರ್ಮವನ್ನು, ವೈಚಾರಿಕ ಕ್ರಿಯಾಶೀಲತೆಯನ್ನು ತಂದುನಿಲ್ಲಿಸುತ್ತದೆ.

ಗೋಕಾಕ ಪ್ರತಿಭೆಯ ದೈತ್ಯ ಶಕ್ತಿ ಎಂದೆಂದೂ ದಣಿವರಿಯದ, ಯಾವುದಕ್ಕೂ ಶ್ರಮಪಡದ, ಎಂಥದನ್ನೂ ಧೈರ್ಯದಿಂದ ಎದುರಿಸುವ ಸಾಮರ್ಥ್ಯ ಪಡೆದುದು. ಹೀಗಾಗಿ ಅನ್ಯ ಕವಿಗಳಿಗೆ ಸಾಧ್ಯವಲ್ಲದ ಅನೇಕ ಸಂದರ್ಭಗಳಲ್ಲಿ ಈ ಪ್ರತಿಭೆ ಲೀಲಾಜಾಲವಾಗಿ ಎಂಬಂತೆ ಹರಿದಾಡಿದೆ ; ಸೃಷ್ಟಿಕ್ರಿಯೆಯಲ್ಲಿ ಯಶ ಪಡೆದಿದೆ. ಗೋಕಾಕ ಪ್ರತಿಭೆಯ ಚರಮ ಶಿಖರ ಅವರ ಮಹಾಕಾವ್ಯ ಸೃಷ್ಟಿ. ಪ್ರತಿಭೆ ಎಷ್ಟು ನವನವೋನ್ಮೇಷವಾಗಿದ್ದರೂ, ಸೂಕ್ಷ್ಮವಾಗಿದ್ದರೂ ಈ ಬತ್ತದ, ಆರದ ದಣಿವರಿಯದ ಚೈತನ್ಯ ಪ್ರತಿಭೆಗಿಲ್ಲದಿದ್ದರೆ, ಅದು ಮಹಾಕಾವ್ಯದಂಥ ದೀರ್ಘ, ಶ್ರೀಮಂತ ವಸ್ತುವನ್ನು ಆಯ್ಕೆ ಮಾಡಿಕೊಂಡು ಕಾವ್ಯ ಕಟ್ಟುವುದು ಸಾಧ್ಯವಿಲ್ಲ. ಈ ವಿಶಿಷ್ಟ ಪ್ರತಿಭೆ ಕಾರಣವಾಗಿಯೇ ಗೋಕಾಕರು 'ಸಮರಸವೇ ಜೀವನ' ಹಾಗೂ 'ಭಾರತ ಸಿಂಧುರಶ್ಮಿ'ಯಂಥ ಅದ್ಭುತ ಕೃತಿಗಳನ್ನು ನೀಡಿದ್ದಾರೆ. ಜೀವನಜಿಜ್ಞಾಸೆ ಈ ಪ್ರತಿಭೆಯ ಸ್ಥಾಯಿಭಾವವಾಗಿ ಕಾರ್ಯ ನಿರ್ವಹಿಸಿದೆ. ಪ್ರವಾದಿತನ ಈ ದೈತ್ಯಶಕ್ತಿಯ ಮತ್ತೊಂದು ವಿಶೇಷ ಅಂಶವಾಗಿ ರೂಪಗೊಂಡಿದೆ. ಸರ್ವಕಾಲದ, ಸರ್ವಮಾನವರ ಕುರಿತು ತನ್ನ ಸಂದೇಶವನ್ನು ಉಸುರುವ ಅಸ್ಪಷ್ಟಗೊಳಿಸುವ ಪ್ರತಿಭಾಶಕ್ತಿ ಅವರ ಸಾಹಿತ್ಯದಲ್ಲೆಲ್ಲ ಕಾಣುತ್ತದೆ. ಗದ್ಯ ಹಾಗೂ ಪದ್ಯ ಸಾಹಿತ್ಯಗಳೆಲ್ಲದರಲ್ಲಿಯೂ ಈ ಪ್ರವಾದಿತ್ವದ ಹೊಸತನ, ಹೊಸಸಂದೇಶ, ಹೊಸ ಮೌಲ್ಯಾದರ್ಶಗಳು ಕಾಣುತ್ತವೆ.

'ಇಜ್ಜೋಡು' ಬೃಹದಾಕಾರ ತಾಳಿ 'ಸಮರಸವೇ ಜೀವನ'ವಾಗಿ ರೂಪಾಂತರ-ಗೊಂಡು ೧೩೨೦ ಪುಟಗಳ ಸುದೀರ್ಘ ಕಾದಂಬರಿಯಾಗಿ ಬೆಳೆದುನಿಂತಿದೆ. ೧೯೩೫ ರಲ್ಲಿ ಇದರ ಮೊದಲಭಾಗ ಪ್ರಕಟವಾದರೆ, ೧೯೫೬ ರಲ್ಲಿ ಅದು ಪೂರ್ಣತೆಯನ್ನು ಪಡೆಯಿತು. ಅಂದರೆ ಸುಮಾರು ೫೦ ವರ್ಷಗಳಷ್ಟು ದೀರ್ಘಕಾಲ ಅದು ಅವರ ಮನಸ್ಸಿನಲ್ಲಿ ಒಂದೇ ಸವನೆ ಬೆಳೆಯುತ್ತಲೇ ಇದ್ದಿತು. ಬೆಳೆಯುವ ಕಾವನ್ನು ಉಳಿಸಿಕೊಂಡಿದ್ದಿತು. ಆ ಕಾಲದ ಸಾಮಾಜಿಕ, ಸಾಂಸಾರಿಕ, ರಾಜಕೀಯ ಸಾಂಸ್ಕೃತಿಕ ಜೀವನದ ಆಗುಹೋಗುಗಳು ಈ ಕಥಾವಸ್ತುವಿನೊಂದಿಗೆ ಹೆಣೆದುಕೊಂಡು ಬಂದಿವೆ. ಉತ್ತರ ಕರ್ನಾಟಕದಲ್ಲಿ ಪ್ರಾರಂಭವಾಗಿ, ಕೃಷ್ಣಾ-ಗೋದಾವರಿಗಳನ್ನು ದಾಟಿ, ಮಹಾರಾಷ್ಟ್ರವನ್ನು ಸುತ್ತಿ, ಸಮುದ್ರದಾಚೆಗೆ ಮೈಚಾಚಿ, ಮತ್ತೆ ಭಾರತದೆತ್ತರಕ್ಕೆ ಮರಳಿ ಆರ್ಯಾವರ್ತದ ನರ್ಮದಾ ತೀರದಲ್ಲಿ ವಿಲೀನವಾಗುತ್ತದೆ ಈ ಕಾದಂಬರಿಯ ವಸ್ತು. ಮೂರು ದಶಕಗಳ ಜನಜೀವನ ಚಿತ್ರಣದಲ್ಲಿ ನಾಲ್ಕು ತಲೆಮಾರುಗಳ ಬಾಳು-ಬದುಕು ತನ್ನ ಆಗುಹೋಗುಗಳ ಸುರುಳಿ ಬಿಚ್ಚುತ್ತದೆ. ಇಲ್ಲಿ ಚಿತ್ರಿತವಾಗಿರುವ ಜೀವನ ಸಂಕೀರ್ಣತೆ, ಪಾತ್ರವೈವಿಧ್ಯ, ಅನುಭವ ವೈಪುಲ್ಯ, ಕ್ರಿಯಾ ಬಾಹುಲ್ಯ ಮತ್ತು ಪ್ರಪಂಚ ವಿಸ್ತಾರ - ಇವುಗಳನ್ನೆಲ್ಲ ನೆನೆದರೆ ಗೋಕಾಕ ಪ್ರತಿಭೆಯ ಅನನ್ಯತೆ ಮನದಟ್ಟಾಗುತ್ತದೆ. ಇದು ಅರ್ವಾಚೀನ ಭಾರತದ, ಅರ್ವಾಚೀನ ಜಗತ್ತಿನ ಗದ್ಯ ಮಹಾಕಾವ್ಯವಾಗಿ ಬೆಳೆದು ನಿಂತುದು ಗೋಕಾಕ ಪ್ರತಿಭೆಯ ಜ್ವಲಂತ ನಿದರ್ಶನ.

'ಭಾರತ ಸಿಂಧುರಶ್ಮಿ' ಪೂರ್ವ-ಪಶ್ಚಿಮಗಳ ಮಹಾಕಾವ್ಯ ಸಂಪ್ರದಾಯಗಳನ್ನು ಮೈಗೂಡಿಸಿಕೊಂಡು ಅರಳಿ ನಿಂತಿರುವ ಆಧುನಿಕ ಕನ್ನಡದ ವಿಶಿಷ್ಟ ಮಹಾಕಾವ್ಯ. ಒಂದು ಜನಾಂಗದ ಸಂಸ್ಕೃತಿ, ದೇಶದ ಇತಿಹಾಸ, ಯುಗದ ಧರ್ಮ, ಜಗದ ಪ್ರಜ್ಞೆ ಇದರಲ್ಲಿ ಹಾಸುಹೊಕ್ಕಾಗಿವೆ. ವ್ಯಕ್ತಿ ವಿಕಸನದ ಚಿರಂತನ ಕಥೆ ಹಾಗೂಮನುಕುಲದ ಹೃದಯಾಂತರಾಳದಲ್ಲಿ ನಡೆದ ಒಳಿತು ಕೆಡುಕಿನ ಚಿರಂತನ ಸಂಗ್ರಾಮ, ಹಾಗೂ ಒಳಿತಿನ ಕೊನೆಯ ಜಯುವನ್ನು ಈ ಮಹಾಕಾವ್ಯ ಸಾರುತ್ತದೆ.

ಸುಮಾರು ಮೂವತ್ತೈದು ಸಾವಿರ ಸಾಲುಗಳ ಈ ಕೃತಿ ನಮ್ಮ ಕಾಲದ ಒಂದು ಬೃಹತ್‌ಸೃಷ್ಟಿ. ಮಹತ್‌ಕಾವ್ಯ. 'ತ್ರಿವಿಕ್ರಮರ ಆಕಾಶಗಂಗೆ', 'ತ್ರಿಶಂಕುವಿನ ಪ್ರಜ್ಞಾ ಪ್ರಭಾತ' ಮುಂತಾದ ಕೃತಿಗಳಲ್ಲಿಯೇ ಗೋಚರವಾಗಿದ್ದ ದೈತ್ಯ ಪ್ರತಿಭೆಯ ಚೈತನ್ಯಶಕ್ತಿ 'ಭಾರತ ಸಿಂಧುರಶ್ಮಿ'ಯಲ್ಲಿ ಪೂರ್ಣಪ್ರಮಾಣದಲ್ಲಿ ಅವತರಣಗೊಂಡಿದೆ. ಕವಿ, ಆಡಳಿತಗಾರ, ಯೋಧ, ಪ್ರೇಮಿ, ಸಾಧಕ, ಋಷಿ, ದ್ರಷ್ಟಾರನಾಗಿ ಬೆಳೆದು ವ್ಯೋಮವ್ಯಾಪ್ತಿ ಪಡೆದು ನಿಂತ ವಿಶ್ವಾಮಿತ್ರ ಕಾವ್ಯದ ಕೇಂದ್ರವ್ಯಕ್ತಿಯಾಗಿದ್ದಾನೆ. ಸಂಕೀರ್ಣ ಸ್ವಭಾವದ ಗೋಕಾಕ ಪ್ರತಿಭೆ ಮಹಾಕಾವ್ಯದ ವಸ್ತುವನ್ನು ಆಯ್ಕೆ ಮಾಡಿಕೊಳ್ಳುವಲ್ಲಿ ಸಂಕೀರ್ಣ ಸ್ವಭಾವದ ವಿಶ್ವಾಮಿತ್ರನನ್ನು ಆಯ್ಕೆ ಮಾಡಿ-ಕೊಳ್ಳುವಲ್ಲಿ ಸಹಜತೆಯಿದೆ. ವಿಶ್ವರಥ ವಿಶ್ವಾಮಿತ್ರನಾಗುವ ಸಾಧನೆ-ಸಿದ್ಧಿಗಳ,

ಲೌಕಿಕ-ಅಲೌಕಿಕ ವಿವರಗಳ ಮೂಲಕ ಈ ಕಾವ್ಯ ಮಹಾಕಾವ್ಯ ಪರಂಪರೆಯಲ್ಲೇ ಪ್ರತ್ಯೇಕತೆಯನ್ನು ಸಾಧಿಸುತ್ತದೆ. ವಿಶ್ವವಿಶಾಲವಾದ ವರ್ಣನೆ, ಪರಿಸರದೊಡನೆ ಭೀಕರವಾದ ಹೋರಾಟ, ಹೃದಯವನ್ನೇ ಶುದ್ಧಗೊಳಿಸುವ ಪ್ರೇಮ, ವ್ಯಕ್ತಿತ್ವಕ್ಕೆ ಕಳಸವಿಡುವ ಅನುಭಾವದ ವಿವಿಧ ಪ್ರಕಾರಗಳು ಇವೆಲ್ಲ ಇಲ್ಲಿಯ ಕಥಾ-ವಸ್ತುವಾಗಿವೆ. ಎರಡು ನೂರಕ್ಕಿಂತಲೂ ಮಿಗಿಲಾದ ಪಾತ್ರಗಳಿರುವ ಈ ಕಾವ್ಯದಲ್ಲಿ ಸುಮಾರು ೨೫-೩೦ ವ್ಯಕ್ತಿಗಳಾದರೂ ಓದುಗನ ಹೃದಯದಲ್ಲಿ ಗಟ್ಟಿಯಾಗಿ ನಿಂತುಕೊಳ್ಳುತ್ತಾರೆ ; ದಟ್ಟ ಪ್ರಭಾವ ಬೀರುತ್ತಾರೆ. ಋಗ್ವೇದ ಕಾಲೀನವಾದ ವಸ್ತುವಿದ್ದರೂ ಸಮಕಾಲೀನ ಜೀವನಧೋರಣೆಯನ್ನು ರೂಪಿಸುವ ಈ ಕೃತಿಯಲ್ಲಿ ಹೊಸತತ್ವ ಹಾಗೂ ದರ್ಶನಗಳು, ಒಳಿತು-ಕೆಡಕುಗಳ ಚಿರಂತನ ಸಂಗ್ರಾಮದೊಂದಿಗೆ ಮೂಡಿಬಂದಿವೆ. ಹೀಗಾಗಿ ಪ್ರಾಚೀನವನ್ನು ಸಮಕಾಲೀನ-ದಲ್ಲಿ ನೋಡುವ ಪ್ರಕ್ರಿಯೆ ಇಲ್ಲಿ ಹೆಪ್ಪುಗಟ್ಟಿದೆ. ಹಾಗೆಯೇ ಈ ಮಹಾಕಾವ್ಯದ ಮೈಕಟ್ಟಿನಲ್ಲಿ ಮೂಡಣ ಪಡುವಣಗಳು ಸುಂದರವಾಗಿ ಬೆರೆತಿರುವುದನ್ನು ಗಮನಿಸುತ್ತೇವೆ. ಹನ್ನೆರಡು ಕಾಂಡಗಳಲ್ಲಿ ಹಬ್ಬಿನಿಂತಿರುವ ಈ 'ಭಾರತ ಸಿಂಧು ರಶ್ಮಿ' 'ಸಂಕೀರ್ಣ ಛಂದಸ್ಸು' ಎಂಬ ಮಾಧ್ಯಮದ ಮೂಲಕ ಅಭಿವ್ಯಕ್ತಗೊಂಡಿದೆ.

ಸಾಹಿತ್ಯದ ವಸ್ತು, ದೋರಣೆ, ಅಭಿವ್ಯಕ್ತಿಕ್ರಮ ಹಾಗೂ ಛಂದೋರೂಪ - ಹೀಗೆ ಎಲ್ಲ ದೃಷ್ಟಿಯಿಂದಲೂ ಇವರ ಸಮಸರವೇ ಜೀವನ ಹಾಗೂ 'ಭಾರತ ಸಿಂಧುರಶ್ಮಿ' ದೈತ್ಯ ಪ್ರತಿಭೆಯ ಪ್ರತೀಕವಾಗಿವೆ. ಭೂಮಿ ಆಕಾಶ, ಸಮುದ್ರಗಳ ವಿಲಕ್ಷಣ ವ್ಯಕ್ತಿತ್ವ ಪಡೆದ ಅವರ ಪ್ರತಿಭೆ ತನ್ನೆಲ್ಲ ಗುಣ-ಲಕ್ಷಣಗಳನ್ನು ಅವರ ಸಾಹಿತ್ಯದಲ್ಲಿ ಎರಕ ಹೊಯ್ದಿದೆ.

ಕವಿಯ ಸಮಸ್ತ ವ್ಯಕ್ತಿತ್ವವೂ ತನಗೆ ದಕ್ಕಿದ ಅನುಭವದ್ರವ್ಯವನ್ನು ಕಾವ್ಯವನ್ನಾಗಿ ಕಾಣುವ, ಕಟ್ಟುವ ಸೃಜನಕ್ರಿಯೆಯಲ್ಲಿ ತೊಡಗಿದಾಗ ಕವಿಪ್ರತಿಭೆ, ಅಭಿವ್ಯಕ್ತಿಯಲ್ಲಿ ತೋರುವ ವಿಶಿಷ್ಟತೆಯಿಂದ, ಪ್ರತಿಭೆಯಲ್ಲಿ ಹಲವು ಪ್ರಕಾರ-ಗಳನ್ನು ವಿದ್ವಾಂಸರು ಗುರುತಿಸುತ್ತಾರೆ. ಕವಿಪ್ರತಿಭೆ ಬದುಕಿನ ಬಹಿರಂಗ-ಮುಖಗಳನ್ನು ರೂಪಿಸಿ ತೋರಿದಾಗ ಅದನ್ನು ವಸ್ತುನಿಷ್ಠ ಪ್ರತಿಭೆ (Objective Imagination) ಎಂದೂ, ಕವಿಪ್ರತಿಭೆ ಮಾನಸಿಕ ಹಾಗೂ ಭಾವುಕಲೋಕವನ್ನು, ಅಂತರಂಗದ ಅನುಭವ ಪ್ರಪಂಚವನ್ನು ರೂಪಿಸಿ ತೋರುವಲ್ಲಿ ಅದನ್ನು ವ್ಯಕ್ತಿನಿಷ್ಠ ಪ್ರತಿಭೆ (Subjective Imagination) ಎಂದು ಶ್ರೀ ಅರವಿಂದರು ಕರೆಯುತ್ತಾರೆ.[೧] ಗೋಕಾಕ ಪ್ರತಿಭೆಯಲ್ಲಿ ಈ ಎರಡೂ ಮುಖಗಳು ಶ್ರೀಮಂತವಾಗಿ ಮೇಳವಿಸಿವೆ. ಅವರ ಅಭ್ಯುದಯ, ಕಾಶ್ಮೀರ, ಪಯಣ, ಸಮುದ್ರ, ಗೀತಗಳು ಮುಂತಾದ ಕವನ ಸಂಗ್ರಹಗಳಲ್ಲಿ ಮುಖ್ಯವಾಗಿ ವಸ್ತುನಿಷ್ಠಪ್ರತಿಭ ಗೋಚರಿಸಿದರೆ, ಚಿಂತನ, ತ್ರಿವಿಕ್ರಮರ ಆಕಾಶಗಂಗೆ, ದ್ಯಾವಾಪೃಥಿವಿ, ನವ್ಯಕವಿತೆಗಳು, ಭಾಗವತ ನಿಮಿಷಗಳು ಹಾಗೂ ಭಾರತ ಸಿಂಧುರಶ್ಮಿ ಕೃತಿಗಳಲ್ಲಿ ವ್ಯಕ್ತಿನಿಷ್ಠ ಪ್ರತಿಭೆಯ ವಿಲಾಸ ಹರಡಿದೆ.

೧ Sri. Aurbindo - The Future Poetry - P. 24-25.

ರೂಪನಿರ್ಮಾಣಕ್ರಿಯೆ ಪ್ರತಿಭೆಯ ಬಹುಮುಖ್ಯ ಕಾರ್ಯ. ಕವಿಪ್ರತಿಭೆಯ ಈ ರೂಪನಿರ್ಮಾಣಕ್ರಿಯೆ ಕೆಲವು ಸಲ ಹೇಳಬೇಕಾದುದನ್ನು ಅತ್ಯಂತ ಸ್ಪಷ್ಟವಾಗಿ, ಖಚಿತವಾಗಿ, ನೇರವಾಗಿ ಅಭಿವ್ಯಕ್ತಪಡಿಸಬಹುದು. ಇದನ್ನು 'ಘನೀಭೂತ ಪ್ರತಿಭೆ' (Plastic Imagination) ಎಂದೂ ಇನ್ನೂ ಕೆಲವು ಸಲ ಅನುಭವವು ಅಸ್ಪಷ್ಟವೂ, ಅವ್ಯಕ್ತವೂ, ಮಸುಕು-ಮಸುಕಾಗಿಯೂ ಅಭಿವ್ಯಕ್ತಿಯಾಗಬಹುದು ; ಇದನ್ನು 'ದ್ರವೀಭೂತ ಪ್ರತಿಭೆ' (Diffement Imagination) ಎಂದೂ ಗುರುತಿಸುತ್ತೇವೆ. ಗೋಕಾಕ ಪ್ರತಿಭೆಯಲ್ಲಿ ಈ ಎರಡೂ ಬಗೆಯ ಗುಣಗಳಿವೆ. ಹಲವಾರು ಸಲ ಅವರ ಕವಿತೆಗಳಲ್ಲಿ ವಸ್ತುವಿನ ಸಚಿತ್ರ, ಸವರ್ಣ ವಿವರಣೆ ತಕ್ಕ ಶಬ್ದ, ಅಲಂಕಾರ, ಪ್ರತಿಮೆ-ಪ್ರತೀಕಗಳ ಮೂಲಕ ಅವುಗಳ ಕಾಲ-ದೇಶ-ಸಂಬಂಧ-ಸಂದರ್ಭಗಳು ಸಹಿತ ರೂಪಿಸುವುದುಂಟು. ಅದೇ ರೀತಿಯಲ್ಲಿ ವಸ್ತುಸತ್ಯವನ್ನು ಯಥಾರ್ಥವಾಗಿ ಚಿತ್ರಿಸುವುದಕ್ಕಿಂತ ಅದರೊಳಗಿನ ರಹಸ್ಯವನ್ನು, ಆ ರಹಸ್ಯದ ಮೂಲ ಸೆಲೆಗಳನ್ನು ಅನುಭವಗಳ ಹಿಂದಿರುವ ಧೋರಣೆ-ದರ್ಶನಗಳನ್ನು ಅವರ ಪ್ರತಿಭೆ ಸಮರ್ಥವಾಗಿ ಚಿತ್ರಿಸುತ್ತದೆ. ಈ ಘನೀಭೂತ ಪ್ರತಿಭೆ ಹಾಗೂ ದ್ರವೀಭೂತ ಪ್ರತಿಭೆಗಳ ಜೊತೆ ಜೊತೆಗೆ ಪ್ರತಿಭೆಯ ಮತ್ತೊಂದು ಪದರು 'ಪ್ರತೀಕಾತ್ಮಕ ಪ್ರತಿಭೆ' (Symbolic Imagination) ಕೂಡ ಗೋಕಾಕರ ವ್ಯಕ್ತಿತ್ವದಲ್ಲಿ ಸಮ್ಮಿಳಿತ-ಗೊಂಡಿದೆ. ಜೀವನಾನುಭವದ ವಿಸ್ತಾರ, ವೈವಿಧ್ಯ ಹಾಗೂ ಜೀವನದ ನಿರಂತರ, ಚಿರಂತನ ಅನುಭಾವಿಕ ಸತ್ಯಶೋಧನೆಗಳ ಶೋಧನೆ, ವಿವರಣೆ ಹಾಗೂ ಅಭಿವ್ಯಕ್ತಿ ಈ ಪ್ರತೀಕಾತ್ಮಕ ಪ್ರತಿಭೆಯಿಂದಾಗುವ ಕಾರ್ಯ. ಪ್ರತಿಭೆಗೆ ಪ್ರವಾದಿತ್ವವನ್ನು ಉಂಟು ಮಾಡಿ, ಕವಿಯನ್ನು ಋಷಿಯನ್ನಾಗಿ ಪರಿವರ್ತಿಸುವ ಅಂಶವೇ ಈ ಪ್ರತೀಕಾತ್ಮಕ ಪ್ರತಿಭೆ. ಗೋಕಾಕರ ಸಮುದ್ರಗೀತಗಳು ತ್ರಿಶಂಕುವಿನ ಪ್ರಜ್ಞಾಪ್ರಭಾತ ಹಾಗೂ ಭಾರತ ಸಿಂಧುರಶ್ಮಿಯಲ್ಲಿ ಈ ಪ್ರತಿಭೆಗೆ ನಿದರ್ಶನವಾಗಿ ಹಲವಾರು ಸಂದರ್ಭಗಳು ದೊರಕುತ್ತವೆ.

ಮೇಲೆ ಪ್ರಸ್ತಾಪಿಸಿದ ಯಾವುದೇ ಪ್ರತಿಭೆ ಕವಿಯಿಂದ ವ್ಯಕ್ತವಾಗುವದು ಭಾಷೆಯ ಮೂಲಕವೇ. ಹೀಗೆ ಭಾಷೆಯನ್ನು ಕವಿ ತನ್ನ ಅಭಿವ್ಯಕ್ತಿಗೆ ಮಾಧ್ಯಮ-ವಾಗಿ ಬಳಸುವಾಗ ವ್ಯಾವಹಾರಿಕ ಭಾಷೆಯನ್ನೇ ಬಳಸಿದರೂ, ಅದು ವ್ಯಾವಹಾರಿಕ ನೆಲೆಯಿಂದ ಸಂಪೂರ್ಣ ವಿಭಿನ್ನವಾಗಿರುತ್ತದೆ ; ಮೇಲ್‌ಸ್ತರದ್ದಾಗಿರುತ್ತದೆ. ಕವಿ ಬಳಸುವ ಪದಗಳಿಗೆ ಹಾಗೂ ಅವು ಉಂಟುಮಾಡುವ ಅರ್ಥಗಳಿಗೆ ಹೊಸ-ತೊಂದು ಆವರಣ ಉಂಟಾಗಿ ಭಾಷೆಯನ್ನೂ ಆತ ಪುನಃಸೃಷ್ಟಿಸುತ್ತಾನೆ ; ಪುನರ್‌ಸಂಯೋಜಿಸುತ್ತಾನೆ. ಒಂದು ಭಾಷೆಯ ಸಂದರ್ಭದಲ್ಲಿ ಸೃಜನಕಾರ್ಯದಲ್ಲಿ ತೊಡಗಿರುವ ಕವಿ ಆ ಭಾಷೆಯ ಪರಂಪರೆ, ಪ್ರಯೋಗಗಳನ್ನು ಕರತಲಾಮಲಕ ಮಾಡಿಕೊಂಡಿರಬೇಕು. ಕೇವಲ ಚಿಂತನ ಇಲ್ಲವೆ ಭಾವನೆಗಳ ಸ್ತರದಿಂದ ಪ್ರಜ್ಞೆಯ ರಸಾತಲಕ್ಕಿಳಿದು, ತಾನು ಬಳಸುವ ಒಂದೊಂದು ಮಾತಿಗೂ ಉಂಟಾಗುವ ಅರ್ಥ-

ನಾದ-ಲಯಗಳನ್ನು ಗ್ರಹಿಸಿ, ತನ್ನ ಪ್ರಕೃತಿಭಾಷೆಗೆ ಹೊಸ ರೂಪವನ್ನು, ಜೀವಂತಿಕೆಯನ್ನು ತಂದುಕೊಟ್ಟಾಗಲೇ ಕವಿಯ ಪ್ರತಿಭೆ ಸಾರ್ಥಕವಾಗುತ್ತದೆ. ಹೀಗೆ ಪ್ರಾಚೀನವೂ ಹಾಗೂ ವಿಸ್ಮೃತಿಯ ರಸಾತಲದಲ್ಲಿರುವಂಥದೂ ಆದ ಅರ್ಥ ಪರಂಪರೆಯನ್ನು ತನ್ನ ಪ್ರಕೃತ ಕಾವ್ಯಭಾಷೆಗೆ ತುಂಬಿ, ಅದನ್ನು ಸಮರ್ಥ ವನ್ನಾಗಿಸುವ, ಚೈತನ್ಯಪೂರ್ಣವಾಗಿಸುವ ಕವಿಪ್ರತಿಭೆಗೆ 'ಶ್ರಾವಣ ಪ್ರತಿಭೆ' (Auditory Imagination) ಎಂದು ಟಿ. ಎಸ್. ಈಲಿಯಟ್ ಕರೆದಿದ್ದಾನೆ.[೧] ಗೋಕಾಕ ಪ್ರತಿಭೆಯಲ್ಲಿ ಕನ್ನಡ ಭಾಷೆಯ ಪ್ರಾಚೀನ ಪರಂಪರೆ, ತನ್ನೆಲ್ಲ ಸತ್ವ, ಶಕ್ತಿಗಳೊಂದಿಗೆ ಹೊಸದೆಂಬಂತೆ ಬಳಕೆಗೊಳ್ಳುವದನ್ನು ನೋಡುತ್ತೇವೆ. ಜೊತೆಗೆ ಭಾರತೀಯ ಪುರಾಣ, ಇತಿಹಾಸ ಸಾಮಗ್ರಿಯನ್ನು, ಪಾಶ್ಚಾತ್ಯ ಇತಿಹಾಸ ಪುರಾಣ ಸಾಮಗ್ರಿಯನ್ನು ಕನ್ನಡಕ್ಕೆ ಎರಕಹೊಯ್ಯುವ ಅನನ್ಯರೀತಿಯನ್ನೂ ಗೋಕಾಕಕರ ಪ್ರತಿಭೆಯಲ್ಲಿ ಕಾಣುತ್ತೇವೆ.

ಗೋಕಾಕ ಪ್ರತಿಭೆಯಲ್ಲಿ ಏನುಂಟು, ಏನಿಲ್ಲ ? ನಾವು ಮೊದಲೇ ಪ್ರಸ್ತಾಪಿಸಿದ ಹಾಗೆ ಗೋಕಾಕ ಪ್ರತಿಭೆಗೆ ತಕ್ಕ ಉಪಮಾನಗಳೆಂದರೆ ಪೃಥ್ವಿ, ದ್ಯಾವಾ ಹಾಗೂ ಸಮುದ್ರ. 'ಬಹುರತ್ನಾ ವಸುಂಧರಾ' ಎಂಬಂತೆ ಗೋಕಾಕ ಪ್ರತಿಭಾಭೂಮಿಯಲ್ಲಿ ಏನೆಲ್ಲ ರತ್ನಗಳು ಅಡಗಿವೆ; ಅದು ಸೃಜನಶೀಲತೆಯ ತವರ್ಮನೆ. ದ್ಯಾವಾ-ಆಕಾಶ ಈ ಭೂಮಿಯ ಸೃಜನಕ್ರಿಯೆಗೆ ತೇವನ್ನುಂಟುಮಾಡಿ, ಸೃಜನಕ್ರಿಯೆಯನ್ನು ಸಮರ್ಥಿಸುವ, ಪೋಷಿಸುವ ಮಹತ್‌ಶಕ್ತಿ. ಅದರ ಅಗಲ-ಎತ್ತರ, ರೂಪವೈವಿಧ್ಯ ಬಣ್ಣನೆಗೂ ನಿಲುಕದ ಅಪರಂಪಾರ. ಸಮುದ್ರವೋ ಗಂಭೀರ, ಗಂಭೀರ, ಅನಂತ. ಅದರ ವೈವಿಧ್ಯ, ಶ್ರೀಮಂತಿಕೆ, ನವೀನತೆ ಹಾಗೂ ತನ್ನತನಗಳು ಅಪೂರ್ವವಾದವು. ಹೀಗೆ ಗೋಕಾಕಪ್ರತಿಭೆ. ಅಂತೇ ಅವರ ಪ್ರತಿಭೆಗೆ 'ಸಂಕೀರ್ಣಪ್ರತಿಭೆ' ಎನ್ನಬಹುದೇನೋ !

□□

---

೧. F. O Matthiessen The Achievement of T S Eliot P 81

೨. "ನಾನು ಪಯಣಿಗ, ಎಲ್ಲಿ ನೆಲ ನೀರ್
ಗಾಳಿ ನನ್ನನು ಕರವುವೋ" - ವಿ. ಕೃ. ಗೋಕಾಕ. ಕಾಶ್ಮೀರ - ಮುನ್ನುಡಿ

ಗೋಕಾಕ : ಬಹುಜ್ಞತಾಸ್ವರೂಪ

– *ಕೀರ್ತಿನಾಥ ಕುರ್ತಕೋಟಿ*

'ವ್ಯುತ್ಪತ್ತಿ' ಮತ್ತು 'ಪ್ರತಿಭೆ' ಇವೆರಡು ಸಮನಾರ್ಥಕವಾದ ಶಬ್ದಗಳು. ಆದರೂ ಇವುಗಳ ಅರ್ಥದಲ್ಲಿಯ ಒಂದು ಸೂಕ್ಷ್ಮವಾದ ಅಂತರವನ್ನು ನಮ್ಮ ಅಲಂಕಾರ ಶಾಸ್ತ್ರವು ಉಪಯೋಗಿಸಿಕೊಂಡಿದೆ. ನಿಜವಾದ ಕವಿಯಲ್ಲಿ ಇರಬೇಕಾದದ್ದು ಪ್ರತಿಭೆ. ಅದು ಅವನ ಸಹಜಗುಣ ; ರತ್ನಗಳ ನೈಜತೆಯನ್ನು ತಿಳಿದುಕೊಳ್ಳುವ ರತ್ನ ಪರೀಕ್ಷಕನ ಕಣ್ಣಿನ ಗುಣ ಕೂಡ ಪ್ರತಿಭೆಯೇ. ಆದರೆ 'ವ್ಯುತ್ಪತ್ತಿ'ಯಲ್ಲಿ ಪ್ರತಿಭೆಯೊಂದಿಗೆ ಬಹುಶ್ರುತತೆಯು, ಬಹುಜ್ಞತೆಯು ಅಂಶ ಕೂಡ ಸೇರಿಕೊಂಡಿದೆ. 'ಬಹುಜ್ಞತಾ ವ್ಯುತ್ಪತ್ತಿಃ' ಎಂದು ಹೇಳಿದವನು ರಾಜಶೇಖರ. ಆ ಕಾಲದ ಸಂಸ್ಕೃತ ಕಾವ್ಯದಲ್ಲಿಯ ಪಾಂಡಿತ್ಯ ಅವನ ಕಣ್ಣು ತಪ್ಪಿಸಿ ಹೋಗುವಂತಿರಲಿಲ್ಲ. ಪಾಂಡಿತ್ಯವನ್ನು ಜೀರ್ಣಿಸಿಕೊಳ್ಳುವ ಅಂತಃಸತ್ವ ಕಾವ್ಯದಲ್ಲಿದ್ದಷ್ಟೂ ಒಳ್ಳೆಯದೇ. 'ನಿಪುಣತಾ ಲೋಕಶಾಸ್ತ್ರ, ಕಾವ್ಯಾದ್ಯವೇಕ್ಷನಾತ್' - ಇದು ಮಮ್ಮಟನ ಪ್ರಕಾರ ವ್ಯುತ್ಪತ್ತಿಯ ಅರ್ಥ. ಈ ರೀತಿಯ ಬಹುಜ್ಞತೆ ಕಾವ್ಯಕ್ಕೆ ಉಪಕಾರವೇ ಆಗಿದೆ.

ನಮ್ಮ ನವೋದಯದ ಕವಿಗಳಲ್ಲಿ ವ್ಯುತ್ಪತ್ತಿಯ ಗುಣ ಹೆಚ್ಚಾಗಿ ಕಾಣುವದು ಮೊದಲು ದಿ. ಶ್ರೀಯವರಲ್ಲಿ, ಆಮೇಲೆ ವಿನಾಯಕ ಕೃಷ್ಣ ಗೋಕಾಕರ ಕಾವ್ಯದಲ್ಲಿ ಎಂದು ತೋರುತ್ತದೆ. ಸಂಸ್ಕೃತ, ಇಂಗ್ಲೀಷ್, ಗ್ರೀಕ್ ಮತ್ತು ತಮಿಳು ಕಾವ್ಯಗಳ ಸೂಕ್ಷ್ಮವಾದ ಪರಿಚಯದಿಂದ ಹುಟ್ಟಿದ ಬಹುಜ್ಞತೆಯಿಂದ ಶ್ರೀಯವರು ಹೊಸಗನ್ನಡ ಕಾವ್ಯದ ಅಡಿಪಾಯವನ್ನು ಹಾಕಿದರು. ಕಾವ್ಯದ ಅಗಲ, ಆಳ ಮತ್ತು ಎತ್ತರಗಳು ಈ ಅಡಿಪಾಯದ ಭದ್ರತೆಯನ್ನು ಅವಲಂಬಿಸಿವೆ ಎಂದು ಬೇರೆ

ಹೇಳಬೇಕಾಗಿಲ್ಲ. ವ್ಯುತ್ಪತ್ತಿಯೆಂದರೆ 'ಉಚಿತಾನುಚಿತ ವಿವೇಕ' ಎಂಬ ಅರ್ಥವೂ ಇದೆ. ಹೊಸಗನ್ನಡ ಕಾವ್ಯದ ಪ್ರಾರಂಭದ ಕಾಲವೆಂದರೆ ಪೂರ್ವ ಮತ್ತು ಪಶ್ಚಿಮದ ಸಂಸ್ಕೃತಿಗಳ ಮುಖಾಮುಖಿಯ ಕಾಲವೆಂದ ಮೇಲೆ ಹೊಸ ಕಾವ್ಯ ನಿರ್ಮಾಣಕ್ಕೆ ವ್ಯುತ್ಪತ್ತಿಯ ಅವಶ್ಯಕತೆ ಬಹಳವಾಗಿತ್ತು. ಪಾಶ್ಚಾತ್ಯ ಸಂಸ್ಕೃತಿಯ ಸ್ಪರ್ಶದಿಂದ ನಮ್ಮ ಸಂಸ್ಕೃತಿ ಮತ್ತು ಭಾಷೆಗಳು ಒಂದು ಅಪೂರ್ವವಾದ ಲವಲವಿಕೆಯನ್ನು ಪಡೆಯ ಬೇಕಾಗಿತ್ತು. ಇದಕ್ಕಾಗಿ ಬಿ.ಎಂ. ಶ್ರೀಯವರ ವ್ಯುತ್ಪತ್ತಿ ಭಾಷಾಂತರದಂಥ ಒಂದು ವಿಧಾನವನ್ನು ಉಪಯೋಗಿಸಿತು. Lord Vllins daughter ಕಾರಿ ಹೆಗ್ಗಡೆಯ ಮಗಳಾಗಿ ಬಂದಾಗ, ಈ ರೂಪಾಂತರವನ್ನು ಒಳಹೊಗಿಸಲು ಕೂಡ ನಮ್ಮ ಭಾಷೆ ಮೈಕೊಡವಿಕೊಳ್ಳಬೇಕಾಯಿತು. ನಮ್ಮ ದೇಶದ ಇತಿಹಾಸದಲ್ಲಿ ಇಂಥ ಸಾವಿರ ಹೊಂದಾಣಿಕೆಗಳು ದೊರೆಯುತ್ತವೆ.

ವಿನಾಯಕರ ಕಾವ್ಯದ ವ್ಯುತ್ಪತ್ತಿ ಬೇರೊಂದು ವಿಧಾನವನ್ನು ಅನುಸರಿಸಿತು. ಅವರ 'ಸಮುದ್ರ ಗೀತಗಳು' ಇಂಗ್ಲೀಷ್ ಕವಿತೆಗಳ ಭಾಷಾಂತರಗಳಲ್ಲ. ಇಲ್ಲಿ ಹೊಸತಾಗಿರುವದು ಕವಿತೆಯ ವಸ್ತು. ಸಮುದ್ರ ಎಷ್ಟೇ ಪ್ರಾಚೀನವಾಗಿದ್ದರೂ ಕೂಡ ಇಲ್ಲಿಯ ಸಮುದ್ರಕ್ಕೆ ಹೊಸದಾದ ಐತಿಹಾಸಿಕ ಸಂದರ್ಭವಿದೆ. ವಿನಾಯಕರ ವ್ಯುತ್ಪತ್ತಿ ಈ ಸಂದರ್ಭವನ್ನು ಉಪಯೋಗಿಸಿಕೊಂಡು ಕಾವ್ಯವನ್ನು ಹೊಸ ದಾಗಿಸಲು ಪ್ರಯತ್ನಿಸುತ್ತಿದೆ. ಕಾವ್ಯದಲ್ಲಿ ಹೊಸ ವಸ್ತುವಿನ ಉಪಯೋಗವನ್ನು ಕುರಿತು ಉತ್ಸಾಹದಿಂದ ಮಾತಾಡುವಾಗಲೆಲ್ಲ ನಾವು ಒಂದು ಮಾತನ್ನು ಮರೆತು ಬಿಡುತ್ತೇವೆ. ಸೈದ್ಧಾಂತಿಕವಾಗಿ ಕವಿತೆಗೆ ಯಾವ ವಿಷಯವೂ ವರ್ಜ್ಯವಲ್ಲ ನಿಜ. ಆದರ ಹೊಸ ವಸ್ತುವಿಗೂ ಕವಿಗೂ ಒಂದು ಭಾವಸಂಬಂಧ ಏರ್ಪಟ್ಟಿರುವದು ಅನಿವಾರ್ಯವಾಗಿರುತ್ತದೆ. ವಿನಾಯಕರು ಮೊಟ್ಟ ಮೊದಲಿಗೆ ಸಮುದ್ರದ ಪಯಣವನ್ನು ಕೈಕೊಂಡಾಗ ಸಮುದ್ರದ ಜೊತಗೆ ಇಂಥ ಒಂದು ಸಂಬಂಧವನ್ನು ಬೆಳೆಸಿಕೊಂಡರೆಂಬುದು ಈ ಸಂಗ್ರಹದ ಕವಿತೆಗಳನ್ನೋದಿದಾಗ ಸ್ಪಷ್ಟವಾಗುತ್ತದೆ. ಆವರಣದ ಹೊಸತನದಲ್ಲಿ ಮತ್ತು ಅದರ ಸಂಭ್ರಮ ಉದ್ವಿಗ್ನತೆಗಳಲ್ಲಿ ತನ್ನ ವ್ಯಕ್ತಿತ್ವ ಕೊಚ್ಚಿ ಹೋಗಬಾರದೆಂದು ಕವಿ ಅಲ್ಲಿ ಪ್ರತಿಕ್ಷಣಕ್ಕೂ ಹೋರಾಡುತ್ತಿರುವದು ಕೂಡ ಕಾಣುತ್ತದೆ. ಇಂಥ ಮನಸ್ಥಿತಿಯನ್ನು ಅಲ್ಲಿಯ ಕವಿತೆಗಳು ಬಹಳ ಯಶಸ್ವಿಯಾಗಿ ನಿರೂಪಿಸುತ್ತವೆ. ಸಮುದ್ರದೊಡನೆ, ಸಮುದ್ರ ಪ್ರತಿನಿಧಿಸುವ ಇನ್ನೊಂದು ಸಂಸ್ಕೃತಿಯ ಪ್ರತಿಮೆಗಳೊಂದಿಗೆ ಕವಿ ನಡೆಸುವ ವಾಗ್ವಾದಕ್ಕೆ ಬೆಲೆಬಾಳುವ ಅರ್ಥಪೂರ್ಣತೆಯಿದೆ. ಸಮುದ್ರದ ಭಾವಲಹರಿಗಳಲ್ಲಿ ಮನುಷ್ಯನ ಇತಿಹಾಸದ ಏರಿಳಿತಗಳನ್ನು ನಿರೂಪಿಸುತ್ತ ಕವಿ ಆತ್ಮಪ್ರಜ್ಞೆಯನ್ನೂ, ಸ್ವಪ್ರತ್ಯಯವನ್ನೂ ಪಡೆದುಕೊಳ್ಳುತ್ತಾನೆ. ಅನುಭವದೊಡನೆ ತಿಳುವಳಿಕೆಯೂ ಸೇರಿಕೊಂಡಿರುವದು ಇಲ್ಲಿ ಮಹತ್ವದ್ದಾಗಿದೆ.

(೧) ಅಬ್ದ ಶಬ್ದಗಳ ಪ್ರಾರಬ್ಧದಲ್ಲಿ ಸಹ
ಮಹಾಬ್ಧಿಯ ಕಣವೊಂದು ಸೆರೆ ಸಿಕ್ಕದಯ್ಯ!
ಕೊಡದಿರು ಶರಧಿಗೆ ಪಟ್ಟದಿಯ ದೀಕ್ಷೆಯನು
....
ಹೊಸದೆಲ್ಲ ಹುಟ್ಟಿಬರಲಿ - ಹೃದಯದಾಳದಲ್ಲಿ,
ಬೇಡಯ್ಯ! ಬಂಧಗಳ ಬಂದಿವಾಸ
ಬರೆದದ್ದೇ ಬಂಧುರವಾಗಬಹುದು
ಸಾಕಯ್ಯ: ವೃತ್ತಗಳಾವರ್ತ
ನಿನ್ನ ಮಣಿತವಿರಲಿ ಸಮುದ್ರದ ಕುಣಿತದಂತೆ!

(೨) ನಿನ್ನ ನಾಡಿದು ನಂದನವನವೆನ್ನುತಿದ್ದೆನು: ಆಂಗ್ಲದೇವಿ!
ಆದರೆ ನಿನ್ನ ಸೌಂದರ್ಯವು ಭಯಾನಕವಾಗಿಹುದೆನಗೆ!
....
ನೀನು ಆಂಗ್ಲ, ನಾನು ಭಾರತೀಯ -
ಬಾರದಿಲ್ಲಿ ಹೃದಯದ ದಂಪತ್ತು!

ಈ ಎರಡು ಪದ್ಯಭಾಗಗಳಲ್ಲಿಯ ಕವಿಯ ಸೃಜನಶೀಲವಾದ ಆತಂಕ ಅರ್ಥಪೂರ್ಣವಾಗಿದೆ. 'ಕೊಡದಿರು ಶರಧಿಗೆ ಪಟ್ಟದಿಯ ದೀಕ್ಷೆಯನು' ಎಂಬ ಮಾತು ಆತ್ಯಂತಿಕವಲ್ಲ. 'ಬಾಳದೇಗುಲದಲ್ಲಿ' ಸಂಗ್ರಹದ ಬಹಳಷ್ಟು ಕವಿತೆಗಳು ಕುಸುಮ ಮತ್ತು ಭೋಗ ಷಟ್ಪದಿಯಲ್ಲಿವೆ. ಆದರೂ ಕವಿತೆಯ ಛಂದಸ್ಸು ಯಾವುದಿರಬೇಕೆಂದು ವಿಚಾರ ಮಾಡುವದು ಕೂಡ ವ್ಯುತ್ಪತ್ತಿಯ ಕೆಲಸವಾಗಿದೆ. ಮುಕ್ತಛಂದದ ಆಯ್ಕೆ ಕೂಡ ಮಹತ್ವದ್ದಾಗಿದೆ. ಪ್ರತಿಭೆಯೊಂದಿದ್ದರೆ 'ಬರೆದದ್ದೇ ಬಂಧುರವಾಗಬಹುದು.' ಆದರೆ ಆಯ್ಕೆ ಮಾಡುವದು ವ್ಯುತ್ಪತ್ತಿಯ ಕೆಲಸ. ವಿನಾಯಕರ ಕಾವ್ಯದ ಮಟ್ಟಿಗೆ ಹೇಳುವದಾದರೆ ಛಂದಸ್ಸಿನ ಆಯ್ಕೆ ದೈವದ ಆಯ್ಕೆಯಂತೆ ನಿಷ್ಠುರವಾದದ್ದು. ಅದರ ಪರಿಪಾಕ-ದುರ್ವಿಪಾಕಗಳನ್ನು ಕಾವ್ಯ ಅನುಭವಿಸಬೇಕು. ಎರಡನೆಯ ಪದ್ಯಭಾಗದಲ್ಲಿ ಕೂಡ ಅನುಭವ ಮತ್ತು ತಿಳುವಳಿಕೆಗಳ ನಡುವೆ ಒಂದು ಅಂತರ ಕಾಣುತ್ತದೆ. 'ನೀನು ಆಂಗ್ಲ, ನಾನು ಭಾರತೀಯ' - ಇಲ್ಲಿಯ ವಾಸ್ತವ ಸಂಗತಿ ಕೂಡ ದೈವದ ಶಾಸನದಂತೆ ನಿಷ್ಠುರವಾದದ್ದು. ಒಂದು ಕಾಲಕ್ಕೆ ಇಂಗ್ಲೀಷಿನಲ್ಲಿ ಕಾವ್ಯರಚನೆ ಮಾಡಿದ್ದ ವಿನಾಯಕರೆದುರು ಇದೂ ಒಂದು ನೈತಿಕ ಸಮಸ್ಯೆಯಾಗಿದೆ. ಈ ನೈತಿಕ ಸಮಸ್ಯೆ ಕಾವ್ಯದ ಮುಂದಿರುವ ಸಮಸ್ಯೆಯಾಗಿರುವದರಿಂದ ಕವಿ ತನ್ನ ವ್ಯುತ್ಪತ್ತಿಯ ಮೂಲಕ ಈ ಸಮಸ್ಯೆಗೆ ಪರಿಹಾರವನ್ನು ಕಂಡುಕೊಳ್ಳಬೇಕಾಗಿದೆ. 'ಬಾಳದೇಗುಲದಲ್ಲಿ' ಸಂಗ್ರಹ-ದಲ್ಲಿ 'ಕವಿ-ಅನುಭಾವಿ' ಎಂಬ ಒಂದು ದೀರ್ಘ ಕವಿತೆಯಿದೆ. ಅನುಭಾವಿ

ಯಾಗಿರುವ ಒಬ್ಬ ಕವಿಯ ವಿವರವಾದ ವರ್ಣನೆ ಅಲ್ಲಿದೆ. ಈ ಕವಿತೆಗೆ ಮೂಲ ಮಾದರಿಯಾಗಿದ್ದವರು ಮಧುರಚನ್ನರು. ವಿನಾಯಕರು ತಮ್ಮ ಮತ್ತು ಮಧುರಚನ್ನರ ಸಂಬಂಧವನ್ನು ಕುರಿತು ಹೀಗೆ ಹೇಳಿದ್ದಾರೆ:

ನನ್ನ ನಿನ್ನ ದೃಷ್ಟಿಯೊಂದೆ.
ಆದರೆಮ್ಮದೃಷ್ಟ ಬೇರೆ -
ಯೆಂಬ ನಿನ್ನ ಮಾತನಿಂದು ಮತ್ತೆ ನೆನೆಸಿದೆ.
ಒಂದೆ ಕಡಲ ಕೂಡಲಾವು-
ಗಂಗೆ ಯಮುನೆ-ಹರಿಯುತಿಹೆವು
ಪಾತ್ರದೀ ಪ್ರವಾಹವೊಂದೆ ಬೇರೆಯೆನಿಸಿದೆ.

ಇಬ್ಬರ ದೃಷ್ಟಿಯೊಂದೇ ಆಗಿದ್ದರೂ ಅದೃಷ್ಟ ಬೇರೆಯಾಗಿರುವದೆಂಬ ಮಾತು ಅರ್ಥಪೂರ್ಣವಾಗಿದೆ. ಮಧುರಚನ್ನರ ಈ ಅಪೂರ್ವವಾದ ತಿಳುವಳಿಕೆ ಕಾವ್ಯ ರಚನೆಗೆ ಉಪಯೋಗವಾಗಬಲ್ಲದೆಂಬ ಸಂಗತಿ ವಿನಾಯಕರ ವ್ಯುತ್ಪತ್ತಿಗೆ ತಿಳಿದಿದೆ. ಬೇಂದ್ರೆಯವರು ಇಂಥದೇ ಒಂದು ಕವಿತೆಯನ್ನು ಮಧುರಚನ್ನರ ಬಗ್ಗೆ ಬರೆದರು. 'ಚನ್ನ' ಎಂಬ ಹೆಸರಿನ ಆ ಕವಿತೆ ವಿನಾಯಕರ ಈ ಕವಿತೆಯಂತೆ ದೀರ್ಘವಾಗಿಲ್ಲ, ಅಲ್ಲದೆ ಇಂಥ ಒಂದು ವೈಯಕ್ತಿಕ ಸಮಸ್ಯೆಯನ್ನು ತಿಳಿದುಕೊಂಡು ಅದಕ್ಕೆ ಪರಿಹಾರವನ್ನು ಪಡೆಯುವ ತವಕವೇ ಆ ಕವಿತೆಗಿಲ್ಲ. ಬೇಂದ್ರೆಯವರಿಗೆ ಅದೊಂದು ಜೀವನಾನುಭವ. ಕವಿತೆಗೆ ಆಸಕ್ತಿ ಇರುವದು ಆ ಅನುಭವದ ನಿಗೂಢತೆಯ ಬಗ್ಗೆ ಮತ್ತು ಆ ಅನುಭವವದ ಸ್ವರೂಪದ ಬಗ್ಗೆ. ಅದೊಂದು ಭಾವಗೀತವಾಗಿರುವದರಿಂದ ಬೇಂದ್ರೆಯವರ ದೃಷ್ಟಿಯಿಂದ ಅದಕ್ಕೆ ಅರ್ಥವಿಲ್ಲ, ಸ್ವಾರ್ಥವೂ ಇಲ್ಲ. ಗೀತದ ಪ್ರಜ್ಞೆ ತನ್ನ ರೂಪಕಗಳನ್ನು ಹುಡುಕಿ ಕೊಂಡು ಹೋಗಿ ಹಾಡಾಗಿ ಹುಟ್ಟುತ್ತದೆ. ಬಯಲಿನಲ್ಲಿ ಆಲಯವನ್ನು ಕಟ್ಟುತ್ತ 'ಅರ್ಥ'ವನ್ನು ಸೃಷ್ಟಿಸುವ ಕಲೆಗಾರಿಕೆ ಅದು. ವಿನಾಯಕರ ಕವಿತೆ 'ಬಾಳದೇಗುಲ ದಲ್ಲಿ' ಸಂಗ್ರಹದ ಅನೇಕ ಕವಿತೆಗಳಲ್ಲಿ ಒಂದಾಗಿದ್ದು, ಅದರ ಅರ್ಥಪೂರ್ಣತೆ ಇಡೀ ರಚನೆಯ ಭಾವಸಂದರ್ಭವನ್ನು ಅವಲಂಬಿಸಿದೆ. ಬೇಂದ್ರೆಯವರ ಕವಿತೆಗೆ ಇಂಥ ಅವಲಂಬನ ಬೇಕಾಗಿಲ್ಲ, ಯಾಕೆಂದರೆ ಅದು ಯಾವದೇ ಐತಿಹಾಸಿಕ ಸಂದರ್ಭದಿಂದ ಹುಟ್ಟಿ ಬಂದದ್ದಲ್ಲ. ಹಾಗೆ ನೋಡಿದರೆ ಪ್ರತಿಭೆಗೆ ಇತಿಹಾಸವೇ ಇಲ್ಲ. ವ್ಯುತ್ಪತ್ತಿ ಮಾತ್ರ ಇತಿಹಾಸವನ್ನು ನಿರ್ಲಕ್ಷಿಸುವದಿಲ್ಲ.

೨

ವಿನಾಯಕರ ಕವಿತೆಗಳಲ್ಲಿ ಅಪರೂಪಕ್ಕೊಮ್ಮೆ ಒಂದೆರಡು ಭಾವಗೀತಗಳು ದೊರೆಯುತ್ತವೆ. 'ಇಂದು ಬಂದ ಚಂದ್ರಮಾ/ಬಾರೆ ಬಾ ಮನೋರಮಾ ' ಎಂದು

ಪ್ರಾರಂಭವಾಗುವ ಗೀತ ಅವರ 'ಮಹಾಶ್ವೇತೆ' ಎಂಬ ಪದ್ಯನಾಟಕದಲ್ಲಿದೆ. ಆದರೆ ತಟ್ಟನೆ ನೆನಪಿಗೆ ಬರುವ ಭಾವಗೀತವೆಂದರೆ 'ಪಯಣ' ಸಂಗ್ರಹದಲ್ಲಿರುವ 'ಇಲ್ಲಿ ಇರು ಅಲ್ಲಿ ಹೋಗಿ ಮಲ್ಲಿಗೆಯನೆ ತರುವೆನು' ಎಂದು ಪ್ರಾರಂಭವಾಗುವ ಕವಿತೆ. ಈ ಕವಿತೆಯ ವಸ್ತು ವಿನಾಯಕರ ಆಮೇಲೆ ಬರೆದ ಅನೇಕ ಕವಿತೆಗಳಲ್ಲಿ ಪುನರುಕ್ತವಾಗಿದೆ. ಆದರೆ ಇದೊಂದು ಕವಿತೆಯಲ್ಲಿ ಮಾತ್ರ ಅದಕ್ಕೆ ಭಾವಗೀತದ ಸ್ವರೂಪ ಬಂದಿದೆ. ಮುಂದೆ ಬರುವ ಪಯಣದ ಅದ್ಭುತರಮ್ಯತೆಯನ್ನು ಉಪಯೋಗಿಸಿಕೊಂಡು ಈ ಕವಿತೆ ಬೆಳೆಯುತ್ತದೆ. ಆದರೆ ಅದಕ್ಕಾಗಿ ಇದನ್ನು ಭಾವಗೀತೆಯೆಂದು ಕರೆಯುವಂತಿಲ್ಲ. 'ಅಲ್ಲಿ ಹೋಗಿ ಮಲ್ಲಿಗೆಯನು ತರುವೆನು' - ಈ ಹೇಳಿಕೆಯಲ್ಲಿಯ ಅನಿಶ್ಚಿತತೆಯನ್ನು ಗಮನಿಸಬೇಕು. ಈ ಪಯಣದಲ್ಲಿ ಯೋಜನೆ, ಉದ್ದೇಶ, ಪ್ರಯೋಜನ, ಗುರಿ ಇವು ಯಾವುವೂ ನಿಶ್ಚಿತವಾಗಿಲ್ಲ. 'ಮಲ್ಲಿಗೆಯನು ತರುವೆನು' ಎಂಬ ಹೇಳಿಕೆಗೆ ಕೂಡ ನಿಶ್ಚಿತವಾದ ವಾಸ್ತವ ಅರ್ಥವಿಲ್ಲ . 'ಮಲ್ಲಿಗೆ' ಗೆ ಸಾಂಕೇತಿಕ ಅರ್ಥ ಕೂಡ ಇಲ್ಲ. 'ಇಲ್ಲಿ' 'ಅಲ್ಲಿ' ಇಂಥ ಶಬ್ದಗಳೊಡನೆ ನಾದದ ಸಂಬಂಧವನ್ನು ಕಟ್ಟಿಕೊಂಡ 'ಮಲ್ಲಿಗೆ' ಸ್ವತಂತ್ರವಾದ ಅರ್ಥವನ್ನು ಪ್ರಕಟಿಸಲು ಯತ್ನಿಸುತ್ತದೆ. ಇಡೀ ಕವಿತೆಯ ತುಂಬ ಇಂಥ ನಾದಮಯವಾದ ಹೇಳಿಕೆಗಳು ತುಂಬಿಕೊಂಡು ಒಂದಕೊಂದು ರೂಪಕವಾಗುತ್ತವೆ. ಅಂದರೆ ಭಾವಗೀತದ ಅನೇಕ ಹೇಳಿಕೆಗಳ ನಡುವೆ ಇರುವದು ಇಂಥ ರೂಪಕಾತ್ಮಕವಾದ ಸಂಬಂಧವೇ ಹೊರತು, ಐತಿಹಾಸಿಕ ಅಥವಾ ಅರ್ಥದ ಸಂಬಂಧವಲ್ಲ.

ಇಲ್ಲೆಲ್ಲ ಮಹತ್ವದ ಮಾತೆಂದರೆ, ವಿನಾಯಕರು ಮುಂದೆ ಇಂಥ ಕವಿತೆಗಳನ್ನು ಬರೆಯಲಿಲ್ಲವೆನ್ನುವದು. 'ಸಮುದ್ರಗೀತಗಳು' ಸಂಕಲನದ ಕವಿತೆಗಳೆಲ್ಲ ಕೂಡಿಕೊಂಡು ಕವಿಯ ಐತಿಹಾಸಿಕ ಜೀವನದ ಒಂದು ಅಧ್ಯಾಯವನ್ನು ನಿರೂಪಿಸುತ್ತವೆ. ಈ ಅಧ್ಯಾಯಕ್ಕೆ ಒಂದು ನಿಶ್ಚಿತವಾದ ಪ್ರಾರಂಭವಿದ್ದು, ಅದು ಒಂದು ನಿಶ್ಚಿತವಾದ ಗಳಿಗೆಗೆ ಮುಗಿಯುತ್ತದೆ. ನಡುವಿನ ಅನುಭವ ಮತ್ತೆ ಪುನರುಕ್ತವಾಗಬೇಕಿಲ್ಲ. ಆದರೆ ಈ ಕವಿತೆಗಳ ಅನುಭವವೆಲ್ಲ ತಮ್ಮ ಅರ್ಥಪೂರ್ಣತೆಗಾಗಿ ಇತಿಹಾಸದ ವಾಸ್ತವತೆಯನ್ನು ಅವಲಂಬಿಸುತ್ತವೆ. ಆಗ ಭೂಮಧ್ಯ ಸಮುದ್ರ,ಮಧ್ಯರಾತ್ರಿಯಲ್ಲಿ ಆಕಾಶಗಂಗೆಯೊಡನೆ ನಡೆಸಿದ ಪ್ರಣಯಲೀಲೆ ಕೂಡ ಈ ಇತಿಹಾಸದ ಒಂದು ಭಾಗವಾಗುತ್ತದೆ. ವಿನಾಯಕರು ತಮ್ಮ 'ಕವಿ,ಕಾವ್ಯ ಮಹೋನ್ನತಿ' ಎಂಬ ಒಂದು ಭಾಷಣದಲ್ಲಿ, ಗದ್ಯ ಮತ್ತು ಪದ್ಯಗಳ ನಡುವಿನ ಭೇದವನ್ನು ಕುರಿತು ಹೀಗೆ ಹೇಳಿದ್ದಾರೆ. : 'ನಿಜವಾದ ಭೇದವು 'ಕಾವ್ಯ' ಮತ್ತು 'ಗದ್ಯ'ಗಳ ನಡುವಿರುವದಿಲ್ಲ. 'ಕಾವ್ಯ' ಮತ್ತು ಶಾಸ್ತ್ರಗಳ ನಡುವಿದೆ. ಗದ್ಯ ಪದ್ಯಗಳ ಭೇದವು ತಾಳಲಯಗಳ ಅಂತರದಲ್ಲಿದೆ. ಗದ್ಯವು ನಡೆದರೆ ಪದ್ಯವು ಕುಣಿಯುತ್ತದೆ.

ಕಾವ್ಯ ಶಾಸ್ತ್ರಗಳಲ್ಲಿ ತಿರುಳಿನದೇ ವ್ಯತ್ಯಾಸವಿದೆ. ಶಾಸ್ತ್ರಕಾರನು ಇದ್ದ ಸಂಗತಿಗಳನ್ನು ವಿವರಿಸುತ್ತಾನೆ ; ಚರ್ಚಿಸುತ್ತಾನೆ, ಕವಿಯು ಇರಬಹುದಾದ ಸಂಗತಿಗಳನ್ನು ಬಣ್ಣಿಸುತ್ತಾನೆ.'

ಗದ್ಯ ಪದ್ಯಗಳ ನಡುವಿನ ವ್ಯತ್ಯಾಸವನ್ನು ಖಚಿತವಾಗಿ ತೋರಿಸಿದ್ದಾರೆಂದಷ್ಟೇ ವಿಮರ್ಶೆಯ ಈ ಸಿದ್ಧಾಂತ ಮಹತ್ವದ್ದಾಗಿಲ್ಲ. ಈ ಬಗೆಯ ವ್ಯಾಖ್ಯೆ ನಮ್ಮ ಪ್ರಾಚೀನ ಆಲಂಕಾರಿಕರಿಗೂ ಒಪ್ಪಿಗೆಯಾದದ್ದೇ. ಆದರೆ ಗದ್ಯ ಪದ್ಯಗಳ ಈ ಸ್ವರೂಪಜ್ಞಾನ ವಿನಾಯಕರ ಕಾವ್ಯದ ದೃಷ್ಟಿಯಿಂದ ಬಹಳ ಮಹತ್ವದ್ದಾಗಿದೆ. ರಸಾನುಭವ ನೀಡುವ ಬರವಣಿಗೆ - ಅದು ಗದ್ಯದಲ್ಲಿರಲಿ ಪದ್ಯದಲ್ಲಿರಲಿ - ಅದೆಲ್ಲ ಕಾವ್ಯ ಎಂಬ ಸಂಗತಿ ಮನಸ್ಸಿಗೆ ಸ್ಪಷ್ಟವಾದಾಗ, ಕವಿ ಕಾವ್ಯಸ್ವರೂಪದ ಬಗ್ಗೆ ಹೆಚ್ಚು ನಿಶ್ಚಿಂತನಾಗಿ, ಮೈಚಳಿ ಬಿಟ್ಟು ಬರೆಯಬಹುದು. ವಿನಾಯಕರು ತಮ್ಮ ಕಾವ್ಯವನ್ನು ಛಂದೋಬದ್ಧವಾಗಿ, ಅಲ್ಲದೇ ಮುಕ್ತಛಂಧಸ್ಸಿನಲ್ಲಿಯೂ ಬರೆದಿದ್ದಾರೆ. ಅಂದರೆ ತಮ್ಮ ಕಾವ್ಯದಲ್ಲಿ ಗದ್ಯಕ್ಕೆ ಸಾಕಷ್ಟು ಇಂಬುಕೊಟ್ಟು ಬರೆದಿದ್ದಾರೆ. ಅವರ ಮುಕ್ತಛಂದದಲ್ಲಿ, ಚಂಪೂ ಪ್ರಯೋಗಗಳಲ್ಲಿ ಗದ್ಯ ಸ್ಪಷ್ಟವಾಗಿಯೇ ಗೋಚರವಾಗುತ್ತದೆ. ಹರಿಹರನ ರಗಳೆಗಳಲ್ಲಿಯಂತೆ ಒಮ್ಮೆ ಪದ್ಯ ಮತ್ತೊಮ್ಮೆ ಗದ್ಯ ಇಂಥ ಕ್ರಮದಲ್ಲಿ ಬರೆದಿದ್ದಾರೆ. ಅವರ ಕಾದಂಬರಿಯ ನೇಯ್ಗೆಯಲ್ಲಿ ಹಲವಾರು ಕವಿತೆಗಳು ಕಸೂತಿಯಲ್ಲಿಯ ಹೂವುಗಳಂತೆ ಅರಳಿಕೊಂಡಿವೆ. ಅಂದರೆ ಗದ್ಯ ಪದ್ಯಗಳ ಈ ಹಾಸುಹೊಕ್ಕನ್ನು ಲೆಕ್ಕಕ್ಕೆ ತೆಗೆದುಕೊಂಡೇ ಅವರ ಕೃತಿಯ ಬೆಲೆಗಟ್ಟಬೇಕಾಗುತ್ತದೆ. ಅವರ ಬರವಣಿಗೆಯಲ್ಲಿ ಗದ್ಯ ಮತ್ತು ಪದ್ಯಗಳ ಪ್ರಮಾಣ ಮತ್ತು ಅವುಗಳ ನಡುವಿನ ಸಂಬಂಧ, ಕೃತಿಯಿಂದ ಕೃತಿಗೆ ಬದಲಾಗುತ್ತಿರುತ್ತದೆ. ಅವರ 'ಸಮರಸವೇ ಜೀವನ' ಕಾದಂಬರಿಯಾಗಿದ್ದು, ಕೆಲವು ಕವಿತೆಗಳನ್ನು ಹೊರತುಪಡಿಸಿದರೆ, ಶುದ್ಧವಾದ ಗದ್ಯಕೃತಿಯಾಗಿದೆ. ಆದರೆ ಈ ಕೃತಿಯ ಬರವಣಿಗೆ ಕಾವ್ಯದ ಕ್ರಮವನ್ನು ಅನುಸರಿಸುತ್ತದೆ. ಪಾತ್ರಗಳ ನಡುವೆ ಪರಿಸ್ಥಿತಿಗಳ ನಡುವೆ ಇರುವ ತೀವ್ರವಾದ ವಿರೋಧ (ಇಜ್ಜೋಡು) ಕ್ರಮೇಣ ಸಾಮರಸ್ಯದ ಕಡೆಗೆ ತಿರುಗುವ ಇವು ಬೇರೆ ಬೇರೆಯಾಗಿಲ್ಲ. ಈ ಎರಡೂ ಸ್ಥಿತಿಗಳಲ್ಲಿ ಒಂದನ್ನು ತಿಳಿದುಕೊಳ್ಳಲು ಇನ್ನೊಂದರ ಅವಶ್ಯಕತೆ ಇರುತ್ತದೆ. ಆದರೆ ಆ ಕಾದಂಬರಿ ಒಂದು ಸುಸೂತ್ರವಾಗಿ ಮುಂದುವರಿಯುವ ಕತೆಯನ್ನೂ ಹೇಳುತ್ತದೆ. ಅದಕ್ಕಾಗಿ ಈ ಕೃತಿಯ ಅಭಿವ್ಯಕ್ತಿ ಗದ್ಯದಲ್ಲಿರುವದು ಅನಿವಾರ್ಯವಾಯಿತು.

ಕತೆ, ಇತಿಹಾಸ ಇವುಗಳ ತತ್ವವೆಂದರೆ ಮುಂದುವರಿಯುವ ಒಂದು ಕ್ರಮ. ಈ ಕ್ರಮವನ್ನು ಹೆಚ್ಚು ಕಡಿಮೆ ಅದೇ ಕ್ರಮದಲ್ಲಿ ಗದ್ಯ ಅಭಿವ್ಯಕ್ತಿಸುತ್ತದೆ. ಘಟನೆಗಳು ಕಾಲದೇಶಗಳಲ್ಲಿ ಈ ಕ್ರಮವನ್ನು ಅನುಸರಿಸಿ ಬೆಳೆಯುತ್ತವೆ, ತಮ್ಮ ಪರಿಣಾಮವನ್ನು ತೋರುತ್ತವೆ. ಗದ್ಯದ ವ್ಯಾಕರಣವೂ ಇದಕ್ಕೆ ಹೊರತಾಗಿಲ್ಲ.

ವಿನಾಯಕರ ಬರವಣಿಗೆ ಈ ಕ್ರಮವನ್ನು ಭಾಷೆಯಲ್ಲಿ ಹಿಡಿಯಲು ಪ್ರಯತ್ನ ಮಾಡಿದೆ. 'ಸಮುದ್ರಗೀತ'ಗಳಿಂದ ಪ್ರಾರಂಭವಾದ ಈ ಪ್ರಯತ್ನ, ತನ್ನ ಪರಿಣಾಮವನ್ನು 'ಭಾರತ ಸಿಂಧುರಶ್ಮಿ' ಎಂಬ ಮಹಾಕಾವ್ಯದಲ್ಲಿ ಕಂಡುಕೊಂಡಿತು. 'ಅಭ್ಯುದಯ' ದಲ್ಲಿಯ ಅಷ್ಟ ಷಟ್ಪದಿಗಳು, 'ಆಕಾಶಗಂಗೆ' ಮತ್ತು 'ಇಂದಿಲ್ಲ ನಾಳೆ' ಯ ಚಂಪೂ ಪ್ರಯೋಗಗಳು, 'ಬಾಳದೇಗುಲದಲ್ಲಿ' ಸಂಕಲನದ ವೈಯಕ್ತಿಕ ಇತಿಹಾಸಗಳು - ಇವೆಲ್ಲ ಒಂದೇ ಜಾತಿಯ ಅಭಿವ್ಯಕ್ತಿಯ ಮಾದರಿಗಳಾಗಿವೆ. ಗದ್ಯಪದ್ಯಗಳಲ್ಲಿಯ ಈ ರೂಪ ವೈವಿಧ್ಯಕ್ಕೆ ಕಾರಣವೆಂದರೆ, ವಿನಾಯಕರ ಬರವಣಿಗೆಯಲ್ಲಿಯ ವ್ಯುತ್ಪತ್ತಿ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಬಹುಜ್ಞತೆ ಇಲ್ಲದಿದ್ದರೆ ವಿಸ್ತಾರ ವೈವಿಧ್ಯಗಳು ಕೈಗೆ ದಕ್ಕುವದಿಲ್ಲ.

ವಿನಾಯಕರ ಕಾವ್ಯದಲ್ಲಿ ವಿಸ್ತಾರ ವೈವಿಧ್ಯಗಳು ತಲೆದೋರುವ ಬಗೆಯನ್ನು ಈ ಪದ್ಯಭಾಗದ ಮೂಲಕ ಅರಿಯಬಹುದಾಗಿದೆ. 'ಬಾಳದೇಗುಲದಲ್ಲಿ' ಎಂಬ ಕವಿತೆಯ ಒಂದು ಭಾಗ ಇಲ್ಲಿದೆ :

ಏಸು ಕ್ರಿಸ್ತನು ನಿನ್ನ
ಬೆಸ್ತರವನಹುದು.
ಕೃಷ್ಣ ಯಾದವ ನಿನ್ನ ಬೇಡರವನಹುದು.
ರಾಮ ರಾಘವ ನಿನ್ನ
ಬಡಪಾಯಿಯಹುದು.
ಬುದ್ಧ ಗೌತಮ ನಿನ್ನ
ಬೇಹಿನವನಹುದು.
ಬಂದು ಜನಿಸಿದರಿವರು
ನಿನ್ನುದರದಲ್ಲಿ
ಕಂಡು ಮುಕ್ತಿಯನಲ್ಲಿ -
ಕಾಣ್ಬುದಿನ್ನಲ್ಲಿ ?
ಓ ದೇವಿ ! ಮಾದೇವಿ ! ಕಣ್ದೆರದು ನೋಡು
ನಿಂದ ಯಾತ್ರಿಕರನ್ನು ಹರಸು ಕಾಪಾಡು.

ಕವಿತೆಯ ಗತಿ ಭಾವಗೀತದ್ದೇ ಆಗಿದೆ. ಕ್ರಿಸ್ತ, ಕೃಷ್ಣ, ರಾಮ, ಬುದ್ಧ ಇವರಲ್ಲಿ ಒಂದು ಸಮಾನಧರ್ಮವನ್ನು ಕಂಡು, ಅವರನ್ನು ಇಲ್ಲಿ ರೂಪಕಗಳಂತೆ ಬಳಸಲಾಗಿದೆ. ಅವರೆಲ್ಲರೂ ಬಾಳದೇವಿಗೆ ಅಧೀನರಾಗಿದ್ದಾರೆಂದು ಇನ್ನೊಂದು ಸಮಾನಧರ್ಮವನ್ನು ಆರೋಪಿಸಲಾಗಿದೆ. ವ್ಯಕ್ತಿ ಮತ್ತು ಸಮಷ್ಟಿಜೀವನದ ಸಂಬಂಧವನ್ನು ಇನ್ನಷ್ಟು ಹುರಿಗೊಳಿಸಲಾಗಿದೆ. ಇದರಿಂದ ಸೂಚಿತವಾಗುವ

ಜೀವನದ ಸಾರ್ವಭೌಮಿಕ ಶಕ್ತಿಯನ್ನು ಇಲ್ಲಿ ಹೊಗಳಲಾಗಿದೆ. ಇಷ್ಟರ ಮೇಲಿಂದ ಇದು ನವೋದಯ ಕಾವ್ಯದ ಒಳ್ಳೆಯ ಮಾದರಿಯೆಂದು ಹೇಳಿ ಬಿಡಬಹುದು. ಆದರೂ ಕವಿತೆಯಲ್ಲಿ ಇನ್ನೂ ಏನೋ ಉಳಿದಂತಾಗುತ್ತದೆ. ಏಸುಕ್ರಿಸ್ತ, ಕೃಷ್ಣ, ರಾಮ, ಬುದ್ಧ ಮೊದಲಾದವರ ಜೀವನದ ಇತಿಹಾಸ, ಭಾವಗೀತದ ಪರಿಮಿತ ಕ್ಷೇತ್ರವನ್ನು ಮೀರಿ ಬೆಳೆದುಬರುತ್ತದೆ. ಬಾಳದೇವಿ ಇವರಿಂದ ಪೂಜೆಗೊಳ್ಳುವದು, ಅವರ ನಡುವಿನ ಸಂಬಂಧ ನಿತ್ಯವಾಗಿರುವದು ಭಾವಗೀತದ ವಿಷಯ ನಿಜ. ಆದರೆ ಇವರಿಂದ ಬಾಳು ಕೂಡ ನೆನೆಪಿನಲ್ಲಿಡುವ ಇತಿಹಾಸವಾಗುವದೂ ಕೂಡ ನಾವು ಲಕ್ಷ್ಯದಲ್ಲಿಡಬೇಕಾದ ಸಂಗತಿಯಾಗಿದೆ. ಬೆಸ್ತನಾಗಿ, ಬೇಡನಾಗಿ, ಬೇಹಿನವನಾಗಿ ಇವರು ತೋರಿಸಿದ ಲೀಲೆ ಅನೇಕ ಘಟನೆಗಳ ಸರಮಾಲೆಯಾಗಿದೆ. ಈ ಕಾರ್ಯಗಳು ಅಂಥ ನೈತಿಕ ಬೆಲೆಯನ್ನಿಟ್ಟುಕೊಂಡವುಗಳಲ್ಲ. ಮೀನುಗಾರಿಕೆ, ಬೇಟೆ, ಬೇಹು ಇವೆಲ್ಲ ಸಾಮಾನ್ಯ ಕೆಲಸಗಳೇ. ವ್ಯಕ್ತಿಗೂ ಅವನ ಕಾರ್ಯಕ್ಕೂ ಇರುವ ಈ ಸಂಬಂಧದ ವಿರೋಧಾಭಾಸ ಇನ್ನೊಂದು ಕತೆಯನ್ನು ಹೇಳಬಹುದು. ಇದೆಲ್ಲದರ ಗದ್ಯಾತ್ಮಕವಾದ ಸ್ಪಷ್ಟೀಕರಣ ಈ ಸಂಗ್ರಹದ ಉಳಿದ ಕವಿತೆಗಳಲ್ಲಿ ದೊರೆಯುತ್ತದೆ.

ಈ ಸಂಕಲನದ ಉಳಿದ ಕವಿತೆಗಳಲ್ಲಿ 'ಗದ್ಯಾತ್ಮಕವಾದ ಸ್ಪಷ್ಟೀಕರಣ' ಯಾವ ಬಗೆಯಲ್ಲಿದೆಯೆಂಬುದನ್ನು ಸ್ವಲ್ಪದರಲ್ಲಿ ಸೂಚಿಸಬಹುದು. ಪ್ರತಿಯೊಂದು ಕವಿತೆ ಜೀವನದ ಒಂದು ಮಾದರಿಯನ್ನು ವಿವರವಾಗಿ ನಿರೂಪಿಸುತ್ತದೆ. ಜೀವನದ ಪ್ರತಿಯೊಂದು ಮಾದರಿ - ಉದಾಹರಣೆಗೆ, 'ಮಗು', 'ತಂದೆ', 'ಕುಮಾರಿ' 'ರೂಪಾರಾಧಕ', 'ಉದಾರಚರಿತ' ಇತ್ಯಾದಿ - ಮಾದರಿ ವ್ಯಕ್ತಿಯಾಗಿ ಒಂದು ರೂಪಕವಾಗಿ ಕೆಲಸ ಮಾಡುತ್ತದೆ. ಜೀವನದ ಅನಂತವಾದ ವೈವಿಧ್ಯವನ್ನು ಈ ರೂಪಕಗಳು ನಿರೂಪಿಸುತ್ತವೆ. ಆದರೆ 'ಮಗು'ವಿನಿಂದ ಹಿಡಿದು 'ಮುಕ್ತಜೀವಿ' ಯವರೆಗೆ ಹಬ್ಬಿಕೊಂಡಿರುವ ಈ ಮನುಷ್ಯ ಮಾದರಿಗಳು ಜೀವನದ ದೀರ್ಘವಾದ ಇತಿಹಾಸವನ್ನು ವಿವರವಾಗಿ, ಕ್ರಮವಾಗಿ ನಿರ್ಮಿಸುತ್ತವೆ. ಅಲ್ಲದೆ ದೇಗುಲದ ಒಂದು ಕಂಬದಲ್ಲಿಯ ಒಂದು ಚಿಕ್ಕ ದೇಗುಲ ಇಡೀ ದೇವಾಲಯದ ವಾಸ್ತು ಶಿಲ್ಪವನ್ನು ಪ್ರತಿಫಲಿಸುವಂತೆ, ತನ್ನ ವೈಯಕ್ತಿಕ ಇತಿಹಾಸವನ್ನು ಅಷ್ಟೇ ವಿವರವಾಗಿ ನಿರ್ಮಿಸುತ್ತದೆ.

ಈ ಸಂಕಲನಕ್ಕೆ ಬರೆದಿರುವ ಮುನ್ನುಡಿಯಲ್ಲಿ ಈ ಕಾವ್ಯ ಸ್ವರೂಪದ ಬಗ್ಗೆ ವಿನಾಯಕರು ಒಂದೆರಡು ಮಾತು ಹೇಳಿದ್ದಾರೆ : 'ಇಂದಿನ ಕನ್ನಡದಲ್ಲಿಯೂ ಮಹಾಕಾವ್ಯದ ಈ ನವೀನರೂಪಗಳು ತಲೆಯೆತ್ತಿವೆ. ಅವುಗಳ ವಿಮರ್ಶೆ ಮಾತ್ರ ಇನ್ನೂ ಬರಬೇಕಾಗಿದೆ. ಯಂಡ್ಕುಡ್ಕ ರತ್ನ, ನಂದಾದೀಪ, ಚಿತ್ರಾಂಗದಾ, ರಾಮಾಯಣ, ಮಂಕುತಿಮ್ಮನ ಕಗ್ಗ, ನವರಾತ್ರಿ, ಆಕಾಶಗಂಗೆ - ಕಾದಂಬರಿಯ

ಕ್ಷೇತ್ರದ ಹೊರಗೆ ಮಹಾಕಾವ್ಯದ ಹಾದಿಯಲ್ಲಾದ ಪ್ರಯತ್ನಗಳಿವು. ಇದೀಗ ಬಾಳದೇಗುಲದಲ್ಲಿ ಒಂದು'. ವಿನಾಯಕರ ಈ ಅಭಿಪ್ರಾಯದಲ್ಲಿ ಕನ್ನಡದ ಗದ್ಯ ಪದ್ಯಗಳ ಸಂಕೀರ್ಣ ಸ್ವರೂಪ ತಾನಾಗಿ ಒಡಮೂಡಿದೆ. ಹಳೆಯ ಮಹಾಕಾವ್ಯದ ಕೆಲಸವನ್ನು ಈಗ ಕಾದಂಬರಿಗಳು ಯಶಸ್ವಿಯಾಗಿ ಮಾಡತೊಡಗಿವೆ. ಕಾವ್ಯ ಕೂಡ ತನ್ನ ಶಕ್ತಿಯ ಪರಿಮಿತಿಯಲ್ಲಿಯೇ ಅದೇ ಕೆಲಸವನ್ನು ಇನ್ನೊಂದು ರೀತಿಯಲ್ಲಿ ಮಾಡುತ್ತಿದೆ, ಮತ್ತು ಮಾಡಬೇಕು ಎಂಬ ಅಭಿಪ್ರಾಯ ಇಲ್ಲಿದೆ. ಹೊಸದಾಗಿ ಬಂದ ಭಾವಗೀತ ಹಳೆಯ ಮಹಾಕಾವ್ಯವನ್ನು ತಂಗಳಾಗಿಸಿತೆಂದು ಈ ಅಭಿಪ್ರಾಯ ಸೂಚಿಸುತ್ತದೆಯೇ ? ಅದೇನೇ ಇದ್ದರೂ ವಿನಾಯಕರ ಕಾವ್ಯ ಪ್ರಯತ್ನದ ಗುರಿ ಇಲ್ಲಿ ಕಾಣುತ್ತದೆ. ಕವಿತೆಗೆ ಮಹಾಕಾವ್ಯದ, ಕಾದಂಬರಿಯ ವಿಸ್ತಾರ ಮತ್ತು ವೈವಿಧ್ಯಗಳು ಬರಬೇಕೆಂಬುದೇ ಆ ಪ್ರಯತ್ನದ ಉದ್ದೇಶವಾಗಿದೆ. ಗದ್ಯ ಮತ್ತು ಪದ್ಯಗಳಲ್ಲಿ ಸವ್ಯಸಾಚಿತ್ವವಿರುವ ವಿನಾಯಕರಿಗೆ ಇಂಥ ಕೃತಿತ್ವ ಸುಲಭವಾಗಿ ಕಂಡಿರಬೇಕು.

ತಮ್ಮಲ್ಲಿಯ ವ್ಯುತ್ಪತ್ತಿಯ ಬಹುಜ್ಞತೆಯಿಂದಾಗಿ ವಿನಾಯಕರು ಅನೇಕ ಪ್ರಕಾರಗಳ ಕಾವ್ಯವನ್ನು ಸೃಷ್ಟಿಸಿದ್ದು ಒಂದು ವಾಸ್ತವ ಸಂಗತಿಯಾಗಿದೆ. ಅವರ ಮನಸ್ಸನ್ನು ಮುಖ್ಯವಾಗಿ ಆವರಿಸಿಕೊಂಡಿದ್ದು ಸಮಕಾಲೀನ ಇತಿಹಾಸ. 'ಭಾರತ ಸಿಂಧುರಶ್ಮಿ' ಯಂಥ ಮಹಾಕಾವ್ಯದಲ್ಲಿರುವದು ತೀರ ಪ್ರಾಚೀನವಾದ ಕತೆ, ಆದರೆ ಅದು ಸಮಕಾಲೀನ ಇತಿಹಾಸದ ಸಮಸ್ಯೆಗಳನ್ನು ಬಿಡಿಸಲು ಹಳೆಯ ಕತೆಯನ್ನು ಉಪಯೋಗಿಸುತ್ತದೆ. 'ದ್ಯಾವಾ ಪೃಥಿವೀ' 'ಉಗಮ' 'ಕಾಶ್ಮೀರ'ದಂಥ ಕೃತಿಗಳಲ್ಲಿಯೂ ಕೂಡ ಇರುವದು ಸಮಕಾಲೀನ ಇತಿಹಾಸದ ಬಗ್ಗೆ ಕಳಕಳಿ.

'ಭಾರತಸಿಂಧುರಶ್ಮಿ' ಯ 'ಭಾರತ ವಿಸ್ತರಣಕಾಂಡ'ದಲ್ಲಿಯ ಒಂದು ಪದ್ಯ ಭಾಗವನ್ನು ಇಲ್ಲಿ ಉದಾಹರಣೆಗೆಂದು ನೋಡಬಹುದು. ಈ ಕಾಂಡದ ಪ್ರಾರಂಭಕ್ಕೆ ವಶಿಷ್ಠ ಮತ್ತು ಅರುಂಧತಿಯರ ನಿರ್ಯಾಣದ ವರ್ಣನೆಯಿದೆ. ಅಲ್ಲಿಂದ ಮುಂದಿನ ಅಧ್ಯಾಯಗಳಲ್ಲಿ ದಾಶರಾಜ್ಞ ಯುದ್ಧ ಮುಗಿದ ಮೇಲೆ ಪರಾಜಿತರಾದ ರಾಜರು ಸಪ್ತಸಿಂಧುವನ್ನು ತೊರೆದು, ಮುಂದೆ ಮುಂದೆ ಹೋಗಿ, ಭಾರತದ ಮೇರೆಗಳನ್ನು ವಿಸ್ತರಿಸಿದ ಕಥೆಯಿದೆ. ಗೋತಮ ರಾಹೂಗಣದ ಬಲಿನೃಪನ ಮಗನಾದ ವಂಗನಿಗೆ ಅವನು ಆಕ್ರಮಿಸಿದ್ದ ದೇಶದ ಕಿರಾತರಾಜ ಮಗಳನ್ನಿತ್ತು ಮದುವೆ ಮಾಡುತ್ತಾನೆ. ಆ ಪ್ರದೇಶದ ಹತ್ತಿರವಿರುವ ಗಂಗಾಸಾಗರದ ವರ್ಣನೆ ಹೀಗಿದೆ. :

ಅಲಲ ! ಕೊನೆಗೊಮ್ಮೆ ಕಂಡನು ಕಡಲ ಮಾರಾಯ ;
ತೋಳ್ ತೆರೆದು ತೀರವನು ನುಗ್ಗುತೌತಣಿಸದನು !

ಸಾರಿದಳು, ಸೇರಿದಳು, ತನ್ನನ್ನ ತೂರಿದಳು,
ನಾಭಿಕಮಲದ ಸುತ್ತ ಮಡವುಗಟ್ಟಿರೆ ಕಡಲು.
ಬಂದಂತೆ ಬಾ ಎಂದ, ನಿಂದಂತೆ ನಿಲ್ಲೆಂದ,
ಹರಿದಂತೆ ಹರಿಯೆಂದ ಸಮುದ್ರರಾಯನು ತಾನು !

. . . .

ಗಂಗೋದಕಕೆ ದಾರಿ ಮಾಡಿದನರ್ಣವೇಶ್ವರನು
ತನ್ನೊಂದು ಬಿಂದು ನದಿಯಲಿ ಬೆರೆಯದಿರುವಂತೆ !

. . . .

ಪರಿತಪಿಸಿದಳು ಗಂಗೆ ವಿರಕ್ತನನೆಂತು
ಸಂಸಾರಕೆಳೆಯುವದೆಂದು ; ಕೊರಗಿದಳು ಮರುಗಿದಳು
ತನ್ನಳವಲ್ಲ ! ಪ್ರಾರ್ಥಿಸಿದಳಾರ್ತಳಾಗುತ್ತಾಕೆ,
ಪದ್ಮಪತ್ರದೊಲು ತನ್ನನು ತಳೆದ ನಾಥನಿಗೆ

. . . .

ಜಪಿಸಿದಳು ಮಂಗಲಮಂತ್ರವಿದನು ಗಂಗಾಂಬಿಕೆಯು.
ಅನುಭವಿಸಿದಳು ಅಮೃತಮಯ ಪವಾಡವನೊಡನೆ !

. . . .

. . . . ಅಬ್ಧಿಯ ಅಂಭಸದಂತೆ
ಶ್ಯಾಮಹರಿತ ಸಲಿಲವಾಗಿ ಬೆರೆತಳು ಗಂಗೆ !
ಗಂಗಾಂಬಿಕೆ ಸಮುದ್ರನಾಥನಾಗಿಹಳೀಗ !
ಮಾಯಾಕೋಲಾಹಲನೊಳು ಮಾಯೆ ಮೈಗರೆದಿಹಳು.
ಹಿಂದುಳಿದಿಹಳು ನಾಮ ರೂಪದ ಉಪಾಧಿಗಳು,
ಸ್ವಪ್ನದಿಂದೆಚ್ಚತ್ತ ಗೋತಮನೆಂದ : "ದೃಷ್ಟಾಂತ
ಅದೃಷ್ಟವನೆ ಬದಲಿಸುವ ಶಕ್ತಿ ಹೊಂದಿಹುದು.
ವಂಗ-ಕದ್ರೂ ಮದುವೆ ಒಂದು ರಾಜ್ಯದ ನಲಿವು.
ವಿಶ್ವದ ದೈವ ಮಡಗಿರುವದಿಂಥ ದರ್ಶನದಲ್ಲಿ !"
ಮೂಡಿಸಿದನಾರ್ಷೇಯ ಕವಿಯೊರ್ವ ಮುಂದೊಮ್ಮೆ
ಗೋತಮನೆದೆಯೊಳಿರುವ ಭಾವಮಲ್ಲಿಗೆಗಂಪು :
'ಯಥಾ ನದ್ಯ : ಸ್ಯಂದಮಾನಾಸ್ಸಮುದ್ರೇ
ಅಸ್ತಂ ಗಚ್ಛಂತಿ ನಾಮರೂಪೇ ವಿಹಾಯ ।
ತಥಾ ವಿದ್ವಾನ್ ನಾಮರೂಪಾದ್ವಿಮುಕ್ತ :
ಪರಾತ್‌ಪರಂ ಪುರುಷಮುಪೈತಿ ದಿವ್ಯಂ ।

ಈ ಪದ್ಯಭಾಗದ ಅರ್ಥದಲ್ಲಿ ಗಂಗೆ ಸಮುದ್ರವನ್ನು ಸೇರಿದ ವರ್ಣನೆಯಿದೆ. ನದಿ ಮತ್ತು ಸಮುದ್ರ, ಇವುಗಳಲ್ಲಿಯ ಸಂಬಂಧ ನಮ್ಮೆಲ್ಲ ಗಂಡ ಹೆಂಡಂದಿರ ಸಂಬಂಧವಾಗಿದೆ. ಇದೇ ರೂಪಕವನ್ನು ಬೆಳೆಸಿ, ನದಿ ವಿರಕ್ತನಾದ ಸಮುದ್ರನನ್ನು ಸಂಸಾರದಲ್ಲಿ ಆಸಕ್ತನಾಗುವಂತೆ ಮಾಡಿದ ವರ್ಣನೆಯಿದೆ. ಈ ಅನುಭವವನ್ನು ಕನಸಿನಲ್ಲಿಯೆಂಬಂತೆ ಪಡೆದ ಗೋತಮ, ಅದರ ಮೇಲೆ ತನ್ನದೊಂದು ಭಾಷ್ಯವನ್ನು ಬರೆಯುತ್ತಾನೆ. ಅವನ ಪಾಲಿಗೆ ಇದೊಂದು ದೃಷ್ಟಾಂತ, ಅದೃಷ್ಟವನ್ನು ಬದಲಿಸುವ ಶಕ್ತಿಯನ್ನು ಪಡೆದಿರುವ ದೃಷ್ಟಾಂತ. ನಾಮರೂಪದ ಉಪಾಧಿಗಳನ್ನೆಲ್ಲ ಕಳೆದುಕೊಂಡು ಸಮುದ್ರವೇ ಆದ ನದಿ, ನಮ್ಮ ದೇಶದ ಜನಪದಗಳ ಸಾಯುಜ್ಯ ಮತ್ತು ಸಾಮರಸ್ಯಗಳನ್ನು ಪ್ರತೀಕಾತ್ಮಕವಾಗಿ ನಿರೂಪಿಸುತ್ತದೆ. ಗಂಗೆಯ ಬಣ್ಣ ಶುಭ್ರವಾಗಿದ್ದರೂ ಅವಳು ಸಮುದ್ರದ ಶ್ಯಾಮ ಹರಿತವಾದ ಬಣ್ಣವನ್ನು ತಳೆಯುತ್ತಾಳೆ. ವಂಗ-ಕದ್ರೂ, ಇವರ ಮದುವೆ ಇಂಥದೇ ಒಂದು ಮಿಲನವಾಗಿ ಕಾಣುತ್ತದೆ.

ಮಹಾಕಾವ್ಯದ ಸಂದರ್ಭದಲ್ಲಿ ಇಂಥ ದೊಡ್ಡ ರೂಪಕಗಳು ಬರುವದು ಅಪರೂಪವೇನಲ್ಲ. ಪಾಶ್ಚಾತ್ಯ ಮಹಾಕಾವ್ಯಗಳಲ್ಲಿಯ 'ಮಹೋಪಮೆ' ಗಳು ನಮ್ಮ ಹೊಸ ಮಹಾಕಾವ್ಯಗಳಲ್ಲಿ ಬಂದುಬಿಟ್ಟಿವೆ. ಆದರೆ ಸಣ್ಣವಾಗಿರಲಿ, ದೊಡ್ಡವಾಗಿರಲಿ ರೂಪಕಗಳು ಭಿನ್ನವಸ್ತುಗಳಲ್ಲಿಯ ಸಾದೃಶ್ಯವನ್ನು ಸುಂದರವಾಗಿ ರೂಪಿಸಿ, ವರ್ಣ್ಯವಸ್ತುವಿನ ತಿಳುವಳಿಕೆಯನ್ನು ಸರಿಯಾಗಿ ಮಾಡಿಕೊಟ್ಟ ಸಂದರ್ಭದಿಂದ ದೂರ ಸರಿಯುತ್ತವೆ. ಆದರೆ ಇಲ್ಲಿಯ ರೂಪಕ ಅಂಥದಲ್ಲ. ಗೋತಮ ಕಣ್ಣಾರೆ ಕಂಡಿದ್ದ ನದಿ ಮತ್ತು ಕಡಲುಗಳ ಮಿಲನದ ವರ್ಣನೆ ಇದು. ಇಂದು ಗೋತಮ ಇಲ್ಲದಿದ್ದರೂ ವಂಗದೇಶದ ದಕ್ಷಿಣಕ್ಕೆ ಇಂದಿಗೂ ಕಂಡುಬರುವ ದೃಶ್ಯ ಇದು. ಇತಿಹಾಸದ ಅಂದಿನ ಸಂದರ್ಭದಲ್ಲಿ ಈ ದೃಶ್ಯಕ್ಕೆ ದೃಷ್ಟಾಂತವಾಗುವ ಯೋಗ ಲಭಿಸಿದೆ. ಅಂದರೆ ಇದು ಸಾಮಾನ್ಯ ಉಪಮಾನದಂತೆ ಕತೆಯ ಸಂದರ್ಭದ ಹೊರಗಿನಿಂದ ಬಂದು ಸೇರಿರುವ ಅಂಶವಲ್ಲ. ಚಿತ್ರಾ ನಕ್ಷತ್ರದ ಜೊತೆಯಲ್ಲಿಯ ಚಂದ್ರನಂತೆ ರಾಮ ಪರ್ಣಕುಟಿಯಲ್ಲಿ ಸೀತೆಯೊಡನೆ ಕುಳಿತಿದ್ದ ಎಂಬ ರಾಮಾಯಣದ ವರ್ಣನೆಯಲ್ಲಿ ಚಂದ್ರ, ನಕ್ಷತ್ರಗಳು ಕತೆಯ ಹೊರಗಿನವು, ಅಥವಾ ಅವು ಕವಿಯ ಸೊತ್ತು. ಇಲ್ಲಿ ಕತೆಯಲ್ಲಿಯ ವಿವರವೊಂದು ಶಕ್ತಿಯುತವಾದ ರೂಪಕವಾಗಿದೆ. ಈ ರೂಪಕದ ಅರ್ಥಪೂರ್ಣತೆಯ ಅರಿವಾಗ ಬೇಕಾದರೆ ಕತೆಯ ಹಿಂದೆ ನಡೆದ ಅನೇಕ ಘಟನೆಗಳನ್ನು ಪರೀಕ್ಷಿಸಬೇಕು. ಈ ಕಾವ್ಯದಲ್ಲಿ ಕತೆಯ ಭವಿಷ್ಯವನ್ನೂ ನೋಡಿಕೊಳ್ಳಬೇಕು. ಗೋತಮನ ಮುಂದಿನ ತಲೆಮಾರಿನ ಯಾವದೋ ಋಷಿ ಹೇಳಿರುವ ಶ್ಲೋಕವೊಂದು ಈ ರೂಪಕವನ್ನು ಕೂಡಿಕೊಳ್ಳುತ್ತದೆ.

ವಿನಾಯಕರ ಕಾವ್ಯದಲ್ಲಿ ‘ವ್ಯುತ್ಪತ್ತಿ’ ‘ಕಾವ್ಯಸ್ವರೂಪದ ಮೇಲೆ ಬೀರುವ ಪರಿಣಾಮವನ್ನು ಕುರಿತು ಚರ್ಚಿಸುವುದಷ್ಟೇ ಈ ಲೇಖನದ ಉದ್ದೇಶವಾಗಿದೆ. ವ್ಯುತ್ಪತ್ತಿಯೊಂದರಿಂದಲೇ ಕವಿತೆ ನಿರೀಕ್ಷಿತ ಪರಿಣಾಮವನ್ನು ಬೀರುತ್ತದೆಂದು ನಿಶ್ಚಿತವಾಗಿ ಹೇಳಲು ಬರುವಂತಿಲ್ಲ. ಆದರೆ ಮೇಲೆ ಕೊಟ್ಟಿರುವ ನದಿ ಮತ್ತು ಕಡಲುಗಳ ರೂಪಕವನ್ನು ಕುರಿತು ವಿಚಾರ ಮಾಡಿದಾಗ, ಕವಿಯ ಬಹುಜ್ಞತೆ ಕಾವ್ಯಕ್ಕೆ ಎಂಥ ಬಲ-ಶಕ್ತಿಗಳನ್ನು ಕೊಡಬಲ್ಲದೆಂಬುದು ಗೊತ್ತಾಗುತ್ತದೆ. ವಿನಾಯಕರ ಎಷ್ಟೋ ಕವಿತೆಗಳಲ್ಲಿ ಸಮಕಾಲೀನತೆ ಇಲ್ಲಿಯಂತೆ ವ್ಯಂಗವಾಗಿ, ಮತ್ತು ಒಂದು ಸಾರ್ವಕಾಲಿಕ ಸತ್ಯವಾಗಿ ಬರುವದಿಲ್ಲ. ಅಂಥ ಸಂದರ್ಭಗಳಲ್ಲಿ ಕಾವ್ಯ ನಿರೀಕ್ಷಿತ ಪರಿಣಾಮವನ್ನು ಬೀರುವದಿಲ್ಲ. ಆದರೆ ಮೇಲಿನ ವರ್ಣನೆ ಮಾತ್ರ ಅವರ ಕಾವ್ಯದ ಅತ್ಯಂತ ಸಾರ್ಥಕ ಕ್ಷಣಗಳಲ್ಲಿ ಒಂದಾಗಿದೆ. ಪಾಶ್ಚಾತ್ಯಕಾವ್ಯಗಳಲ್ಲಿಯ ಮಹೋಪಮೆಯೇ ಇಂಥ ವರ್ಣನೆಗೆ ಮೂಲವಾಗಿರಬಹುದು. ಆದರೆ ಅದನ್ನು ಕನ್ನಡದಲ್ಲಿ ಉಪಯೋಗಿಸಿದಾಗ ಅದು ನಮ್ಮದೇ ಎನ್ನುವಷ್ಟು ಕಾವ್ಯದಲ್ಲಿ ಅರಗಿಹೋಗಿದ್ದರೆ, ಅದರ ಮಹತ್ವ ಇನ್ನೂ ಹೆಚ್ಚಾಗುತ್ತದೆ. ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವಕ್ಕೆ ಉತ್ತರ ನೀಡುವದು ಇಂದು ಕೇವಲ ಕನ್ನಡಕ್ಕೊಂದೇ ಸಂಬಂಧಿಸಿದ ಪ್ರಶ್ನೆಯಲ್ಲ. ಅದು ಜಾಗತಿಕ ಸಮಸ್ಯೆಯಾಗಿದೆ. ರೂಪಾಂತರ, ಭಾಷಾಂತರ, ಅನುಕರಣ, ಅನುಸರಣ ಮೊದಲಾದ ಅವಸ್ಥೆಗಳನ್ನು ದಾಟಿ, ನಿರಾಕರಣವನ್ನೂ ವ್ರತದಂತೆ ಆಚರಿಸಿ, ಒಂದು ಸ್ವಂತಂತ್ರ ಅವಸ್ಥೆಯನ್ನು ಮುಟ್ಟಬೇಕಾಗಿದೆ. ಅಂಥ ಪ್ರಯತ್ನಗಳಲ್ಲಿ ವಿನಾಯಕರ ಕಾವ್ಯದ ವ್ಯುತ್ಪತ್ತಿ ಒಂದು ದಿಕ್ಸೂಚಿಯಾಗಬಲ್ಲದು.

❑ ❑

ಭಾರತಸಿಂಧುರಶ್ಮಿ ಃ ಪ್ರಸ್ತುತತೆಯ ದೃಷ್ಟಿಯಿಂದ

❑❑❑❑❑❑❑❑❑❑❑❑❑❑❑❑❑❑❑❑❑❑❑❑❑❑❑❑❑

– ಪ್ರಧಾನ ಗುರುದತ್ತ

ಆಧುನಿಕ ಕನ್ನಡಸಾಹಿತ್ಯದ ಅತಿ ಮಹತ್ವದ ಸಾಹಿತಿಗಳಲ್ಲಿ ಒಬ್ಬರಾಗಿರುವ ಡಾ. ವಿ. ಕೃ. ಗೋಕಾಕ ಅವರ ಮಹಾಕಾವ್ಯವಾದ 'ಭಾರತಸಿಂಧು ರಶ್ಮಿ' ಎರಡು ಸಂಪುಟಗಳಲ್ಲಿ ಪ್ರಕಟವಾಗಿದ್ದು ಹನ್ನೆರಡು ಕಾಂಡಗಳನ್ನೊಳಗೊಂಡಿದೆ. ಡೆಮಿ ಅಷ್ಟದಳಾಕಾರದ ೧೩೭೩ ಪುಟಗಳ ವರೆಗೆ ವಿಸ್ತರಿಸಿಕೊಂಡಿರುವ ಈ ಕೃತಿಯ ಟಿಪ್ಪಣಿ ಮತ್ತು ಅನುಬಂಧಗಳನ್ನು ಬಿಟ್ಟರೂ ಇದರ ವ್ಯಾಪ್ತಿ ೧೩೧೪ ಪುಟಗಳಷ್ಟಾಗುತ್ತದೆ. ಪಂಕ್ತಿಗಳ ಸಂಖ್ಯೆ ೩೬,೪೦೦ (೨೪,೦೦೦ ಅಲ್ಲ !). ಈ ಬೃಹತ್ ಕಾವ್ಯವನ್ನು ಬರೆದು ಮುಗಿಸುವದಕ್ಕೆ ಗೋಕಾಕರಿಗೆ ಏಳು ವರ್ಷಗಳು ಹಿಡಿದಿವೆ. ಇದನ್ನು ಅಚ್ಚಿಸುವದಕ್ಕೆ ನಾಲ್ಕು ವರ್ಷಗಳು ಬೇಕಾಗಿ ಬಂದಿವೆ. ಅಂಥ ದೈತ್ಯ ಕೃತಿ ಇದು. ತಮ್ಮ ಕಾವ್ಯ ಪ್ರತಿಭೆ "ಇಂಥದೊಂದು ಕೃತಿಯ ಮಟ್ಟಕ್ಕೆ ಮೆಲ್ಲನೆ ಸಾಗಿತ್ತೆಂಬುದನ್ನು" "ತಮ್ಮ 'ತ್ರಿವಿಕ್ರಮರ ಆಕಾಶಗಂಗೆ', 'ಬಾಳದೇಗುಲದಲ್ಲಿ', 'ಇಂದಲ್ಲ ನಾಳೆ', 'ಕಲ್ಯಾಣದಲ್ಲಿ ಬಸವಣ್ಣನವರ ಕೊನೆಯ ದಿನ', 'ಸಮರಸವೇ ಜೀವನ' ಎಂಬ ಕೃತಿಗಳಲ್ಲಿ ಗುರುತಿಸಬಹುದು" ಎಂದೂ ತಮ್ಮ ಈ ಕಾವ್ಯ- ಅಂದರೆ 'ಭಾರತಸಿಂಧು ರಶ್ಮಿ' "ಅವುಗಳಿಗೆಲ್ಲಾ ಹಡೆಮಣಿ ಇದ್ದಂತಿದೆ" ಎಂದೂ ಅವರೇ ಹೇಳಿಕೊಂಡಿದ್ದಾರೆ.

'ಭಾರತ ಸಿಂಧುರಶ್ಮಿ'ಯ ಮೊದಲ ಸಂಪುಟದಲ್ಲಿ ಪೂರ್ವಾಪರಕಾಂಡ, ಉತ್ಸರ್ಪಣಕಾಂಡ, ಮನುಕುಲಹಂಸಕಾಂಡ, ಸಪ್ತಸಿಂಧೂಕಾಂಡ ಮತ್ತು ಕಾನ್ಯಕುಬ್ಜ ನೃಪರಾಜ್ಞಕಾಂಡ ಎಂಬ ಐದು ಕಾಂಡಗಳೂ, ಎರಡನೆಯ

ಸಂಪುಟದಲ್ಲಿ ಋಷ್ಯಾಶ್ರಮಕಾಂಡ, ದಾಶರಾಜ್ಞಕಾಂಡ, ಅಶ್ವಮೇಧಕಾಂಡ, ಭಾರತವಿಸ್ತರಣಕಾಂಡ, ತ್ರಿಶಂಕು ಪ್ರಜ್ಞಾಕಾಂಡ, ಕ್ರಾಂತದರ್ಶನಕಾಂಡ ಮತ್ತು ಶರದಃ ಶತಮ್ ಕಾಂಡ ಎಂಬ ಏಳು ಕಾಂಡಗಳೂ ಇವೆ. ಈ ಬೃಹತ್ ಕಾವ್ಯದ ಕಥಾವಸ್ತು ನಮಗೆ ಸಂಪೂರ್ಣವಾಗಿ ಅಪರಿಚಿತವಾಗಿರುವಂಥದು ಎಂಬುದನ್ನು ಸಾರಿ ಹೇಳಲು ಈ ಕಾಂಡಗಳ ಹೆಸರೇ ಸಾಕ್ಷಿ. ಇದೇ ಈ ಕೃತಿಯ ಮೊದಲ ವೈಶಿಷ್ಟ್ಯ. ಅಂದರೆ, ಇದು ನಮಗೆ ಚಿರಪರಿಚಿತವಾಗಿರುವ 'ರಾಮಾಯಣ', 'ಮಹಾಭಾರತ' ಅಥವಾ 'ಭಾಗವತ'ವನ್ನು ಆಧರಿಸಿ ರಚಿತವಾಗಿರುವ ಕೃತಿಯಲ್ಲ. ಬೇರೆ ಮಾತಿನಲ್ಲಿ ಹೇಳಬೇಕೆಂದರೆ, ವೇದಕಾಲೀನ ಸಂಸ್ಕೃತಿಯನ್ನೇ ಅನಾವರಣಗೊಳಿಸುವ ಕನ್ನಡದ, ಅಷ್ಟೇ ಏಕೆ, ಭಾರತೀಯ ಭಾಷೆಗಳಲ್ಲಿನ - ಮೊಟ್ಟಮೊದಲ ಮಹಾಕಾವ್ಯ.

ವಿಶ್ವಾಮಿತ್ರ ಈ ಕಾವ್ಯದ ಕೇಂದ್ರಬಿಂದು. ಅವನ ಹಿರಿಮೆಯನ್ನು ಸಾರುವದೇ ಕವಿಯ ಉದ್ದೇಶ.ಇದರ ಬಗ್ಗೆ ಅವರು ಓರಿಕಾಸಂಧಿಯಲ್ಲಿ ಹೀಗೆಂದುಹೇಳಿದ್ದಾರೆ:

ಪೌರವ ಭಾರತ ಕುಲದ ರಾಜನ್ಯ, ವಿಶ್ವರಥ,
ಸಮುಚ್ಚಯ ಶಿಲ್ಪಿ, ಯುಗ ಪ್ರವರ್ತಕ ಪುರುಷ,
ಗಾಯತ್ರಿ ಮಂತ್ರ ದ್ರಷ್ಟಾರ, ವಿಶ್ವಾಮಿತ್ರ
ಎಂದು ಪಡೆಯುತ ಬ್ರಹ್ಮ ಪದವಿಯ, ವಿಕಾರವಶ
ಸೃಷ್ಟಿಯ ಸೃಜಿಸಿ ತ್ಯಜಿಸಿದನು. ಅನ್ಯಾದೃಶ ಮಂತ್ರ
ಸೃಷ್ಟಿ ಸ್ವಾಮ್ರಾಜ್ಞನವ ಘೋಷಿಸುವುದೀ ಕೃತಿಯು (ಪುಟ ೧. xvii)

ಅಷ್ಟೇ ಅಲ್ಲ, ವಿಶ್ವಾಮಿತ್ರ ನಿರ್ಮಾಣದ ವರ್ಣನೆಯ ಬಳಿಕವೂ ಕವಿಯ ಮನಸ್ಸು ಹೀಗೆಂದು ಹಾರೈಸುತ್ತದೆ :

ಯುಗಯುಗಕೆ ವಿಶ್ವಾಮಿತ್ರರುದಿಸಲಿ ಪೃಥ್ವಿಯುದರದಲಿ ;
ಅಭ್ಯುದಯ-ನಿಃಶ್ರೇಯಸಗಳಿಗೆ ಮಾಡಲಿ ದಾರಿ.
ಸಪ್ತರಶ್ಮೀ ದರ್ಶನದ ಭವ್ಯ ಭವನದಲಿ
ಮರ್ತ್ಯಯಾತ್ರೆಗಳಿರಲಿ ದೇವ ಮಾನವರಾಗಿ !
ಮಾರ್ಪಡಲಿ ಮರ್ತ್ಯಸಮಾಜ, ಆಗಿ ದಿವ್ಯಸಮಾಜ ! (ಪುಟ ೨. ೭೨೫)

ತಮ್ಮ ಈ ಕಾವ್ಯದಿಂದ "ಸಮೀಕ್ಷಣ, ಸಮ್ಮಾನ, ಸಮರಸ, ಸಮನ್ವಯವು ಸಾಧಿಸಲು, ಸಮೀಕರಣ ಅಮೃತಾನುಭವ" ಸಹೃದಯರಿಗೆ ದೊರೆಯುವಂತಾಗ ಬೇಕೆಂಬುದೂ ಕವಿಯ ಉದ್ದೇಶವಾಗಿದೆ. ಇದಕ್ಕೆ ಕಾರಣನಾಗುವಂಥ, ಇದನ್ನು ಸಾಧ್ಯವಾಗಿಸುವಂಥ ಮಹಾಮಹಿಮನ ವೃತ್ತಾಂತವನ್ನು ಇದು ಒಳಗೊಂಡಿದೆ. ಜೊತೆಗೆ,

ದರ್ಶನ ವೃದ್ಧಿ, ವರಮಂತ್ರಸಿದ್ಧಿ, ಮಹೋನ್ನತವಾದ
ಜೀವನದ ಸಂಸಿದ್ಧಿ ದ್ರಷ್ಟಾರರ್ಕವನು

ತುಂಬಿರುವ, ಪುಣ್ಯಚರಿತೆಯು ಗಣ್ಯಕೃತಿಯಾಗಿ,
ಇಂದ್ರಿಯಗ್ರಾಹ್ಯ - ಅತೀಂದ್ರಿಯ ಗ್ರಾಹ್ಯವಾಗಿರಲು
ಐತಿಹ್ಯ, ಕಲ್ಪನಾ-ರಮೆಯ ರಸವೀಡಾಗಿ,
ಸರಸತಿಯ ಪಾಡಾಗಿ, ಮಹೇಶ್ವರಿಯ ನಾಡಾಗಿ
ಮಹಾಕಾಳಿಯ ಕಹಳೆ ಮೊರೆಯುತಿಹುದೀ ಕಾವ್ಯ. (ಪುಟ. ೧ xix)

ಎಂಬುದಾಗಿಯೂ ಅವರು ಹೇಳಿಕೊಂಡಿದ್ದಾರೆ ; ಹಾಗಾಗಲೆಂದು ಹಾರೈಸಿದ್ದಾರೆ.

ಇಷ್ಟಾಗಿಯೂ, ತಾವು "ಆಯ್ದುಕೊಂಡಿಹ ವಸ್ತು ಪುರಾತನ ಲಿಪಿಯಂತೆ" ದುರವಗಾಹ್ಯವಾಗಿದೆ ಎಂಬುದನ್ನು ಅವರು ಬಲ್ಲರು. ತಮ್ಮೆಲ್ಲ ಚೈತನ್ಯವನ್ನೂ ಧಾರೆಯೆರದು ಅದನ್ನು ಗುರುತಿಸುವಲ್ಲಿ ವಾಲ್ಮೀಕಿ, ವ್ಯಾಸ, ಹೋಮರ್, ವರ್ಜಿಲ್, ದಾಂಟೆ, ಫಿರ್ದೂಸಿ, ಭಾರವಿ, ಕಾಲಿದಾಸ, ಪಂಪ, ಐಯೋವುಲ್ಫ್, ಸ್ಪೆನ್ಸರ್, ಮಿಲ್ಟನ್, ರನ್ನ, ಪೊನ್ನ, ಅಭಿನವ ಪಂಪ, ಚಾಸರ್, ಹರಿಹರ, ಕುಮಾರವ್ಯಾಸ, ರತ್ನಾಕರವರ್ಣಿ, ಶೆಲ್ಲಿ, ಕೀಟ್ಸ್, ಗೊಯ್‌ಥೆ, ಬ್ರೌನಿಂಗ್, ಹಾರ್ಡಿ ಮೊದಲಾದವರಿಂದ ಮಾರ್ಗದರ್ಶನ ಪಡೆದುಕೊಂಡಿರುವದಾಗಿ ಹೇಳಿದ್ದಾರೆ. ಈ ದಿಕ್ಕಿನಲ್ಲಿ "ಕಿರೀಟಪ್ರಾಯಮೀ ಯುಗಕ್ಕೆ ಅರವಿಂದ-ದರ್ಶನದ ಹಿಮಗಿರಿಗೆ ಕೈಲಾಸ ಶಿಖರವಿಹ 'ಸಾವಿತ್ರಿ' " ಎಂದು ಹೇಳುವುದರ ಮೂಲಕ, ತಾವು ಅರವಿಂದ ದರ್ಶನಕ್ಕೆ ಋಣಿಯಾಗಿರುವದನ್ನು ಸ್ಪಷ್ಟಪಡಿಸಿದ್ದಾರೆ. ಹೀಗಾಗಿ, ಮಹಾಕವಿ, ಭುವನಕವಿ ಮತ್ತು ದೇವಕವಿಗಳು ತೋರಿಕೊಟ್ಟಿರುವ ಮಾರ್ಗತ್ರಯದಲ್ಲಿ ತಮ್ಮ ಕಾವ್ಯ ಮುನ್ನಡೆದಿದೆ ಎಂದಿದ್ದಾರೆ. ಇದೆಲ್ಲದರ ಪರಿಣಾಮವಾಗಿ ತಮ್ಮ ಕಾವ್ಯ ಹೀಗಾಗಿದೆ ಎಂದು ಭಾವಿಸಿದ್ದಾರೆ :

ವೇದ ಪುರಾಣೋಪನಿಷದಾಗಮ ಸೃಷ್ಟಿಯಿದು :
ಅಲ್ಲ ಬರಿ ಪ್ರತಿಸೃಷ್ಟಿ ; ನಿಸರ್ಗದಂತೆ ನವೀನ !
ಅಲ್ಲಲ್ಲಿ ಚೆಲ್ಲಿರುವ ಕಲ್ಲುಮಣ್ಣನು ತಂದು
ಮೂರು ಪಾಲಿರದ ಮಳಲನು ನನ್ನ ಕಲ್ಪಕತೆ
ಸಲ್ಲಿಸಲು, ಸ್ವಂತದನುಭವದ ನೀರನು ಬೆರಸಿ,
ಒಗೆಯುವ ಕಥಾಪಾತ್ರದಲಿ ವಿವೇಕದ ಸುಣ್ಣ,
ದರ್ಶನಾಗ್ನಿಯು ಜ್ವಲಿಸ ಕತಕತನೆ ಕುದಿಸಿರಲು
ಸಿದ್ಧಗೊಂಡಿತ್ತಾಗ ವಜ್ರಗಾರೆಯ ನುಡಿಯು,
ಗಾರುಡಿಯು, ಸಾಸಿರಗಂಬದ ರನ್ನಬಸದಿಯನು
ಕಟ್ಟಲಣಿಗೊಂಡು ಸಂಕಲ್ಪಿಸಿರೆ ವರದೃಷ್ಟಿ (ಪುಟ ೧ xxi)

ಕುವೆಂಪು ಅವರು ತಮ್ಮ ಕಾವ್ಯವನ್ನು 'ಮಹಾಛಂದಸ್ಸಿನ ಮೇರುಕೃತಿ' ಎಂದು ಕರೆದುಕೊಂಡಿದ್ದಾರೆ. ಗೋಕಾಕರು

ನಿಷ್ಕೃಷ್ಟವಾಗರಳಿ ಕಲಾಬ್ರಹ್ಮಕಂಡದೊಳು
ಮೆರವ ಕೈಲಾಸದಂತಿದೆ ನನ್ನ ಚಾರುಕೃತಿ! (ಪುಟ ೧. xxiii)

- ಎಂದು ಹೇಳಿಕೊಂಡಿದ್ದಾರೆ. ಆದರೂ ಇನ್ನೊಂದು ಕಡೆಯಲ್ಲಿ

..... ನನ್ನದೇನಿಲ್ಲವೀ ಕೃತಿಯೊಳಗೆ,
ಇದು ನನ್ನ ಕೃತಿಯಲ್ಲ; ಕನ್ನಡಜನಮನದ ಕೃತಿ.
ಕನ್ನಡದ ಬನಶಂಕರಿಯ ಪದಪದ್ಮವರ್ಚಿಸುತ
ಅರ್ಚಿಸದ ಅರಿಶಿಣ ಕುಂಕುಮ ಹುಡಿಯಿದು, ಮತ್ತೇನಲ್ಲ. (ಪು. ೧. xxxiii)

- ಎಂದು ನಿರಭಿಮಾನವನ್ನೂ ಮೆರೆಯುತ್ತಾರೆ. ಅಂತೆಯೇ ದೂರಾನ್ವಯಕ್ಕೆ ಎಡೆಗೊಡಬಾರದೆಂದೂ, ಕಾವ್ಯದ ದಶಾಂಶಗಳು ಮೈದಳೆದು ತಮ್ಮ ಕಾವ್ಯಕ್ಕೆ ಪೂರ್ಣತೆ ಸಮನಿಸಿದೆಯೆಂಬುದನ್ನು ಗಮನಿಸಬೇಕೆಂದು ತೋರುತ್ತಾರೆ. ಅವರ ಮಾತಿನಲ್ಲಿಯೇ ಹೇಳಬೇಕೆಂದರೆ,

ಭಾಷೆ, ರೂಪ, ತಾಳಲಯ, ಅರ್ಥಾಂತರಾರ್ಥಗಳು
ಪ್ರತಿಮತ್ವ, ಶೈಲಿ, ಭಾವ, ರಸ, ಧ್ವನಿ, ಈ ಹತ್ತು
ಕಾವ್ಯದ ದಶ್ಯಾಂಗಗಳು, ದಶಾವತಾರಗಳು.
ಬೆರತಿರೆ ದಶಾಂಗಗಳು ಕಾವ್ಯಕೆ ಬಂತು ಪೂರ್ಣತೆಯು (ಪುಟ. ೧. xxx)

- ಹೀಗೆ ವಿಶಿಷ್ಟ ದರ್ಶನದ ಫಲವಾಗಿ ಮೈದಳೆದು, ಪೂರ್ಣತೆಯನ್ನಾಂತಿರುವ ಕಾವ್ಯಬಂಧವನ್ನು ಸಮರ್ಪಕವಾಗಿ ಗ್ರಹಿಸದೆ ಹೋಗುವ ಅವಿವೇಕವನ್ನು ಮೆರೆಯಬಾರದೆಂದೂ ಅವರು ಎಚ್ಚರಿಸಿದ್ದಾರೆ. ಈ ಎಚ್ಚರಿಕೆ ಅಕಾರಣವಾಗಿಯೇನೂ ಇಲ್ಲ. ಏಕೆಂದರೆ,

ಮಧುರಾಯಿ ಮೀನಾಕ್ಷಿಗೋಪುರದಂತೆ
ಸೂಕ್ಷ್ಮ ಸೌಂದರ್ಯ, ನನೆಕೊನೆಗಿರುವ ರಸಶಿಲ್ಪ;
ದೇಗುಲದ ಶಿಲೆಯೆಲ್ಲ ಮಲರು-ಮಲರಾಗುತ್ತ
ಸಮೃದ್ಧಿ ಕುಸಿರೊಡೆದು ಬೇಲೂರು ಮಂತ್ರಿಸಿದುಸುರು;
ಅಜಂತದಲಿ ಗುಹೆಯಿಂದ ಗುಹೆಗಲೆದು ಬಣ್ಣದ ಶಿಲ್ಪ
ಮಿಂಚಿನ ಕುಂಚ ಹಿಡಿದರಳಿಸಿದ ಭಿತ್ತಿ ಚಿತ್ರಗಳು;
ಸಾವಿರಕಂಬದ ಬಸದಿ ತೋರುವ ವಾಸ್ತುವಿಸ್ತಾರ;
ಅಲ್ಪಮತಿಯಾಗದಿರು, ಬಂಧಗಳಿವನು ಗ್ರಹಿಸದಲೆ;
ಅರಿಯದೆ ರಸಾನುಭವಕೆಲ್ಲಿಹುದು ಅನ್ಯಗತಿ? (ಪುಟ. ೧. xxix)

ಓಠಿಕಾಸಂಧಿಯಲ್ಲಿ ನಿರೂಪಿಸಿರುವ ಈ ಸಂಗತಿಗಳ ಜೊತೆಗೆ, ತಮ್ಮ ಕಾವ್ಯೋದ್ದೇಶವೇನೆಂಬುದನ್ನು 'ಪ್ರಸ್ತಾವನೆ' ಯಲ್ಲಿ ಅವರು ಮತ್ತಷ್ಟು ಸ್ಪಷ್ಟವಾಗಿ

ಸಾರಿ ಹೇಳಿದ್ದಾರೆ. : " ಈ ಕೃತಿಯಲ್ಲಿ ಸರ್ವಕಾಲೀನ ಮೌಲ್ಯಚಿತ್ರಣವಿದ್ದಂತೆ ಒಂದು ವಿಶಿಷ್ಟ ಯುಗದ ಆವರಣವೂ ರೂಪವೆತ್ತು ಬಂದಿದೆ. ಅಲ್ಲದೆ ಸಮಕಾಲೀನ ಜೀವನಕ್ಕೆ ಇಲ್ಲಿಯ ಚಿತ್ರಣ ಪ್ರತಿಸ್ಪಂದನ ಇಲ್ಲದೆ ಇಲ್ಲ. ವೈದಿಕ ಪುನರುಜ್ಜೀವನದ ಕಾಲಕ್ಕೂ ನಾವು ಹಾಯ್ದು ಬಂದ ಪುನರುಜ್ಜೀವನ ಯುಗಕ್ಕೂ ಅನೇಕ ಸಾಮ್ಯಗಳಿವೆ. ತ್ರಿಶಂಕು ಪ್ರಜ್ಞೆಯ ಚಿತ್ರಣವಂತೂ ಸರಿಯೇ ಸರಿ. ದಸ್ಯುಖಂಡದ ರಾಜ್ಯಗಳನ್ನು ಕುರಿತ ವಿಡಂಬನೆಯಲ್ಲಿ ಇಂದಿನ ನಾಗರಿಕ ಜೀವನದ ಮೌಲ್ಯೀ-ಕರಣವೂ ಇದೆ. ದಾಶರಾಜ್ಞಯುದ್ಧದ ವಿಶ್ವಾಮಿತ್ರ-ಶಸ್ತ್ರಾಸ್ತ್ರಗಳು ಇಂದಿನ ಶಸ್ತ್ರ ಪ್ರಪಂಚವನ್ನು ಹೋಲುತ್ತವೆ. ಕಾವ್ಯದಲ್ಲಿನ ವೈದಿಕ ಉಪಮೆಗಳು ಅಂದಿನ ಜೀವನವನ್ನು ನೆನಪಿಗೆ ತರುವಂತೆ, ಅನೇಕಾನೇಕ ಮಹೋಪಮೆಗಳ ದ್ವಾರಾ ಆಧುನಿಕ ಪ್ರಪಂಚದ ನಾಗರಿಕತೆ ಕಣ್ಣೆದುರು ಬರುತ್ತದೆ" (ಪ್ರಸ್ತಾವನೆ ಪು. x). ಈ ಹಿನ್ನೆಲೆಯಲ್ಲಿ 'ಭಾರತಸಿಂಧು ರಶ್ಮಿ' ಯನ್ನು ಪರಿಶೀಲಿಸುವುದು ಅಗತ್ಯವೂ, ಉಚಿತವೂ ಆಗುತ್ತದೆ.

ಮತ್ತೆ ನಾವು ಈ ಕಾವ್ಯದ ವಸ್ತುವಿಗೆ ಹಿಂದಿರುಗಿ ಬರುವುದಾದರೆ, ಅದನ್ನು ಕುರಿತಂತೆ ಅವರು ತಮ್ಮ ಪ್ರಸ್ತಾವನೆಯಲ್ಲಿ ಮತ್ತಷ್ಟು ವಿವರಗಳನ್ನೂ, ಸ್ಪಷ್ಟೀಕರಣವನ್ನೂ, ನೀಡಿದ್ದಾರೆ. ಆ ವಿವರಗಳು ನಮ್ಮ ಕುತೂಹಲವನ್ನು ಕೆರಳಿಸುವಂತಿರುವದು ಮಾತ್ರವಲ್ಲದೆ, ನಾವು ಬೆಕ್ಕಸಬೆರಗಾಗುವಂತೆಯೂ ಮಾಡುತ್ತವೆ. ಅದ್ಭುತ ಲೋಕವೊಂದನ್ನು ಪ್ರವೇಶಿಸಿದ ವಿಶಿಷ್ಟ ಅನುಭವ ನಮಗಿಲ್ಲಿ ಎದುರಾಗುತ್ತದೆ. ಆ ಎಲ್ಲ ವಿವರಗಳನ್ನು ಸಂಚಯಿಸಬೇಕಾದರೆ, ಅವುಗಳನ್ನು ಕಾವ್ಯ ಭಿತ್ತಿಯ ವ್ಯಾಪ್ತಿಯೊಳಗೆ ಅಳವಡಿಸಬೇಕಾದರೆ ಅವರು ಅದೆಷ್ಟು ಕಾಲ ಈ ಸಂಬಂಧವಾದ ಅಧ್ಯಯನ ನಡೆಸಿರಬೇಕು, ಚಿಂತನ-ಮಂಥನ ಮಾಡಿರಬೇಕು ಎಂದು ಯೋಚಿಸುವಂತಾಗುತ್ತದೆ. ವರ್ಜಿಲ್‌ನ ' ಈನಿಯಡ್' (Aeneid) ಅಥವಾ ದಾಂತೆಯ 'ಡಿವೈನ್ ಕಾಮಿಡಿ' (Divine Comedy) ಮಹಾಕಾವ್ಯಗಳ ಅಧ್ಯಯನದ ಸಂದರ್ಭದಲ್ಲಿ - ಅದರಲ್ಲಿಯೂ ಅಧೋಲೋಕಗಳ ವರ್ಣನೆಯ ಸಂದರ್ಭದಲ್ಲಿ ನಮಗಾಗುವಂಥ ಸಾಂದ್ರ ಅನುಭವ, ಇಲ್ಲಿಯೂ ನಮಗೆ ದೊರಕುತ್ತದೆಂಬ ನಿರೀಕ್ಷೆ ಮೂಡುತ್ತಿದೆ (ಆ ನಿರೀಕ್ಷೆ ಹುಸಿಯೇನೂ ಆಗುವದಿಲ್ಲ!). ಅಂಥ ಅರ್ಥಪೂರ್ಣ ಪ್ರಸ್ತಾವನೆ ಇದಾಗಿದೆ. ಅವರು ಹೇಳಿರುವ ಈ ಮಾತುಗಳನ್ನು ಇಲ್ಲಿ ಗಮನಿಸಬಹುದಾಗಿದೆ : "ಋಗ್ವೇದದಿಂದ ತನ್ನ ವಸ್ತುವನ್ನು ಆಯ್ದುಕೊಂಡ ಮಹಾಕಾವ್ಯ ಭಾರತೀಯ ಭಾಷೆಗಳಲ್ಲಿಯೇ ವಿರಳ. ಕನ್ನಡದಲ್ಲಿ ಇದೇ ಮೊದಲನೆಯದೆನ್ನಬಹುದು. ಈ ಕೃತಿ. . . . . . ಆರ್ಯ- ದ್ರಾವಿಡ ಜನಾಂಗಗಳ ಪರಸ್ಪರ ಸಮಾಗಮ, ಸಂಘರ್ಷ ಹಾಗೂ ಸಮ್ಮಿಲನ, ಭರತಕುಲ ಚಕ್ರವರ್ತಿಯಾದ ಸುದಾಸನಿಂದ ದೇಶಕ್ಕೆ 'ಭಾರತ' ಎಂಬ ಹೆಸರು ಬಂದಿರಬಹುದಾದ ರೀತಿ, ಮಿಶ್ರರಕ್ತದ ಸುದಾಸ 'ಸಮ್ಮಿಲನ' ಸಿದ್ಧಾಂತದ ಪುರೋಹಿತರಾದ ವಿಶ್ವಾಮಿತ್ರರಿಂದ

ಉತ್ತೇಜನಗೊಂಡಿರಬಹುದಾದ ಪ್ರಸಂಗ, ಸುದಾಸನನ್ನು ವಿಜಯಿಯಾಗಿಸಿದ ದಾಶರಾಜ್ಞಯುದ್ಧ, ಅರಸಾದ ವಿಶ್ವಾಮಿತ್ರರು ಋಷಿಯಾದ ಬಗೆ : ಹೀಗೆ ಒಂದಲ್ಲ, ಎರಡಲ್ಲ, ಪ್ರಾಚೀನ ಭಾರತೀಯ ಸಂಸ್ಕೃತಿಗೇ ಈ ಮಹಾಕಾವ್ಯ ಕನ್ನಡಿ ಹಿಡಿದಿದೆ. ಸುಮಾರು ಕ್ರಿ. ಪೂ. ೨೦೦೦ ದಲ್ಲಿಯ ಭಾರತದ ಭೂಗೋಲ, ಆಗ ಇದ್ದ ಇತಿಹಾಸ ಹಾಗೂ ಇದ್ದಿರಬಹುದಾದ ಇತಿಹಾಸದ ಪುರಾಣ, ಸಪ್ತಸಿಂಧೂ ದೇಶ, ದಸ್ಯುಖಂಡ, ದಕ್ಷಿಣಾಪಥ - ಇದೆಲ್ಲ ಜನಜೀವನದ ಯಾತ್ರೆಯೇ ಕಣ್ಣುಮುಂದೆ ಹಾಯ್ದು ಹೋಗುತ್ತದೆ. ವಶಿಷ್ಠ, ವಿಶ್ವಾಮಿತ್ರ, ಜಮದಗ್ನಿ, ವಾಮದೇವ, ಅಗಸ್ತ್ಯರಂತಹ ಋಷಿವರ್ಯರು, ಅರುಂಧತಿ-ಸಾಂಕೃತಿ - ರೇಣುಕೆ-ಲೋಪಾಮುದ್ರೆಯರಂತಹ ಋಷಿಪತ್ನಿಯರು, ಸುದಾಸ-ಅಂಡೀರ - ಸತ್ಯವ್ರತರಂತಹ ವೀರರು, ಸುದೇವಿ-ಸತ್ಯವ್ರತಿಯರಂತಹ ಕ್ಷಾತ್ರ ಮಹಿಳೆಯರು, ಶಕ್ರಿ-ಶಂಡಾಮರ್ಕರಂತೆ ಕೆಡುಕಿಗೆ ಚಾಲನೆಕೊಡುವ ಜನ, ಕಣ್ವ-ಭಾರದ್ವಾಜ-ಕಾಹಣ-ಕಿರ್ಮೀರ ಹಾಗೂ ಅಧೀರನ ರಾಣಿಯಂತಹ ನೀಚರು : ಸುಮಾರು ಎರಡುನೂರು ಪಾತ್ರಗಳು ಇಲ್ಲಿ ಕಾವ್ಯರಂಗದ ಮೇಲೆ ಸುಳಿದುಹೋಗುತ್ತವೆ. ಕೆಲವು ಅವಿಸ್ಮರಣೀಯವಾಗಿ ಚಿತ್ತಭಿತ್ತಿಯ ಮೇಲೆ ಉಳಿಯುತ್ತವೆ" (ಪ್ರಸ್ತಾವನೆ ಪು. vi).

ಬಹುಕಾಲದಿಂದ ಈ ಪುರಾತನ ವಸ್ತು ತಮ್ಮನ್ನು ಹೇಗೆ ಸೆಳೆದಿತ್ತು ಎಂಬುದನ್ನು ಅವರು ಹೀಗೆ ನಿರೂಪಿಸಿದ್ದಾರೆ :

ಬಾಲ್ಯದಿಂದೆನ್ನ ಕೈಮಾಡಿ ಕರೆದ ಪುರಾಣ-
ವಸ್ತು ಶಿಲಾಖಂಡವನ್ನ ಕಂಡರಿಸುತ್ತ
ಬಂಡೆಗಲ್ಲನೆ ಕಡೆದೆ ಬ್ರಹ್ಮಾಂಡವಾಗಿಸುತ ! (ಪುಟ. ೧. xxii)

ಇದು ಸಹಜವಾಗಿಯೇ ಮಿಲ್ಟನ್ನನ " This subject for heroic Song/ pleased one long chusing and beginning late ! (X.V-25)" ಎಂಬ 'ಪ್ಯಾರಡೈಸ ಲಾಸ್ಟ್' ಮಹಾಕಾವ್ಯದ ಮಾತನ್ನು ನೆನಪಿಗೆ ತಂದುಕೊಡುತ್ತದೆ. ಇದಕ್ಕಾಗಿ ವರ್ಷಕಾಲ "ವೈದಿಕ ಸಂಸ್ಕೃತಿಯ ಅಧ್ಯಯನವನ್ನೇ ನಡೆಯಿಸಿದೆನೆನ್ನ-ಬಹುದು" ಎಂದು ಅವರು ಹೇಳಿಕೊಂಡಿದ್ದಾರೆ (ಪ್ರಸ್ತಾವನೆ ಪು. ೧. v). ಅಷ್ಟೇ ಅಲ್ಲ, ಅದಕ್ಕೆ ಪ್ರಮಾಣವೋ ಎಂಬಂತೆ ಮೂರು ಪುಟಗಳಿಗೂ ಹೆಚ್ಚು ಸ್ಥಳವನ್ನು ವ್ಯಾಪಿಸಿಕೊಂಡಿರುವ (ಸಂ. ೧ ; ಪು. ೫೬೦-೫೬೪) 'ಹಿನ್ನೆಲೆ ಗ್ರಂಥಗಳ ಒಂದು ಕಿರಿಪಟ್ಟಿ'ಯನ್ನು ಕೊಟ್ಟಿದ್ದಾರೆ. ಆದರೆ, ಕಥಾವಸ್ತು ಅವರಿಗೆ ಬಹಳ ಹಿಂದೆಯೇ ಹೊಳೆದಿತ್ತು ಎಂಬುದರಲ್ಲಿ ಅನುಮಾನವೇನೂ ಇಲ್ಲ. ಈ ವಿಷಯದ ಬಗ್ಗೆ ಅವರು ಹೀಗೆಂದಿದ್ದಾರೆ : " 'ತ್ರಿಶಂಕುವಿನ ಪ್ರಜ್ಞಾ ಪ್ರಭಾತ' ಎಂಬ ಕಥನಕಾವ್ಯವನ್ನು, ನಾನು ೧೯೫೭ ರಲ್ಲಿ ಬರೆದೆ. 'ಭಾರತಸಿಂಧು ರಶ್ಮಿ' ಯ ಕಥಾಭಾಗ ನನಗೆ ಹೊಳೆದುದು ಆಗ . . . . ಈ ಕೃತಿಯಲ್ಲಿ 'ತ್ರಿಶಂಕು ಪ್ರಜ್ಞಾಕಾಂಡ' ಎಂಬ ಹೆಸರಿನಿಂದ 'ತ್ರಿಶಂಕು ಪ್ರಜ್ಞಾಪ್ರಭಾತ'ವು ೧೦ ನೆಯ ಕಾಂಡವಾಯಿತು.' ಹೀಗೆ, ಅಂಗಭೂತವಾಗಿ

ಪರಿಣಮಿಸಿದ 'ತ್ರಿಶಂಕುವಿನ ಪ್ರಜ್ಞಾ ಪ್ರಭಾತ'ವನ್ನು ಅವರು "ಮಹಾಕಾವ್ಯದ ಒಂದು ಮಿಡಿ" ಎಂದು ಕರೆದಿದ್ದರು ಎಂಬುದೂ ಗಮನಾರ್ಹವಾದ ಸಂಗತಿಯಾಗಿದೆ. ಆ ಮಿಡಿ "ನೂರಕ್ಕೆ ನಲವತ್ತರಷ್ಟಾದ ಮಾರ್ಪಾಟು" ಗಳಿಗೆ ಒಳಗಾಗಿ, ಹಿಂದೆ ಒಂಬತ್ತು ಕಾಂಡಗಳನ್ನೂ ಮುಂದೆ ಎರಡು ಕಾಂಡಗಳನ್ನೂ ಹೊಂದಿಸಿಕೊಂಡು ಇಂದಿನ ಬೃಹತ್ ಕಾವ್ಯದ ರೂಪವನ್ನು ಪಡೆದುಕೊಂಡಿದೆ. ಆ 'ಮಿಡಿ ಮಹಾಕಾವ್ಯ' ತಾನು "ಈಡೇರಿಸುವುದಕ್ಕಿಂತಲೂ ಹೆಚ್ಚಿನ ನಿರೀಕ್ಷೆಗಳನ್ನು ಮೂಡಿಸುತ್ತದೆ" ಎಂದು ೧೯೭೯ ರಲ್ಲಿ ನಡೆದ ಮಹಾಕಾವ್ಯಗಳನ್ನು ಕುರಿತ ರಾಷ್ಟ್ರೀಯ ವಿಚಾರಗೋಷ್ಠಿಯಲ್ಲಿ ಹೇಳಿದ್ದೆ. ಇಂದಿನ ತನ್ನ ಬೃಹತ್‌ರೂಪದಲ್ಲಿಯೂ ಇದನ್ನು "ಮಹಾತ್ವಾಕಾಂಕ್ಷೆಯ ಮಹಾಕಾವ್ಯ" ಎಂದೇ ಹೇಳಬೇಕಾಗುತ್ತದೆ.

ಇತ್ತ, ಕಾಂಡಗಳ ಶೀರ್ಷಿಕೆಗಳಿಂದ ನಮಗೆ ಕಥಾವಸ್ತುವಿನ ಪರಿಚಯವೇನೂ ದೊರೆಯುವುದಿಲ್ಲ ಎಂಬುದು ಸ್ಪಷ್ಟವಾಗಿದೆಯಷ್ಟೆ. ಈ ಕಾಂಡಗಳ ವಿವರಗಳನ್ನೀಗ ಭೇದಿಸಿ ನೋಡಬಹುದು. ಅವರೇ ಹೇಳಿರುವಂತೆ, "ಮೊದಲನೆಯ 'ಪೂರ್ವಾಪರ-ಕಾಂಡ' ದಲ್ಲಿ ಆದಿ ಮಾನವನಾದ ಸ್ವಾಯಂಭುವ ಮನುವಿನಿಂದ ಮೊದಲ್ಗೊಂಡು ಆದಿಮಾ-ಆದಿಮ, ಯಮ-ಯಮೀ ಹಾಗೂ ಭುಜ್ಯುವಿನ ಕಥೆಯ ಮೂಲಕ ವೈದಿಕಯುಗದ ಮೂರು ಪುರುಷಾರ್ಥಗಳ ಅರಿವಾಗುತ್ತದೆ.II 'ಉತ್ಸರ್ಪಣ ಕಾಂಡ' ಹಾಗೂ 'ಮನುಕುಲ ಹಂಸಕಾಂಡ' III ದಲ್ಲಿಯ ಅಯಾಸ್ಯನ ಅದಿತಿವಿದ್ಯೆ ಹಾಗೂ ವೈವಸ್ವತಮನುವಿನ ಆನಂದ ಸಮಸ್ಯೆಯಿಂದ ಚತುರ್ಥ ಪುರುಷಾರ್ಥ ವಿದಿತವಾಗುತ್ತದೆ. ಇಲ್ಲಿಗೆ ಮಹಾಕಾವ್ಯದ ಸಾಂಸ್ಕೃತಿಕ ಹಾಗೂ ಪೌರಾಣಿಕ ಇಲ್ಲವೆ ಐತಿಹಾಸಿಕ ಹಿನ್ನೆಲೆಯ ಪರಿಚಯವಾಗುತ್ತದೆ. IV 'ಸಪ್ತಸಿಂಧೂಕಾಂಡ'ದಲ್ಲಿ ವಿಶ್ವರಥನ ಯಾತ್ರೆಯ ಮೂಲಕ ಕಾವ್ಯದ ಭೌಗೋಲಿಕ ಹಿನ್ನೆಲೆಯು ಚಿತ್ರಿತವಾಗಿ ವಿಶ್ವರಥನ (ವಿಶ್ವಾಮಿತ್ರ) ವರೆಗೆ ಅವನ ವಂಶದ ಪರಿಚಯವಾಗಿ ಕಥೆಯ ಮುಂದಿನ ಬೆಳವಣಿಗೆಗಾಗಿ ನಾವು ಕಾಯುತ್ತೇವೆ. V 'ಕಾನ್ಯಕುಬ್ಜ ರಾಜ್ಯಕಾಂಡ' ದಲ್ಲಿ ವಿಶ್ವರಥ ಆದರ್ಶ ನೃಪನಾದುದರ ಒಳ್ಳೆಯ ಚಿತ್ರಣವಿದೆ. ಪಾಪದಿಂದ ಪುಣ್ಯದೆಡೆಗೆ ತ್ರಿಶಂಕುವಿನ ಪರಿವರ್ತನ, ಸುದಾಸನ ವಿವಾಹ, ಸುದಾಸ ವಂಶದ ಪುರೋಹಿತರಾದ ವಶಿಷ್ಠರೊಡನೆ ವಿಶ್ವರಥನ ಭೇಟಿ ಹಾಗೂ ಚಕಮಕಿ, ವಿಶ್ವರಥ ಮಾಡಿದ ತಪಃಸಂಕಲ್ಪ ಹಾಗೂ ನಿರ್ಗಮನ, ಸಾಂಕೃತಿಯ ಪ್ರಭುತ್ವ, ಕೀಕಟ ಕಾಹಿಣನು ವಿಶ್ವರಥ ರಾಜ್ಯದ ಮೇಲೆ ಮಾಡಿದ ದಾಳಿ ಹಾಗೂ ಸಾಂಕೃತಿ ಮತ್ತು ಮಕ್ಕಳ ವನವಾಸ - ಇವೇ ಮೊದಲಾದವು ಇಲ್ಲಿಯ ಸನ್ನಿವೇಶಗಳು."

ಇಲ್ಲಿಗೆ ಮೊದಲನೆಯ ಸಂಪುಟದ ಕಥಾಭಾಗ ಮುಗಿಯುತ್ತದೆ. ಲೇಖಕರೇ ಹೇಳಿಕೊಂಡಿರುವಂತೆ, ಈ ಭಾಗದಲ್ಲಿ ಮಹಾಕಾವ್ಯದ "ಸಾಂಸ್ಕೃತಿಕ ಹಾಗೂ ಪೌರಾಣಿಕ ಇಲ್ಲವೆ ಐತಿಹಾಸಿಕ ಹಿನ್ನೆಲೆ" ಹಾಗೂ "ಭೌಗೋಲಿಕ ಹಿನ್ನೆಲೆ" ಯಲ್ಲಿ ವಿಶ್ವರಥ ಆದರ್ಶನೃಪನಾದುದರ ಚಿತ್ರಣ ಇದೆಯೆಂದು ಇಟ್ಟುಕೊಂಡರೂ,

ಇವುಗಳ ನಡುವ ಸಾವಯುವ ಸಂಬಂಧ ಏರ್ಪಟ್ಟ ಅನುಭವವೇ ಆಗುವುದಿಲ್ಲ. ಪರಸ್ಪರ ಸಂಬಂಧವೇ ಇಲ್ಲದಿರುವಂಥ, ಸಂಪೂರ್ಣವಾಗಿ ಬೇರೆಯೇ ಆಗಿರುವಂಥ ಪ್ರಸಂಗಗಳನ್ನು ಕಲಿಹಾಕಿರುವಂಥ ಅನುಭವ ಉಂಟಾಗುತ್ತದೆ.

ಇನ್ನು, ಎರಡನೆಯ ಸಂಪುಟದ ಮೊದಲಕಾಂಡದಲ್ಲಿ "ವಿಶ್ವರಥನಿಗೆ ಮೇನಕಾಪ್ರಸಂಗ, ನಿಸರ್ಗದರ್ಶನ, ಕೊನೆಗೆ ಗಾಯತ್ರೀ ದರ್ಶನ ಮೊದಲಾದವು ಸಾಧಿಸುತ್ತವೆ." ಎರಡನೆಯದಾದ 'ದಾಶರಾಜ್ಞಕಾಂಡ' ದಲ್ಲಿ ಆರ್ಯ ಶಂಯುವಿನ ಮಗಳಾದ ಅಪಾಲಾ ದಸ್ಯುರಾಜ ಬೃಬುವಿನ ಮಗನಾದ ಪಾಕಸ್ಥಾಮನ ಜೊತೆಗೆ ಓಡಿಹೋಗಿ, ಈ ವರ್ಣಸಂಕರತೆಯ ಕಾರಣವಾಗಿ ಬೃಬುವಿನ ಮೇಲೆ ಪೂರುನೃಪ ದಾಳಿ ಇಕ್ಕಿದಾಗ, ಆ ಪೂರುವಿನ ಮೇಲೆ ಸುದಾಸ ಆಕ್ರಮಣವನ್ನೆಸಗಿ, ಪೂರುವಿನ ರಾಜ್ಯವನ್ನೇ ವಶಪಡಿಸಿಕೊಳ್ಳುತ್ತಾನೆ. ಪೂರುವಿನ ಪುರೋಹಿತ ಕಣ್ವ ಭಾರದ್ವಾಜ ಪಂಚ ಆರ್ಯ ಮನೆತನಗಳನ್ನೇ ಪ್ರಚೋದಿಸಿ ಸುದಾಸನ ಮೇಲೆ ಆಕ್ರಮಣ ಮಾಡುವಂತೆ ಮಾಡುತ್ತಾನೆ. ಇಲ್ಲಿಯೂ ಸುದಾಸನೇ ವಿಜಯಿಯಾಗಿ ಇಡೀ ಸಪ್ತಸಿಂಧೂ ದೇಶದ ಚಕ್ರವರ್ತಿಯಾಗುತ್ತಾನೆ. ಮೂರನೆಯದಾದ 'ಅಶ್ವಮೇಧ ಕಾಂಡ' ದಲ್ಲಿ ಸುದಾಸ ತನ್ನ ಶತ್ರುಗಳನ್ನು ಸೋಲಿಸಿ ಅಶ್ವಮೇಧವನ್ನು ಆಚರಿಸುವ ವರ್ಣನೆ ಬರುತ್ತದೆ. ವಶಿಷ್ಠ ಪುತ್ರನಾದ ಶಕ್ತಿಯ ದುರ್ವರ್ತನೆಯನ್ನು ಸಹಿಸದ ಕರ್ಕಂಧುವಿನಿಂದ ಶಕ್ತಿಯ ವಧೆ, ಭಯಂಕರ ರೋಗವೊಂದರಿಂದ ಸಮ್ರಾಜ್ಞಿ ಸುದೇವಿಯ ಸಾವು- ಈ ಎಲ್ಲ ಘಟನೆಗಳೂ ಇಲ್ಲಿ ಚಿತ್ರಿತವಾಗಿವೆ. ನಾಲ್ಕನೆಯದಾದ 'ಭಾರತ ವಿಸ್ತರಣ ಕಾಂಡ' ದಲ್ಲಿ, ದಾಶರಾಜ್ಞ ಯುದ್ಧದಲ್ಲಿ ಸೋತ ರಾಜರು ವಿವಿಧ ಪ್ರದೇಶಗಳಿಗೆ ವಲಸೆ ಹೋಗಿ ವಿಸ್ತೃತ ಭಾರತ ರೂಪುಗೊಳ್ಳುವುದರ ವರ್ಣನೆ ಕಾಣ ದೊರೆಯುತ್ತದೆ. ಐದನೆಯದಾದ 'ತ್ರಿಶಂಕು ಪ್ರಜ್ಞಾಕಾಂಡ' ದಲ್ಲಿ ಸುದಾಸನ ಪ್ರೋತ್ಸಾಹದಿಂದ ಬೆಳೆದು ನಿಂತ ಸತ್ಯವ್ರತ (ಅಥವಾ ಹಿಂದಿನ ತ್ರಿಶಂಕು) ಗತಿಸಿದ ತನ್ನ ಪತ್ನಿಯನ್ನು ಸಶರೀರಿಯಾಗಿ ಸ್ವರ್ಗದಲ್ಲಿ ಸೇರಬಯಸುವದು, ವಿಶ್ವಾಮಿತ್ರ ಅವನ ಇಚ್ಛೆಯನ್ನು ಪೂರೈಸುವದು, ಈ ಸಾಹಸದಲ್ಲಿ ಹಾಗೂ ನವಸೃಷ್ಟಿಯಲ್ಲಿ ತನ್ನ ತಪಃಶಕ್ತಿಯನ್ನು ವ್ಯಯಿಸಿದ ವಿಶ್ವಾಮಿತ್ರ ಮತ್ತೆ ತಪಸ್ಸಿಗೆ ತೆರಳುವುದು - ಇವೇ ಮೊದಲಾದ ವಿವರಗಳು ಬರುತ್ತವೆ. ಆರು ಮತ್ತು ಏಳನೆಯ ಕಾಂಡಗಳು "ಪೂರ್ಣ ವ್ಯಕ್ತಿತ್ವದ ವಿಶ್ವಾಮಿತ್ರರನ್ನು ಪಡಮೂಡಿಸುತ್ತವೆ". ಶುನಃಶೇಫನ ಪ್ರಸಂಗವು ಇದರ ಅಂಗವಾಗಿಯೇ ಬರುತ್ತದೆ. ಆರನೆಯ ಕಾಂಡದಲ್ಲಿನ ವಿಶ್ವಾಮಿತ್ರ ತನ್ನ ತಪಃಶಕ್ತಿಯನ್ನು (ಏಳನೆಯ ಕಾಂಡದಲ್ಲಿ ಬರುವ) ದಾಶರಾಜ್ಞ ಯುದ್ಧದಲ್ಲಿ ಹಾಗೂ ತ್ರಿಶಂಕುವಿನ ಸಾಹಸೋದ್ಯಮದಲ್ಲಿ ತೊಡಗಿಸುತ್ತಾನೆಂಬ ಸಂಗತಿ ಒಂದು ರೀತಿಯಲ್ಲಿ ಈ ಸಂಪುಟದ ಈ ಎರಡು ಕಾಂಡಗಳನ್ನು ಒಂದುಗೂಡಿಸುವ ಕೊಂಡಿಯಾಗಿದೆ. ಈ ದೃಷ್ಟಿಯಿಂದ ನೋಡಿದಾಗ, ಎರಡನೆಯ ಸಂಪುಟದಲ್ಲಿ ಕಥಾವಸ್ತುವಿನ ಸಂಬದ್ಧ ಬೆಳೆವಣಿಗೆಯನ್ನು ಕಾಣಬಹುದಾಗಿದೆ.

ಕಥಾವಸ್ತುವಿನ ಈ ಸ್ಥೂಲ ನಿರೂಪಣೆ ಕವಿಯ ಅಧ್ಯಯನದ ವ್ಯಾಪ್ತಿ, ವೈಶಾಲ್ಯ ಮತ್ತು ಅಗಾಧತೆಗಳನ್ನೇ ಮಾತ್ರವಲ್ಲದೆ, ಪ್ರಾಚ್ಯ ಮತ್ತು ಪಾಶ್ಚಾತ್ಯ ಕಥಾಲೋಕ-ಗಳಲ್ಲಿನ ಸಾಮ್ಯ ಮತ್ತು ವೈಷಮ್ಯಗಳನ್ನು ಗುರುತಿಸುವ ವಿಶಿಷ್ಟ ಬಗೆಯನ್ನೂ ಓದುಗರ ಗಮನಕ್ಕೆ ತರಬಲ್ಲುದಾಗಿದೆ. ಉದಾಹರಣೆಗೆ, ಅಪಾಲಾಳ ಅಪಹರಣ ಪ್ರಸಂಗ ಹೋಮರನ 'ಇಲಿಯಡ್' ಮಹಾಕಾವ್ಯದಲ್ಲಿ ಬರುವ ಹೆಲನ್ನಳ ಅಪಹರಣದ ಪ್ರಸಂಗವನ್ನೂ, ಆರ್ಯರನ್ನು ಎತ್ತಿಕಟ್ಟುವ ಪ್ರಸಂಗ ಹೆಲನ್ನಳ ವಾಪಸಾತಿಯನ್ನು ಸಾಧಿಸಲು ಗ್ರೀಕರೆಲ್ಲ ಅಗಮೆಮ್ನಾನನ ನೇತೃತ್ವದಲ್ಲಿ ಒಂದುಗೂಡುವ ಪ್ರಸಂಗವನ್ನೂ ನಮ್ಮ ನೆನಪಿಗೆ ತಾರದೆ ಇರದು. ಅಂತೆಯೇ 'ಅನಾಮಿಕ ಅಭ್ಯಾಸ' ಗೋಕಾಕರ ಮೇಲೆ ಪ್ರಭಾವ ಬೀರಿರುವ ಇತರ ಸಂಗತಿಗಳನ್ನು, ಟಿಪ್ಪಣಿಗಳ ರೂಪದಲ್ಲಿ ತೋರಿಸಿಕೊಟ್ಟಿದ್ದಾರೆ. ಉದಾಹರಣೆಗೆ, ಹೋಮರನ ಕಾವ್ಯಗಳಲ್ಲಿ ಒಂದಾದ 'ಇಲಿಯಡ್' ಯುದ್ಧ ಆರಂಭವಾದ ಹತ್ತನೆಯ ವರ್ಷದಲ್ಲಿ ನಡೆದ ಘಟನೆಯೊಂದರ - ಅಂದರೆ, ಮಹಾಮಾರಿ-ಯೊಂದಕ್ಕೆ ಬಲಿಯಾಗಿ ಗ್ರೀಕ್‌ಯೋಧರು ಅಗಣಿತ ಸಂಖ್ಯೆಯಲ್ಲಿ ಸತ್ತು ಬೀಳುವದು ಹಾಗೂ ಅದರ ನಿಜವಾದ ಕಾರಣ ಬಯಲಾದುದರ ಪರಿಣಾಮವಾಗಿ ಅಗಮೆಮ್ನನ್‌ನವಿಷಯದಲ್ಲಿ ಅಖಿಲಿಸ್ ರೋಷಗೊಂಡು ಗ್ರೀಕ್ ಪಾಳೆಯ-ದಿಂದ ಹೊರನಡೆಯುವುದು - ವರ್ಣನೆಯೊಂದಿಗೆ ಆರಂಭಗೊಳ್ಳುವಂತೆ ಹಾಗೂ ನರಕದ ಉರಿಯಲ್ಲಿ ಬೇಯುತ್ತಿರುವ ಸೇಟನ್ನನ ವರ್ಣನೆಯೊಂದಿಗೆ ಮಿಲ್ಟನ್ನನ 'ಪ್ಯಾರಡೈಸ್ ಲಾಸ್ಟ್' ಕಾವ್ಯ ಆರಂಭಗೊಳ್ಳುವಂತೆ, ಇಲ್ಲಿಯೂ ಮುಂದೆಲ್ಲೊ ಬರುವ (III.4)ವಿವರಗಳಿಗೆ ಸಂಬಂಧಿಸಿದ 'ಶರ್ಯಣಾವತ್ ಸಮುದ್ರ'ದ ವರ್ಣನೆಯೊಂದಿಗೆ ಈ ಕಾವ್ಯ ಆರಂಭವಾಗುತ್ತದೆ. ಆ ವರ್ಣನೆ ಹೀಗಿದೆ :

ಶರ್ಯಣಾವತ್ ಗಿರಿಶ್ರೇಣಿಯನು ಗುರಿಯಿಟ್ಟು
ತುರ್ವಶರ ರಾಜ್ಯದಿಂದೀಚೆ ಭೂಸಂಚಾರ
ಮುಂಬರಿಯುತಾನವರ ರಾಜ್ಯದೊಳು ಹಾಯ್ದಿರಲು
ಮುನ್ನಡೆದ ವಿಶ್ವರಥನವರಿವರ ಕಥೆ ಕೇಳಿ
ಮರದ್ ವೃಧಾ - ಅಸಿಕ್ನಿ ನದಿಗಳೊಂದಾಗುತ್ತ
ವಿತಸ್ತೆಯ ಕೂಡುತೊಲಿಯುವವಲ್ಲಿ ಸಿಂಧುವಿಗೆ
ಆನವರಿದ್ದರಾ ನೆಲದ ಪೂರ್ವಭಾಗದಿ ನೆಲಸಿ
ಆಸಿಕ್ನಿಯ ಚಂದ್ರಭಾಗ ತೀರದ ಮೇಲೆ (ಪುಟ ೧.೧)

ಅಂತೆಯೇ, ಮುಂದೆ ನಾಲ್ಕನೆಯ ಕಾಂಡದಲ್ಲಿ ವಂಶಾನುಕ್ರಮದಲ್ಲಿ ಹೆಸರಿಸಲಾಗುವ ಹಾಗೂ ಐದನೆಯ ಕಾಂಡದಲ್ಲಿ ಒಳ್ಳೆಯ ರಾಜನಂತೆ ಚಿತ್ರಿತನಾಗಿರುವ ಈ ಕಾವ್ಯದ ಕೇಂದ್ರಪಾತ್ರವಾದ ವಿಶ್ವರಥ(ಅಥವಾ ವಿಶ್ವಾಮಿತ್ರ) ನನ್ನೂ, ಇಲ್ಲಿಯೇ ಪರಿಚಯಿಸಿಬಿಡಲಾಗಿದೆ. - "ವಿಶ್ವರಥ ನೋಡಿದನು.

ಶರ್ಯಣಾವತ್ ಶರಧಿ ಮೆರೆದಿತ್ತು" ಎಂದು ಮುಂತಾಗಿ ಹೇಳಿಬಿಡುವ ಮೂಲಕ.

ಪ್ರಳಯಾನಂತರದ ಸೃಷ್ಟಿಯ ವರ್ಣನೆ 'ಭಾಗವತ' ಮತ್ತು 'ಋಗ್ವೇದ'ಗಳಿಂದ ಸ್ಫೂರ್ತವಾಗಿದೆ. ಪುಲಗ, ದಕ್ಷಬ್ರಷ್ಟ, ನಾರದ, ಅಂಗಿರಸರ ಅನುಭವಕಥನದಲ್ಲಿ (ಎರಡನೆಯ ಕಾಂಡ) ಹಾಗೂ ಆನಂದದ ನೆಲೆಯ ವರ್ಣನೆಯಲ್ಲಿ (ಮೂರನೆಯ ಕಾಂಡ) ಅರವಿಂದರ 'ಸಾವಿತ್ರಿ' ಮಹಾಕಾವ್ಯದ ಎರಡು ಮತ್ತು ಹನ್ನೊಂದನೆಯ ಸಂಚಿಕೆಗಳ ಪ್ರಭಾವ ಗೋಚರಿಸುತ್ತದೆ. ಅಂತೆಯೇ, ಅರವಿಂದರ On the Veda ಗ್ರಂಥದ ಪ್ರಭಾವವನ್ನು ಎರಡನೆಯ ಕಾಂಡದಲ್ಲಿ ಗುರುತಿಸಬಹುದು. 'ಅದಿತಿ ಮಂಡಲ' ಮುಂತಾದವುಗಳ ವರ್ಣನೆಯೂ ಅರವಿಂದರ Super mind ಮೊದಲಾದ ಪರಿಕಲ್ಪನೆಗಳ ಪ್ರತಿಬಿಂಬವಲ್ಲದೆ ಬೇರೇನೂ ಅಲ್ಲ. ಅದಿತಿಯ ವರ್ಣನೆಯಲ್ಲಿ 'ಬಿಯೋವುಲ್ಫ್‌ನ ಮಹಾಕಾವ್ಯದಲ್ಲಿನ ಗ್ರೆಂಡೆಲ್‌ನ ತಾಯಿಯ ವರ್ಣನೆ ಇಣುಕುತ್ತದೆ. ಜಲಪ್ಲವನದ ವರ್ಣನೆಯ ವಿವರಗಳಿಗೆ 'ಬೈಬಲ್' ಮತ್ತು 'ಶತಪಥ ಬ್ರಾಹ್ಮಣ'ಗಳನ್ನೇ ಆಶ್ರಯಿಸಲಾಗಿದೆ. ಗಾಧಿ ರಾಜನ ವ್ಯಾಧಿಯ ವರ್ಣನೆ 'ಯಲ್ಲಿ 'ಅಥರ್ವವೇದ'ದ ಮಂತ್ರಗಳನ್ನೇ ಬಳಸಲಾಗಿದೆ. ಅಂತೆಯೇ, ಮೊದಲ ಕಾಂಡದಲ್ಲಿ ಒಮ್ಮೆಗೇ 'ಋಗ್ವೇದ'ದ ಮೂರನೆಯ ಮಂಡಲದ ಹತ್ತು ಋಕ್ಕುಗಳು ಇಡಿಯಾಗಿ ಮತ್ತು ಹಾಗೆ ಹಾಗೆಯೇ ನುಸುಳಿಕೊಂಡು ಓದುಗನನ್ನು ದಿಗ್‌ಭ್ರಮೆಗೊಳಿಸಿಬಿಡುತ್ತವೆ. "ಅಗ್ನಿ ಸೂಕ್ತವದೊಂದು ಬಂತು ಕೋಲ್ಮಿಂಚಾಗಿ / ಜಾತವೇದನಿಗೆ ಕವಿಕ್ರತುವಿಗೆಂದಿತ್ತಿರುವ ಧೀಯಾಗಿ ಗೀಯಾಗಿ ದಿವ್ಯ ಶ್ರುತಿ-ಶ್ರೀಯಾಗಿ" ಎಂಬ ಮಾತಿನೊಡನೆ. ಹೀಗಾಗಿ, ವಿಶ್ವಾಮಿತ್ರನಿಗೆ ಕೋಲ್ಮಿಂಚಾಗಿ ಬರುವದು ಓದುಗರ ಪಾಲಿಗೆ ಕಣ್ಣು ಕೋರೈಸುವ, ಕಣ್ಣು ಕುರುಡಾಗಿಸುವ ಬರಸಿಡಿಲಿನಿಂದೊಡಗೂಡಿದ ಮಹಾವಿದ್ಯುಲ್ಲತೆಯಾಗಿ ಪರಿಣಮಿಸಿಬಿಡುತ್ತದೆ. ಇದೇ ರೀತಿ, ಸ್ವಾಯಂಭುವಮನು ಏರ್ಪಡಿಸಿದ ಮದುವೆಗಳ ವರ್ಣನೆಯ ಸಂದರ್ಭದಲ್ಲಿ -

"ಗೃಹ್ಣಾಮಿ ತೇ .... ।
ಭಗೋ ಅರ್ಯಮಾ ..... ॥"
"ಸುಮಂಗಲೀರಿಯಂ ವಧೂರಿಮಾಂ ....
ಸೌಭಾಗ್ಯಮಸ್ಮೈ ...... ಪರೇತನ ॥"
"ಸಮ್ರಾಜ್ಞೀ ಶ್ವಶುರೇಭವ ..... ।
ನನಾಂದರಿ ಸಮ್ರಾಜ್ಞೀ .... ॥"
ಮತ್ತು
"ಸಹೃದಯಂ ಸಾಂಮನಸ್ಯಮವಿದ್ವೇಷಂ ..
ಅನ್ಯೋ ಅನ್ಯಮಭಿ ....
ಅನುವ್ರತಃ ಓತುಃ ....
ಜ್ಯಾಯಾ ಪತ್ಯೆ ಮಧುಮತೀಂ ವಾಚೈ ವದತು ಶಂತಿವಾಮ್" (ಪು. ೧. ೩೪-೩೫)

- ಎಂಬ ವಿವಾಹ ಮಂಗಸೂತ್ರಗಳು ಕಾಣಿಸಿಕೊಳ್ಳುತ್ತವೆ. ವಿವಾಹ ಸಂದರ್ಭದಲ್ಲಿ ಇಂದು ನಾವು ಈ ಸೂಕ್ತಗಳನ್ನು ಅರ್ಥದ ಅರಿವಿಲ್ಲದೆಯೇ ಕೇಳಿಸಿಕೊಳ್ಳುತ್ತೇವೆ ಹಾಗೂ ಪುನರುಚ್ಚರಿಸುತ್ತೇವೆ ಎಂಬುದೇನೋ ನಿಜ. ಆದರೆ, ಕಾವ್ಯದಲ್ಲಿಯೂ ಅವು ಹಾಗೆಯೇ ಬರಬೇಕಾದ ಅಗತ್ಯವೇನೂ ಇರುವಂತೆ ತೋರುವುದಿಲ್ಲ - ಅದರಲ್ಲಿಯೂ ಮುಂದೆ (ಎರಡನೆಯ ಸಂಪುಟದಲ್ಲಿ) 'ಮೇನಕೆಯ ಸೋಲು' ಎಂಬ ಸಂಚಿಕೆಯಲ್ಲಿ 'ಋಗ್ವೇದ' ದ ಏಳು ಸೂಕ್ತಗಳು ಅನುವಾದ ಸಹಿತವಾಗಿ ಕಾಣಿಸಿಕೊಳುತ್ತವೆ ಎಂಬುದನ್ನು ಗಮನಿಸಿದಾಗ. ಉದಾಹರಣೆಗೆ,

ಉಷೋ ವಾಜೇನ ವಾಜಿನಿ ಪ್ರಚೇತಾಃ
ಸ್ತೋಮಂ ಜುಷಸ್ವ ಗೃಣತೋ ಮಘೋನಿ।
ಪುರಾಣೀ ದೇವೀ ಯುವತಿಃ ಪುರಂಧಿರನು
ವ್ರತಂ ಚರಸಿ ವಿಶ್ವವಾರೇ॥ (ಪುಟ ೨.೪೮)

- ಎಂಬ ಉಷೆಯನ್ನು ಕುರಿತ ಈ ಸೂಕ್ತವನ್ನು

ಓ ಉಷಾ ! ಶ್ರೀಮಂತೆ, ಮಘವಂತೆ, ಪ್ರಚೇತಸೇ
ನುತಿಸುವವನೀ ಸ್ತೋಮವನ್ನು ಸೇವಿಸಿರು !
ಓ ಪುರಾಣೀ ದೇವೀ, ಯುವತಿ ಬಹು ಧೀಮಂತಿ !
ವಿಶ್ವವರಪ್ರದೆ, ವ್ರತವನನುಚರಿಸು !(ಅಲ್ಲೇ)

ಅನುವಾದ ಸಹಿತವಾಗಿ ಕೊಡುತ್ತಾರೆ. ಇದರ ಅರ್ಥವೇನೆಂದರೆ ಮೂಲವನ್ನು ಬಳಸಿಕೊಳ್ಳುವಲ್ಲಿ ಕವಿ ಯಾವುದೇ ಒಂದು ಶಿಷ್ಟ ಅಥವಾ ಸಾಮಾನ್ಯ ವಿಧಾನವನ್ನು ಅನುಸರಿಸಿಲ್ಲ.

ಹೀಗೆ ಇಡಿಯಾಗಿ ಅಳವಡಿಸಿಕೊಂಡಿರುವ ಭಾಗಗಳಿರುವಂತೆಯೇ, ಅಲ್ಲಲ್ಲಿ ಟೆನಿಸನ್ನನ ಯಾವುದೋ ಒಂದು ಕವಿತೆಯ, ಕೀಟ್ಸ್‌ನ 'Ode on Indolence' ನಂಥ ಕವಿತೆಯ, ಥೋರೋನ 'ವಾಲ್ಡನ್' (Walden) ಎಂಬ ಕಾದಂಬರಿಯ (ಇರುವೆಗಳ ಕಾಳಗ, ಲಾವುಗೆ ಹಕ್ಕಿಯ ಮರಿಯ ಮುಗ್ಧತೆ ಮೊದಲಾದ ಪ್ರಸಂಗಳಿಗೆ ಸಂಬಂಧಿಸಿದಂತೆ) ಮಿಲ್ಟನ್ನನ 'ಪ್ಯಾರಡೈಸ್ ರೀಗೆಯ್ನ್ಡ್'ನ (Paradise Regained) ಸೇಟನ್ನನ ಪ್ರಲೋಭನ ಭಾಗದ, ಖಲೀಲ್ ಗಿಬ್ರಾನನ (ಇದನ್ನು ಕಹಲಿಲ್ ಜಿಬ್ರಾನ್ ಎಂದು ಗೋಕಾಕರು ಉಚ್ಚರಿಸಿದ್ದಾರೆ.) The Prophet ಕೃತಿಯ ವಿಚಾರಸ್ಫುರಣ ಭಾಗದ, ಹೆಮ್ಮಿಂಗ ವೇಯ Old Man and the Sea ಕಾದಂಬರಿಯ ಬದುಕಿನ ಸೆಣಸಾಟದ ಭಾಗದ ಪ್ರಭಾವನ್ನು ಗುರುತಿಸಲು ಸಾಧ್ಯವಾಗುತ್ತದೆ.

ಇದೇ ರೀತಿಯಲ್ಲಿ 'ವಿಸ್ತಣಕಾಂಡ'ದ ವಲಸೆಗಳ ವರ್ಣನೆಗೆ ಕೆಲವು ಪುರಾಣಗಳನ್ನು ಹಾಗೂ ಅಶ್ವಮೇಧದ ವಿವರಗಳಿಗೆ 'ಯಜುರ್ವೇದ'ವನ್ನು ಆಶ್ರಯಿಸಿರುವುದು ಸ್ಪಷ್ಟವೇ ಆಗಿದೆ. 'ಅಶ್ವಮೇಧ' ದ ವರ್ಣನೆಯ ಬಗೆಗೆ ಒಂದು ಅಂಶವನ್ನು ಗಮನಿಸುವದು ಅಗತ್ಯ. ಗೋಕಾಕರೇ ಹೇಳಿರುವಂತೆ, "ಯಾವ ಪ್ರಾಚೀನ ಅಥವಾ ಅರ್ವಾಚೀನ ಕಾವ್ಯದಲ್ಲಾಗಲೀ ಅಶ್ವಮೇಧದ ವರ್ಣನೆ ಬಂದಿಲ್ಲ" ಎಂಬುದು ನಿಜ. ಅಷ್ಟೇ ಅಲ್ಲ, ಅದರ ವರ್ಣನೆ ನಮ್ಮ ಸಂವೇದನೆಗಳನ್ನು ನಿಷ್ಕ್ರಿಯ ಗೊಳಿಸುವಷ್ಟರ ಮಟ್ಟಿಗೆ ನಮ್ಮನ್ನು ದಿಗ್ಭ್ರಮೆಗೊಳಿಸುವಷ್ಟು ಭಯಂಕರವೂ ಬೀಭತ್ಸವೂ ಆಗಿದೆ. ಆ ಸನ್ನಿವೇಶವನ್ನು ಗೋಕಾಕರು ಹೀಗೆ ನಿರೂಪಿಸಿದ್ದಾರೆ : "ಮಹಾರಾಜ್ಞಿ ಕುದುರೆಯೊಡನೆ ಮಲಗುವಳೆಂದು ಸವತಿಯರು ಓಸುಮಾತಾಡುತ್ತಿದ್ದರು. ಹೀಗಾಗಬಾರದೆಂದು ಮಹಾರಾಜ್ಞಿ ಸುದಾಸನೆದುರಿಗೆ. ಆದರೆ ಇನ್ನೊಬ್ಬರ ಮನಸ್ಸನ್ನು ಹೇಗೆ ನಿಯಂತ್ರಿಸಬಹುದೆಂದು ಸುದಾಸನ ಪ್ರಶ್ನೆ. ಆಗ ಸಿಟ್ಟಿಗೆದ್ದು ನಿಮ್ಮ ಹೋಮವೇ ಬೇಡವೆಂದಳು ಮಹಾರಾಜ್ಞಿ. ಮರುದಿನ ವಿಶ್ವಾಮಿತ್ರರು ಬರಬೇಕೆಂದು ನೃಪ ಬಿನ್ನವಿಸಿದನು. ಪಳಬಳಕೆಯಾದ ಈ ಸಂಕೇತ ವಿಧಿಯೊಳಗಿಂದ ಹಾಯುವುದೇ ಒಳಿತೆಂದು ಅವರು ಸಮರ್ಥಿಸಿದರು. ಸುದೇವಿಗೆ ಒಪ್ಪಿಗೆಯಾಯಿತು." ಆ ಮುಂದಿನ ವರ್ಣನೆ ಹೀಗೆ ಬಂದಿದೆ :

ಅಧ್ವರ್ಯು ಅಭಿಮಂತ್ರಿಸುತ್ತಿರಲು, ಹೊರಳಿದಳು
ಅಶ್ವದೆಡೆಗೆ ಸುದೇವಿ, ಒಳಗೊಳಗೆ ನರಳಿದಳು :
ವಿಶ್ವ ಪ್ರಯತ್ನದಲಿ ವೀರಸಾಹಸಗೆಯ್ದು
ಎತ್ತಿದಳು ಕರದಲ್ಲಿ ಅಶ್ವಪೌರುಷವನು
ಎತ್ತಿಟ್ಟಳು ಶೆಫವ ತನ್ನ ತೊಡೆಯಲ್ಲಿ.
ಸಂಭೋಗದಲಿ ಮೃತ್ಯುವನಾಲಿಂಗಿಸುವ ತೆರದಿ :
ಪರಿವೇಷ್ಟಿತಳೊರಗಿದಳು, ನಿಶ್ಚೇಷ್ಟಿತಳಾ ರಾಣಿ
ಮೃತ್ಯುವಿನ ಜೊತೆ ಮೃತ್ಯು ಒರಗುವಂತೆ (ಪು. ೨.೩೫೯)

ಆ ರಾಣಿ ಮಾತ್ರವಲ್ಲ, ಓದುಗರೂ ನಿಶ್ಚೇಷ್ಟಿತರಾಗಿ ಬಿಡುವಂತಿದೆ ಇಲ್ಲಿಯ ಈ ಸುವಾಚ್ಯ ವರ್ಣನೆ. ಅಷ್ಟೇ ಅಲ್ಲ, ಇಂಥ ವರ್ಣನೆ ಬಾರದಿದ್ದರೆ ಸಾಹಿತ್ಯಿಕವಾಗಿ ನಷ್ಟವೇನೂ ಆಗುತ್ತಿರಲಿಲ್ಲ ಎಂಬ ಭಾವನೆಯೂ ಮೂಡಬಹುದಾಗಿದೆ.

'ವಾಲ್ಮೀಕಿ ರಾಮಾಯಣ'ದಲ್ಲಿನ ಶೋಕವನ್ನು ಶ್ಲೋಕವಾಗಿಸಿದ ಕ್ರೌಂಚ ವಧೆಯ ಪ್ರಸಂಗವನ್ನೇ ಹೋಲುವಂಥ ಒಂದು ಸನ್ನಿವೇಶವೂ ಇದರಲ್ಲಿ ಬಂದಿದೆ. 'ಶ್ರೀಸಾಮಾನ್ಯನಕ್ಷಿ' ಯಾದ ಕಪಿಂಜಲ ಪಕ್ಷಿಯ ಸನ್ನಿವೇಶ ಅದು. ಗಾಯಗೊಂಡ ಆ ಪಕ್ಷಿಯನ್ನು ನೋಡಿ ಕರುಣಾಪೂರಿತರಾದ ವಿಶ್ವಾಮಿತ್ರರು ಮರಣ ಶಯ್ಯೆಯಿಂದ ಎದ್ದು ತಮ್ಮ 'ವಿಶ್ವಮೈತ್ರಿ'ಯನ್ನು ಅದರಲ್ಲಿ ತುಂಬುತ್ತಾರೆ. ಸಂತಸಗೊಂಡ ಆ ಹಕ್ಕಿ ಮುಗಿಲೆಡೆಗೆ ಹಾರಿಹೋಗುತ್ತದೆ.

ಭೂತ-ವರ್ತಮಾನಗಳನ್ನು ಬೆಸೆಯುವ ತಮ್ಮ ಪ್ರಯತ್ನದ ಅಂಗವಾಗಿ ವಿಶ್ವಾಮಿತ್ರನನ್ನು, ಹೆರಾಕ್ಲೀಜನಿಗೆ ಹೋಲಿಸಿ, ಕ್ರಾಂತದರ್ಶನವನ್ನು ಗ್ರೀಕ್-ರೋಮನ್ ರೀತಿಯಲ್ಲಿ ಹನ್ನೆರಡು ರಾಶಿಗಳ ಸಂಕ್ರಮಣವೆಂಬಂತೆ ನಿರೂಪಿಸಿರುವದು ಅಷ್ಟೇನೂ ಅಸಂಗತವೆಂದು ತೋರದಿರಬಹುದು. ಆದರೆ, 'ಅದಿತಿ ಮಂಡಲ'ವನ್ನು - ಅಂದರೆ, ಅರವಿಂದರ 'Super-mind' ಅನುಭವ-ವನ್ನು ಶೋಧಿಸಿದ ಅಯಾಸ್ಯನನ್ನು ಮತ್ತು ಅವನ ಸಪ್ತ ಶೋಧಕರನ್ನು, ಮಹೋಪಮೆಯ ಅಂಗವಾಗಿಯೇ ಆದರೂ, ವ್ಯಾಸ್ಕೋ ದ ಗಾಮ ಮತ್ತು ಅವನ ಅನುಯಾಯಿಗಳಿಗೆ ಹೋಲಿಸುವದು ಅಷ್ಟಾಗಿ ಉಚಿತವೆನ್ನಿಸುವದಿಲ್ಲ. (ಇದೇ ತಿರುವುಮರುವಾಗಿ - ಅಂದರೆ, ವ್ಯಾಸ್ಕೋ ದ ಗಾಮ ಮತ್ತು ಅವನ ಅನುಯಾಯಿಗಳ ಸಾಧನೆಯ ವರ್ಣನೆಯ ಅಂಗವಾಗಿ, ಬೇರೆಡೆಯಲ್ಲಿ, ಅಯಾಸ್ಯನ ಶೋಧನೆ ಮಹೋಪಮೆಯಾಗಿ ಬಳಕೆಯಾಗಬಹುದು). ಏಕೆಂದರೆ, ಇದು ಕಾಲದೋಷವೂ ಆಗಿಬಿಡುತ್ತದೆ. ಅಂತೆಯೇ, ಯಮಿ ತನ್ನ ವಾದಕ್ಕೆ ಪಾಂಡವ-ಕೌರವರ ನಿದರ್ಶನವನ್ನು ಒಡ್ಡುವ ವಿಚಾರವೂ. ವೇದಯುಗದಿಂದ ಕೆಲವು ಸಾವಿರ ವರ್ಷಗಳ ತರುವಾಯವಷ್ಟೇ ಪಾಂಡವ -ಕೌರವರ ಇತಿಹಾಸದ ಕಾಲ ಆರಂಭಗೊಳ್ಳುವದು.

ಹೀಗೆಂದ ಮಾತ್ರಕ್ಕೆ 'ಭಾರತ ಸಿಂಧುರಶ್ಮಿ'ಯಲ್ಲಿ ಮೌಲಿಕ ಕಲ್ಪನೆಗಳಾಗಲೀ, ಆಧುನಿಕ ಯುಗಕ್ಕೆ ಸಹಜವಾಗಿ ಅನ್ವಯಗೊಳ್ಳುವಂಥ ಕಾಲಾತೀತ ಚಿಂತನೆಗಳಾಗಲೀ, ಇದಕ್ಕೆ ಅನುಗುಣವಾದ ವಿವೇಚನೆ ಮತ್ತು ದರ್ಶನಗಳಾಗಲೀ ಇಲ್ಲವೆಂದೇನೂ ಅಲ್ಲ. ಮೂಲವನ್ನು ಅವರು ಅನುವಾದವೇ ಅಲ್ಲವೆಂಬಂತೆ ಬಳಸಿಕೊಳ್ಳಬಲ್ಲರು. ತಮ್ಮ ವ್ಯಾಪಕವೂ ಅಗಾಧವೂ ಆದ ಅಧ್ಯಯನವನ್ನು ಅವರು ಹಿತಮಿತವಾಗಿ ಧಾರೆಯೆರೆಯಬಲ್ಲರು. ತಮ್ಮ ಚಿಂತನೆಯ ಹೊಸತನವನ್ನೂ ಮೆರೆಯಬಲ್ಲರು. ನೆಲದ ಆಳದ ಸಾರವನ್ನು ಹೀರಿ ಬೆಳೆದು ನಿಲ್ಲುವ ಮಹಾವೃಕ್ಷವೂ ಆಗಬಲ್ಲರು. ಉದಾಹರಣೆಗೆ, ಯಮ-ಯಮಿ ಸಂವಾದವನ್ನು ಅಥವಾ ವಿಶ್ವಾಮಿತ್ರಪ್ರಸಂಗವನ್ನು ಅಥವಾ ಮನುವಿನ ಪ್ರಸಂಗವನ್ನು ತೆಗೆದುಕೊಳ್ಳಬಹುದು.

ಸಾಮಾನ್ಯವಾಗಿ ಪ್ರಾಚೀನ ಮಹಾಕಾವ್ಯಗಳ ಬಗ್ಗೆ ಅಥವಾ ಪ್ರಾಚೀನ ವಸ್ತುವನ್ನೊಳಗೊಂಡಿರುವ ಮಹಾಕಾವ್ಯಗಳ ಬಗ್ಗೆ ಎತ್ತಲಾಗುವ ಒಂದು ಸಿದ್ಧ ಪ್ರಶ್ನೆ ಎಂದರೆ, ಅದು ನಮ್ಮ ಯುಗಕ್ಕೆ ಎಷ್ಟರ ಮಟ್ಟಿಗೆ ಪ್ರಸ್ತುತವಾಗಿದೆ, ಸಂಗತವಾಗಿದೆ ಎಂಬುದು. ಹೀಗಾಗಿ, 'ಭಾರತಸಿಂಧುರಶ್ಮಿ'ಯ ಬಗ್ಗೆಯೂ ಇಂಥ ಪ್ರಶ್ನೆ ಏಳಬಹುದಾಗಿದೆ. ಈ ಕಾವ್ಯ ನಮ್ಮ ಇಂದಿನ ಸವಾಲುಗಳಿಗೆ ಯಾವ ರೀತಿಯಲ್ಲಿ ಸ್ಪಂದಿಸುತ್ತದೆ ಎಂಬುದನ್ನು ಈಗ ಪರಿಶೀಲಿಸಬಹುದು. ಯಾವ ಒಂದು ಕೃತಿ ತನ್ನಲ್ಲಿ ಚಿರಂತನ ಮೌಲ್ಯಗಳನ್ನು ಸಮಾವೇಶಗೊಳಿಸಿಕೊಂಡಿದ್ದು, ತನ್ನ ಕಾಲದ

ಜನಸಮುದಾಯಗಳಿಗೆ ಮಾತ್ರವಲ್ಲದೆ, ಮುಂಬರುವ ತಲೆಮಾರುಗಳಿಗೂ ಅನ್ವಯವಾಗುವಂಥ ಸಂದೇಶಗಳನ್ನು ಒಳಗೊಂಡಿರುತ್ತದೆಯೋ, ದೇಶ-ಕಾಲ-ಭಾಷೆಗಳ ಉಪಹತಿಯನ್ನು ಅಥವಾ ನಿರ್ಬಂಧಗಳನ್ನು ಮೀರಿ ಸಾರ್ವತ್ರಿಕ ಗೌರವಾದರಗಳಿಗೆ ಪಾತ್ರವಾಗುವಂಥ ಸತ್ವದಿಂದ ಸಮನ್ವಿತವಾಗಿರುತ್ತದೆಯೋ, ಯಾವುದರೊಡನೆ ಒಂದು ರಾಷ್ಟ್ರದ ಅಥವಾ ಜನಾಂಗದ ಸಂಸ್ಕೃತಿ ಅಭಿನ್ನವಾಗಿ ಪರಿಣಮಿಸುತ್ತದೆಯೋ ಅಂಥ ಕೃತಿಯನ್ನು ನಾವು 'ಪ್ರಸ್ತುತ' ಎಂದು ಭಾವಿಸಬಹುದು. ಅಂಥ ಕೃತಿ ಪ್ರತಿಯೊಂದು ಜನಾಂಗಕ್ಕೂ ತಲೆಮಾರಿಗೂ ನಿತ್ಯನೂತನವಾದ ಸಂದೇಶವನ್ನು ನೀಡುತ್ತಿರುತ್ತದೆ. ಇದು ವ್ಯಕ್ತಿಯ ಜೀವನಕ್ಕೆ ಹೇಗೋ ರಾಷ್ಟ್ರ ಜೀವನಕ್ಕೂ ಹಾಗೆಯೇ ಅನ್ವಯಿಸುತ್ತದೆ. ಆಯಾ ಯುಗದ ಸಂವೇದನಾ ಶಕ್ತಿಗೆ ಅನುಗುಣವಾಗಿ ಒಂದು ಯುಗಕ್ಕಿಂತ ಇನ್ನೊಂದು ಯುಗ ಹೆಚ್ಚಿನ ಅರ್ಥವನ್ನು ಕಂಡುಕೊಳ್ಳಬಹುದು. ಒಂದು ಯುಗಕ್ಕೆ ಅಸ್ಪಷ್ಟವಾಗಿ ತೋರಿದ್ದು ಇನ್ನೊಂದು ಯುಗಕ್ಕೆ ಸುಸ್ಪಷ್ಟವಾಗಿ ತೋರಬಹುದು. ವ್ಯತ್ಯಾಸ ಇಷ್ಟೆ. ಆದರೆ, ಸಂದೇಶವನ್ನು ಗ್ರಹಿಸುವ ಮನೋಧರ್ಮವನ್ನು ಹೊಂದಿರುವ ಯಾವುದೇ ರಾಷ್ಟ್ರ ಯಾವುದೇ ಯುಗದಲ್ಲಿ ಅದರ ಸಂದೇಶದಿಂದ ವಂಚಿತವಾಗಿ ಉಳಿಯುವದಿಲ್ಲ. ಅಮೂಲ್ಯವಾದ ಪ್ರಾಚೀನ ಕಲಾಕೃತಿಗಳ ಮೇಲೆ ಕವಿದು ಕೊಂಡಿರುವ ಧೂಳನ್ನು ತೊಡೆದು, ಅವು ಮತ್ತೆ ಕಣ್ಮನಗಳನ್ನು ಸೆಳೆಯುವಂತೆ, ಬೆಳಗಿಸುವಂತೆ ಮಾಡುವ ರೀತಿಯಲ್ಲಿಯೇ, ಪ್ರಾಚೀನ ಸಂಸ್ಕೃತಿ ಮತ್ತು ಮೌಲ್ಯಗಳನ್ನು ಅನಾವರಣಗೊಳಿಸುವ ಮಹತ್ಕೃತಿಗಳ ವೈಶಿಷ್ಟ್ಯವನ್ನು ಕೆಲವೊಮ್ಮೆ ಸಾರಿ ಹೇಳಬೇಕಾಗುತ್ತದೆ. ನಮ್ಮ ಕಾಲದ ಮಹಾದುರಂತದ ಅಂತೆಯೇ ವಿಷಾದದ ಸಂಗತಿಯೆಂದರೆ ಅಭಿರುಚಿಯ ಅಧಃಪತನ. ಅದನ್ನು ಮತ್ತೆ ಉದ್ಧರಿಸಬೇಕಾಗಿದೆ, ತಿದ್ದಬೇಕಾಗಿದೆ. ಇಲ್ಲವಾದರೆ ನಾಡಿಗೆ ಕಂಡ ಹಾಗೂ ಕಾಣದ ರೀತಿಗಳಲ್ಲಿ ಸಾಂಸ್ಕೃತಿಕವಾಗಿ, ಸಾಹಿತ್ಯಿಕವಾಗಿ ನಷ್ಟವಾಗುತ್ತಲೇ ಇರುತ್ತದೆ ; ನಾಡಿನ ಜೀವನಕ್ಕೆ ಗೆದ್ದಲ ಹತ್ತುತ್ತಲೇ ಇರುತ್ತದೆ. 'ಭಾರತ ಸಿಂಧುರಶ್ಮಿ'ಯಂಥ ಮಹಾಕೃತಿಗಳ ಅಧ್ಯಯನ ನಮ್ಮ ಬಾಳಿಗೆ ಅಗತ್ಯವೆಂದೇನೂ ಬಹು ಜನರು ಭಾವಿಸಲ್ಲದೆ ಇರುವದರಿಂದ, ಬಾಳಿನ ಗಹನತಮ ಅರ್ಥವೇ ನಮ್ಮ ಕೈಗೆ ನಿಲುಕಲಾರ-ದಂತಾಗಿಬಿಟ್ಟಿದೆ. ಇದರ ಪರಿಣಾಮವಾಗಿ, ರಾಬರ್ಟ ಪುಟನ್ನಾಮ ಹೇಳಿರುವಂತೆ, ಪ್ರತಿಭೆಗೆ ಬಹಿಷ್ಕಾರದ ಭಯವೂ, ಮಹತ್ಕೃತಿಗಳಿಗೆ 'ಜೀವಂತ ಮರಣ' ದ ಅಥವಾ ಜೀವನ್-ಮೃತಾವಸ್ಥೆಯ ಅಪಾಯವೂ ಒದಗಿದೆ (Genius is threatned with banishment and the classics with a living death). ಹೀಗಾಗದಂತೆ, ಅಭಿರುಚಿಯನ್ನು ಪರಿಷ್ಕರಿಸಲು ನಮಗಿರುವ ವಿಧಾನಗಳಾದರೂ ಯಾವವು ? ಶ್ರದ್ಧಾಪೂರ್ಣ ಸಾಹಿತ್ಯಿಕ ಚಟುವಟಿಕೆಗಳ ಮೂಲಕ ಬಹುಶಃ ಒಂದು ಆಂದೋಳನವನ್ನೇ ನಡೆಸಬೇಕಾಗಿ ಬರುತ್ತದೆ. ಇಲ್ಲವಾದರೆ ನಮ್ಮ ಬಾಳನ್ನು ತುಂಬಿ ನಿಲ್ಲಬೇಕಾಗಿರುವಂಥ ಜ್ಯೋತಿಯೇ ನಮ್ಮ ಪಾಲಿಗೆ ಇಲ್ಲದಂತಾಗಿ

ಬಿಡುತ್ತದೆ. ಇಂದಿನ ಹಾಗೂ ಮುಂದಿನ ತಲೆಮಾರುಗಳಿಗೆ ಹಿಂದಿನ ಅನೇಕ ತಲೆಮಾರುಗಳ ಅನುಭವಗಳಿಂದ ದೊರೆಯಬಹುದಾಗಿರುವ ಐತಿಹಾಸಿಕ, ಸಾಮಾಜಿಕ, ರಾಜಕೀಯ ಮತ್ತು ಆಧ್ಯಾತ್ಮಿಕ ಪಾಠಗಳು ಅಥವಾ ನೀತಿಗಳು ಇಲ್ಲದಂತಾಗಿ ಬಿಡುತ್ತವೆ. ಆದ್ದರಿಂದ, ಇಂಥ ಮಹತ್ಕೃತಿಗಳತ್ತ ತುರ್ತಾಗಿ ಹಾಗೂ ತೀವ್ರವಾಗಿ ನಾವು ಗಮನ ಹರಿಸುವದು ಅಗತ್ಯವೇ ಆಗಿ ಪರಿಣಮಿಸುತ್ತದೆ. 'ಭಾರತ ಸಿಂಧುರಶ್ಮಿ' ಯಂಥ ಒಂದು ಕಾವ್ಯ, ನಮ್ಮ ಬಾಳನ್ನು ಎಷ್ಟರಮಟ್ಟಿಗೆ ಆವರಿಸಿ ಕೊಳ್ಳಬಹುದು, ಎಷ್ಟರ ಮಟ್ಟಿಗೆ ಅದು ನಮ್ಮ ಪಾಲಿಗೆ ಅರ್ಥಪೂರ್ಣವಾಗಬಲ್ಲದು ಎಂಬುದರ ಆಧಾರದ ಮೇಲೆ ಅದರ ಪ್ರಸ್ತುತತೆಯನ್ನು ನಾವು ಒರೆಹಚ್ಚಿ ನೋಡಬಹುದಾಗಿದೆ ; ಈ ಹಿನ್ನೆಲೆಯಲ್ಲಿ 'ಭಾರತಸಿಂಧುರಶ್ಮಿ' ನಮಗೆ ಏನನ್ನು ಕೊಡಬಲ್ಲುದಾಗಿದೆ ಎಂಬುದನ್ನೂ ತಿಳಿದುಕೊಳ್ಳಬಹುದಾಗಿದೆ.

ನಮಗೆಲ್ಲ ತಿಳಿದಿರುವಂತೆ, ಭಾರತ ಬಹುಜನಾಂಗಗಳ ಬಹು ಭಾಷೆಗಳ ಮತ್ತು ಬಹು ಸಂಸ್ಕೃತಿಗಳ ನಾಡು. ಸಂಪರ್ಕ-ಸಂಘರ್ಷ ಮತ್ತು ಸಮನ್ವಯಗಳ ಪ್ರಕ್ರಿಯೆಯ ಮೂಲಕ ಹಾಯ್ದು ಬಂದು ಅದು ತನ್ನದೇ ಆದ ಸಂಶ್ಲೇಷಿತ ರೂಪವನ್ನು ಪಡೆದುಕೊಂಡಿದೆಯಷ್ಟೆ. ನಮ್ಮ ನಾಡಿನ ಆ ಸಾಮಾಸಿಕ ಸಂಸ್ಕೃತಿ ಯನ್ನು ಗೋಕಾಕರು ಹೀಗೆ ನಿರೂಪಿಸಿದ್ದಾರೆ. :

ಜನಾಂಗಗಳೆರಡು ಆರ್ಯ-ದಸ್ಯುಗಳೆಂದು
ಸಂಗ್ರಾಮಿಸುತ ಮುಂದೆ ಸಂಗಮಿಸಿರುವ ಕೈವಾಡ !
ಪವಾಡ ಕಥನವಿದು, ಮೂಲ ಸಂಸ್ಕೃತಿ ಮಥನ !
ಮಾನವ ಕುಲದೈಕ್ಯತೆಗೆ ವೀಳ್ಯವೆತ್ತಿದ ನಾಡು,
ವರಚೇತನದ ಬೀಡು ! ಸಂಘಟಿಸಿದವಿಲ್ಲಿ
ಜಾನಪದಗಳು ನೂರು ; ಅಗಣಿತ ರಾಜವಂಶಗಳು
ಸಂಗಟ್ಟಿಸಿದುವು ; ಮಲೆತವು ಮುಂದೆ ಕಲೆತವೀ
ನೆಲದಿ ನಾನಾ ವರ್ಣ, ನಾನಾ ರೀತಿ-ನೀತಿಗಳು !
ಸಂಕೀರ್ಣ ಪೂರ್ಣತೆಯ ಜಗಲಿ ಅಹುದೀ ನಾಡು. (ಪುಟ ೧. xxv)

ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಈ ಸಾಮಾಜಿಕ ಸಂಸ್ಕೃತಿಯ ಹಲವು ಮುಖಗಳು ಒಂದಲ್ಲ ಒಂದು ರೂಪದಲ್ಲಿ ನಮ್ಮ ಗಮನಕ್ಕೆ ಬರುತ್ತಲೇ ಇರುತ್ತವೆ, ಆದರೆ ಸಮಸ್ಯೆ ಇರುದುದು ಅದರ ಅರಿವಿನಲ್ಲಲ್ಲ, ನಮ್ಮನ್ನು ಹಗಲಿರುಳೂ ಕಾಡುವಂತೆ ಬೆಳೆದು ನಿಲ್ಲುತ್ತಿರುವ ವಿಕೃತಿಯಲ್ಲಿ. ಇದಕ್ಕೆ ಪ್ರೇರಕವಾಗಿರುವ, ಪೋಷಕವಾಗಿರುವ ಸಂಗತಿಗಳು ಹಲವಿವೆ. ಈ ಕಾರಣದಿಂದಾಗಿಯೇ ಇದು ನಮ್ಮ ಹಿರಿಮೆಯ ಸಂಗತಿಯಾಗಿ ಮಾತ್ರ ಉಳಿಯದೆ, ನಮ್ಮ ದೊಡ್ಡ ದೌರ್ಬಲ್ಯದ ಸಂಗತಿಯೂ ಆಗಿಬಿಟ್ಟಿದೆ. ಇದು ನಿಜಕ್ಕೂ ನಮ್ಮ ದುರ್ದೈವ. ಏಕೆಂದರೆ ಆ ಮೂಲಕ ಹಲವು ಬಗೆಯ ಶೋಷಣೆಗಳಿಗೆ ಎಡೆ ದೊರೆತಿದೆ. ಇದರ

ಪರಿಣಾಮವಾಗಿ, ವಸ್ತುಸ್ಥಿತಿ ವಿಕೃತಗೊಂಡು ಏನೆಲ್ಲ ಆಗಿಬಿಟ್ಟಿದೆ ಎಂಬುದನ್ನು ಅವರು ಚೆನ್ನಾಗಿಯೇ ವಿಶ್ಲೇಷಿಸಿದ್ದಾರೆ. ಅವರ ದೃಷ್ಟಿ ಎಷ್ಟು ನಿಚ್ಚಳವಾಗಿದೆ, ವಿಶ್ಲೇಷಣೆ ಎಷ್ಟು ಆಳವಾಗಿದೆ ಎಂಬುದಕ್ಕೆ ಈ ನಿರೂಪಣೆ ಸಾಕ್ಷ್ಯವನ್ನು ಒದಗಿಸುತ್ತದೆ :

....ಗುಣದಂತೆ ವರ್ಣ, ಜನ್ಮದೊಲಲ್ಲ.
ನೈಸರ್ಗಿಕ ಸಿದ್ಧಿಯಾಯ್ತು ಚಾತುರ್ವರ್ಣ್ಯ.
ಕಾಲ ಸಾಗರದಿ ಯುಗಯುಗದ ತಲೆಮಾರುಗಳು
ಮಂಥಿಸುತ ಪಡೆದಿಹವು ರತ್ನನಾಯಕಗಳನು.
ನಮ್ಮ ದುರದೃಷ್ಟ : ರತ್ನಾಕರದೊಳುಗಮಿಸಿದೆ
ಉರುಳಿ ಶತಮಾನಗಳು, ಕಾಲಕೂಟದ ವಿಷವು.
ಅಲ್ಲವು ಗುಣನಿರ್ಣಿತ ; ವರ್ಣವು ಜನ್ಮ ನಿರ್ಣೀತ.
ಓ ಚತುರ್ ದಿಶೆಗಳಲಿ ಹಬ್ಬಿಹವು ವಿಷಜ್ವಾಲೆ.
ಒಂದೊಂದು ವರ್ಣದಲಿ ಅಡಗಿಹವು ಚಾತುರ್ವರ್ಣ್ಯ. (ಪುಟ ೧. xviii)

* * *

ಗೊಮ್ಮಟರನ್ನ ಕಂಡಿಲ್ಲ ; ನೀಲಕಂಠನ ನಿಲುವು
ಅಗೋಚರವೆಂದು. ಇಂದ್ರಿಯಾಕರ್ಷಣೆಗೆ
ಬಲಿಯಾಗಿ ವಾರಿಧಿಯ ಬರುಗನೆ ಅಮೃತವೆಂದೆಣಿಸಿ
ಬೊಗಸೆ ತುಂಬಲು ಕುಡಿವ ಜಾಣರೆಲ್ಲಡಗಿಹರು,
ಫೇನ ಕ್ಷಣದೊಳು ಕ್ಷಾರ ಜಲವೆಂಬುದನು ಮರೆತು. (ಪು. ೧. xviii)

"ಒಂದೊಂದು ವರ್ಣದಲ್ಲಿಯೂ ಚಾತುರ್ವರ್ಣ್ಯ ಅಡಗಿದೆ" ಎಂಬ ಮೂಲಭೂತ ಸತ್ಯವನ್ನು ಉದ್ಘೋಷಿಸುವ ಈ ವಿಶ್ಲೇಷಣೆಯ ಹಿಂದೆ ಅಡಗಿರುವ ಕವಿಯ ಮನಸ್ಸಿನ ಆಳದ ನೋವನ್ನು ನಾವು ಸುಲಭವಾಗಿಯೂ ಗುರುತಿಸಬಹುದಾಗಿದೆ. ವಿಕೃತಿಯ ವಿಷಜ್ವಾಲೆಯನ್ನು ಅಡಗಿಸದೆ ಹೋದರೆ ವಿನಾಶ ಶತಃಸಿದ್ಧ ಎಂಬುದೂ ಸ್ಪಷ್ಟವಿದೆ. ಹಾಗಾಗದೆ ಇರಬೇಕಾದರೆ, ನಾವು ಅನುಸರಿಸಬೇಕಾದ ಮಾರ್ಗೋಪಾಯಗಳು ಯಾವವು? ಯಾವ ಧ್ಯೇಯ-ಧೋರಣೆಗಳು ನಮ್ಮ ಬಾಳನ್ನು ನಡೆಸಬೇಕು ? ಯಾವ ಆದರ್ಶಗಳನ್ನು ನಾವು ನೆಚ್ಚಿ ನಡೆಯಬೇಕು ? ಯಾವ ಮುನ್ನೋಟ ಮತ್ತು ದೂರದೃಷ್ಟಿ ನಮಗೆ ಅಗತ್ಯ - ಈ ಎಲ್ಲ ಸಮಸ್ಯೆಗಳ ಬಗ್ಗೆಯೂ ಅವರು ಆಳವಾಗಿ ಆಲೋಚಿಸಿ, ಒಂದು ತೀರ್ಮಾನಕ್ಕೆ ಬಂದಿದ್ದಾರೆ. ಮಾನವ ಅನಂತದ ಅರ್ಚಕನಾಗಬೇಕು ಎಂಬುದೇ ಆ ಪರಿಹಾರ. ಇದನ್ನು ಅವರು ಹೀಗೆ ನಿರೂಪಿಸಿದ್ದಾರೆ :

ಬಹುದೇಶದರ್ಶಿ ನೀನಿರು ಧರಾವಲಯದಲಿ,
ಬಹುಕಲ್ಪ, ಬಹುಕಲ್ಯಾಣ : ಕೂಪದ ಪಾಟಿಯಾಗುವರೆ ?
ಎಲ್ಲವಡಗಿಹವು ಭೂಗರ್ಭದಾಳಗಳಲ್ಲಿ
ಅಗಿವ ಮನವಿರೆ, ವಜ್ರಗಣಿಯು, ಬಂಗಾರಗಣಿ.
ಧನ್ಯನೆನ್ನಿಸಬಲ್ಲ ಖನ್ಯ ತೈಲದ ಬಾವಿ.
ಅಲೆವುದಿರೆ, - ಖಂಡಗಳ ದಾಟುವಿ ರಯುಲು ಪಯಣದಲಿ !
ಮಹಾನದಿಗಳ ಸೇತುಬಂಧನಗಳು ಸೋತು
ಹಿಂದುಳಿಯುವವು ಪರ್ವತಶ್ರೇಣಿ ಸರಿಯುವವು ;
ಸಿಳ್ಳು ಹಾಕುತ ಓಡಲೆಂಜಿನ್ ಗಾಡಿ ಮೇಲೇರಿ
ಅಧೋಮುಖಿಗಳಾಗುತ್ತ ಪೆಚ್ಚುಬಡೆವವು ಶೃಂಗ.

ಸಮುದ್ರಯಾನವಿದೆ : ಜ್ಞೇಯ ಭೂಮಿಯ ತೊರೆದು
ಅಜ್ಞೇಯ ಅಂಭಸ್ಸಿನಲಿ ಹಡಗು ಹೊಯ್ದಾಡಿ
ಸಾಹಸಿಯನೊಯ್ಯುವುದು ಮಾಣಿಕ್ಯ ದೀಪಗಳ
ಶೋಧನಗೆ, ತ್ರಿಲೋಕ ಸುಂದರಿಯರಿದ್ದೆಡೆಗೆ.

* * *

ಬಾನೆತ್ತರ ನೆಗೆವ ವಿಮಾನಯಾನವಿದೆ ;
ಹಾಹಾ ಹೂಹೂಗಳ ಗಂಧರ್ವರ ನಾಡುಗಳ
ಕಡೆಗಣಿಸಿ, ಕ್ಷಿಪಣಿಯನೇರಿ, ಚಂದ್ರಲೋಕವ ಸೇರಿ,
ಚಂದ್ರಶಿಲೆ ಸಂಗ್ರಹಿಸಿ ಮರಳಬಹುದೀ ಧರೆಗೆ

* * *

ಅನಂತದರ್ಶಕನಾಗು ! ಬುಧನುಪಾಸಕನಾಗು ! (ಪುಟ ೧. xxx-i)

ಈ ಆದರ್ಶ ಅವ್ಯಾವಹಾರಿಕವಾದುದೂ ಅಲ್ಲ, ನಮ್ಮ ಕೈಅಳವಿಗೆ ಮೀರುವಂಥದೂ ಅಲ್ಲ. ಆದ್ದರಿಂದ ಅದನ್ನು ವಾಸ್ತವಿಕತೆಯ ನೆಲೆಯಲ್ಲಿ ಸಾಕ್ಷಾತ್ಕರಿಸಿಕೊಳ್ಳಲು ಸಾಧ್ಯ. ಹಾಗಾದಾಗ ನಮ್ಮ ಸಾಧನೆಯನ್ನು ನೋಡಿ, ಲೋಕವೇ ನಿಬ್ಬೆರಗಾಗಿ ನಿಲ್ಲುವಂತಾಗುತ್ತದೆ. ಹೀಗೆ, ಮಾನವ ಅನಂತ ಮುಖಿಯೂ, ಅನಂತಯಾತ್ರಿಯೂ ಆಗಿಬಿಟ್ಟಾಗ, ಇಂದ್ರಾದಿ ದೇವತೆಗಳೆಲ್ಲ ಕರುಬಿ ಹೀಗೆಂದು ಉದ್ಗರಿಸುವಂತಾಗುತ್ತದೆ :

ಸ್ವರ್ಲೋಕದಂತಿದು ನಿಂತ ನೀರಲ್ಲ !
ವಿಕಸನದ ದಾರಿಯನು ತುಳಿವ ಮಾನವ ಬಂದ !
ಅವನಿಗಿದೆ ಸುಖ ಮಿಗಿಲು, ದುಃಖವದಕೂ ಮಿಗಿಲು !
ಸಾವುನೋವಿನ ಬಲೆ, ಅದರಾಚೆಗಿನ ನೆಲೆ !

ಅನ್ನಮಯದಿಂದೆದ್ದು ಆನಂದಮಯದವರೆಗೆ
ಹಬ್ಬಿಹುದು ಮಾನವನ ಕರುಳುಬಳ್ಳಿಯ ಬಳೆಯು !

ಅಮೂರ್ತವಾದ, ಭಾವನಾತ್ಮಕವಾದ ವಿಚಾರಲಹರಿಗಳಲ್ಲಿ ಮಾತ್ರವೇ ಈ ಕವಿ ವಿಹರಿಸುತ್ತಾರೆ ಎಂದಲ್ಲ. ರಾಷ್ಟ್ರಜೀವನದಲ್ಲಿ ನೀತಿಯ ನಿಷ್ಠುರ ನೆಲಗಟ್ಟು ಸ್ಥಾಪಿತವಾಗಬೇಕೆಂಬ ಹಬ್ಬಯಕೆಯೂ ಅವರಲ್ಲಿದೆ. ಆದುದರಿಂದಲೇ ಮದ್ಯಪಾನದ ಚಟದ ದುರಂತ ಪರಿಣಾಮಗಳನ್ನು - ಅದರಲ್ಲಿಯೂ ಬೀದಿಬೀದಿಗೆ ಬಂದಿರುವ ಬಾರುಗಳ, ಮದ್ಯದಂಗಡಿಗಳ ಹಿನ್ನಲೆಯಲ್ಲಿ - ಅವರು ಸಮರ್ಪಕವಾಗಿ ವಿಶ್ಲೇಷಿಸುತ್ತಾರೆ. ತ್ರಿಶಂಕು ಮಧು ಸೋಮವನ್ನು ಸವಿಯುವ ಸಮಯದಲ್ಲಿ ವಿಶ್ವರಥವನ್ನು ಹೀಗೆಂದು ಪ್ರಶ್ನಿಸುತ್ತಾನೆ :

.....ಏತಕೆ ನೀವು
ಬಹಿಷ್ಕರಿಸಿಹಿರಿ ಸುರೆಯ ನಿಮ್ಮ ಪೇಯಗಳಿಂದ ?
ಅನನ್ಯವಹುದು ಸುರೆಯಿಂದ ಬಹ ತನ್ಮಯತೆ.

ಇದಕ್ಕೆ ಉತ್ತರವಾಗಿ ವಿಶ್ವರಥ ಹೇಳುತ್ತಾನೆ :

ತನ್ಮಯತೆ ಏನೆಂಬುದನು
ಮೊದಲು ನಿರ್ಣಯಿಸೋಣ ರಸಾತಳ-ಪಾತಾಳ
ಉಪಪ್ರಜ್ಞೆ-ಅಪ್ರಜ್ಞೆ ಲೋಕಗಳನೊಳಹೊಕ್ಕು
ಇರುವ ಪ್ರಜ್ಞಾಶೂನ್ಯಸ್ಥಿತಿಯ ತನ್ಮಯತೆಯನೆ
ಸುರೆಯು ತಾನಹುದಃಮೃತ ....
ಸುರಾಪಾನವಲ್ಲ ; ಧ್ಯಾನವು ನೈಜ ತನ್ಮಯತೆ.

* * *

ಭೋಗವನು ಬೆಂಬತ್ತಿ ಬಹುದು ಭೀಕರ ರೋಗ.
ತಾರುಣ್ಯದಲಿ ತಲೆದೋರುವದು ವೃದ್ಧಾಪ್ಯ.
ಎತ್ತಿ ಕೊಳ್ಳುವದು ಮರಣ ಸಹಜದಲಿ ಹಣ್ಣೆಲೆಯ ;
ಕಿತ್ತುಕೊಳುವದು, ಪರ್ಣವನು ಹಚ್ಚಹಸಿರಿರಲು.
ಭೋಗಕಿದೆ ಬಾಳು ಎಂದೂರೆದು ಮರೆದ ನರ
ಒಂದು ದಿನ ಬಿದ್ದು ನರಳುವ ಬಾಳಿನಡಿಯಲ್ಲಿ. (ಪುಟ ೧. ೪೫೧-೨)

ಭ್ರಷ್ಟಾಚಾರ, ನಮ್ಮ ಸಮಾಜವನ್ನು ಬಹಳ ಹಿಂದಿನಿಂದಲೂ ಕಾಡುತ್ತ ಬಂದಿರುವ ಒಂದು ಪಿಡುಗು. ಅದರ ಬಹುಮುಖಗಳನ್ನು, ಆಳ-ಅಗಲಗಳನ್ನು ಕಂಡು ಇಡೀ ಸಮಾಜವೇ ತತ್ತರಿಸುವಂತಾಗಿಬಿಟ್ಟಿದೆ. ನಮ್ಮ ಈ ನೈತಿಕ ಅಧಃಪತನ, ಎಲ್ಲ ಕ್ಷೇತ್ರಗಳ ಮೇಲೂ ತನ್ನ ದುರಂತ ಪರಿಣಾಮವನ್ನು ಬೀರತೊಡಗಿದೆ. ನಮ್ಮ ಸಮಾಜದ ತಾಯಿಬೇರಿಗೇ ಗೆದ್ದಲಿನಂತೆ ಹತ್ತಿಕೊಂಡಿರುವ ಈ ಪಿಡುಗಿನ

ನಿವಾರಣೆಯ ಬಗ್ಗೆಯೂ ಗೋಕಾಕರು ಈ ಕಾವ್ಯದಲ್ಲಿ ಗಮನಹರಿಸಿದ್ದಾರೆ. ಹಾಗೂ ಅದಕ್ಕೆ ಒಂದು ಪರಿಹಾರವನ್ನು - ಬಹುಶಃ ಅದಕ್ಕಿರುವ ಏಕೈಕ ಪರಿಹಾರವನ್ನು ಸೂಚಿಯೂ ಇದ್ದಾರೆ ಎಂಬುದು ಮುಖ್ಯವಾದ ಸಂಗತಿ. ಜಯಂತ ಮತ್ತು ರೇಭರ ನಡುವಣ ಮಾತುಕತೆಗಳಲ್ಲಿ ಈ ವಿಚಾರ ಕಾಣಿಸಿಕೊಳ್ಳುತ್ತದೆ. ತನ್ನ ಸ್ನೇಹಿತನಾದ ರೇಭನನ್ನು ಜಯಂತ ಹೀಗೆಂದು ಪ್ರಶ್ನಿಸುತ್ತಾನೆ. :

ಅಧಿಕಾರ ಮದವು, ಐಸಿರಿಯು ಮೋಹವು ಬೆಳೆದು
ಅಳಿಗಾಲ ಹಣಿಕ್ಕಿತ್ತು. ವಾರಾಂಗನೆಯಾಯ್ತು
ವ್ಯಾಪಾರ . . . ಉನ್ನತ ಅಧಿಕಾರಿಯನು ಶಾಸಕ ಕೊಳ್ಳುವನು ಕ್ರಯಕೆ.
. . . . . ತಾಳ ತಪ್ಪಿದೆ ಜನವು,.
ಕೀಲುತಪ್ಪಿಹುದೀಗ ಆಡಳಿತ ಯಂತ್ರ,
ಶಾಸಕರ ಕೈಗೊಂಬೆ ಇಹರು ಮನ್ನೆಯರೆಲ್ಲ.
ಅಡಿಯಿಂದ ಮುಡಿವರೆಗೆ ರಾಜ್ಯತಂತ್ರಕ್ರಮದಿ,
ಪಂಚಾರಕರಿಂದ ಆಪ್ತಸಚಿವರು ಮತ್ತೆ
ವಿಚಾರಕರವರೆಗೆ ಉತ್ಕೋಚ ಗ್ರಹಣವಿದೆ !
ಲವಣವೆ ಕಳೆದುಕೊಂಡಿಹುದು ತನ್ನ ಲಾವಣ್ಯವನು.
. . . . . ಸಾಧ್ಯಾಸಾಧ್ಯವ ತಿಳಿಸ ! (ಪುಟ ೨. ೬೮೦-೧)

ಈ ವಿವರಣೆಯನ್ನು ನೋಡಿದರೆ ಗೋಕಾಕರ ಸೂಕ್ಷ್ಮದೃಷ್ಟಿ - ಇಂದಿನ ಭ್ರಷ್ಟಾಚಾರದ ವ್ಯಾಪಕತೆಯನ್ನು ನೋಡಿದರೆ, 'ಸೂಕ್ಷ್ಮ ದೃಷ್ಟಿ' ಎಂಬ ಪದದ ಬಳಕೆಯೂ ಬಹುಶಃ ಅರ್ಥಹೀನವಾಗುತ್ತದೆ ! ಎಷ್ಟು ವಿಶದವಾಗಿ ಇದನ್ನು ಗಮನಿಸಿದೆ ಹಾಗೂ ಎಷ್ಟು ಯಥಾರ್ಥರೂಪದಲ್ಲಿ ಈ ವಿಕೃತಿಯನ್ನೇ ಪ್ರತಿಬಿಂಬಿಸಿದೆ ಎಂಬ ಅರಿವು ನಮಗಾಗದೆ ಇರದು. ಆದ್ದರಿಂದ, ಇದಕ್ಕೆ ಉತ್ತರವಾಗಿ ರೇಭನ ಮೂಲಕ ಅವರು ಮುಂದಿರಿಸುವ ಪರಿಹಾರ ಇದು :

ಇದು ಪುರಾತನ ವ್ಯಾಧಿ !
ಪುರಾತನೋಪಾಯ ಲಭ್ಯವಿವೆ ರೋಗಿಯನು
ಬದುಕಿಸುವ ಮಾನವಿರಲು, ಬೇಕು ಉಚಿತ ಉಪಾಯ.

* * *

ಸತ್ಯವಾಹನರಾದ ನಿಃಸ್ಪೃಹ ವ್ಯಕ್ತಿಗಳನಾಯ್ದು
ವಿಚಾರಕರಾಗಿಸುತ ಎಲ್ಲ ಭ್ರಷ್ಟಾಚಾರ
ತಲೆದಂಡಕಹುದರ್ಹವೆಂದು ಡಂಗುರ ಹೊಯಿಸಿ
ಹಲವಾರು ಭ್ರಷ್ಟ ತಮರನು ದಂಡಿಸಬೇಕು.

* * *

ಭಂಡರಾಗಿಹ ಜನಕೆ ಶಿಕ್ಷೆ ವಿಧಿಸಿರಬೇಕು ......
ಉತ್ಕೋಚಗ್ರಾಹಕರಾರು
ಪರೀಕ್ಷಣಾಂತ್ಯದಲಿ ನಿರ್ಣಯಿಸಿ,
ಪದಚ್ಯುತಿಗೊಳಿಸಿ, ಮಾನ್ಯರನಾ ಸ್ಥಾನಕ್ಕೆ ಗಯ್ಯಿರಬೇಕು.
ಅಲ್ಪಾವಧಿಯಲಿಂತು ಪಾವನತರವಹುದು ಸಭೆ
ವಿಶುದ್ಧವಹವು ಸಮಿತಿ, ಅಧಿಕಾರವಲಯಗಳು. (ಪು. ೬೮೦-೧)

ಹೀಗೆ ವಿಧ್ಯಾತ್ಮಕವಾದ ಪರಿಹಾರಗಳನ್ನು ಸೂಚಿಸುವುದಷ್ಟೇ ಅಲ್ಲ, ಬಾಳು ಮಂಗಳದ ಮನೆಯಾಗಬೇಕಾದರೆ ಅನುಸರಿಸಬೇಕಾದ ವ್ಯಯಕ್ತಿಕ ಶೀಲ-ಸಂಯಮಗಳ ಆದರ್ಶವೇನೆಂಬುದನ್ನೂ ಅವರು ಮನಮುಟ್ಟುವಂತೆ ವಿವರಿಸಿದ್ದಾರೆ :

ಕಾಮಾತುರರ ತುರ್ತಿಗೆಲ್ಲ ವಾಮಾಚಾರ
ಒಳ್ಳೆ ಶಿಷ್ಟಾಚಾರನೆಂದೆನಿಸಿಕೊಳ್ಳುವದು.
ಕಾಮವ ತೊರೆದ ಸನ್ಯಾಸ ಬರಿ ಪಲಾಯನವಾದ.
ಅನಂತ ಸೌಂದರ್ಯದನರ್ಘ್ಯ ಪುತ್ಥಳಿಯೆಂದು,
ಸ್ತ್ರೀತ್ವದ ಸನ್ನಿಧಿಯೆಂದು ದೈವ ತಮಗಿತ್ತಿರುವ
ಅಂಗನೆಯೊಡನೆ ಬಾಳಿ ಸ್ತ್ರೀಜಾತಿಯಸಂಖ್ಯಾತ
ದೃಷ್ಟಾಂತಗಳ ಕಾಣಲವಳ ಅಂಗಾಂಗದಲಿ,
ಅವಳಂತರಂಗದಲಿ, ಕೇಂದ್ರೀಕರಿಸಿ ಕಾಮ
ಒಂದು ಸ್ತ್ರೀ ದೇಹದಲಿ, ಮತ್ತೆ ಬಿತ್ತರಗೊಂಡು
ಮನ-ಬುದ್ಧಿ-ಆತ್ಮ -ಹೃದಯಕೆ, ಪ್ರೇಮವಾಗುವುದು.
ಅಹುದು ಗಾರ್ಹಸ್ಥ್ಯ ಪ್ರೇಮವು ಪ್ರದೀಪವು ಗೃಹಕೆ,
ಉನ್ನಯನ ಮಾರ್ಗದಲಿ ಮಂಗಲಕರ ಜ್ಯೋತಿ.
ಅದನು ಪಡೆವಾಸೆಯಿರೆ ಜೀವನವು ಪಾವನವು. (ಪು. ೧. ೪೫೭-೮)

ಕಾಣದ ಶಕ್ತಿಯೊಂದು ಅವತರಿಸಿಬಂದು ನಮ್ಮನ್ನು ಕಾಪಾಡುವುದೆಂಬ ಭ್ರಮೆಯಲ್ಲಿ ವಿಹರಿಸುತ್ತ, ಕರ್ತವ್ಯಚ್ಯುತವಾದ ಜನಸಮುದಾಯ, ತನ್ನದೆಲ್ಲವನ್ನೂ ಕಳೆದುಕೊಂಡು ಆತ್ಮಾಭಿಮಾನವಿಲ್ಲದಿರುವಂಥ ಗುಲಾಮ ರಾಷ್ಟ್ರವಾಗುವುದು ಅನಿವಾರ್ಯವಾಗುತ್ತದೆ ಎಂಬುದಕ್ಕೆ ನಮ್ಮ ನಾಡಿನ ಇತಿಹಾಸವೇ ಸಾಕ್ಷಿಯಾಗಿದೆ. ಹೀಗಾಗಿ ನಾಡಿನ ವಿಷಯದಲ್ಲಿ ನಮ್ಮ ಕರ್ತವ್ಯವೇನೆಂಬ ಅರಿವನ್ನುಂಟು ಮಾಡವುದು ಕವಿಯ ಸಾಮಾಜಿಕ ಕರ್ತವ್ಯಗಳಲ್ಲೊಂದಾಗಿರುತ್ತದೆ. ಆದ್ದರಿಂದಲೇ ನಾಡಿಗೆ ವಿಪತ್ತೆರಗಿದಾಗ ಕರ್ತವ್ಯಪ್ರಜ್ಞೆಯನ್ನು ಎಚ್ಚರಿಸಿ, ಆತ್ಮಾರ್ಪಣೆಗೂ ಸಿದ್ಧವಾಗಬೇಕಾದ ಅಗತ್ಯವನ್ನು ಗೋಕಾಕರು ಹೀಗೆ ಸಾರಿ ಹೇಳುತ್ತಾರೆ :

ಅಂಜುವವರು ರಣಹೇಡಿಗಳು ಮರಣದಾಗಮನಕೆ.

* * *

ಏರಿಬಂದಿಹ ರಾಕ್ಷಸರನು ತುಂಡರಿಸೋಣ !
ಕಡಿಮೆಯಿರೆ ಭೂಭಾರ ಹಿಗ್ಗುವಳು ಭೂದೇವಿ.
ಕೈಅಳತೆಯಲಿ ಬಂದ ರಕ್ಕಸರ-ಮೈಯಿಳಿಸಿ,
ನರಕದೊಳು ನುಗಿಸಿ, ಆಗಸೆಯ ಬಾಗಿಲೊಳಗಿರಿಸಿ
ಅವರ ರುಂಡವ ನಾವು ಕಂಡೆಡೆಗೆ ಚೆಂಡಾಡಿ,
ಬಳಿಕ ನಿದ್ರಿಸೋಣ ಚಿರವೀರನಿದ್ರೆಯಲಿ (ಪು ೧. ೫೨೭)

ಉಡುಗೆ-ತೊಡುಗೆಗಳ ಮೂಲೋದ್ದೇಶ ಸಂಪೂರ್ಣವಾಗಿ ಮರೆಯಾಗಿ-ಬಿಟ್ಟು, ನಗರ ಜೀವನದಲ್ಲಿ ನಾಟಕೀಯತೆಗೆ, ಬೂಟಾಟಿಕೆಗೆ ಮತ್ತು ಮುಖ ನೋಡಿ ಮಣೆ ಹಾಕುವ ಪ್ರವೃತ್ತಿಗೆ ಎಡದೊರೆತಿರುವುದನ್ನು ಗೋಕಾಕರು ಚೆನ್ನಾಗಿಯೇ ವಿಡಂಬಿಸಿದ್ದಾರೆ. ಮಹಿಷ್ಮಂತನಿಗೆ ವಿಶ್ವರಥ ಹೀಗೆನ್ನುತ್ತಾನೆ. :

ಒಳಗಿರುವ ವೈಶ್ವಾನರ ಕಾವ ಕಾವುದಕೆ
ಮತ್ತೆ ನಗ್ನತೆಯಳಿಯಲಹುದು ಬಟ್ಟೆಯ ಬಳಕೆ.
ನಗರದಲಿ ಹಾಗಲ್ಲ. ವ್ಯಕ್ತಿ ಬಳಸುವ ಅರಳೆ,
ಉಣ್ಣೆ, ರೇಶಿಮೆಯಿಂದ ಅವನ ಗುಣವನಳೆಯುವರು. (ಪುಟ ೨.೪)

ಅಂತೆಯೇ ಸಚಿವರ ಸಮಾರಂಭಕ್ಕೆಂದೇ ಗಿಡಗಳನ್ನು ಕಡಿದು ತಂದು ನೆಟ್ಟು ಹಸಿರಿನ ಭ್ರಮಾಲೋಕ ಸೃಷ್ಟಿಸುವದನ್ನು ಕಾಣುತ್ತಿರುವ ಈ ದಿನಗಳಲ್ಲಿ ವಿಶ್ವರಥನ ಈ ಮಾತು ನಮ್ಮ ಕಣ್ಣನ್ನು ಖಂಡಿತವಾಗಿಯೂ ತೆರೆಸಬಲ್ಲದು. ಕೊಡಲಿಯಿಂದ ಕಡಿದು, ಸೀಳಿ ಮಲಗಿಸಿದ್ದ ನೀಳ ಶಾಲ್ಮಲಖದಿರ ಕಾಂಡಗಳನ್ನು ಕಂಡ ವಿಶ್ವರಥನು ಮಹಿಷ್ಮಂತನನ್ನು ಕೇಳುತ್ತಾನೆ. :

ನಿಂತಲ್ಲೆ ನಿದ್ರಿಸುವ
ನಿರಪರಾಧಿ ದ್ರುಮವ ತರಿದೊಟ್ಟಿರುವುದೇಕೆ ?

ಆಗ ಬೆದರುತ್ತ ಮಹಿಷ್ಮಂತನೆನ್ನುತ್ತಾನೆ :

ಗವಿಯ ಮುಂದಲೆಗೊಂದು ಮಂಟಪವ ಜೋಡಿಸಲು
ಪ್ರಭುಗಳಿಗೆ ಸಂಜೆ ಮುಂಜಾವಿನ ಸುಖಾಸನಕೆ
ಹಿತವೆಂದು ಬಗೆದಿಹೆನು.

ಮಾರ್ಮಿಕವಾಗಿ ವಿಶ್ವರಥ ಹೇಳುತ್ತಾನೆ :

ತಪಕೆಂದು ಬಂದು ವೇಳೆಯನೆಲ್ಲ
ಸೆರೆಮನೆಯ ಕಟ್ಟಿಕೊಳ್ಳುವದರಲ್ಲಿ ಕಳೆಯುವುದೆ ?

ನಗರವಾಸಿಗಳು ನಿರ್ಮಿಸಿಕೊಳಲಿ ತಮಗೆಂದು
ಜೀವಿಗಳ ಗೋರಿಗಳ, ಚಳಿ-ಗಾಳಿ-ಮಳೆಗೆಂದು
ಬೇಕೆನಲು ಮನ, ಕೂರ್ವಕವಚವನು ಬೆಳೆದಂತೆ.
ಮನಕಟ್ಟಿಕೊಳಲಿ ಮಾನವ ತಾನು ....
ಬಾಳಲೆಂದಿಲ್ಲಿ ಬಂದವು. ಕೀಳಲೆಂದಲ್ಲ.
ಖಿಮಿತಕಾಗಿ ಬಂದೆವಿಲ್ಲಿಗೆ. (ಪು. ೨. ೪-೫)

" ತನ್ನ ಯುಗದ ಪರಿಸರವನ್ನು ಚಿತ್ರಿಸುವದು ಮಹಾಕಾವ್ಯದ ಮುಖ್ಯ ಲಕ್ಷಣಗಳಲ್ಲಿ ಒಂದಾಗಿದೆ" (ಪು. ೭೫೨) ಎಂದು ಗೋಕಾಕರು ಹೇಳಿರುವ ಮಾತು, ಕೇವಲ ಉಪದೇಶಾತ್ಮಕವಾದ ಹೇಳಿಕೆಯಾಗಿ ಉಳಿದಿಲ್ಲ. ಈ ಯುಗಪ್ರಜ್ಞೆಯನ್ನು ಅವರು ಹಲವು ಹತ್ತುರೂಪಗಳಲ್ಲಿ ಮೆರೆದಿದ್ದಾರೆ ; ವಿಶ್ವಾಮಿತ್ರರ ವಿಶ್ವಮೈತ್ರಿಯ ಕಾರ್ಯದಲ್ಲಿ ಆದಿವಾಸಿಗಳ ಸಂಸ್ಕೃತೀಕರಣದ ವಿಷಯದಲ್ಲಿ, ಹಿಂದುಳಿದ ಬುಡಕಟ್ಟುಗಳ ಬಗೆಗಿನ ಪ್ರಶ್ನೆಯಲ್ಲಿ, ಯುದ್ಧಗಳ ಪರಿಹಾರದ ಸಮಸ್ಯೆಯಲ್ಲಿ, ಭೋಜ್ಯಪೇಯಗಳ ಬಗೆಗಿನ ಚರ್ಚೆಯಲ್ಲಿ, ದೇವತೆಗಳ ವರ್ಣನೆಯಲ್ಲಿ, ವಾಮದೇವರ ಭೂಸಂಚಾರದ ಸಂದರ್ಭದಲ್ಲಿ - ಹೀಗೆ ಅನೇಕ ಬಗೆಗಳಲ್ಲಿ ಅದು ಮೈದಳೆದಿದೆ. ಈ ಎಲ್ಲ ತತ್ತ್ವೋಪದೇಶಗಳು ಹೊರಗಿನಿಂದ ತಂದು ಹಾಕಿದಂಥ-ವಾಗಿರದೆ, ಸಹಜವಾಗಿ ಆಯಾ ಸಂದರ್ಭಗಳಲ್ಲಿ ಮೂಡಿ ಬಂದಂಥವಾಗಿವೆ. ನಮ್ಮ ಇಂದಿನ ಸಮಸ್ಯೆಗಳಿಗೆ ಸೂಕ್ತ ರೀತಿಯಲ್ಲಿ ಸ್ಪಂದಿಸಬಲ್ಲಂಥ ಅಂತಸ್ಸತ್ವ ವನ್ನುಳ್ಳಂಥವಾಗಿವೆ. ಹಾಗೂ ಈ ಮಹಾಕೃತಿಯ ಪ್ರಸ್ತುತತೆಗೆ ಅಸಂದಿಗ್ಧ ಸಾಕ್ಷ್ಯವನ್ನು ನುಡಿಯುವಂಥವಾಗಿವೆ.

'ರಾಮಾಯಣ-ಮಹಾಭಾರತ'ಗಳ ಕಾಡುಗಳಲ್ಲೇ ತೊಳಲಾಡುತ್ತಿದ್ದ ಭಾರತೀಯರನ್ನು -ವಿಶೇಷವಾಗಿ ಕನ್ನಡಿಗರನ್ನು-ವೇದಕಾಲೀನ ಸಂಸ್ಕೃತಿಯ ಉತ್ತುಂಗ ಶಿಖರಕ್ಕೆ ಕೊಂಡೊಯ್ದು, ಆ ಸಂಸ್ಕೃತಿಯ ಮುಖಕ್ಕೆ ಕವಿದ ಪರದೆಯನ್ನು ಸರಿಸಿದ, ಅಷ್ಟೇ ಅಲ್ಲ, ಅದನ್ನು ನಮ್ಮ ಇಂದಿನ ಬಾಳುವೆಗೆ ಪೋಷಕವಾಗಿ, ಪೂರಕವಾಗಿ, ಪ್ರೇರಕವಾಗಿ ಹಾಗೂ ಪ್ರಸ್ತುತವಾಗಿ ಉಳಿಯುವಂತೆ ಮಾಡಿದ ವಿನಾಯಕರಿಗೆ ನಮ್ಮ ನಮನಗಳು ಸಲ್ಲುತ್ತವೆ. ಇದು ಈ ಯುಗಕ್ಕೆ ಅವರು ನೀಡಿರುವ ಅಪೂರ್ವ ಕಾಣಿಕೆ. ಅದನ್ನು ಅರ್ಥವತ್ತಾಗಿ ನಮ್ಮದಾಗಿಸಿಕೊಳ್ಳುವ ಸೌಭಾಗ್ಯ ನಮ್ಮದಾಗಲಿ.

❑ ❑

ಗೋಕಾಕ : ನವ್ಯಕಾವ್ಯ

- ಬುದ್ಧಣ್ಣ ಹಿಂಗಮಿರೆ

ಎಜ್ರಾ ಪೌಂಡ್, ಎಲಿಯಟ್, ಯೇಟ್ಸ್ ಮುಂತಾದವರು ಇಂಗ್ಲೀಷ್ ರೋಮ್ಯಾಂಟಿಕ್ ಕಾವ್ಯಮಾರ್ಗವನ್ನು ಬದಲಿಸಿ, ಅದನ್ನು ನವ್ಯಮಾರ್ಗದತ್ತ ಕೊಂಡೊಯ್ದರು. ಕನ್ನಡದ ಮಟ್ಟಿಗೆ ಪರಿಸ್ಥಿತಿ ಭಿನ್ನವಾಗಿತ್ತು. ಅಂಥ ನವ್ಯಮಾರ್ಗ ಕನ್ನಡದಲ್ಲಿ ಪ್ರಸ್ಥಾಪಿತವಾಗಬೇಕೆಂಬ ಆಶಯದಿಂದ ಗೋಕಾಕರು ಹಲವು ರೀತಿಯಿಂದ ಶ್ರಮಿಸಿದರು. ರೋಮ್ಯಾಂಟಿಕ್ ಕಾವ್ಯದ ಇತಿಮಿತಿಗಳನ್ನು ಅರ್ಥೈಸಿಕೊಂಡ ಅವರು ನವ್ಯಕಾವ್ಯದ ಅಗತ್ಯತೆಯನ್ನು ಒತ್ತಿ ಹೇಳಿದರು. ಎಲ್ಲಾ ಹಂತಗಳಲ್ಲಿ ನವ್ಯಕಾವ್ಯದ ಸಿದ್ಧತೆಯ ಕುರಿತು, ಪ್ರಾದುರ್ಭಾವದ ಕುರಿತು, ಪ್ರಯೋಗದ ಕುರಿತು ತಮ್ಮ ಖಚಿತ ಅಭಿಪ್ರಾಯಗಳನ್ನು ಮಂಡಿಸಿದರಲ್ಲದೆ ಸ್ವತಃ ಅಂಥ ಪ್ರಯೋಗವನ್ನು ಆರಂಭಿಸಿ, ಹಲವು ಕವಿಗಳನ್ನು ನವ್ಯಮಾರ್ಗದತ್ತ ಆಕರ್ಷಿಸಿದರು.

ಕನ್ನಡದಲ್ಲಿ ನವ್ಯಕಾವ್ಯದ ಅಗತ್ಯತೆಯ ಕುರಿತ ನಿರ್ದಿಷ್ಟ ಕಲ್ಪನೆಯನ್ನು ನೀಡಿ, ಪ್ರಯೋಗಕ್ಕೆಂದು "ನವ್ಯಕವಿತೆಗಳು" ಹೆಸರಿನ ರಚನೆಗಳನ್ನು ನೀಡಿದರು. ನವ್ಯಕವಿತೆಗಳು ಹೆಸರೇ ಸೂಚಿಸುವಂತೆ, ನವ್ಯ ಅವರ ಮನಸ್ಸು ಹಿಡಿದಿರುವದನ್ನು ಸಹಜವಾಗಿಯೇ ಗುರ್ತಿಸಬಹುದು. ಕವಿತೆಗಳು ಇಡಿಯಾಗಿ ನವ್ಯಕ್ಕೆ ಉದಾಹರಣೆಗಳಾಗದೆ ಹೋಗಬಹುದು. ಆದರೆ ಅವು ನವ್ಯದ ಹೆಜ್ಜೆಗುರುತುಗಳನ್ನು, ಹೊಳಹನ್ನು ನಿರ್ದೇಶಿಸುವ ಮಾದರಿಯ ಪ್ರಯೋಗಗಳಾಗಿ, ಕನ್ನಡ ಕಾವ್ಯದಲ್ಲಿ ಐತಿಹಾಸಿಕ ದಾಖಲೆಗಳಾಗಿ ನಿಲ್ಲುತ್ತವೆ.

ಹೆಮ್ಮೂಗು, ಕ್ಲೋರೋಫಾರ್ಮ್, ಹಲವಳಿ, ಮಧ್ಯಾಹ್ನ, ಕಾಲ-ಕವಿ, ಶೂನ್ಯ, ದ್ವಂದ್ವಲಾಯರ ಗತ್ತು, ದುಃಸ್ವಪ್ನ –ಈ ಏಳೆಂಟು ಕವಿತೆಗಳಲ್ಲಿ ನವ್ಯದ ಪ್ರಾದುರ್ಭಾವವನ್ನು ಅವಲೋಕಿಸಬಹುದು. ಇವುಗಳಲ್ಲಿ ಕ್ಲೋರೋಫಾರ್ಮ್, ಹಲವಳಿ, ಕಾಲ-ಕವಿ ಮತ್ತು ದುಃಸ್ವಪ್ನ –ಈ ಕವಿತೆಗಳು ನವ್ಯದ ಅಧ್ಯಯನದ ದೃಷ್ಟಿಯಿಂದ ಅತ್ಯಂತ ಗಮನಾರ್ಹ ರಚನೆಗಳಾಗಿವೆ.

'ಇದು ಕಸ್ತೂರಿ ಇದು ಪುನುಗು
ಇದರ ವಾಸನೆ ನೋಡು
ಇದು ಅತ್ತರು ಇದು ನೆತ್ತರು'

ಎಂದು ಆರಂಭವಾಗುವ 'ಹೆಮ್ಮೂಗು' ಗಮನ ಸೆಳೆಯುತ್ತ, ಕುತೂಹಲ ಹುಟ್ಟಿಸುತ್ತ, ವಸ್ತು ವಿಷಯಗಳೊಂದಿಗೆ ಹೆಮ್ಮೂಗು ಬೆಳೆಯುತ್ತ ಹೋಗುತ್ತದೆ.

'ವಿಲಕ್ಷಣ ವಿಚಿತ್ರ ಕಂಪುಗಳ ಧರ್ಮಶಾಲೆ ನಿನ್ನ ನಾಸಿಕವಾಗಲಿ'

ರೊಮ್ಯಾಂಟಿಕ್ ಬರವಣಿಗೆಯಲ್ಲಿ ಮುಳುಗಿದವರನ್ನು ಎಚ್ಚರಿಸುವ ಭಾವವೂ ಇಲ್ಲಿದೆ. ಅದೇ ಅದೇ ಕಂಪುಗಳಿಗೆ ಮಾರುಹೋದ, ಆಕರ್ಷಿತರಾದ ಕವಿಗಳನ್ನು ಉದ್ದೇಶಿಸಿ, 'ವಿಲಕ್ಷಣ ಹಾಗೂ ವಿಚಿತ್ರ ಕಂಪು'ಗಳನ್ನು ಆಘ್ರಾಣಿಸುವ, ಅನುಭವಿಸುವ ಮುಕ್ತಮನಸ್ಸು ಮೂಡಬೇಕೆನ್ನುವ ಆಶಯ ಈ ಮಾತುಗಳಲ್ಲಿ ಅಡಗಿರುವುದನ್ನು ಸೂಕ್ಷ್ಮವಾಗಿ ಗಮನಿಸಬಹುದು.

ನಿನ್ನ ಮೂಗಿಗೆಂದು ತೋಟಗಳಲ್ಲಿ
ಹೂಗಳು ಮಾಳಿಯ ರಕ್ತಾಣುಗಳಂತೆ ಸುರಿದಿವೆ.

ರಮ್ಯ ವಾಸನೆಗಳಿಂದ ಮುಕ್ತವಾಗಿ ನವ್ಯತೆ-ವಿಶಿಷ್ಟತೆಯನ್ನು ಪಡೆದುಕೊಳ್ಳುತ್ತ, ಅದೊಂದು ನವೀನ ರೂಪಕವಾಗಿ, ನವೀನ ಅನುಭವವಾಗಿ ಮನ ಸೆಳೆಯುತ್ತದೆ. ಸೌಂದರ್ಯದ ಬಗೆಗಿದ್ದ ಕಲ್ಪನೆ ಪಲ್ಲಟವಾಗುವದನ್ನು ಇಲ್ಲಿ ಗುರ್ತಿಸಬಹುದು. 'ಹೂಗಳು ಮಾಳಿಯ ರಕ್ತಾಣುಗಳಂತೆ ಸುರಿದಿವೆ' ಎನ್ನುವಲ್ಲಿ, ನವ್ಯದ ಅಭಿವ್ಯಕ್ತಿ ಸಾಧ್ಯವಾಗಿದ್ದು, ಪರಂಪರಾಗತ ಮೂಡನ್ನು ತಲೆಕೆಳಗು ಮಾಡುವುದು. ಸೌಂದರ್ಯದ ಹೋಲಿಕೆಗಳಿಂದ ಮುಕ್ತವಾಗಿರುವ ರೀತಿಗೆ ಇಲ್ಲಿಯ ಅಭಿವ್ಯಕ್ತಿ ನವ್ಯದ ಹೊಳಹನ್ನು ಹಿಡಿದಿಟ್ಟು, ನವೀನ ಅನುಭವದ ರುಚಿಯನ್ನು ತೋರುತ್ತದೆ. ಹೂಗಳಿಗೂ ಮತ್ತು ತೋಟದ ಮಾಳಿಗೂ ಇರುವ ಸಂಬಂಧವನ್ನು ಸೂಚಿಸುವುದರಿಂದ 'ಮಾಳಿಯ ರಕ್ತಾಣುಗಳಂತೆ' ಎನ್ನುವ ಹೋಲಿಕೆ ನವೀನ ಅರ್ಥದ ಪದರು ಬಿಚ್ಚುತ್ತದೆ.ಮಾಳಿ ರಕ್ತ ಸುರಿಸಿ ತೋಟ ಬೆಳೆಸಿದ್ದಾನೆಂಬುದನ್ನು 'ಹೂಗಳು

ಮಾಳಿಯ ರಕ್ತಾಣುಗಳಂತೆ ಸುರಿದಿರುವುದು' ಮೂಲಾರ್ಥವನ್ನು ಹಿಗ್ಗಿಸಲು ಕಾರಣ ವಾಗುತ್ತದೆ. ಮೂಗಿನ ವಿವಿಧ ಕರಾಮತ್ತುಗಳನ್ನು ವಿವರಿಸುತ್ತ

ಐಫೆಲ್ ಟಾವರದ ಹಾಗೆ
ಏಕಮೇವವಾಗಿದೆ ನಿನ್ನ ಮೂಗು.

ಮೂಗು ವಿಶಿಷ್ಟ ಆಕಾರ ಪಡೆದು ನಿಂತು ಚಕಿತಗೊಳಿಸುತ್ತದೆ. ಮೂಗು ವಿಡಂಬಕ ವಸ್ತುವಾಗಿ-ವಿಡಂಬನೆಯ ವಿಶಿಷ್ಟ ಪ್ರಪಂಚವನ್ನು ಕೆದಕುತ್ತ, ಸಿಕ್ಕದ್ದನ್ನೆಲ್ಲ ಅಣಕಿಸುತ್ತ ಅರ್ಥಸೌಷ್ಠವವನ್ನು ಹೆಚ್ಚಿಸುತ್ತದೆ.

ಓ ಮೂಗೆ ! ನಿನ್ನನ್ನು ನೋಡಿ
ಜಗವೆಲ್ಲ ಮೂಗು ಮುರಿಯಿತು
ನಿನಗೆ ಸರಿಯಾದ ಮೂಗುತಿಯಲ್ಲಿ ?

ಜಗವೆಲ್ಲ ಮೂಗುಮುರಿಯಿತು ಎನ್ನುವಲ್ಲಿನ 'ಮೂಗುಮುರಿ' ಮತ್ತು ಮೂಗುತಿ ಇವು ಬಳಕೆ ಭಾಷೆ ಇಲ್ಲವೆ ಆಡುಮಾತಿನ ಅರ್ಥಭಾರವನ್ನು ಹೊತ್ತು ಸಾಂಸ್ಕೃತಿಕ ಅಭಿನಿವೇಶನಕ್ಕೆ ಉದಾಹರಣೆಯಾಗುತ್ತವೆ.

ನಿನಗೆ ಸರಿಯಾದ ಮೂಗುತಿಯಲ್ಲಿ ? ಎನ್ನುವಲ್ಲಿ ಅರ್ಥವ್ಯಂಜಕತೆ ಇರುವುದನ್ನು ಗಮನಿಸಬೇಕು. ಹೆಮ್ಮೂಗಿಗೆ ಸಂದೂರೆಯಾದ ಮೂಗು ತಿಯೇ ಇಲ್ಲ. ಇಂಥ ಮೂಗಿಗೆ ಮೂಗುತಿಯ ಅವಶ್ಯಕತೆಯೂ ಇಲ್ಲವೇನೊ. ಮೂಗು ಇದ್ದರೆ ಮೂಗುತಿ. ಮೂಗು ಇಲ್ಲದಿದ್ದರೆ ಮೂಗುತಿಗೆ ಯಾವ ಮಹತ್ವ ಬಂದೀತು ? ಮೂಗೇ ಮೂಗುತಿಯಾಗಿರುವಾಗ ಸರಿಯಾವ ಮೂಗುತಿ ಎಲ್ಲಿ ಸಿಕ್ಕೀತು ? ಇಂಥ ಮೂಗನ್ನು ನೋಡಿ ಜಗವೆಲ್ಲ ಅಣಕಿಸುವು ದನ್ನು 'ಮೂಗು ಮುರಿಯಿತು' ಸಾರ್ಥಕ ಅರ್ಥವನ್ನು ಸ್ಫುರಿಸುತ್ತದೆ.

ಈ ಕವಿತೆಯನ್ನು ಮೂಸಿನೋಡಿ
ಮೂಗಿನ ಹೊರಳೆಗಳರಳಿದವು.
ಗ್ರಹಣ ಹಿಡಿದ ಘ್ರಾಣೇಂದ್ರಿಯಕ್ಕೆ
ವಿಮೋಚನೆ ಬಂತು.

ಈ ಮಾತುಗಳಲ್ಲಿ ಅಡಗಿರುವ 'ಮೂಡು' ನವೀನ ಅನುಭವವನ್ನು ಸಂಕೇತಿಸುತ್ತದೆ. ಒಂದೇ ಬಗೆಯ ಗಮಗಮಿಸುವ ವಾಸನೆಯನ್ನು ಘ್ರಾಣಿಸಿದ ಜೀವನ್ಮೃತ ಅವಸ್ಥೆ ಇಲ್ಲಿ ವರ್ಣಿತವಾಗಿದೆ.

ಹೊಳ್ಳೆಗಳರಳಿದವು
ಹೊಸ ಅನುಭವ ಬಂತು.

ಸೌಂದರ್ಯಾನುಭವ ಜಿಡ್ಡುಗಟ್ಟಿದಂತೆ ಭಾಸವಾಗಿ, ಕಸಕಸಿ ಹಾಗೂ ತಂಬಾಕುಗಳ ತೀಕ್ಷ್ಣ ಅನುಭವಗಳನ್ನು ಪಡೆಯುವುದಕ್ಕೆ 'ಹೆಮ್ಲಾಗು' ಸಿದ್ಧವಾಗಿರುವುದರ ಸೂಚನೆ ಇಲ್ಲಿದೆ.

ಇಂಥ ಅನುಭವವನ್ನು ಸಂವೇದಿಸಬೇಕೆನ್ನುವ ಛಲ ಗಟ್ಟಿಗೊಂಡಿದೆ. 'ಇದಕ್ಕಾಗಿ ಸತ್ತರೂ ಚಿಂತೆಯಿಲ್ಲ' ಎನ್ನುವ ಭಾವ ಹುಟ್ಟಿ, ಜಗತ್ತಿನಲ್ಲಿರುವ ವೈವಿಧ್ಯವನ್ನು ಅನುಭವಿಸಬೇಕೆನ್ನುವ ಕಾತುರ, ಕುತೂಹಲ ಹುಟ್ಟಿವೆ.

ಹೆಮ್ಲಾಗು ಜಗತ್ತಿನ ವೈವಿಧ್ಯವನ್ನು, ಹೊಸ ಅನುಭವವನ್ನು ಸಂವೇದಿಸುವದರ ಸಂಕೇತವಾಗಿ ಬೆಳೆದು, ಇಡೀ ಪದ್ಯದ ಉದ್ದಕ್ಕೂ ಮೂಗಿನ ಐಫೆಲ್ ಟಾವರದ ಹಾಗೆ ಏಕಮೇವವಾಗಿ ನಿಂತು ಚಕಿತಗೊಳಿಸುತ್ತದೆ. ಹೆಮ್ಲಾಗು ಬೆಳೆಯುವ ವಸ್ತುವಾಗಿ, ಸಂಕೀರ್ಣ ಭಾವಗಳನ್ನು, ವಿವರಗಳನ್ನೊಳಗೊಂಡು ಇಡೀ ಪದ್ಯವನ್ನು ವ್ಯಾಪಿಸಿಬಿಡುತ್ತದೆ. ಹೆಮ್ಲಾಗು ವಿಡಂಬನೆಗೆ ತಕ್ಕ ವಸ್ತುವಾಗಿ, ಸುತ್ತುಮುತ್ತಿನ ಜಗತ್ತನ್ನು ವಿಡಂಬಿಸುವುದರಲ್ಲಿ ಸಮರ್ಥವಾಗಿ ಹೊಸ ಅನುಭವದ ಸ್ಫುರಣೆಗೆ ಸಂಕೇತವಾಗಿ, ಗಮನಾರ್ಹ ಪ್ರಯೋಗವಾಗುತ್ತದೆ.

ಹೆಮ್ಲಾಗು ಪದ್ಯದ ಹಾಗೆಯೇ 'ಕ್ಲೋರೋಫಾರ್ಮ' ಪದ್ಯ ಆಕಾರ ಪಡೆಯುತ್ತ, ನವ್ಯದ ವಾತಾವರಣವನ್ನು ಸೃಷ್ಟಿಸಿಕೊಂಡಿರುವ ಅತ್ಯಂತ ಗಮನಾರ್ಹ ಕವಿತೆ. ಒಂದೊಂದು ಕ್ರಿಯೆಗಳನ್ನು ಬಿಚ್ಚುತ್ತ, ಭಾವಗಳನ್ನು ನಾಟ್ಯೀಕರಿಸ್ಸುತ್ತ ಕ್ಲೋರೋಫಾರ್ಮ ನವ್ಯಪ್ರಯೋಗದ ಸಾಫಲ್ಯವನ್ನು ಸೂಚಿಸುತ್ತದೆ.

ನನ್ನ ಹೆಸರು ಸತ್ಯಶೋಧಕ ಎಂದು
ನನ್ನ ಹೆಸರು ಸೌಂದರ್ಯಾರಾಧಕ ಎಂದು
ಕಲ್ಯಾಣ ಬೋಧಕ ಎಂದು
ಶಕ್ತಿ ಸಾಧಕ ಎಂದು.

ಹೀಗೆ ಕವಿತೆ ಸಹಜವಾಗಿಯೇ ಬೆಳೆಯುತ್ತ, ಆಡುಮಾತನ್ನು ಬಳಸುತ್ತ ಸಂದರ್ಭವನ್ನು ಸೃಷ್ಟಿಸಿಕೊಳ್ಳುತ್ತದೆ.

ದೇಶ ?
ಸತ್ಯಾಗ್ರಹದ ದೇಶ.
ಇನ್ನು ಮುಂದೆ ಶ್ರಮಜೀವಿಗಳ ದೇಶ.

ಇಂಥ ಮಾತುಗಳಲ್ಲಿ ಹುದುಗಿರುವ ವ್ಯಂಜಕತೆ, ಕಾವ್ಯವನ್ನು

ಹೊಸದಿಕ್ಕಿನಲ್ಲಿ ಕೊಂಡೊಯ್ಯಲು ಸಹಾಯಕವಾಗುತ್ತದೆ.

ಸತ್ಯದ ಹೆಸರಿನಲ್ಲಿ
ರಕ್ತದ ಕಾಲುವೆ ಹರಿಸುವೆನೆ?
ಸೌಂದರ್ಯವನ್ನು ಮುಂದೆಮಾಡಿ
ಬೆಂತರಬೂದಿಯನ್ನೂದುವೆನೆ ?

'ಕ್ಲೋರೋಫಾರ್ಮ'ನ ಅನುಭವಕ್ಕೆ ಪಕ್ಕಾದ ಕಾವ್ಯನಾಯಕನ ಮನಃಸ್ಥಿತಿಯ ಬಣ್ಣನೆ, ಈ ಪದ್ಯದಲ್ಲಿ ಹರಡಿಕೊಂಡಿದೆ.

ತುಂಬು ಹಳದಿ ವರ್ತುಲವೊಂದು
ಅಗಲವಾಗಿ ವಿಶ್ವವನ್ನೇ ವ್ಯಾಪಿಸುತ್ತಿದೆ
ಅದರೊಳಗೊಂದು ಬಯಲು
ಬಯಲಿನಲ್ಲಿ ಮಾಂಸಲ ಚೆಂಡೊಂದು ಬಿದ್ದಿದೆ.
ಅದೇ ನಿಮ್ಮ ಮೆದುಳು.

'ಹಳದಿ ವರ್ತುಲ' 'ಮಾಂಸಲ ಚೆಂಡು' 'ಮೆದುಳು' –ಈ ಪದಗಳು ತಿರಿದು ತರುವ ನವ್ಯಾರ್ಥಗಳು ಗಮನಾರ್ಹವಾಗಿವೆ. ರೋಗಿಯ ನಿಶ್ಚೇಷ್ಟಿತ ಸ್ಥಿತಿಯನ್ನು ಯಥಾವತ್ತಾಗಿ ಬಣ್ಣಿಸಿದ, ಚಿತ್ರ ಕಣ್ಮುಂದೆ ಕಟ್ಟುವಂತಿದೆ.

ಜಗತ್ತೇ ರುಗ್ಣಾಲಯವಾಗಿದೆ ಎನ್ನುವ ಮಾತು ಧ್ವನಿಪೂರ್ಣವಾಗಿದ್ದು, ಜಗತ್ತಿನ ಅಸ್ವಸ್ಥ ಹಾಗೂ ತ್ರಸ್ತ ಸ್ಥಿತಿಯನ್ನು ನಿವೇದಿಸುತ್ತದೆ.

ಹೀಗೆ ಕಾಣುವ ಜೀವಜಾತಕ್ಕೆಲ್ಲ ಅಹಮಹಮಿಕೆಯ ಸೂಕ್ಷ್ಮ ರೋಗ ಹಿಡಿದಿದೆ.

ಈ ಕಣ್ಣಿನ ಪರಿಬಿಡಿಸಲು
ಶಸ್ತ್ರಕ್ರಿಯೆಯೇ ದಾರಿ.

ಇದು ಒಬ್ಬ ವ್ಯಕ್ತಿಗೆ ಅಂಟಿಕೊಂಡಿರುವ ರೋಗವಾಗಿರದೆ, ಮಾನವತೆಯನ್ನು ಆವರಿಸಿದೆ. ತಾತ್ಪೂರ್ತಿಕ ಮೃತ್ಯುವಾಗಬೇಕು, ಕ್ಲೋರೋಫಾರ್ಮಿನ ಮತ್ತಿನಲ್ಲಿ ಮುಳುಗಿದಾಗಲೇ ಶಸ್ತ್ರಕ್ರಿಯೆ ಸುಗಮವಾಗಿ ಸಾಗುವದು.

ಕ್ಲೋರೋಫಾರ್ಮ ಇಲ್ಲಿ ಮೃತ್ಯುದಾಯಿನಿ ಅವಿದ್ಯಾಮಾಯೆಯೆಂಬ ದಾಯಿಯಾಗಿ ಅಂಥ ಇಲ್ಲೂಜನ್ ಸೃಷ್ಟಿ ಅನಿವಾರ್ಯವೆಂಬಂತೆ ಕ್ಲೋರೋಫಾರ್ಮ ಹೊಸ ವಾತಾವರಣವನ್ನು ಸೃಷ್ಟಿಸಿಕೊಂಡು ಆಲೋಚನೆಗೆ ತೊಡಗಿಸುತ್ತದೆ.

ಕ್ಲೋರೋಫಾರ್ಮ ಕವಿತೆ ನಾಲ್ಕು ಮುಖ್ಯ ಹಂತಗಳಲ್ಲಿ ಬೆಳೆಯುತ್ತದೆ.

ಒಂದು
ಎರಡು
ಮೂರು !

ಕ್ಲೋರೋಫಾರ್ಮ ಒಂದು ತರಹದ Illusionಗೆ ಸಂಕೇತ. ಪ್ರಜ್ಞೆಯ ಕ್ರಿಯೆಯನ್ನು ಪಲ್ಲಟಗೊಳಿಸುವ ಮಾದಕತೆ ಅದರ ಗುಣ. "ಐದು ಆರು. . . ಹೌದು, ಆರು, ಏಳಲ್ಲ." 'ಏಳಲ್ಲ' ಎನ್ನುವ ಪದದ ಅರ್ಥವನ್ನು ಗಮನಿಸಬೇಕು. ಅದು ಏಳಲಾರದ ಅವಸ್ಥೆಯನ್ನು ಸೂಚಿಸುವದು.

ಪದ್ಯದ ಎರಡನೆಯ ಹಂತದಲ್ಲಿ ದೇಶದ ಪ್ರಸ್ತಾಪವಿದ್ದು, 'ಕೈ ಮೊಸರು ಬಾಯಿ ಕೆಸರು' ತಿರುವು ಮುರುವು ದೇಶದ ಸ್ಥಿತಿಯ ಬಣ್ಣನೆಯಲ್ಲಿ ವಿಡಂಬಕ ದ್ರವ್ಯವೂ ಸೇರಿಕೊಂಡಿದೆ. ಈ ಮಾತುಗಳು ವ್ಯರ್ಥ ಶ್ರಮದ ಪ್ರತೀಕವಾಗಿವೆ. ನೋವು ನಿರಾಶೆಯ ದುರವಸ್ಥೆಯನ್ನು ಧ್ವನಿಸುತ್ತವೆ.

ಸತ್ಯಸಾಧಕ, ಸೌಂದರ್ಯಾರಾಧಕ, ಶಕ್ತಿಸಾಧಕನ ಮನಃಸ್ಥಿತಿ ಪಲ್ಲಟ ಗೊಂಡಿರುವದನ್ನು ಪದ್ಯದ ಮೂರನೆಯ ಹಂತದಲ್ಲಿ ಕಾಣಬಹುದು.

ಸತ್ಯದ ಹೆಸರಿನಲ್ಲಿ
ರಕ್ತದ ಕಾಲುವೆ ಹರಿಸುವೆನೆ ?

ಎನ್ನುವ ಪ್ರಶ್ನೆಯನ್ನೊಡ್ಡಿಕೊಂಡ ನಾಯಕನ ಮನಸ್ಸು ದಿಗಿಲುಗೊಂಡು, ಮತ್ತಿಗೊಳಗಾಗಿ ಈ ತರಹದ ಒಡಂಬಡಿಕೆ ಮುಂದುವರಿಯುತ್ತದೆ.

'ಹೀಗೆಂದ ನಿಮ್ಮನ್ನು ಮೊದಲು ಸುಡಿಸಿ ಕೊಲ್ಲುವೆನು'

ಎನ್ನುವಂತಹ ಹಿಟ್ಲರನ ಭಾಷೆಯನ್ನು ಅವನಾಡುತ್ತಾನೆ. ಅಮಲು ಒಮ್ಮೊಮ್ಮೆ ಮನಸ್ಸಿನಲ್ಲಿ ಬಚ್ಚಿಟ್ಟ ಸತ್ಯಗಳನ್ನು ಹೊರಗೆಡಹಬಹುದು ಎನ್ನುವದಕ್ಕೆ ಈ ಪದ್ಯವೊಂದು ಒಳ್ಳೆಯ ಉದಾಹರಣೆಯಾಗುತ್ತದೆ. ಮದುಳಿನ ಮೇಲೆ ಮೋಡಿ ಮಾಡಲು ಸಿದ್ಧವಾಗಿರುವ ಕ್ಲೋರೋಫಾರ್ಮ ಹತ್ತಿರ ನಿಂತಿರುವ ಅವಿದ್ಯಾಮಾಯೆ, ದೈವವೆಂಬ ಶಸ್ತ್ರಜ್ಞನ ಶಸ್ತ್ರಕ್ರಿಯೆ- ಹೀಗೆ ಜಗತ್ತು ರುಗ್ಣಾಲಯವಾಗಿರುವದನ್ನು ಪದ್ಯದ ಕೊನೆಯ ಹಂತ ಸೂಚಿಸುತ್ತದೆ. ರೋಗದ ಪರೀಕ್ಷೆಯು ನಡೆದು 'ಜೀವಜಾತಕ್ಕೆಲ್ಲ ಅಹಮಹಮಿಕೆಯ ಸೂಕ್ಷ್ಮ ರೋಗ ಹಿಡಿದು, ಕಣ್ಣಿನ ಪರಿ ಬಿಡಿಸಲು ಶಸ್ತ್ರಕ್ರಿಯೆಯೇ ದಾರಿಯಾಗುತ್ತದೆ.

ತಾತ್ಕಾಲಿಕ ಮೃತ್ಯುವನ್ನು ತರುವ ಅವಿದ್ಯಾಮಾಯೆಯೆಂಬ ದಾಯಿ

ಅಲ್ಲಿಯೇ ನಿಂತಿದ್ದಾಳೆ.

ಹೀಗೆ ಕ್ಲೋರೋಫಾರ್ಮ ಪದ್ಯ, ತ್ರಸ್ತ ಹಾಗೂ ಸೂಕ್ಷ್ಮರೋಗಕ್ಕೆ ತುತ್ತಾದ ಸ್ಥಿತಿಯನ್ನು ಸಂಕೇತಿಸುತ್ತದೆ. ಇಲ್ಲಿ ಅನ್ಯದೇಶೀಯ ಮಿಥ್‌ಗಳ ಬಳಕೆ ಇರದೆ, ನಮ್ಮ ದೇಶದ ಮಿಥ್ ಬಳಸಿಕೊಳ್ಳುವ ಹವಣಿಕೆಯಿರುವುದನ್ನು ಗುರ್ತಿಸಬಹುದು.

'ಅವಿದ್ಯಾಮಾಯೆಯೆಂಬ ದಾಯಿ'
'ದೈವವೆಂಬ ಶಸ್ತ್ರಜ್ಞ'
'ಅಹಮಹಮಿಕೆಯ ಸೂಕ್ಷ್ಮರೋಗ'

ಇವು ಈ ಮಾತುಗಳಾಗಿ ಕವಿತೆಯನ್ನು ಹೊಸ ಅರ್ಥದಲ್ಲಿ ಪರಿಭಾವಿಸುವು ದಕ್ಕೆ ದಾರಿಮಾಡಿಕೊಡುತ್ತವೆ. ಈ ಪದ್ಯದ ಮಧ್ಯಂತರದಲ್ಲಿ

ಶಕ್ತಿಯ ಉಪಾಸಕನಾಗಿ ಅಸುರರ ಪದವಿಯನ್ನು ಮೀರಿದನೆ ?

ಎನ್ನುವ ಮಾತಿನಲ್ಲಿ, ಮನುಷ್ಯ ಹದ್ದುಮೀರಿ ವರ್ತಿಸಿದ್ದರ ಸೂಚನೆಯಿದ್ದು, ಕಣ್ಣಿಗೆ ಅಜ್ಞಾನದ ಪರಿ ಕವಿದು ತನ್ನ ಚಟುವಟಿಕೆಗಳ ಮೊತ್ತ ತನಗೆ ಕಾಣುವುದಿಲ್ಲ. ಸೂಕ್ಷ್ಮರೋಗ ಹಿಡಿದು ನರಳುತ್ತಿರುವಾಗಲೇ ಒಂದಿಷ್ಟು ಅರಿವು ಬರುವುದು.

ಆ ಬಳಿಕ ಸೌಂದರ್ಯ
ಆನಂತರ ಕಲ್ಯಾಣ
ತದನಂತರ ಪ್ರೇಮ

ಎನ್ನುವ ಮಾತುಗಳು, ಪರಂಪರಾಗತ ಮೌಲ್ಯಗಳು ನಶಿಸುತ್ತಿರುವುದನ್ನು ಧ್ವನಿಸುತ್ತವೆ. ಈ ಮೌಲ್ಯಗಳ ವಿನಾಶವೆಂದರೆ ತನ್ನ ವಿನಾಶವೆಂಬ ತಿಳಿವಳಿಕೆ ಇಲ್ಲದ್ದರಿಂದಲೇ 'ಜಗತ್ತು ರುಗ್ಣಾಲಯ'ವಾಗಿರುವುದೆಂಬ ಅಭಿವ್ಯಕ್ತಿ ಅರ್ಥಪೂರ್ಣವಾಗಿದೆ.

ಹಲವಳಿ ಈ ಸಂಕಲನದಲ್ಲಿಯ ಇನ್ನೊಂದು ಮಹತ್ವದ ಕವನ. ನವ್ಯ ಕಾವ್ಯದ ಆರಂಭದೆಸೆಯನ್ನು ಅಧ್ಯಯನ ಮಾಡುವವರಿಗೆ ಈ ಪದ್ಯ ಸಾಕಷ್ಟು ಸಾಮಗ್ರಿಯನ್ನು ಒದಗಿಸುತ್ತದೆ. ಹಳೆಯ ಬಂಧ ಹಾಗೂ ಧಾಟಿಗಳನ್ನು ಕಳಚಿಕೊಂಡು, ನವ್ಯಬಂಧ ಹಾಗೂ ನವ್ಯಗತಿಯನ್ನು, ಸಂಕೀರ್ಣ ವಿಷಯ ಗಳನ್ನು ಒಂದು ಸೂತ್ರಕ್ಕೆ ಹೆಣೆಯುವ ಪರಿಶ್ರಮವನ್ನಿಲ್ಲಿ ಕಾಣಬಹುದು. ಭಾಷೆ ಸರಳಗೊಂಡು ಆಡುಮಾತನ್ನು ಹಾಗೂ ಆಡುಮಾತಿನ ಲಯವನ್ನು

ಅಳವಡಿಸಿಕೊಂಡಿರುವುದಕ್ಕೆ 'ಹಲವಳಿ'ಯನ್ನು ಉದಾಹರಿಸಬಹುದು.

ಯುರ್‍ಯಾನಿಯಂ, ರೇಡಿಯಂ,
ಗೊತ್ತಿಲ್ಲದ ಧಾತು ಲೋಹಗಳು ಗುರುತಿಲ್ಲದ
ಗುರಿಯೆಡೆಗೆ ನಡೆದಿದೆ.
ಒಂದರಿಂದ ಅಣುಬಾಂಬು, ಇನ್ನೊಂದರಿಂದ ಪ್ರಕೃತಿಗಿಂಬು
ಯಾವ ಸಾಹಸ ? ಯಾವ ಹೊಂಚು ?
ಯಾವ ನವೀನ ಸೃಷ್ಟಿ ?

ಈ ನವೀನ ಸೃಷ್ಟಿಯ ಉದ್ಯಮದಲ್ಲಿ ಅಪಾಯ, ಗಂಡಾಂತರಗಳಡಗಿರುವ ಧ್ವನಿ ಇಲ್ಲಿದೆ. ಯುರ್‍ಯಾನಿಯಂ ರೇಡಿಯಂ ಅಲ್ಲದೆ ಗೊತ್ತಿಲ್ಲದ ಲೋಹ ಧಾತುಗಳ ವಶವರ್ತಿಯಾಗಿ, ನಾಗರಿಕತೆ ಗಂಡಾಂತರವನ್ನು ಆಹ್ವಾನಿಸಿ ಕೊಳ್ಳುತ್ತಿದೆ. ಯಾವ ಗೊತ್ತುಗುರಿಯಿಲ್ಲದೆ ನಾಗರಿಕತೆ ಬೆಳೆಯುತ್ತಿದೆ.

ಯಾವ ಸಾಹಸ ?
ಯಾವ ಹೊಂಚು ?
ಯಾವ ನವೀನ ಸೃಷ್ಟಿ ?

ಈ ಪ್ರಶ್ನೆಗಳಿಗೆ ನಿರುತ್ತರಗೊಂಡಿರುವ ಶಿಲಾಖಂಡ, ಒಂದು ತುದಿಯಲ್ಲಿ ಸಾಹಸಕಂಡರೆ ಇನ್ನೊಂದು ತುದಿಯಲ್ಲಿ ಹೊಂಚು. ಒಂದು ಕಡೆಗೆ ಅಪಕಾರ, ಇನ್ನೊಂದು ಕಡೆಗೆ ಉಪಕಾರ. ಇವೆರಡೂ ಕೂಡುವ ಲಕ್ಷಣಗಳೇ ಇಲ್ಲ. ಇವುಗಳ ಮಧ್ಯದ ಅಂತರ ಬೆಳೆಯುತ್ತಲೇ ಹೊರಟಿದ್ದು, ಇದು ನಾಗರಿಕತೆಗೆ ಮಾರಕವಾದದ್ದೆಂಬ ವಿಚಾರವೇ ಪದ್ಯದ ಸೂಕ್ಷ್ಮ ಶರೀರವೆಂದು ಹೇಳಬಹುದು.

ಈ ಬೀದಿಗಲ್ಲ ತುಂಡಿನ ಮೇಲೆ
ಯಾವ ಮೂರ್ತಿ ಒಡಮೂಡಲಿದೆ ?

ಜಗತ್ತೇ ಕುತೂಹಲದಿಂದ ಕೇಳುವ ಪ್ರಶ್ನೆ ಇದು. ಅಂಥ ಮೂರ್ತಿಯ ಅವತಾರದಿಂದ, ಬರವಿನಿಂದ ನಾಗರಿಕತೆಯನ್ನು ಕೊರೆಯುತ್ತಿರುವ ಅಂತರ ಕಡಿಮೆಯಾದೀತೆನ್ನುವ ಹವ್ಯಾಸ ಎಲ್ಲರನ್ನು ಕಾಡುವ ಪ್ರಶ್ನೆ.

ಯಾವ ಮೂರ್ತಿ ಒಡಮೂಡಲಿದೆ ?

ಇದಕ್ಕೆ ಉತ್ತರವಾಗಿ ಹಿಟ್ಲರ್, ಸ್ಟಾಲಿನ್, ಮಾವೊ, ಟ್ರೂಮನ್ ಮುಂತಾದವರ ಹೆಸರುಗಳು ಕೇಳಿಸಿ ಬಂದವು. ಹೇಗಾದರೂ ಒಂದು ಮೂರ್ತಿಯನ್ನು ಮೂಡಿಸಬೇಕೆನ್ನುವುದು ಬಲವತ್ತರವಾದ ಇಚ್ಛೆ.

ಯಾವ ಮೂರ್ತಿ ?

ಮತ್ತೆ ಅದೇ ಪ್ರಶ್ನೆ ಕುಡುಗೋಲಿನಂತೆ ಝಳಪಳಿಸುವುದು.

ಹಲಿಯುಳಿಯುವ ಬಾಣಂತಿಯಂತೆ ಹಲವಳಿದು ಭೂಮಿತಾಯಿ ಹಾಸಿಗೆ ಹಿಡಿದಿದ್ದಾಳೆ ಎನ್ನುವುದು ಇಡೀ ನಾಗರಿಕತೆಯ ದುರಂತವನ್ನು ಧ್ವನಿಸುತ್ತದೆ. ಭೂಮಿಯ ರಕ್ಷಣೆಗೆ, ಶಕ್ತನೊಬ್ಬನ ಅವತಾರವಾದೀತೆಂಬ ಹೆಬ್ಬಯಕೆ ಕೈಗೂಡುವ ಲಕ್ಷಣಗಳಿಲ್ಲದೆ ನಿರಾಶೆ ಬೆಳೆಯುತ್ತದೆ.

ಒಂದೊಂದು ನಾಗರಿಕತೆಯ ಯುಗ
ಒಂದೊಂದು ಗರ್ಭಧಾರಣ
ಆದರೆ ಜನ್ಮವಾಗುವ ಮೊದಲೇ ಗರ್ಭಸ್ರಾವ.

ಭೂಮಿತಾಯಿಯ ಬಯಕೆ, ಸ್ವಪ್ನಗಳು ಯಾವೊಂದು ನಿಶ್ಚಿತ ಆಕಾರ, ರೂಪ ತಳೆಯಲಾರದ್ದಕ್ಕೆ ಬಾಣಂತಿಯಂತೆ ಭೂಮಿತಾಯಿ ಹಾಸಿಗೆ ಹಿಡಿದಿದ್ದಾಳೆ ಎನ್ನುವುದು ವರ್ತಮಾನದ ಗಂಡಾಂತರದ ಸೂಚನೆಯಾಗಿದೆ.

'ಕ್ಲೋರೋಫಾರ್ಮ' ಪದ್ಯದಲ್ಲಿಯ ಮುಖ್ಯ ವಿಚಾರವಾಗಿರುವ 'ಜಗತ್ತೇ ರುಗ್ಣಾಲಯವಾಗಿದೆ' ಎನ್ನುವದಕ್ಕೂ ಭೂಮಿ ತಾಯಿ ಹಾಸಿಗೆ ಹಿಡಿದಿದ್ದಾಳೆ ಎನ್ನುವುದಕ್ಕೂ ಒಂದೇ ವಿಚಾರ ಸೂತ್ರವಾಗಿರುವುದನ್ನು ಲಕ್ಷಿಸಬೇಕು.

ಜನ್ಮವಾಗುವ ಮೊದಲೆ? ಗರ್ಭಸ್ರಾವ

ಇಡೀ ನಾಗರಿಕತೆಯ ಯುಗ ವ್ಯರ್ಥವಾಗುತ್ತ ಅನಿಷ್ಟಪರಂಪರೆಗಳನ್ನು ನಿರ್ಮಿಸುತ್ತದೆ. ಹಾಸಿಗೆ ಹಿಡಿದ ಭೂಮಿತಾಯಿ ಮೇಲೇಳುವ ಸೂಚನೆಗಳಿಲ್ಲ. ಅವಳು ಹಾಗೆ ನವೆಯುತ್ತ ಬಿದ್ದುಕೊಂಡಿರುತ್ತಾಳೆಂಬ ಧ್ವನಿ ಇಲ್ಲಿದೆ.

ಅಕಾಲ ಓಂಡವು ಒಮ್ಮೆ ಅಸ್ಪಷ್ಟ ಸಂತತಿ,
ಒಮ್ಮೆ ರಾಕ್ಷಸ,
ಒಮ್ಮೆ ನಡುನೆತ್ತಿಗೇರಿದ ಪಿಶಾಚಿ.

ಇಂಥವರ ಹುಟ್ಟಿನಿಂದ ನಾಗರಿಕತೆಗೆ ಉಳಿವಿಲ್ಲ ಎನ್ನುವ ಭಾವ ಹುಟ್ಟುತ್ತದೆ. ಭೂಮಿತಾಯಿ ಬಯಸಿದ್ದು ಇಂಥ ಸಂತಾನವನ್ನಲ್ಲ. ಅವಳು ಬಯಸಿದ್ದು ಸನತ್ಕುಮಾರನ ಜನ್ಮ. ಅದಕ್ಕಾಗಿ ಅವಳು ಯುಗಯುಗದಿಂದ ಬೇನೆಸಹಿಸುತ್ತ ಬಂದಿದ್ದಾಳೆ. ಅಡಿಗರ ಭೂಮಿಗೀತದಲ್ಲಿಯ ಕೆಲವು ಸಂದರ್ಭಗಳು 'ಭೂಮಿತಾಯಿ ಹಾಸಿಗೆ ಹಿಡಿದಿದ್ದಾಳೆ.' 'ಭೂದೇವಿ ಹೀಗೆ ಬೇನೆ ತಿನ್ನುವವಳು' ಎನ್ನುವ ವಿಚಾರಗಳ ವಿಸ್ತರಣೆ ಎಂಬಂತೆ ತೋರುತ್ತವೆ.

ಯಾವ ಅದೊಂದು ಉಳಿಯುವದೆಂದು
ಹೀಗೆ ಹಲವಳಿಯುಲು ಹಿಂದೆಯೇ ನೋಡಳು.

ರಾಕ್ಷಸ, ಪಿಶಾಚಿ ಯಾವುದಾದರೇನು? ಯಾವುದಾದರೂ ಉಳಿಯುವೆಂಬ ಇಚ್ಛೆ ಅವಳಿಗೇನೋ.

ಹಲವಳಿಯುಲು ಹಿಂದೆಮುಂದೆ ನೋಡಳು. ಸ್ವರತಿ, ಸ್ವಸುಖದಲ್ಲಿ ಭೂಮಿ ಮಗ್ನವಾಗಿರುವುದರ ಸೂಚನೆಯಿಂದ ಈ ಪದ್ಯ ಮುಗಿಯುತ್ತದೆ. 'ಹಲವಳಿ'ಯಲ್ಲಿನ ಅಣುಬಾಂಬು, ಭೂಮಿತಾಯಿ ಹಾಸಿಗೆ ಹಿಡಿದಿದ್ದಾಳೆ. ನಾಗರಿಕತೆಯುಂಯುಗ, ಒಂದೊಂದು ಗರ್ಭಧಾರಣ, ಜನ್ಮವಾಗುವ ಮೊದಲೇ ಗರ್ಭಸ್ರಾವ, ಅಕಾಲ ಪಿಂಡ, ಅಸ್ಪಷ್ಟ ಸಂತತಿ, ಹಲವಳಿಯುಲು– ಇಲ್ಲಿ ವಿಚಾರಾತ್ಮಕ ಪ್ರತಿಮೆಗಳಾಗಿ ಕಾಣಿಸಿಕೊಂಡರೆ, ಅಡಿಗರ ಭೂಮಿಗೀತದಲ್ಲಿ ಹೆಚ್ಚು ಕಡಿಮೆ ಇವೇ ಭಿನ್ನ ಹಾಗೂ ಸ್ವತಂತ್ರ ಸಂಕೇತ ಪ್ರತಿಮೆಗಳೆಂಬಂತೆ ಭಾಸವಾಗುತ್ತವೆ.

'ಕಾಲ-ಕವಿ' ಎನ್ನುವ ಪದ್ಯ, ಒಂದು ಹೊಸ ಮಿಥ್ ಎಂಬಂತೆ ಗಮನ ಸೆಳೆಯುತ್ತದೆ. ಸಾಲುಸಾಲಿಗೆ ಕುತೂಹಲ ಹುಟ್ಟಿಸುತ್ತ, ಸುಪ್ತಪ್ರಜ್ಞೆಯಲ್ಲಿ ತೇಲಾಡುವ, ಓಲಾಡುವ ಅಸ್ಪಷ್ಟ ಭಾವಗಳು ಸ್ಪಷ್ಟವಾದ ರೂಪ, ಆಕಾರಗಳನ್ನು ಪಡೆಯುತ್ತ ಸಾಂಕೇತಿಕವಾಗಿ ಮುಂದುವರಿಯುತ್ತದೆ.

ಕಡಲ ತೀರದಲ್ಲೊಂದು ತಾಜಮಹಲು ಹೊಟೆಲ,
ಕಾಲನವನೆ ಚಾಲಕನು.

ಕಡಲ ತೀರದ ತಾಜಮಹಲು ಹೋಟೆಲಿನ ವರ್ಣನೆಯಿಂದ ಪದ್ಯದ ಬಾಗಿಲು ತೆಗೆಯುತ್ತದೆ. ಈ ತಾಜಮಹಲು ಹೋಟೆಲಿನ ಚಾಲಕನಾಗಿರುವವನು ಕಾಲ. ಮೋಜು ಮೇಜವಾನಿ ನಡೆಯುವ ಹೊಟೇಲು ಇದು. ರಾಜರು, ರಾಜರಾಷ್ಟ್ರರು, ನಿತ್ಯತೃಪ್ತರು, ಅತೃಪ್ತರು, ಬಡವರು ಬಗ್ಗರು, ಕಗ್ಗರು, ಪಂತರು, ಶುಕ್ರರು, ವಕ್ರರು, ಚಾಣಾಕ್ಯರು, ಸಂತರು –ಹೀಗೆ ಇಲ್ಲಿಗೆ ಬರುವವರು ಅನೇಕ ಜನ. ಇವರೆಲ್ಲಾ ಬದುಕಿನ ವಿವಿಧ ಕ್ಷೇತ್ರಗಳನ್ನು ಪ್ರತಿನಿಧಿಸುವಂಥವರು.

ಇವರು ಮೋಜು, ಮೇಜವಾನಿಗಳಲ್ಲಿ ಭಾಗಿಗಳಾಗುವುದಷ್ಟೇ ಅಲ್ಲದೆ, ತಮ್ಮ ತಮ್ಮ ಬೆಲೆಯನ್ನು ತಿಳಿದುಕೊಳ್ಳುವ ಉದ್ದೇಶವನ್ನೂ ಹೊಂದಿರುವಂಥವರು. ಇದೊಂದು ದ್ಯೂತದಾಟದ ಹೊಟೆಲಾಗಿದ್ದು, ಇಲ್ಲಿ ತಮ್ಮ ನೆಲ-ಬೆಲೆಗಳನ್ನು ಕಂಡುಕೊಳ್ಳಬೇಕೆನ್ನುವ ಹಂಬಲವುಳ್ಳವರಾಗಿದ್ದಾರೆ. ದ್ಯೂತದಾಟದಲ್ಲಿ ತಮ್ಮ ಪಾಲಿಗೆ ಏನು ಕಾದಿದೆಯೊ ಯಾರು ಬಲ್ಲರು? ಎಲ್ಲರಲ್ಲಿಯೂ ತಮ್ಮ ಪಾಲಿಗಿರುವ ಎಲೆಯನ್ನು ಕಂಡುಕೊಳ್ಳಬೇಕೆನ್ನುವ ಕುತೂಹಲ.

'ದೈವದಾಟದಲ್ಲಿ ತಮ್ಮ ಪಾಲಿಗಿರುವ ಎಲೆಯನು' ಕಂಡುಕೊಳ್ಳಲು ಎನ್ನುವುದು ಅತ್ಯಂತ ಧ್ವನಿಪೂರ್ಣವಾಗಿರುವ ಅಭಿವ್ಯಕ್ತಿ. ಇದು ಅವರವರ ವಿಧಿಲಿಖಿತವನ್ನು ಸೂಚಿಸುತ್ತದೆ. ಭಾರತೀಯರು ಅಚಲವಾಗಿ ದೈವವನ್ನು ನಂಬುವರೆನ್ನುವುದರ ಸೂಚನೆಯೂ ಇಲ್ಲಿದೆ.

ಹೋಟೆಲಿಗೆ ಒಬ್ಬೊಬ್ಬರಾಗಿ ಬರುವುದರೊಂದಿಗೆ ಪದ್ಯ ಗೂಢಾರ್ಥಗಳ ಬಾಗಿಲು ತೆಗೆಯುತ್ತದೆ.

ಬಂದನೊರ್ವ ರಾಜ ; –
ಶರಟಿನೊಳಗೆ ಚಿಲಕತ್ತು;
ಬಲ್ಬು ಬಲ್ಬು ವಿದ್ಯುತ್ತು
ಸರವಿದವನ ತೇಜ.
ಅದರ ಬ್ಯಾಟರಿಯು ಬಟನ್ನು
ರಾಣಿಯ ಕೈಯೊಳಿದೆ.
ರಾಣಿಯ ತಲೆಗೂದಲಲಿ
ತೋಟವೊಂದು ಬೆಳೆದಿದೆ.

ಹೋಟಲಿನಲ್ಲಿ ಒಂದು ಸಂಜೆ ಬಣ್ಣಪಡೆದ ರೀತಿ ಅತ್ಯಂತ ಕುತೂಹಲಕಾರಿಯಾಗಿದ್ದು – ಒಬ್ಬೊಬ್ಬರ ವಿಷಯದ ಸುರುಳಿ ಬಿಚ್ಚುತ್ತ, ಅಲ್ಲಿ ಜರುಗುವ ಘಟನೆಗಳು ಜೀವಂತವಾಗಿ ಗಮನ ಸೆಳೆಯುತ್ತವೆ. ದೃಶ್ಯ ದೃಶ್ಯಗಳಂತೆ ಕ್ರಿಯಾಶೀಲವಾಗಿ ಅರ್ಥದ ಪದರುಗಳನ್ನು ಬಿಡಿಸುತ್ತವೆ.

ಶರಟಿನೊಳಗೆ ಚಿಲಕತ್ತು ಧರಿಸಿದ ರಾಜನ ಆಗಮನ, ಒಂದು ಕಾಲದ ಐತಿಹಾಸಿಕ ಸತ್ಯವನ್ನು ಕಣ್ಣಿಗೆ ಹಿಡಿಯುತ್ತದೆ. ಶರಟು ಹಾಗೂ ಚಿಲಕತ್ತು ಎನ್ನುವ ಎರಡೂ ಪದಗಳು ರಾಜನ ದಕ್ಷತೆ ಹಾಗೂ ಚಾತುರ್ಯಕ್ಕೆ ನಿದರ್ಶನವಾಗಿವೆ. ಒಂದು ಕಾಲದ ಐತಿಹಾಸಿಕ ಘಟನೆಯನ್ನು ವರ್ತಮಾನಕ್ಕೆ ಸಂವೇದಿಸುವಲ್ಲಿ 'ಶರಟು' ಮತ್ತು 'ಚಿಲಕತ್ತು' ಪದಗಳು ಅರ್ಥವತ್ತಾಗಿ ಬಳಸಲ್ಪಟ್ಟಿವೆ.

'ಬಲ್ಬು, ಬಲ್ಬು, ವಿದ್ಯುತ್ತು' ಎನ್ನುವ ಪದಗಳ ಯೋಜನೆ' ಐತಿಹಾಸಿಕ ಕಾಲದ ಸಂದರ್ಭವನ್ನು ವರ್ತಮಾನಕ್ಕೆ ತಂದು ನಿಲ್ಲಿಸುತ್ತದೆ.

ಅದರ ಬ್ಯಾಟರಿಯು, ಬಟನ್ನು
ರಾಣಿಯ ಕೈಯೊಳಿದೆ.
ರಾಣಿಯ ತಲೆಗೂದಲಲಿ

ತೋಟವೊಂದು ಬೆಳದಿದೆ.

ಈ ಪದ್ಯ ರಾಜ-ರಾಣಿಯರಿಗಿರುವ ಸಂಬಂಧವನ್ನು ಸೂಚಿಸುವುದಲ್ಲದೆ, ರಾಣಿಯ ಅಧಿಕಾರಿವನ್ನೂ ಸಂಕೇತಿಸುತ್ತದೆ 'ರಾಣಿಯ ತಲೆಗೂದಲಲಿ ತೋಟವೊಂದು ಬೆಳೆದಿದೆ' ಎನ್ನುವದರಲ್ಲಿ ರಾಣಿಯ ವಿಶೇಷ ಸೌಂದರ್ಯ, ಹಾಗೂ ವೈಭವಗಳನ್ನು ಒಟ್ಟಿಗೆ ನಿರ್ದೇಶಿಸುತ್ತದೆ. ಸರಾಗವಾಗಿ ಸಾಗುವ ಈ ಮಿಥ್, ತೋಟ ಬೆಳೆಯುವವರೆಗೆ ಒಂದು ಹಂತಕ್ಕೆ ಬಂದು ನಿಂತು, ಇನ್ನು ಮುಂದೆ ಅದು ಇನ್ನೊಂದು ತಿರುವನ್ನು ಪಡೆಯುತ್ತದೆ. ಯುದ್ಧಕ್ಕೆಂದು ಮುನ್ನಡೆದ ಯೋಧನೊಬ್ಬ ರಾಣಿಯ ತಲೆಗೂದಲಿನ ಹೂ ಬಯಸಿ ಕೈಚಾಚಿ ತಲೆ ಬಾಚುವ ಸನ್ನಿವೇಶದಿಂದ ಮಿಥ್ ಇನ್ನಷ್ಟು ಕ್ರಿಯಾಶೀಲವಾಗಲು ಕಾರಣವಾಗುತ್ತದೆ.

ಯೋಧನ ಔದ್ಧತ್ಯಕ್ಕೆ ಬೇಸತ್ತ ಸೇವೆಯಾಳಿಗೆ ಈ ಪ್ರಕರಣದ ಸುಳಿವು ಹತ್ತಿ, ಕೆರಳಿದ ಅವನು ಯೋಧನ ತಲೆಯುರುಳಿಸುವದಕ್ಕೂ ಹಿಂದುಮುಂದು ನೋಡುವದಿಲ್ಲ. ಯೋಧನ ತಲೆಯೊಡೆದು ಎರಡು ಹೋಳಾಗಿ ಬಿತ್ತು. ಯೋಧನ ಸಾವಿನ ಸುದ್ದಿ ಸೈನ್ಯದಲ್ಲಿ ಹಬ್ಬಿಕೊಂಡು ಸಾರ್ಜಂಟನು ಬಂದು, ಯೋಧನ ತಲೆಯುರುಳಿಸಿದ ಆ ಸೇವೆಯಾಳನ್ನು ಬಂಧಿಸಿ, ಜಡ್ಜಿಯನ್ನು ಸಂಧಿಸಿದ. ನ್ಯಾಯಾನ್ಯಾಯಗಳ ಪರೀಕ್ಷೆಗಾಗಿ ಕೇಸು ಕೋರ್ಟಿನ ಕಟಟೆ ಹತ್ತುತ್ತದೆ. ಸಾಕ್ಷಿ, ಸಹಿ, ಪುರಾವೆ, ದಾಖಲೆಗಳ ಮೇಲಿಂದ ಕೇಸು ಮುಂದುವರಿಯುವುದು. ಕೋರ್ಟಿನ ವ್ಯವಹಾರ ಹೀಗೇ ನಡೆದೀತೆಂದು ಹೇಳುವುದು ಕಷ್ಟ. ನ್ಯಾಯವೂ ಒಮ್ಮೊಮ್ಮೆ ಪಲ್ಲಟವಾಗಿ ಕೆಳಗು ಮೇಲಾಗಬಹುದೆಂಬ ಸಂದೇಹವೂ ವ್ಯಕ್ತವಾಗಿರುವುದು.ಆಳಿನಣ್ಣ ಲಂಚಕೊಟ್ಟು ಬಿಡಿಸುವ ವರೆಗೂ ಈ ಘಟನೆ ಆ ಹೋಟೆಲಿನಲ್ಲಿ ಬಣ್ಣ ಪಡೆಯಿತು.

ಆ ಹೋಟೆಲಿನ ಮೂಲೆಯೊಂದರಲ್ಲಿ ಕೈಗೆ ಗಲ್ಲವಿಟ್ಟು, ಒಳಿಒಳಿ ಕಣ್ಣೆಡುತ್ತ ಕುಳಿತ ಕವಿಯೊಬ್ಬನು ಹೋಟೆಲಿನ ಮೂಲಕ ಇಲ್ಲವೆ ಚಾಲಕನಾಗಿ ಬಂದ ಕಾಲನ ಕಣ್ಣಿಗೆ ಬೀಳುತ್ತಾನೆ. ಕವಿ ಮುಗ್ಧ ಮೌನಿ, ಮಿತಭಾಷಿಯಾಗಿದ್ದು ತೀರ ಸಹಜವಾದ ಉಡುಪನ್ನು ತೊಟ್ಟವನಾಗಿದ್ದ. ಮೋಜುವಿಲಾಸಗಳಲ್ಲಿ ತೊಡಗಿ ಕೊಂಡ ಜನಸಂದಣಿಯಲ್ಲಿ ಇವನೊಬ್ಬ ಅಪರೂಪದ ವ್ಯಕ್ತಿ ಯೆಂಬಂತೆ ಕಂಡ. ತಿನ್ನದೆ ಉಣ್ಣದೆ ಮೂಲೆಯೊಂದರಲ್ಲಿ ಒಳಿಒಳಿ ಕಣ್ಣೆಡುತ್ತ ಕುಳಿತಿದ್ದ ಆ ಕವಿಯನ್ನು ದೃಷ್ಟಿಸಿ, ಕಾಲ ಅವನ ಬಳಿಗೆ ಬಂದು "ಯಾರು ನೀವು ಸ್ವಾಮಿ" ಎಂದು ಕೇಳಿದ. "ತಾನೊಬ್ಬ ನಿರಪೇಕ್ಷಿತ ನಿರುಪದ್ರವಿ ಆಸಾಮಿ" ಎಂದುತ್ತರಿಸಿದ. ರಾಜರು, ಅಧಿರಾಜರು, ಮಂತ್ರಿಗಳು,

ಲಕ್ಷ್ಮೀಪುತ್ರರು, ಪೌತ್ರರು, ಯೋಧರು, ತಂತ್ರಿಗಳು, ಸುಂದರಿಯರು, ಚಪಲಿಯರು, ವಿಧ ವಿಧ ನಾರಿಯರು ತಮ್ಮ ಮನಸ್ಸು ಬಯಸಿದ್ದನ್ನು ತಿನ್ನಲು, ಉಣ್ಣಲೆಂದು ಅನೇಕ ಜನ ಬಂದಿರುವುದನ್ನು ನಿರ್ದೇಶಿಸಿ "ಇಲ್ಲಿ ನಿಮ್ಮದೇನು ಕೆಲಸ" ಎಂದು ಮತ್ತೆ ಪ್ರಶ್ನಿಸಲು, ಕವಿ ಮಧುರವಾಗಿ ನಕ್ಕು 'ಒಂದು ಗಳಿಗೆ ಮೋಜು ನೋಡುವುದಕ್ಕಾಗಿ' ತಾನು ಬಂದಿರುವುದಾಗಿ ಉತ್ತರಿಸಿದ. 'ಪುರಸತ್ತಿಲ್ಲದೆ ಗಾಸಿಗೊಂಡು ಸಾಯ್ವುದ'ನ್ನು ಹಾಗೂ 'ಜೀವಕೋಟಿ ಹೂಡಿದ ನವರಸ ನಾಟಕ' ಹೇಗೆ ನಡೆಯುವುದೆಂಬುದನ್ನು ನೋಡಲು ತಾನು ಅಲ್ಲಿಗೆ ಬಂದದ್ದಾಗಿ ಕವಿ ಸ್ಪಷ್ಟವಾಗಿಯೆ ನುಡಿದ. ಕವಿಯ ಮಾತುಗಳು ಕಾಲನಿಗೆ ಹಿಡಿಸಲಿಲ್ಲ. ಅವನು ಬೇಸರದ ಭಾವದಿಂದ ಮೈಗಳ್ಳರಿಗೆ, ಆಲಸಿಗಳಿಗೆ, ಏನೊಂದು ಮಾಡದವರಿಗೆ ಅಲ್ಲಿ ಪ್ರವೇಶವಿಲ್ಲವೆಂದು, ಮೋಜು ನೋಡುವುದಕ್ಕೆ ಇದು ನಾಟ್ಯಶಾಲೆಯಲ್ಲವೆಂದು ಜಬರಿಸುವ ಭಾವದಲ್ಲಿ ನುಡಿದ. ಆಗ ಕವಿ ಅನಂತರ ತನಗಿತ್ತ ಪಾಸನ್ನು ತೋರಿಸಿ, ತನ್ನ ಪ್ರವೇಶವನ್ನು ಖಚಿತಪಡಿಸಿಕೊಂಡ. ಈ ಹೋಟಲು ಹೇಗೆ ನಡೆದಿದೆ ಎನ್ನುವ ವರದಿ ಒಪ್ಪಿಸುವ ಕೆಲಸಕ್ಕಾಗಿ ವರದ ತನ್ನನ್ನು ಕಳಿಸಿದ್ದಾನೆಂದು ಕವಿ ದಿಟ್ಟತನದಿಂದ ಕಾಲನಿಗೆ ನುಡಿದ. 'ಮನ್ವಂತರ ಬೇಕೆ ?' ಎಂದು ಮಧ್ಯೆ ಮಧ್ಯೆ ಪ್ರಶ್ನಿಸಿದ.

ಅಣುಬಾಂಬನು ಸಿದ್ಧಗೊಳಿಸಿ ಪ್ರಳಯದೂಟಕೆಂದು
ಮನುಕುಲವನೆ ಆಮಂತ್ರಿಸಿ ಸಾವಿನಾಟಕೆಂದು

ಹೀಗೆ ಹೋಟಲಿನಲ್ಲಿ ರಂಗೇರಿದ ಗಂಡಾಂತರ ಸ್ಥಿತಿಯನ್ನು ಬಣ್ಣಿಸಿ ಬರೆದು, ಪ್ರತ್ಯುತ್ತರಕ್ಕಾಗಿ ಕಾಯ್ದಿರುವುದಾಗಿ ಕವಿ ನಿರ್ಭೀತಿಯಿಂದ ನುಡಿದ.

ಕಾಲಪುರುಷನಟ್ಟಹಾಸ ದಿಗ್‌ದಿಗಂತರಕ್ಕೇರಿತು. ಕಾಲ ಕವಿಯ ಮಾತುಗಳಿಗೆ ಸೊಪ್ಪು ಹಾಕದೆ, ತನ್ನ ಅಹಂಕಾರವನ್ನು ಮೆರೆದ. ಆದರೂ ಕವಿಯು ತನ್ನ ಗುಟ್ಟನ್ನು ಅರಿತುಕೊಂಡ ಬಗ್ಗೆ ಒಳಗುದಿ. ಕೊನೆಯಲ್ಲಿ ಕವಿಯನ್ನು ಸ್ವಾಗತಿಸಿ, ನೇಪಥ್ಯದಲ್ಲಿ ಗಂಟೆ ಬಾರಿಸುತ್ತ, ರಂಗೇರಿರುವುದನ್ನು ಹಾಗೂ ಅಂಕ ಪಡದೆ ಬೀಳುವುದನ್ನು ಸೂಚಿಸುತ್ತಾನೆ.

ನಾಟಕ ಸೂತ್ರಧಾರಿ ಕುಣಿಯುತಿಹುದು ಗೊಂಬೆ,
ಚಿನ್ಮಯದಾ ಜೀವ ಕಳೆಯ ತುಂಬುವತನಕ ಜನರೆಂಬೆ

ಈ ಅಗಾಧ ದೃಶ್ಯವನ್ನು ನೋಡುವಂತೆ ಕಾಲ ಕವಿಯ ಚಿತ್ತ ಸೆಳೆಯುವಲ್ಲಿ ಸಮರ್ಥನಾಗುತ್ತಾನೆ. ಕವಿಯು ಅನಂತಸಾಕ್ಷಿಯ ಸಮ್ಮುಖದಲ್ಲಿಯೇ ಅನಂತಚಿತ್ತ ಸಂಕಲ್ಪಿಸಿದಂಥ ಗವಿಯ ಹಿಡಿದು ರಾಗ ಭೋಗಗಳನ್ನು

ರೂಪಿಸುವ ಭರವಸೆ ಕೊಡುತ್ತಾನ ಕಾಲ. ಈ ಭರವಸೆಯೊಂದಿಗೆ ಹೋಟಲಿನ ಎರಡನೆಯ ದೃಶ್ಯದ ಅಂಕು ಪಡದೆ ಬೀಳುತ್ತದೆ.

ಪದ್ಯದ ಮೊದಲಭಾಗದಲ್ಲಿ ಕಾಣಿಸಿಕೊಳ್ಳುವ ರಾಜ ರಾಣಿಯರ ಮಿಥ್ ಐತಿಹಾಸಿಕ ಸಂದರ್ಭವೊಂದರ ಪರಿಸಮಾಪ್ತಿಯನ್ನು ಸೂಚಿಸಿ, ಕಥಾನಕದ ವಿವರಗಳನ್ನು ನವೀಕರಿಸಿ 'ಶರಟಿನೊಳಗೆ ಚಿಲಕತ್ತು ಧರಿಸಿದ ರಾಜ,' ಮತ್ತು 'ತಲಗೂದಲಲ್ಲಿ ತೋಟಬೆಳೆದ ರಾಣಿ'ಯರ ಪ್ರತಿಮೆಗಳನ್ನು ಸೃಷ್ಟಿಸಿ, ಒಂದು ಕಾಲದ ಅಂತ್ಯವನ್ನು ಸೂಚಿಸುತ್ತದೆ.

ಪದ್ಯದ ಎರಡನೆಯ ಭಾಗದಲ್ಲಿ ಕಾಲ ಮತ್ತು ಕವಿ ಕಾಣಿಸಿಕೊಂಡು, ಅವರಿಬ್ಬರ ಮಾತುಕತೆ ಹಾಗೂ ವಿಚಿತ್ರ ವಾತಾವರಣ ಗಮನಕ್ಕೆ ಬರುತ್ತವೆ. ವೈಭವದ ಸಂಕೇತವಾಗಿರುವ ತಾಜಮಹಲು ಹೋಟಲು ಗಂಡಾಂತರದ ಹಾಗೂ ವಿನಾಶದ ಕೇಂದ್ರವಾಗಿರುವುದನ್ನು ಕವಿಯ ಕಣ್ಣು ಗುರ್ತಿಸುತ್ತದೆ. ಇದು ನಾಗರಿಕತೆಯ ವಿನಾಶವನ್ನು ಧ್ವನಿಸುವುದು. ಅದನ್ನು ತಡೆಯಬೇಕೆನ್ನುವ ವಿಚಾರ ಕವಿಯದು.

ಎಲಿಯಟ್‌ನ London bridge is falling down ಸಂಕೇತದಂತೆ, ಇಲ್ಲಿ ಗೋಕಾಕರು ತಾಜಮಹಲನ್ನು ಸಂಕೇತವನ್ನಾಗಿ ಬಳಸಿರುವುದು ಅತ್ಯಂತ ಅರ್ಥಪೂರ್ಣವಾಗಿದೆ. ಭಾರತೀಯ ಸಂಸ್ಕೃತಿ – ಇತಿಹಾಸಗಳ ಸನ್ನಿವೇಶ ಸಂದರ್ಭಗಳನ್ನು ಹಿಗ್ಗಿಸಿ ಹೊಸ ಅರ್ಥವನ್ನು ಸ್ಫುರಿಸುವ ವಿಚಾರವಿರುವುದನ್ನು ಸೂಕ್ಷ್ಮವಾಗಿ ಪರಿಶೀಲಿಸಬಹುದು.

ಅಣುಬಾಂಬನು ಸಿದ್ಧಗೊಳಿಸಿ ಪ್ರಳಯದೂಟಕೆಂದು
ಮನುಕುಲವನೆ ಆಮಂತ್ರಿಸಿ ಸಾವಿನಾಟಕೆಂದು

ಇಡೀ ನಾಗರಿಕತೆಗೆ ಗಂಡಾಂತರ ತಂದೊಡ್ಡುವ, ವಿಧ್ವಂಸಕ ಚಟುವಟಿಕೆಯ ಪೂರ್ವ ನಿಯೋಜನೆಯಿರುವುದನ್ನು ಈ ಮಾತುಗಳು ಧ್ವನಿಸುತ್ತವೆ. ಆಮಂತ್ರಣದ ಮೋಜು ಮೇಜವಾನಿಯಲ್ಲಿ ಮನುಕುಲವನ್ನು ಅಂತ್ಯಗೊಳಿಸುವ, ಉಧ್ವಸ್ತಗೊಳಿಸುವ ಹೊಂಚು ಅತ್ಯಂತ ಭೀಕರವಾದದ್ದು. 'ಅಣುಬಾಂಬನು ಸಿದ್ಧಗೊಳಿಸಿ' ಎನ್ನುವದು ಮಹಾಯುದ್ಧಗಳ ಭೀಕರತೆಯನ್ನು, ದುರಂತವನ್ನು ಧ್ವನಿಸಿ, ತಲ್ಲಣಗೊಳಿಸುತ್ತದೆ. ಮಾನವೀಯ ಮೌಲ್ಯಗಳ ಹ್ರಾಸವನ್ನು ಹಾಗೂ ವಿಜ್ಞಾನದ ವಿಕೃತಿಯನ್ನು ಧ್ವನಿಸುವಲ್ಲಿ ಕಾಲ - ಕವಿ ಪದ್ಯ ಸಮರ್ಥವಾಗಿ ಮೂಡಿಬಂದಿದೆ.

ಗೋಕಾಕರ 'ಕಾಲ - ಕವಿ' ಪದ್ಯದ ಭಾವ ಹಾಗೂ ವಿಚಾರಗಳು ಇನ್ನು

ಮುಂದಿನ ನವ್ಯಕವಿಗಳಿಗೆ ಪ್ರೇರಣೆಯನ್ನೊದಗಿಸಿರುವದು ಗಮನಾರ್ಹ ವಾದದ್ದು.

'ಬಿತ್ತಿದೆನು ಬೆಳೆದೆ ಆಟಂಬಾಂಬು ಕಾಳಂಗಳ' – ಇಂಥ ಕೆಲವು ಫ್ಲ್ಯಾಸಿಸ್ ಹಾಗೂ ವಿಚಾರಗಳನ್ನು ಅಡಿಗ, ಕಣವಿ, ಶಿವರುದ್ರಪ್ಪ ಮುಂತಾದ ಕವಿಗಳಲ್ಲಿ ಕಾಣಬಹುದು.

'ನವ್ಯಕವಿತೆಗಳು' ಸಂಗ್ರಹದ 'ದುಃಸ್ವಪ್ನ' ಅತ್ಯಂತ ಮೌಲಿಕವಾಗಿರುವ ಪದ್ಯ. ಹಳೆಗಾಲದ ಮಿಥ್‌ನ್ನು ಆತ್ಮಸಾತ್ ಮಾಡಿಕೊಂಡು ವರ್ತಮಾನಕ್ಕೆ ಧ್ವನಿಸುವಂತಹ ಅಭಿವ್ಯಕ್ತಿ ಇಲ್ಲಿ ಸಾಧ್ಯವಾಗಿದೆ.

ಕವಿಯ ಮನಸ್ಸಿನಲ್ಲಿ 'ವಜ್ರಸಮ ವ್ಯಕ್ತಿತ್ವ'ದ ಕಲ್ಪನೆಯಿರುವುದು ಸುಸ್ಪಷ್ಟವಾಗಿದೆ. ವ್ಯಕ್ತಿತ್ವ ವಜ್ರಸಮವಾಗಬೇಕೆಂಬುದು, ಬೆಳೆಯುತ್ತ ಹೋಗಬೇಕೆಂಬುದು ಮಾನವನ ಅಭೀಪ್ಸೆ. ಆದರೆ ಮಾನವ ಭಾವಿಸುವಂತೆ, ಊಹಿಸುವಂತೆ ಎಲ್ಲವೂ ಘಟಿಸದಿರುವುದು ಒಂದು ದುರಂತ. ಇಂಥ ಉದಾಹರಣೆ ವಿನಾಯಕರ ಕಣ್ಣೆದುರಿಗಿದ್ದು. ಅದು 'ದುಃಸಪ್ನ'ವಾಗಿ ಅವರನ್ನು ಕಾಡುವ ರೀತಿ ಕಾಫ್ಕಾನ ಕನಸುಗಳನ್ನು ನೆನಪಿಗೆ ತರುವಂಥಾದ್ದು. ಭಾರತಕಥೆಯ ದುರ್ಯೋಧನ 'ವಜ್ರಮನನ್ಯ'ನೆಂದು ಹೆಸರಾಗಿದ್ದು, ವಜ್ರಸಮವ್ಯಕ್ತಿತ್ವವನ್ನು ಪಡೆಯಲು ಶಕ್ತನಾಗಿದ್ದವನು. ಆದರೆ ಅದು ಸಾಧ್ಯವಾಗದೆ ಛಲದಿಂದ ದುರಂತಕ್ಕೆ ಗುರಿಯಾದದ್ದು ಕಥೆಯ ದಿಕ್ಕನ್ನೇ ಬದಲಿಸಿರುವುದಕ್ಕೆ ಪಂಪನಂಥ ಕವಿಯೂ ಮರುಗಿದ್ದುಂಟು. ಈ 'ದುಃಸ್ವಪ್ನ' ಪದ್ಯದಲ್ಲಿ 'ವಜ್ರಸಮ ವ್ಯಕ್ತಿತ್ವ' ಕ್ಕೆ ಸಂಬಂಧಪಟ್ಟಹಾಗೆ ಹಳೆಯ ಕಾಲದ ಸನ್ನಿವೇಶಗಳು ಮತ್ತೆ ಜೀವಪಡೆದು , ಮರೆತು ಹೋದ ಮಿಥ್‌ನ್ನು ಪುನಃ ಸೃಷ್ಟಿಸುವುದರಲ್ಲಿವೆ.

ಗಾಂಧಾರಿ ದೃಷ್ಟಿಯಾಡಿದ ಚಿತ್ರ ದೃಷ್ಯ

ನಿನ್ನ ಮುಖ್ಯಪ್ರಾಣದಲ್ಲಿದೆ ಸಿಂಹಾಸನಸ್ಥವಾಗಿದೆ.

ಎನ್ನುವ ಮಾತಿನಿಂದ ಊರುಭಂಗವಾದ ಸ್ಥಳವನಷ್ಟು ಬಿಟ್ಟು ದುರ್ಯೋಧನನ ಉಳಿದೆಲ್ಲ ದೇಹ ವಜ್ರದ್ದಾಗಿತ್ತು. ಗಾಂಧಾರಿ ದೃಷ್ಟಿಯಾಡದ ಸ್ಥಳ ದುರಂತದ ಬಿಂದುವಾಗಿ ಉಳಿದಿತ್ತೆಂಬ ಸೂಚನೆ ಪದ್ಯದ ಪ್ರಾರಂಭದಲ್ಲಿದೆ.

ಓ ವನಸ್ಪತಿರಾಜ ಚಂದ್ರ !
ನಿನ್ನ ಮಂಜುಬೆಟ್ಟಗಳ ಮೇಲೆ
ನಿಗಿ ನಿಗಿ ಕೆಂಡಗಳ ಕುಂಡದಲ್ಲಿ ಬಿದ್ದು

ಮೊಲವೊಂದು ಸಾಯುತ್ತಿದೆ !

ಇದು ದುಃಸ್ವಪ್ನದ ಒಂದು ದೃಶ್ಯ. ವನಸ್ಪತಿ ರಾಜ ಚಂದ್ರನ ಪ್ರತಿಮೆಯಿಂದ ದುಃಸ್ವಪ್ನ ಬೆಳೆಯುತ್ತ ಹೋಗುತ್ತಿದೆ.

ಬೆಂಚುಗಲ್ಲಿನ ಪರ್ವತದ ಹೂದರಿನಲ್ಲಿ
ಮೇಣದ ಗವಿಯೊಂದಿದೆ.

ಮಂಜುಬೆಟ್ಟ, ಕೆಂಡಗಳ ಕುಂಡ, ಸಾಯುವ ಮೊಲ, ಬೆಂಚುಗಲ್ಲಿನ ಪರ್ವತ, ಹೂದರು, ಮೇಣದ ಗವಿ ಹೀಗೆ ದುಃಸಪ್ನದ ಬಾಗಿಲು ತೆಗೆಯುತ್ತದೆ. ಥಾಲಿನಂತಹ ಭದ್ರಾಕಾರದಲ್ಲಿ ಹೌಹಾರುವ ಸಣ್ಣಿಲಿಯೊಂದು ಮನೆಮಾಡಿ ಕೊಂಡಿರುವ ಚಿತ್ರ, ಕೌತುಕವನ್ನು ಕೆದಕುತ್ತದೆ. ಆ ಗವಿಯ ಒಳಗಡೆಗೆ ಘೋರ ಕತ್ತಲೆ ಕವಿದಿದ್ದು, ಅಂತರ ಬೆಂತರವೇ ಅಲ್ಲಿಯ ಮೂರ್ತಿ. ಈ ಗುಡಿಯಲ್ಲಿ ಕತ್ತಲೆಯ ನಂದಾದೀಪ, ಅಳಿದೆಯ ಅಲ್ಲಿ ಸುಡುತ್ತಿರುವ ತೈಲ, ನೆನಹಿನ ಹೂಬತ್ತಿ ಉರಿಯುತ್ತಿದೆ.

ಪ್ರಾಣ ಪ್ರಣತಿಯಲ್ಲಿ
ಹಾವಿನಂತೆ ಬಿದ್ದುಕೊಂಡಿದೆ

ಪ್ರಾಣಪ್ರಣತಿಯೆಂಬ ರೂಪಕ ವಚನಗಳಿಂದ ಉತ್ಪ್ರೂರ್ತವಾಗಿದ್ದರೂ ಪ್ರಾಣಕ್ಕೆ ಒಂದು ಆಕಾರ ಪ್ರಾಪ್ತವಾಗುವುದನ್ನು ಲಕ್ಷಿಸಬೇಕು. ಪ್ರಣತಿಯಲ್ಲಿನ ಬತ್ತಿಯ ಆಕಾರ ಹಾವನ್ನು ಹೋಲಿ, ನಿರಾಕಾರವಾಗಿರುವ ಪ್ರಾಣಬತ್ತಿಯ ಆಕಾರವನ್ನು ಪಡೆಯಬಹುದು. ರೂಪಕವು ಹಿಗ್ಗಿಕೊಂಡು ಪ್ರತಿಮ ಸಾವಯುವ ಪಡೆಯುವದಕ್ಕೆ ಇದೊಂದು ಖಚಿತ ನಿದರ್ಶನವಾಗಲಿದೆ. ಗರುಡವಾಹನನ ನೆನಪಾಗಿ, ಗರುಡವಾಹನನನ್ನು ಸಂಬೋಧಿಸುತ್ತ

ಯಾವ ಗರುಡನ ಗೆರೆ ತೋರಿಸಲಿ ?

ಎನ್ನುವ ಪ್ರಶ್ನೆ ಕಂಗೆಟ್ಟ ಆತ್ಮದ ಅರುಚುವಿಕೆಯನ್ನು ಸೂಚಿಸುತ್ತದೆ. ದಟ್ಟವಾಗಿ ಹಬ್ಬಿಕೊಂಡಿರುವ ಅಂಥ ತಮಸ್ಸಿನಿಂದ ಬಿಡುಗಡೆ ಪಡೆಯ ಬೇಕೆನ್ನುವ ಇಚ್ಛೆ ಪ್ರಬಲಿಸಿ, ಅಂಥ ಕಿರಣಗಳಿಗಾಗಿ ಹಾರೈಸುತ್ತದೆ.

ಈ ಪಾತಾಳ ಬಾವಿಯಲ್ಲಿ
ತುಂಬಿ ಕೆಳಗಿಳಿದ ಕೊಡವನ್ನು
ಯಾವ ಪಾತಾಳಗಡೆ ಹೊರಗೆ ತಂದೀತು ?

ಈ ಮಾತುಗಳು ದುರ್ಯೋಧನನ, ದುಷ್ಕೃತ್ಯಗಳು ಹಬ್ಬಿ ಆತನ ಪಾಪದ

ಕೊಡ ತುಂಬಿ, ಪಾತಾಳದ ಬಾಯಿಯಲ್ಲಿಳಿದಿರುವುದನ್ನು ಸೂಚಿಸುವದರ ಜೊತೆಗೆ ವರ್ತಮಾನದ ತ್ರಸ್ತ ಮಾನವನ ವಜ್ರಸಮ ವ್ಯಕ್ತಿತ್ವವೇ ನಶಿಸುತ್ತ, ಅದು ಪಾತಾಳ ಬಾವಿಗಿಳಿದಿರುವುದನ್ನು ಧ್ವನಿಸುತ್ತದೆ.

ಯಾವ ಪಾತಾಳಗಡ ಹೊರಗೆ ತಂದೀತು?

ಎನ್ನುವದು ಇಡಿಯ ಮಾನವ ಜನಾಂಗದ ಆರ್ತಪ್ರಾರ್ಥನೆಯೇ ಆಗಿದೆ. ಇಂಥ ಸಂದರ್ಭಗಳಲ್ಲಿ ಗೋಕಾಕರ ಕಾವ್ಯ ಹಾಗೂ ವಿಚಾರ ಇಲಿಯಟ್ ಮತ್ತು ಏಟ್ಸರ ಮಟ್ಟಕ್ಕೇರುವುದನ್ನು ಗಮನಿಸಬೇಕು. ಸರಳವಾದ ಅಭಿವ್ಯಕ್ತಿ ಅತ್ಯಂತ ಅರ್ಥಪೂರ್ಣವಾಗಿ ಮನಸ್ಸನ್ನು ತಟ್ಟುವುದಕ್ಕೆ ಇದೊಂದು ಉದಾಹರಣೆ.

ಯಾವ ಗಾಂಧಾರೀ ದೇವಿಯ ಕೃಪಾದೃಷ್ಟಿ
ಈ ಊರುಭಂಗವನ್ನು ತಪ್ಪಿಸೀತು?

ಮಾನವನ ವ್ಯಕ್ತಿತ್ವದ ದುರಂತವನ್ನು ತಪ್ಪಿಸುವ ಕುರಿತ ವಿಚಾರವೇ ಈ ಮಾತುಗಳ ಮೂಲಸೂತ್ರವಾಗಿದೆ. ಇದು ದುರ್ಯೋಧನನ 'ಊರುಭಂಗ' ಕ್ಕೆ ಮಾತ್ರ ಸೀಮಿತವಾಗದೆ, ಇಂದಿನ ನಾಗರಿಕತೆ ದುರಂತದ ಅಂಚಿನಲ್ಲಿ ಸುಳಿಯುತ್ತಿದ್ದು, ಇನ್ನು ಮುಂದೆ ಸಂಭವಿಸಲಿರುವ ದುರಂತ ಘಟಿಸದಿರಲಿ ಎಂಬ ಆಶಯ ವ್ಯಕ್ತವಾಗಿದೆ. 'ಗಾಂಧಾರೀ ದೇವಿಯ ಕೃಪಾದೃಷ್ಟಿ' ಯಿಂದ ಮಾತ್ರ, ಈ ದುರಂತ ತಪ್ಪಬಲ್ಲದೆನ್ನುವ ವಿಚಾರ ಅತ್ಯಂತ ಮಹತ್ವದ್ದಾಗಿ ಗಮನಸಳೆಯುತ್ತದೆ.

ಗಾಂಧಾರಿ ಹುಟ್ಟುಗುರುಡ ಧೃತರಾಷ್ಟ್ರನನ್ನು ಮದುವೆಯಾಗಿ, ಇದ್ದ ಕಣ್ಣುಗಳಿಗೂ ಸಹ ಹೊರತಾಗಿ, ಧೃತರಾಷ್ಟ್ರನ ಜೀವನದ ಸಹಭಾಗಿನಿಯಾದ ವಳು. ಗಾಂಧಾರಿಯ ಈ ದೃಢ ನಿರ್ಧಾರವೇ ಅವಳಿಗೆ ಅಂಥಾ ಶಕ್ತಿಯನ್ನು ಒದಗಿಸಿರುವದು. ಎಂಥಾ ದುರಂತವನ್ನು ತಪ್ಪಿಸಬಹುದಾದ ಶಕ್ತಿ ಗಾಂಧಾರೀ ದೇವಿಯ ಕೃಪಾದೃಷ್ಟಿಗಿರುವದು. ಆದರೆ ದುರ್ಯೋಧನನ ದುಷ್ಕೃತ್ಯಗಳ ಹೊರೆ ಹೆಚ್ಚಾಗುತ್ತ ನಡೆದು, ಊರುಭಂಗ ಅನಿವಾರ್ಯವಾಯಿತೆಂಬುದನ್ನು ಧ್ವನಿಸುತ್ತದೆ. ಹುಟ್ಟುಗುರುಡ ಧೃತರಾಷ್ಟ್ರನ ಜೀವನಕ್ಕೆ ಬೆಳಕನ್ನಿತ್ತು ಬದುಕನ್ನು ಸಹ್ಯವಾಗಿ ಮಾಡಿದ ಶ್ರೇಯ ಗಾಂಧಾರಿಗೆ ಸಲ್ಲುವಂಥಾದ್ದು.

ನಿನ್ನ ಧೃತರಾಷ್ಟ್ರ ಸಂತತಿ
ಪಟಪಟನೆ ಹುಟ್ಟುತ್ತಿದೆ, ಸಾಯುತ್ತಿದೆ.

ಗಾಂಧಾರಿ ದೃಷ್ಟಿಯ ಕಾಪು ಇಲ್ಲದ್ದರಿಂದ 'ಧೃತರಾಷ್ಟ್ರ ಸಂತತಿ ಪಟಪಟನೆ

ಹುಟ್ಟಿ, ಸಾಯುವಂತಾಗಿದೆ' ಎನ್ನುವ ಮಾತು, ಅತ್ಯಂತ ಅರ್ಥಪೂರ್ಣವಾಗಿದ್ದು, ಅದು ಕೇವಲ ಧೃತರಾಷ್ಟ್ರಸಂತತಿಗೆ ಮಾತ್ರ ಅನ್ವಯಿಸದೆ, ಇಡೀ ಮಾನವ ಜನಾಂಗಕ್ಕೆ ಅನ್ವಯಿಸುವಂಥದಾದೆ. ಇಂಥ ಸಂತತಿ ದುರಂತಪರಂಪರೆಯ ಸಂಕೇತವಾಗಿ ಮಾನವಜನಾಂಗದ ದಾರುಣತೆ ಹಾಗೂ ಭೀಕರತೆಯನ್ನು ಪ್ರತಿಮಿಸುತ್ತದೆ.ಇಲ್ಲಿಯ ದುಃಸ್ವಪ್ನ ಕೇವಲ ಧೃತರಾಷ್ಟ್ರಸಂತತಿಗೆ ಮಾತ್ರ ಅನ್ವಯಿಸದೆ, ವೈಜ್ಞಾನಿಕ ವಿಕೃತಿಗಳ ಯುದ್ಧಗಳ ತಾಂಡವದ ಹಿನ್ನಲೆಯಲ್ಲಿ ಇಡೀ ಮಾನವ ಜನಾಂಗದ ದುಃಸ್ವಪ್ನವಾಗಿ ಕಾಡುವಂತಾಗಿದೆ.

ವಿನಾಯಕರ ದೃಷ್ಟಿ ಗಾಂಧಾರಿ ದೃಷ್ಟಿಯಂತೆ ಮಾನವ ಜನಾಂಗದ ಉಳಿವಿಗಾಗಿ ಚಿಂತಿಸುವ ಹಾದಿಯಲ್ಲಿದೆ.

ಏಟ್ಸನ ಸೆಕೆಂಡ ಕಮಿಂಗ್, ವೇಸ್ಟಲ್ಯಾಂಡ್, ಎಡಿಥ್ ಸಿಟ್‌ವೆಲ್ಲಳ ಐಂಡ್ ಸ್ಟಿಲ್ ಫಾಲ್ಸ ದಿ ರೇನ್ ತರಹ ಮಾವನ ಜನಾಂಗದ ಅಳಿವು ಉಳಿವುಗಳ ಕುರಿತ ವಿಚಾರ ಈ ಪದ್ಯದಲ್ಲಿ ಮಹತ್ವಪಡೆಯುತ್ತದೆ. ಈ ಅರ್ಥದಲ್ಲಿ ವಿನಾಯಕರು ಏಟ್ಸನ ತರಹ ಹಳೆಗಾಲದ ಮಿಥ್‌ಗಳಿಂದ ಪ್ರೇರಿತರಾಗಿ, ವರ್ತಮಾನದಲ್ಲಿ ನಿಂತು ಚಿಂತಿಸುವ ದೃಷ್ಟಿಯಿಂದ 'ದುಃಸ್ವಪ್ನ' ಅತ್ಯಂತ ಗಮನಾರ್ಹ ಪದ್ಯವಾಗುತ್ತದೆ.

ಈ ಸಂಕಲನದ ಇನ್ನಿತರ ಪದ್ಯಗಳಲ್ಲಿ ಹಲವು ಕಡೆಗೆ ನವ್ಯದ ಅಭಿವ್ಯಕ್ತಿ ರೂಪಗೊಳ್ಳಲಿರುವುದನ್ನು ಅವರಾಯ್ದುಕೊಳ್ಳುವ ಉಪಮ ರೂಪಕ ಸಂಕೇತಗಳಲ್ಲಿ ಗುರ್ತಿಸಬಹುದು.

'ಕಾಮಣಿಗಣ್ಣಿಗೆ ಎಲ್ಲವೂ ಹಳದಿಯಾದಂತೆ
ಕವಿಯ ಕಣ್ಣಿಗೆ ಬರಿ ಹಸಿರಾಗಿ ತೋರುತಿದೆ ಈ ತೋಟ.
ಅಲ್ಲಿ ನೀರಂತೆ ಹಣಿಸಿದ ಮಾಳಿಯ ರಕ್ತವನ್ನು
ನೋಡುವ ಕಣ್ಣೇ ಇಲ್ಲ – ಇಲ್ಲ

ತಂತಿದೀಪಬಯಸಿ ಸ್ವಿಚ್ಚು
ಹಿಡಿಯೇ ಕೈಗೆ ಧಕ್ಕೆ – ದ್ವಂದ್ವಮಯ ಜಗತ್ತು

ಅಸಹ್ಯ ಅಸಾಧ್ಯ ಬಿಳಿಬೆಳಕಿನ
ಕಠಾರಿ ಇಂದ ನಂಜು ಪಸರಿಸಿದ
ಹಳೆಯ ರಣಹದ್ದೊಂದು
ವರ್ತುಲಾಕಾರವಾಗಿ
ಯಮ ತೋರಿಸಿದ ನಿರಾಶೆಯಂತೆ

ಓಲಾಡುತ್ತಿದೆ. — ಮಧ್ಯಾಹ್ನ

ಮಾಸತಿಯ ಹಳದಿ ಕುಂಕುಮದ
ತೊಡಿಗೆ ತೊಡೆದಂಥ ಅಗ್ನಿಪರುಷ. — ಮನ್ವಂತರ

ಬಂತು ಬಂತು ಜ್ವಾಲ !
ಅಂತೆ ಚೀನ, ತಿಬೇಟು, ವೀಯತ್,
ನಾಮ್, ಮಂಚೂರಿಯಾ, ಕೋರಿಯ,
ತೋರಿರುವವು ದಾರಿಯ
ನಕ್ಕ ನೆತ್ತರನ ಮುಗಿಲಿನೆತ್ತರವನಲ್ಲಗಳೆವ ಜ್ವಾಲಿ
ಸವುದೆ ರುಂಡಮಾಲೆ
ಯಜ್ಞಪಶುವಂತೆ ನಡೆದ ಮನುಕುಲವು
ಸಾಗುತಿಹುದು ಮುಗ್ಧ
ಇಂದು ನಾಳೆ ದಗ್ಧ ! - ಮನ್ವಂತರ

ಇಲ್ಲಿಯ ಉಪಮೆ ರೂಪಕಗಳು ಹಳೆಯ ಬಂಧವನ್ನು ಬಿಡಿಸಿಕೊಂಡು ಮುಕ್ತವಾಗಿ ಸಲಿಲದ ಹಾಗೆ ಹಿಗ್ಗಿ ಹರಿಯುವುದನ್ನು ಕಾಣಬಹುದು. ಇತಿಹಾಸ, ಯುದ್ಧ, ವಿಜ್ಞಾನದಂತಹ ವಿವಿಧ ಕ್ಷೇತ್ರಗಳಿಂದ ಭಾಷೆ ಅಲಂಕರಣ ಗೊಳ್ಳುವುದನ್ನು ಸೂಕ್ಷ್ಮವಾಗಿ ಅವಲೋಕಿಸಬಹುದು. ಮನುಕುಲದ ಬಗೆಗಿನ ಅಪಾರ ಕಾಳಜಿ ವಿನಾಯಕರ ಬಹಳಷ್ಟು ಪದ್ಯಗಳನ್ನು ಪ್ರಭಾವಿಸುವಂತಿದೆ. ಕ್ಲಾಸಿಕಲ್ ಎಂದೆನಿಸಬಹುದಾದ ವಿಷಯವನ್ನು ವಿನಾ ಯಕರು ಆಧುನಿಕ ಸಂವೇದನೆಗೊಗ್ಗುವಂತೆ ತಮ್ಮ ಪದ್ಯಗಳಲ್ಲಿ ಹಿಡಿಯಲೆತ್ನಿಸಿದ್ದಾರೆ ಎಂದೆನಿಸುತ್ತದೆ.

ಯುದ್ಧ, ಅಶಾಂತಿ, ಅತೃಪ್ತಿ, ನಿರಾಶೆ, ವಿಜ್ಞಾನದ ವಿಕೃತಿಗಳ ಹೊಗೆ ಕವಿದ ನಾಗರಿಕತೆಯನ್ನು ಗಂಡಾಂತರದಿಂದ ಉಳಿಸಬೇಕೆನ್ನುವ ಆರ್ತಸ್ವರ ವಿನಾಯಕರ ಪದ್ಯಗಳ ಮುಖ್ಯ ಭಾವವಾಗಿದೆ. 'ಮನ್ವಂತರ' ಪದ್ಯ ಯುದ್ಧದ ಜ್ವಾಲೆ ಹಾಗೂ ನೈರಾಶ್ಯ ಜಾಲದ ಹಾಗೆ ಹಬ್ಬಿಕೊಳ್ಳುತ್ತ ಇಡೀ ಮಾನವ ಬಾಳನ್ನು ವ್ಯಾಪಿಸಿ ದಹಿಸುವದನ್ನು ಬಣ್ಣಿಸುತ್ತದೆ. ಪದ್ಯ ಅತ್ಯಂತ ಸರಳವಾಗಿ ಜ್ವಾಲೆ ವ್ಯಾಪಿಸುತ್ತ ಹೋಗುವದನ್ನು ಸಂಕೇತಿಸುತ್ತದೆ. ಜ್ವಾಲೆ ಚಿತ್ರ ವಿಚಿತ್ರವಾಗಿ ತನ್ನ ಕೆನ್ನಾಲಗೆಗಳನ್ನು ಚಾಚಿ ಯುದ್ಧದ ಭೀಕರತೆಯನ್ನು ಹಾಗೂ ಬಿಸಿಯನ್ನು ತಟ್ಟಿಸುವಂತಾಗುತ್ತದೆ. ಇಡೀ ಪದ್ಯದ ಉದ್ದಕ್ಕೂ ಜ್ವಾಲೆಯ ಪ್ರತಿಮೆಯೇ ಬೆಳೆಯುತ್ತ ಹೋಗುತ್ತದೆ. ಸಂಕೇತ ಹಾಗೂ ಪ್ರತಿಮೆಗಳ ಗೊಂದಲವಿಲ್ಲದೇ ಪದ್ಯ ಬೆಳೆಯುತ್ತಿದ್ದಂತೆ ಅದರ ಮುಕ್ತ ಧಾಟಿ ಹಾಗೂ ಮುಕ್ತ ಲಯ ಜ್ವಾಲೆಯ ಆಟವನ್ನು ಆಡುವಲ್ಲಿ ಸಫಲತೆಯನ್ನು ಹೊಂದಿದೆ.

ಈ ಪದ್ಯದ ಜೊತೆಗೆ ' ಮಧ್ಯಾಹ್ನ'ವನ್ನು ಇಟ್ಟು ನೋಡಿದರೆ

ಹಿಟ್ಲರನ ಮೂಲಪುರುಷ ಚಂಡಭಾಸ್ಕರ

ನಿರ್ಮಿಸಿದ ನಿರ್ವಯಲ ಸೆರಮನೆಯ ನೋಡಾ

ಹಿಟ್ಲರನ ತೀಕ್ಷ್ಣ ಹಾಗೂ ಕ್ರೂರ ಮನೋಭಾವ ವ್ಯಾಪಾರ ಚಂಡಭಾಸ್ಕರನಂತೆ ಭಯಾವಹವಾಗಿರುವದು ವೇದ್ಯವಾಗುತ್ತದೆ.

ಮಧ್ಯಾಹ್ನ –ಹಿಟ್ಲರ –ಚಂಡಭಾಸ್ಕರ ಈ ಮೂರೂ ಪದಗಳು ಬೆಂಕಿಯ ಸರಳುಗಳ ಸೆರಮನೆಯನ್ನು ನಿರ್ಮಿಸುವಲ್ಲಿ ಸಮರ್ಥವಾಗಿವೆ.ಮಧ್ಯಾಹ್ನದ ಪ್ರತಿಮೆ ಇನ್ನೂ ಬೆಳೆಯುತ್ತ ಹೋಗಿ

ಅಸಹ್ಯ ಅಸಾಧ್ಯ ಬಿಳಿ ಬೆಳಕಿನ
ಕಠಾರಿ ಇರಿದ ನಂಜು

ಎನ್ನುವಂತೆ ತೀಕ್ಷ್ಣವಾಗಿ ಮಜಲನ್ನು ರಚಿಸಿಕೊಳ್ಳುತ್ತದೆ.

ಹಳೆಯ ರಣಹದ್ದೊಂದು
ವರ್ತುಲಾಕಾರವಾಗಿ
ಯಮ ತೋರಿಸಿದ ಕರಿ ನಿಶಾನೆಯಂತೆ
ಓಲಾಡುತ್ತಿದೆ.

ಹಳೆಯ ರಣಹದ್ದಿನ ಪ್ರತಿಮೆಯಿಂದ ಮಧ್ಯಾಹ್ನದ ತೀಕ್ಷ್ಣತೆ ಹಾಗೂ ಭೀಕರತೆ ಇನ್ನೂ ಹೆಚ್ಚಾಗಿ, ಪದ್ಯದ ಅರ್ಥವಿಸ್ತಾರಕ್ಕೆ ಮಹತ್ವ ಪ್ರಾಪ್ತವಾಗುತ್ತದೆ. ಈ ಪದ್ಯದಲ್ಲಿ ಬಳಸಲ್ಪಟ್ಟಿರುವ ' ಬಿಳಿ ಬೆಳಕಿನ ಕಠಾರಿ ' ಹಳೆಯ ರಣಹದ್ದು' 'ಯಮ ತೋರಿಸಿದ ಕರೀ ನಿಶಾನೆ' ಇಂಥ ಹೊಸ 'ಪದಾವಲಿಗಳು ಮಧ್ಯಾಹ್ನದ ಪ್ರಖರತೆಯನ್ನು ಮಾತ್ರ ಸೂಚಿಸುವದಲ್ಲದೆ ಯುದ್ಧದ ಭೀಕರತೆ'ಯನ್ನೂ ಸಂಕೇತಿಸುತ್ತವೆ.

ಹಿಟ್ಲರನ ಮೂಲಪುರುಷ ಚಂಡಭಾಸ್ಕರ

ಎನ್ನುವ ಒಂದೇ ಒಂದು ಸಾಲು ಈ ಸಾಲಾಗಿ ಅರ್ಥದ ಪಂಥಿಯನ್ನು ಬಿಚ್ಚಲು ಸಹಾಯಕವಾಗುತ್ತದೆ. ರಾಜಕೀಯದ ಭೀಕರತೆಯನ್ನು ಧ್ವನಿಸುವಲ್ಲಿ ಸಾರ್ಥಕ ವಾಗುತ್ತದೆ. ಈ ದೃಷ್ಟಿಯಿಂದ ಮಧ್ಯಾಹ್ನ ಪದ್ಯ ಅಂದಿನ ಮಹಾಯುದ್ಧದ ಕಾವನ್ನು ಹಿಡಿದು, ಅದಕ್ಕೊಂದು ಹೊಸ ರೂಪಕೊಡುವಲ್ಲಿ ಯಶಸ್ಸನ್ನು ಸಂಪಾದಿಸಿದೆ ಎನ್ನಬಹುದು. ಸಂಕ್ಷಿಪ್ತತೆಯಿಂದ, ಸಂಕೇತ ಹಾಗೂ ಪ್ರತಿಮೆಗಳಿಂದ ಪದ್ಯ ನವ್ಯದ ಅಂಗಿಯನ್ನು ತೊಟ್ಟಿರುವುದು ಗಮನಾರ್ಹ.

ಇನ್ನಿತರ ಪದ್ಯಗಳಿಗಿಂತಲೂ ' ಮಧ್ಯಾಹ್ನ ' ಹೆಚ್ಚು ಶ್ರಮವಹಿಸಿ ಬರೆದ ಪದ್ಯವೆನ್ನಿಸುತ್ತದೆ. ಅಲ್ಲಲ್ಲಿ ಶಿಥಿಲವಾಗಿ ದ್ರವದಂತೆ ಪ್ರವಹಿಸುವ ಭಾವ ಇಲ್ಲಿ ಗಟ್ಟಿಗೊಂಡು ಮೂರ್ತಗೊಳ್ಳುವುದನ್ನು ಸೂಚಿಸುತ್ತದೆ.

ವಿನಾಯಕರ ಕಾವ್ಯ ಭಾವದಿಂದ ದೃಶ್ಯಕ್ಕೆ ನವ್ಯಕ್ಕೆ ಕ್ರಮಿಸುತ್ತಿರುವುದರ ಸ್ಪಷ್ಟ ಗುರ್ತುಗಳು, ಬೀಜಗಳು ಅವರ ಪದ್ಯಗಳಲ್ಲಿಯೇ ಇವೆ.

ಮನವಿದೊಂದು ಕಾಂಡಪಟ
– ಮನಸ್ಸು

ಒಂದೆ ದೃಶ್ಯ ಕಾವ್ಯ ಸರ್ವ
ದಿಶೆಗಳಲ್ಲಿ ಪ್ರವಹಿಸುತ್ತ
- - - - - - - - - - - - - - -
ನೀನೆ ಪಾತ್ರ, ಪ್ರೇಕ್ಷಕ
– ಮನಸ್ಸು

ಬೇರೆ ಪದರುಗಳ ವಿವಿಧ ಹೊದರುಗಳ
ಹಾಯ್ದು ಬಂದೆ ನಾನು
– ಜ್ಯೋತಿರ್ಗಂಗೆಯ ತಾಣ

ವಿನಾಯಕರಲ್ಲಿನ ಕವಿ ಮನಸ್ಸು ಕಾಲಪ್ರವಾಹದೊಂದಿಗೆ ಸಂಭವಿಸುವ ಬದಲಾವಣೆಗಳನ್ನು ನಿರೀಕ್ಷಿಸಿ, ವಿಶ್ಲೇಷಿಸಿ, ಹಿಗ್ಗುತ್ತ ಹೊಸ ರೀತಿಯನ್ನು ಅಳವಡಿಸಿಕೊಳ್ಳುವ ಹಂಬಲ ಹೊಂದಿರುವದು. ಹಳೆ ಮತ್ತು ಹೊಸತನಗಳನ್ನು ಬೆಸೆಯುವಂತೆ ಅಳವಡಿಸಿಕೊಳ್ಳುವ ಪೌರಾಣಿಕ, ಐತಿಹಾಸಿಕ ಘಟನೆ ಸನ್ನಿವೇಶ ಹಾಗೂ ಮಿಥ್‌ಗಳು ಅವರ ' ಸಮನ್ವಯ ' ಮಾರ್ಗವನ್ನು ಸೂಚಿಸುತ್ತವೆ. 'ಜ್ಯೋತಿರ್ಗಂಗೆಯ ತಾಣ' ಪದ್ಯದಲ್ಲಿ ಬರುವ ' ಸಮನ್ವಯ ' ವಿನಾಯಕರ ಕಾವ್ಯ ಸಿದ್ಧಿಯ ಮಾರ್ಗವನ್ನು ಸಂಕೇತಿಸುತ್ತದೆ ಎನ್ನಬಹುದು.

ರೇಡಿಯೋ, ದ್ವಂದ್ವಮಯ ಜಗತ್ತು, ಇಲ್ಲ, "ಶೂನ್ಯ ಮುಂತಾದ ಪದ್ಯಗಳಲ್ಲಿ ಸುಂದರತೆ-ಅಸುಂದರರತೆ, ಆಶೆ-ನಿರಾಶೆ, ಸುಖ-ದುಃಖ, 'ಸೋಲು-ಗೆಲುವು' ನಂಬಿಕೆ-ಅಪನಂಬಿಕೆ ಇಂಥಾ ದ್ವಂದ್ವ ವಿಷಯಗಳನ್ನೆತ್ತಿಕೊಂಡು ಮುಕ್ತವಾಗಿ ಬರೆಯುವ ಹವಣಿಕೆಯನ್ನು ಎತ್ತಿತೋರುತ್ತವೆ.

ಶೂನ್ಯದಲ್ಲಿ ಪ್ರಯೋಗಗೊಂಡಿರುವ ಅನ್ಯದೇಶಿಯ ಪದಾವಲಿಗಳನ್ನು ನೋಡಬಹುದು. ಫೈಡಿಯಾಸ, ಓರ್‍ಯಾಮಿಡ್ಸು, ವುಮಿ, ಹಕರ್ಯೂಲರ, ಸೀಜರ ಇತ್ಯಾದಿ ಅನ್ಯದೇಶೀಯ ಮಿಥ್‌ಗಳನ್ನು ನಿರಾಯಾಸವಾಗಿ ಬಳಸಿರುವದನ್ನು

ನೋಡಬಹುದು.

ಫೈಡಿಯಾಸನ ಶಿಲ್ಪ ಬಿತ್ತು ಬಿದ್ದಿತು ಹೊರಳಿ
ಮರೆವ ಪಿರಮಿಡ್
ಲೋಭಾನ ದ್ರವ್ಯದಲ್ಲಿ ಹೂತಿಟ್ಟ ಮಮಿಗಳಾಕೆ

ನವ್ಯದ ಭೂಮಿಕೆಯನ್ನು ರಚಿಸುವುದಕ್ಕೆ ಅಗತ್ಯವೆನಿಸುವ ಸಾಧ್ಯತೆಗಳನ್ನು ವಿನಾಯಕರ ಕಾವ್ಯ ತೋರಿಸುವುದು ಗಮನಾರ್ಹ.

ಕಲ್ಲನೆತ್ತಿ ನೋಡಲಲ್ಲಿ
ಒಂದು ಕರಿಯ ಚೇಳು

ಭಾಷೆಯನ್ನು ನಿರಾಡಂಬರವಾಗಿ ಬಳಸಿಕೊಳ್ಳುವಲ್ಲಿ ವಿನಾಯಕರು ಹಿಂದು ಮುಂದು ನೋಡುವದಿಲ್ಲ. ಮಣ್ಣಿಗೆ ಒಮ್ಮೊಮ್ಮೆ ಯಾವ ಬಣ್ಣ ಕೊಡದಿದ್ದರೂ ಕಾರುಹುಣ್ಣಿಮೆಯ ಮಣ್ಣೆತ್ತುಗಳಂತೆ, ಮೊಹೆಂಜೊದಾರೋದ ಆಟಿಗೆಗಳಂತೆ ಇದ್ದಕ್ಕಿದ್ದ ಹಾಗೆ ಅವುಗಳ ಸಾಂಸ್ಕೃತಿಕಸತ್ವದಿಂದ ಅರ್ಥ ಹಿಗ್ಗುವಂತಾಗುತ್ತದೆ. ಇಂಥ ಪದ್ಯಗಳ ರಚನೆ ನವ್ಯ ಕಾವ್ಯದ ಕೈಕೆಲಸವೆಂದು ಭಾವಿಸಬಹುದು.

ವರ್ತಮಾನದ ಬಗ್ಗೆ ಪದ್ಯ ಬರೆಯುತ್ತಿದ್ದರೂ ಪುರಾಣ, ಇತಿಹಾಸಗಳ ಗವಿಗಳಿಂದ ಸಾಮಗ್ರಿಗಳನ್ನು ತಿರಿದು ತಂದು , ಸಮನ್ವಯದ ನವ್ಯ ಕಾವ್ಯ ಭೂಮಿಯನ್ನು ಸಿದ್ಧಗೊಳಿಸುವಲ್ಲಿ ಸಮುದ್ರಗೀತಗಳಿಂದ ನವ್ಯಕವಿತೆಗಳು ವರೆಗಿನ ವಿನಾಯಕರ ಕೃಷಿ, ಹಳೆಯ ಕಾವ್ಯದ ದಿಕ್ಕನ್ನು ಬದಲಿಸುವಲ್ಲಿ ಮಹತ್ವದ ಪಾತ್ರವಾಡಿತೆಂದು ಹೇಳಬೇಕು.

ಇದಕ್ಕೆ ನಿದರ್ಶನವಾಗಿ ಚೆನ್ನವೀರ ಕಣವಿ, ಶಿವರುದ್ರಪ್ಪ, ಗಂಗಾಧರ ಚಿತ್ತಾಲ, ಅಕಬರಲಿ ಇವರ ಪದ್ಯಗಳ ಮೂಲ ಸೆಲೆಯನ್ನು ನೋಡಬಹುದು.

ಐಂದ್ರಿಯಿಕ ಜೀವನಕ್ಕೆ ಇಂದ್ರನ ಹಿರಿಮೆಯಿತ್ತುದುಂಟು. ಆದರೆ ಅದನ್ನು ಬುದ್ಧಿಯಲ್ಲಿ ಕೇಂದ್ರೀಕರಿಸುವ ಹವಣಿಲ್ಲ. ಬುದ್ಧಿಯನ್ನು ಗರುಡ ಪಕ್ಷಿಯಂತೆ ಉಡ್ಡಾಣಿಸಲು ಬಿಟ್ಟುದುಂಟು. ಆದರೆ ಗರುಡವಾಹನನಂತೆ ಅದನ್ನೇರುವ ಗುರಿಯೇ ಇಲ್ಲ. ಇಲ್ಲ, ಇಲ್ಲವೇ ಇಲ್ಲ.

ವಿನಾಯಕರ ಕಾವ್ಯ ಪದ್ಯಲಯವನ್ನು ಬಿಟ್ಟು ಗದ್ಯಲಯವನ್ನು ರೂಢಿಸಿಕೊಳ್ಳುವ ವಿಧಾನವನ್ನು ಸೂಕ್ಷ್ಮವಾಗಿ ಅವಲೋಕಿಸಬಹುದು.

ಶರಣರ ವಚನಗಳ ಧಾಟಿ, ಧೋರಣೆ ವಿನಾಯಕರ ಕಾವ್ಯಕ್ಕೆ ಹೊಸ

ತಿವರಣವನ್ನು ಕಲ್ಪಿಸುತ್ತಿರುವದನ್ನು ಗಮನಿಸಬಹುದು.ಸಹಜ ಮಾತುಗಳು ಉಕ್ತಿಗಳಾಗಿ ಪರಿಣಮಿಸಿ, ಒಂದು ಭಾವವನ್ನು ಮೂಡನ್ನು ವಿಚಾರವನ್ನು ಪ್ರಕಟಿಸುವ ಸ್ವತಂತ್ರ ರೂಪವನ್ನು ನಿರ್ಮಿಸಿಕೊಳ್ಳುವುದು ಗಮನಾರ್ಹ. ಇಂಗ್ಲಿಷಿನಲ್ಲಿನ ಹೊಸ ಪ್ರಯೋಗವನ್ನು ಕಂಡುಕೊಂಡರೂ ಅಭಿವ್ಯಕ್ತಿಗೆ ಭಾರತೀಯತೆಯ ಒಪ್ಪಕೊಡುವ ವಿನಾಯಕರ ಕಾವ್ಯ ಸಹಜವಾಗಿಯೇ ಜಿಜ್ಞಾಸೆಯನ್ನು ಹುಟ್ಟಿಸುತ್ತದೆ.

ವಿನಾಯಕರ ಈ ನವ್ಯ ಕವಿತೆಗಳಲ್ಲಿ ಪ್ರಯೋಗಗೊಂಡಿರುವ ಮಾಲಕ, ಚಾಲಕ, ಧಕ್ಕೆ, ಥೈಲಿ, ಥಾಳ್ಯಸು, ಥಾಲು, ಊರುಭಂಗ, ಮಾಸತಿ, ಧಮ್ಮಪದ, ಜಂತ್ರಿ, ಮುಂತಾದ ಶಬ್ದಗಳು ವಿನಾಯಕರ ವಿಶಿಷ್ಟದೃಷ್ಟಿಗೆ ಪ್ರತೀಕವಾಗಿವೆ. ಸಮಕಾಲೀನ ಸಂದರ್ಭವನ್ನು ಕಾವ್ಯದಲ್ಲಿ ಹಿಡಿಯುವಾಗ ಪೌರಾಣಿಕ, ಐತಿಹಾಸಿಕ, ಸಾಂಸ್ಕೃತಿಕ ಸಮಕಾಲೀನ ನುಡಿಗಟ್ಟನ್ನು ಯೋಜಿಸುವ ಪ್ರಜ್ಞೆಯಿರುವುದನ್ನು ಸೂಚಿಸುತ್ತವೆ.

'ನವ್ಯಕವಿತೆಗಳು' ಸಂಕಲನ ಪದ್ಯಗಳು ಮುಂದೆ ಬರಲಿರುವ ನವ್ಯ ಮಾರ್ಗಕ್ಕೆ ಒಂದು ಭೂಮಿಕೆಯನ್ನು ಒದಗಿಸಿದ್ದು, ವಿನಾಯಕರು ಮಾಡಿದ ಈ ಕೃತಿ ಅತ್ಯಂತ ಗಮನಾರ್ಹವಾದದ್ದು. ' ಸಮುದ್ರಗೀತಗಳು ' ಪದ್ಯಗಳಿಂದ ಹಿಡಿದು ಇಂದಿಲ್ಲ ನಾಳೆ ವರೆಗಿನ ಪದ್ಯಗಳಿಗೆ ಒಂದು ಹೊಸ ದಾರಿಯನ್ನು ತೆರೆದು ತೋರಿದ್ದುಂಟು.

❑ ❑

ಗೋಕಾಕ : ವಿಮರ್ಶೆ

– ಟಿ. ನ. ಮಂಗಳಾ

"From time to time, every hundred years or so, it is desirable that some critic shall appear to review the past of our literature and set the poets and the poems in a new order"

- T. S. Eliot

(The use of Poetry and the use of Criticism-1933)

ವಿಮರ್ಶಕರಾಗಿ ಡಾ. ವಿನಾಯಕ ಕೃಷ್ಣ ಗೋಕಾಕರು ಕನ್ನಡ ಸಾಹಿತ್ಯಕ್ಕೆ ನೀಡಿದ ಅತ್ಯಂತ ಮೌಲಿಕವಾದ ಕೊಡುಗೆ ಈ"New Order" .

ಕನ್ನಡ ಕಾವ್ಯವನ್ನೂ ಕಾವ್ಯ ಚಿಂತನವನ್ನೂ ಹೊಸದಿಕ್ಕಿನಲ್ಲಿ ತೊಡಗಿಸಿದ್ದೇ ವಿನಾಯಕ ಕೃಷ್ಣ ಗೋಕಾಕರ ವಿಮರ್ಶೆಯ ಹಿರಿಮೆ. ಗೋಕಾಕರು ಕನ್ನಡ ಕಾವ್ಯಕ್ಕೆ ಅದರ "New Order" ಕೊಟ್ಟಾಗ ಅಥವಾ ಮೂಡಣ ಪಡುವಣ ಎರಡೂ ಸಂಸ್ಕೃತಿಗಳ ಸಮಾಗಮ, ಸಂಗಮ ಅವರಲ್ಲಾದಾಗ ಹೊರಹೊಮ್ಮಿದ ನವನವೋನ್ಮೇಷಶಾಲಿನಿಯಾದ ಪ್ರಜ್ಞಾಪ್ರವಾಹ ಕನ್ನಡಕಾವ್ಯಕ್ಕೆ ಒಂದು ಹೊಸ "word Order" ಹಾಗೂ ಹೊಸದೊಂದು "world Order" ಎರಡನ್ನೂ ತಂದುಕೊಟ್ಟವು. ಇಲ್ಲಿ "word" ಎಂಬ ಪದವನ್ನು ಬರೀ 'ಪದ' ಎಂಬರ್ಥದಲ್ಲಲ್ಲದೆ ಅದರ ವಿಶಾಲವಾದ, ಆಳವಾದ, ಅರ್ಥಗರ್ಭಿತವಾದ "ಶಬ್ದ" ಎಂಬರ್ಥದಲ್ಲಿ ಉಪಯೋಗಿಸಿದ್ದೇನೆ. ಶಬ್ದ 'ಬ್ರಹ್ಮ'ಮಯಿ. ಶಬ್ದದಲ್ಲಿ ವಿಶೇಷವಾದ ಕರ್ತೃತ್ವ ಶಕ್ತಿಯಿದೆ, ಸೃಜನಶೀಲತೆಯಿದೆ, ಜೀವಂತಿಕೆಯಿದೆ, ಸ್ಫುರಣಶಕ್ತಿಯಿದೆ, ಚೈತನ್ಯವಿದೆ.

ನವೋದಯದಲ್ಲೇ ನಾರುತ್ತ ನಿಂತ ಕನ್ನಡ ಕಾವ್ಯಕ್ಕೆ ಹೊಸ "word Order"ನ ಅಗತ್ಯವಿತ್ತು. ಜೊತೆಗೆ ಈ ಹೊಸ ಶಬ್ದಸೃಷ್ಟಿ ಬರೀ ಭಾಷಾ ಪ್ರಯೋಗದಲ್ಲೇ ತನ್ನ ಹೊಸತನ್ನು ಕಂಡುಕೊಳ್ಳದೆ, ಇಡೀ ಜಗತ್ತನ್ನೇ ತನ್ನಲ್ಲಿ ತುಂಬಿಕೊಂಡು, ವಿಶ್ವಾತ್ಮಕವಾಗಿ ಸಮಕಾಲೀನ ಪ್ರಸ್ತುತತೆಯನ್ನು ಪಡೆದ ಹೊಸ ಜಾಗತಿಕ ಹರಹನ್ನು ಪಡೆಯಬೇಕಾಗಿತ್ತು. ಕನ್ನಡ ಕಾವ್ಯದಲ್ಲಿ ಹೊಸದೊಂದು "word order" ಮೂಡಿ ಬರಬೇಕಾಗಿತ್ತು. ಇದಕ್ಕೆ ನಾಂದಿಯಾಯಿತು, ಗೋಕಾಕರ ವಿಮರ್ಶೆ. ಗೋಕಾಕರಿಗಿಂತ ಹಿಂದಿನ ಕನ್ನಡ ಕವಿಗಳು, ವಿಮರ್ಶಕರಿಗೆ ಕಡಲಾಚೆಯ, ಸಾಹಿತ್ಯ, ಸಂಸ್ಕೃತಿಗಳ ನೇರ ಸಂಪರ್ಕವಿರಲಿಲ್ಲ. ಆದರೆ ಗೋಕಾಕರ ಕಡಲಾಚೆಯ ಬದುಕು, ಹೊಸ ನಾಗರಿಕತೆಯ ಪರಿಚಯ, ಪಡುವಣದ ಸಾಹಿತ್ಯ ಸಂಸ್ಕೃತಿಗಳ ನೇರ ಸಂಪರ್ಕ, ಅವರ ಬದುಕು ಬರಹಗಳೆರಡ್ಕೂ ಒಂದು ವಿಶೇಷ ಸಮಕಾಲೀನ ಪ್ರಸ್ತುತತೆಯನ್ನೂ ವಿಶ್ವವ್ಯಾಪಕತೆಯನ್ನೂ ತಂದುಕೊಟ್ಟವು. ಇದರಿಂದ ಕವಿ ಚೇತನದಲ್ಲಿ ಹೊಸ ಜಾಗೃತಿ ಮೂಡಲು ಸಾಧ್ಯವಾಯಿತು. ಈ ಜಾಗೃತಿಯ ಫಲವಾಗಿ ಕನ್ನಡದ ನವೋದಯ ಪರಿಸರದಲ್ಲಿ ಗೋಕಾಕರ ಕಾವ್ಯ, ವಿಮರ್ಶೆ ನವ್ಯತೆಯ ನವ್ಯ ಧ್ವನಿಯನ್ನು ಮೊಳಗಿಸಿತು. ಕನ್ನಡ ಕಾವ್ಯದಲ್ಲಿ ನವ್ಯತೆಯ ಪ್ರತಿಪಾದನೆ ಗೋಕಾಕರ ವಿಮರ್ಶೆಯ ವೈಶಿಷ್ಟ್ಯ.

೧೯೨೯ ರಲ್ಲಿ ಗೋಕಾಕರು ಇಂಗ್ಲೀಷ ಸಾಹಿತ್ಯವನ್ನು ತೆಗೆದುಕೊಂಡು, ಮುಂಬಯಿ ವಿಶ್ವವಿದ್ಯಾಲಯಕ್ಕೆ ಮೊದಲಿಗರಾಗಿ ತೇರ್ಗಡೆಯಾದರು. ಅದೇ ಸುಮಾರಿಗೆ ಆಲೂರು ವೆಂಕಟರಾಯರಿಂದ ಗೆಳೆಯರ ಗುಂಪು 'ಜಯ ಕರ್ನಾಟಕ' ಮಾಸ ಪತ್ರಿಕೆಯನ್ನು ತೆಗೆದುಕೊಂಡಿತು. ಆ ಪತ್ರಿಕೆಯಲ್ಲಿ ವಿಮರ್ಶೆಗಾಗಿ ಬಂದ ಪುಸ್ತಕಗಳನ್ನು ಗೋಕಾಕರ ಕಡೆಗೆ ಕೊಡಲಾಯಿತು. ಅವರು ಜಯಕರ್ನಾಟಕದಲ್ಲಿ ಆ ಕೃತಿಗಳನ್ನು ವಿಮರ್ಶೆ ಮಾಡಿದರು. ೧೯೨೯ ರ ವೇಳೆಗೆ ಪ್ರಾರಂಭವಾದ ಗೋಕಾಕರ "ವಿಮರ್ಶೆ" ಯ ಕಾರ್ಯ, ಅವರು ೧೯೩೭ ರಲ್ಲಿ ಹೆಚ್ಚಿನ ವಿದ್ಯಾಭ್ಯಾಸಕ್ಕೆಂದು ಇಂಗ್ಲಂಡಿಗೆ ಹೋಗುವವರೆಗೂ ನಡೆಯಿತು. ತಳಿರು, ಕೊಳಲು ಕವನ ಸಂಕಲನಗಳ ವಿಮರ್ಶೆಯಿಂದ ಆರಂಭವಾದ ಗೋಕಾಕರ ವಿಮರ್ಶಾ ಸಾಹಿತ್ಯ ೧೯೩೪ ರಲ್ಲಿ ರಾಯಚೂರಿನಲ್ಲಿ ನಡೆದ ಕವಿಗೋಷ್ಠಿಯಲ್ಲಿ ಅವರು ಮಾಡಿದ ಅಧ್ಯಕ್ಷಭಾಷಣ-ಗದ್ಯ-ಪದ್ಯಗಳು ಹಾಗೂ ಕಾವ್ಯದಲ್ಲಿ ಮಹೋನ್ನತಿಯಲ್ಲಿ ಒಂದು ಸ್ಪಷ್ಟ ರೂಪನ್ನು ಪಡೆಯಿತು. ಇದರ ಜೊತೆಗೇ ಜಯಕರ್ನಾಟಕದಲ್ಲಿ ಕೃತಿಗಳ ವಿಮರ್ಶನ ಕಾರ್ಯವೂ ನಡೆದಿತ್ತು. ಆ ವಿಮರ್ಶೆಗಳಲ್ಲಿ ಕೆಲವು ೧೯೪೭ ರಲ್ಲಿ ಪ್ರಕಟವಾದ 'ಇಂದಿನ ಕನ್ನಡ ಕಾವ್ಯದ ಗೊತ್ತುಗುರಿಗಳು' ವಿಮರ್ಶಾ ಕೃತಿಯಲ್ಲಿ ಬಂದಿವೆ. ಈ ಕೃತಿ ಗೋಕಾಕರ ವಿಮರ್ಶಾ ಸಾಹಿತ್ಯದ ಪ್ರಥಮಕೃತಿ. ಇದಾದ ಮೇಲೆ ವಿಮರ್ಶೆಯ ಅಭ್ಯಾಸಗಳು

ಅವಲೋಕಿಸಬೇಕಾದ ಕೃತಿ ೧೯೪೪ ರಲ್ಲಿ ಪ್ರಕಟವಾದ "ಸಾಹಿತ್ಯದಲ್ಲಿ ಪ್ರಗತಿ" ಎಂಬ ಗ್ರಂಥ. ಕವಿಕಾವ್ಯ ಮಹೋನ್ನತಿ, ಇಂದಿನ ಕನ್ನಡ ಕಾವ್ಯದ ಗೊತ್ತು ಗುರಿ. ಸಾಹಿತ್ಯದಲ್ಲಿ ಪ್ರಗತಿ ಇವನ್ನು ಒಂದಾದ ಮೇಲೊಂದರಂತೆ ಓದಿದಾಗ, ಗೋಕಾಕರ ವಿಮರ್ಶೆಯು ಹೇಗೆ New order ನತ್ತ ಸಾಗುತ್ತಿದೆ ಎನ್ನುವದು ಸ್ಪಷ್ಟವಾಗುತ್ತದೆ. ಇದರ ಪರಿಣಾಮವೇ ೧೯೫೦ ರಲ್ಲಿ ಮುಂಬಯಿ ಸಾಹಿತ್ಯ ಸಮ್ಮೇಳನದಲ್ಲಿ ಗೋಷ್ಠಿಯ ಅಧ್ಯಕ್ಷರಾಗಿ ಅವರು ಮಾಡಿದ ಭಾಷಣ. ಕನ್ನಡ ಸಾಹಿತ್ಯಕ್ಕೆ ವಿಶೇಷ ತಿರುವನ್ನು ನೀಡಿದ ಭಾಷಣ ಇದು. ನವೋದಯದಿಂದ ಕನ್ನಡ ಕಾವ್ಯವನ್ನು ನವ್ಯತೆಯತ್ತ ಮುನ್ನಡೆಸಿ, ಕನ್ನಡ ಸಾಹಿತ್ಯದಲ್ಲಿ ನವ್ಯವನ್ನು ಪ್ರತಿಷ್ಠಾಪಿಸಿದ ಭಾಷಣ. ಗೋಕಾಕರು ನವ್ಯದ ಪ್ರವರ್ತಕರಾಗಿದ್ದು ಇದೇ ಭಾಷಣದಿಂದ. ಕನ್ನಡ ಕಾವ್ಯದಲ್ಲಿ ನವ್ಯಧ್ವನಿಯನ್ನು ಮೂಡಿಸಿದ್ದೂ ಇದೇ ಭಾಷಣ. ಗೋಕಾಕರ ವಿಮರ್ಶಾ ಸಾಹಿತ್ಯದಲ್ಲಿ ೧೯೭೫ ರಲ್ಲಿ ಸುರುಚಿ ಪ್ರಕಾಶನದಿಂದ ಪ್ರಕಟವಾದ 'ನವ್ಯತೆ' ವಿಮರ್ಶಾ ಗ್ರಂಥಕ್ಕೆ ವಿಶೇಷವಾದ ಸ್ಥಾನವಿದೆ. ಇದರ ಜೊತೆಗೆ ಅವರು ತಮ್ಮ ನಾಟಕಗಳಿಗೆ, ಕಾದಂಬರಿಗಳಿಗೆ ಕಾವ್ಯ ಸಂಕಲನಗಳಿಗೆ ಬರೆದಿರುವ ಮುನ್ನುಡಿಗಳೆಲ್ಲವೂ ಬರೀ ಬರಹವಾಗದೆ, ಅತ್ಯಂತ ಗಮಹಾರ್ಹ ವಿಮರ್ಶೆಯಾಗಿವೆ. ಇದರ ಜೊತೆಗೆ ಇಂಗ್ಲೀಷನಲ್ಲಿ ಬರೆದ An Integral view of poetry, ೧೯೭೮ ರಲ್ಲಿ ಮೈಸೂರಿನ ಶ್ರೀವಿದ್ಯಾವರ್ಧಕ ಟ್ರಸ್ಟ ಪ್ರಕಟಿಸಿರುವ 'ಕವನಗಳಲ್ಲಿ ಸಂಕೀರ್ಣತೆ', ಬೆಂಗಳೂರು ವಿಶ್ವವಿದ್ಯಾಲಯ ಪ್ರಕಟಿಸಿದ 'ಋಗ್ವೇದದಲ್ಲಿ ಕ್ರಾಂತದೃಷ್ಟಿ' ಇವೂ ಗೋಕಾಕರ ವಿಮರ್ಶಾ ಸಾಹಿತ್ಯದ ಸಂಪನ್ನತೆಯನ್ನು ಹೆಚ್ಚಿಸಿವೆ. ಗೋಕಾಕರ ಸೌಂದರ್ಯ ಮೀಮಾಂಸೆಯ ಗ್ರಂಥಗಳಾದ ಸೌಂದರ್ಯ ಮೀಮಾಂಸೆ, ಕಲೆಯ ನೆಲೆ, ಚೆಲುವಿನ ನಿಲುವು, Western Thought and Indian Aesthetics ಗ್ರಂಥಗಳೂ ಅವರ ವಿಮರ್ಶೆಯ ನೆಲೆ-ಬೆಲೆಗಳನ್ನು ಗುರುತಿಸಲು ಸಹಾಯಕ ವಾಗಿವೆ. ಇವಲ್ಲದೆ ಗೋಕಾಕರು ತಾವು ಆರಂಭಿಸಿದ ಮಾಸಿಕ 'ಸಮನ್ವಯಕ್ಕೆ' ಬರೆದ ಸಂಪಾದಕೀಯಗಳೂ, ಇಂಗ್ಲೀಷಿನಲ್ಲಿರುವ ವಿಮರ್ಶಾ ಲೇಖನಗಳೂ ಗ್ರಂಥಗಳೂ ಗೋಕಾಕರ ವಿಮರ್ಶೆಯ ಭಾಗವಾಗಿವೆ. ಜಯಕರ್ನಾಟದಲ್ಲಿನ ವಿಮರ್ಶೆಗಳು ಅವರ ಹೆಸರನ್ನು ಕರ್ನಾಟಕದಲ್ಲಿ ಪ್ರಸಂಶಿಸಿದರೆ, ಆಂಗ್ಲ ಪತ್ರಿಕೆ 'ತ್ರಿವೇಣಿ'ಯಲ್ಲಿ ಅವರು ಬೇಂದ್ರೆಯವರ ಬಗ್ಗೆ ಹಾಗೂ ಇತರರ ಬಗ್ಗೆ ಬರೆದ ಲೇಖನಗಳು ಅವರಿಗೆ ರಾಷ್ಟ್ರೀಯ ಖ್ಯಾತಿಯನ್ನು ಗಳಿಸಿಕೊಟ್ಟವು.

ವಿಮರ್ಶೆ ಎಂದರೇನು ? ವಿಮರ್ಶಕನಿಗಿರಬೇಕಾದ ಗುಣಗಳೇನು ? ಅವರ ಕರ್ತವ್ಯಗಳೇನು? ಎಂಬುದಕ್ಕೆ ಆಂಗ್ಲ ವಿಮರ್ಶಕರಾದ ಕೋಲ್‌ರಿಜ್, ಆರ್ನಾಲ್ಡ್, ಟಿ.ಎಸ್. ಇಲಿಯಟ್, ಐ.ಎ. ರಿಚರ್ಡ್ಸ ವಿಮರ್ಶಕರೂ ಉತ್ತರಿಸಿದ್ದಾರೆ. ಕೆಲವೊಂದು ಮೂಲಭೂತವಾದ ತತ್ವಗಳ, ಮೌಲ್ಯಗಳ ಮೇಲೆ ಸಾಹಿತ್ಯವನ್ನೂ ಕೃತಿಗಳನ್ನೂ

ವಿಶ್ಲೇಷಿಸುವವನು ವಿಮರ್ಶಕ. ಇಂತಹ ವಿಮರ್ಶೆ ಕೃತಿಗಷ್ಟೇ ಸೀಮಿತವಾಗಿದ್ದು, ಕೃತಿಕಾರನನ್ನು ಹಿನ್ನೆಲೆಯಲ್ಲಿಡಬೇಕು. ಯಾವ ವಿಮರ್ಶೆ "ವಸ್ತುನಿಷ್ಠ"ವಾಗದೆ "ವ್ಯಕ್ತಿನಿಷ್ಠ"ವಾಗುತ್ತದೋ ಅದು ವಿಮರ್ಶೆಯೇ ಅಲ್ಲ. ಇತ್ತೀಚೆಗೆ ಗೋಕಾಕರಿಗೆ 'ಜ್ಞಾನಪೀಠ ಪ್ರಶಸ್ತಿ' ಬಂದ ಸುಮಾರಿಗೆ ನವ್ಯಕವಿಗಳ ಬಗೆಗೆ ಪ್ರಕಟವಾದ ಲೇಖನ ದಲ್ಲಿ ಲೇಖಕ ಗೋಕಾಕರ ಹೆಸರನ್ನು ಕೂಡ ಪ್ರಸ್ತಾಪಿಸದೆ ಇದ್ದದ್ದನ್ನು ಗೋಕಾಕರೇ ತಮ್ಮದೊಂದು ಇತ್ತೀಚಿನ ಸಂದರ್ಭದಲ್ಲಿ ಪ್ರಸ್ತಾಪಿಸಿದ್ದಾರೆ. ಇಂತಹ ಪೂರ್ವಗ್ರಹ ಪೀಡಿತ ಬರಹ ವಿಮರ್ಶೆಯಲ್ಲ. ವಿಮರ್ಶಕ ಚರ್ಚಿಸಬೇಕಾದದ್ದು, ಮೌಲ್ಯಮಾಪನ ಮಾಡಬೇಕಾದದ್ದು ಸಾಹಿತ್ಯವನ್ನಷ್ಟೇ ಹೊರತು, ಸಾಹಿತಿಯನ್ನಲ್ಲ.

ಗೋಕಾಕರ ವಿಮರ್ಶಾಸಾಹಿತ್ಯ ವಸ್ತುನಿಷ್ಠತೆಗೂ, ವಿಶ್ವವ್ಯಾಪಕತೆಗೂ, ಸಮಕಾಲೀನ ಪ್ರಸ್ತುತತೆಗೂ, ವಿಮರ್ಶಾತತ್ವಗಳ ಮೌಲಿಕ ಪ್ರತಿಪಾದನೆಗೂ ಮಾದರಿಯಾಗಿದೆ. ಅವೆಲ್ಲವನ್ನೂ ಕುರಿತು ಬರೆಯುವುದು ಈ ಲೇಖನದಲ್ಲಿ ಸಾಧ್ಯವಲ್ಲವಾದ್ದರಿಂದ ಅವರ ವಿಮರ್ಶಾಸಾಹಿತ್ಯದ ಮೂರು ಮುಖ್ಯ ಹೆಜ್ಜೆಗಳನ್ನು ಮಾತ್ರ ನಾನು ಇಲ್ಲಿ ಗುರುತಿಸುವ ಪ್ರಯತ್ನ ಮಾಡುತ್ತೇನೆ.

ಮೊದಲನೆಯ ಮುಖ್ಯ ಹೆಜ್ಜೆ : ಕನ್ನಡ ಸಾಹಿತ್ಯದಲ್ಲಿ ನವ್ಯತೆಯ ಆವಶ್ಯಕತೆ ಯನ್ನು ಪ್ರಕಟಪಡಿಸಿದ್ದು.

ಎರಡನೆಯದು : ವಿಮರ್ಶೆ ಹಾಗೂ ವಿಮರ್ಶಕ ಹೇಗೆ ಸಮತೋಲನವನ್ನು ಕಾಯ್ದುಕೊಳ್ಳಬೇಕು ಎಂಬುದನ್ನು ಸ್ಪಷ್ಟಪಡಿಸಿದ್ದು.

ಮೂರನೆಯದು : ಸೌಂದರ್ಯ ಮೀಮಾಂಸೆಯ ತತ್ವಗಳನ್ನು ವಿಶ್ಲೇಷಿಸಿ, ಅವುಗಳಿಗೆ ಜಾಗತಿಕ ಚೌಕಟ್ಟನ್ನು ಕೊಟ್ಟದ್ದು.

ಮುಖ್ಯವಾದ ಈ ಮೂರೂ ದೃಷ್ಟಿಯಿಂದ ಗೋಕಾಕರು ವಿಮರ್ಶೆಗೆ ನೀಡಿದ ಕೊಡುಗೆ ಅತ್ಯಂತ ಗಮನಾರ್ಹವಾಗಿದೆ.

ನವೋದಯ ಸಾಹಿತ್ಯ ಒಂದು ಸಿದ್ಧಿಸ್ತರಕ್ಕೆ ಬಂದು ನಿಂತಾಗ, ಸಾಹಿತ್ಯದಲ್ಲಿ ಪ್ರಗತಿಯನ್ನು ಆಶಿಸಿ, ಕನ್ನಡ ಸಾಹಿತ್ಯ 'ನವ್ಯತೆ' ಯ ಪಥದಲ್ಲಿ ಸಾಗಬೇಕು ಎಂದು ಸ್ಪಷ್ಟವಾಗಿ ಹೇಳಿದವರು ಗೋಕಾಕರು. ಅವರು ಪ್ರತಿಪಾದಿಸಿದ ನವ್ಯ ಬರೀ ಭಾಷೆ, ಶೈಲಿಗೆ ಸಂಬಂಧಪಟ್ಟದ್ದು. ನವ್ಯ ಅವರ ಕಾವ್ಯದ ಅಂತಃಸತ್ವವಲ್ಲ ಎನ್ನುವವರು ಅವರ ಕಾವ್ಯದ ಹೊಸತಿನ ಶ್ರೇಷ್ಠತೆಯನ್ನೇ ಅಲ್ಲಗಳೆಯಬೇಕಾಗುತ್ತದೆ. ಈ ಲೇಖನ ಆ ಚರ್ಚೆಗೆ ಮೀಸಲಲ್ಲದ ಕಾರಣ, ನಾನು ಗೋಕಾಕರ ನವ್ಯತೆ, ನವ್ಯತೆ ಹಾಗೂ ಕಾವ್ಯ ಜೀವನ ದ ಕೆಲವು ವಿಚಾರಗಳನ್ನು ಪ್ರಸ್ತಾಪಿಸುತ್ತೇನೆ.

ನವ್ಯತೆಯನ್ನೂ ನವ್ಯಕಾವ್ಯವನ್ನೂ ಕುರಿತು ಇಪ್ಪತ್ತೆರಡು ವರ್ಷಗಳಿಗೂ

ಮೇಲ್ಪಟ್ಟು ಅವರು ಬರೆದ ಲೇಖನಗಳ ಸಂಗ್ರಹವೇ ನವ್ಯತೆ. ಸಾಹಿತ್ಯ ಹಾಗೂ ನವ್ಯತೆ, ನವ್ಯಕಾವ್ಯದ ರೀತಿ, ಕಾವ್ಯ ಹಾಗೂ ನವ್ಯಕಾವ್ಯ,ನವ್ಯಕಾವ್ಯ ಹಾಗೂ ಯುಗದ ಆವರಣ, ನವ್ಯತೆ ಹಾಗೂ ಭಾಷೆ, ನವ್ಯತೆ, ಛಂದಸ್ಸು, ಶೈಲಿ, ಭಾರತೀಯ ಪುನರುಜ್ಜೀವನ ಹಾಗೂ ನವ್ಯತೆ ಮುಂತಾದ ಲೇಖನಗಳಿಂದ ಗೋಕಾಕರ 'ನವ್ಯತೆ' ಯ ಸಿದ್ಧಾಂತ ಸ್ಫುಟಗೊಳ್ಳುತ್ತದೆ.

ಹಳತು ಮರೆಯಾಗಿ ಹೊಸತು ಹೇಗೆ ಮೂಡುತ್ತದೆ. ಅದಕ್ಕೆ ಕವಿ ಹೇಳುತ್ತಾರೆ: "ನಮ್ಮ ಸ್ವಭಾವದಲ್ಲಿಯೇ ಒಂದು ಹೆಚ್ಚಿನ ಕ್ರಾಂತಿಯಾದ ಹೊರತೂ ದೃಷ್ಟಿಯಲ್ಲಿ ಮಾರ್ಪಾಟಾಗಲಾರದು."

ಕವಿ, ವಿಮರ್ಶಕ, ಓದುಗ, ಇಡೀ ಸಮಾಜ-ಹೀಗೆ ಬದುಕಿನ ನೋಟದಲ್ಲೇ ಒಂದು ಸಮಗ್ರ ಮಾರ್ಪಾಟಾಗಬೇಕು, ಕ್ರಾಂತಿಯಾಬೇಕು. ಈ "ಕ್ರಾಂತಿ" ದರ್ಶನದಲ್ಲೇ ಗೋಕಾಕರ ವಿಮರ್ಶೆಯ 'ನವ್ಯ' ತೆಯ ಉಗಮ. 'ಕ್ರಾಂತಿ' ಯೆಂದರೆ ಕಾಳ್ಗಿಚ್ಚಲ್ಲ. ಇದು ವ್ಯಕ್ತಿಯಲ್ಲಿ ಮೂಡಿಬರಬೇಕಾದ ಹೊಸಪ್ರಜ್ಞೆ - ನವಮಾನವತಾ ದೃಷ್ಟಿ.

"ಕನ್ನಡ ಕಾವ್ಯದಲ್ಲಿ ಆಧುನಿಕ ಯುಗವು ಮುಗಿಯುವ ಸಮಯ ಬಂದಿದೆ. ನವ್ಯಯುಗ ಪ್ರಾರಂಭವಾಗಲಿದೆ. ನಮ್ಮ ಪರಂಪರೆಯು ಒಂದು ಸಿದ್ಧಿಯನ್ನು ಮುಟ್ಟಿ, ಬೇರೆ ಬೇರೆ ಮಾರ್ಗದ ಬೋಧನೆಯ ಆವಶ್ಯಕತೆಯಿದೆ" ಎಂದು ಮುಂದೆ ಬರಲಿರುವ ಯುಗದ ಸೂಚನೆ ಕೊಟ್ಟವರು ಅವರು.

ಆಂಗ್ಲ ನವ್ಯಕಾವ್ಯದ ಪಿತಾಮಹನೆನಿಸಿದ ಜಿ. ಎಮ್. ಹಾಪ್‌ಕಿನ್ಸ್ ಕಾವ್ಯದಿಂದ ಹಿಡಿದು ಟಿ. ಎಸ್. ಇಲಿಯಟ್, ಆಡನ್, ಸ್ಪೆಂಡರ್, ಮೆಕ್‌ನೀಸ್, ಸಿ. ಡೇ. ಲುಯಿಸ್, ಮೊದಲಾದ ಕವಿಗಳ ಕಾವ್ಯವನ್ನು ಅವಲೋಕಿಸಿ, ಹೊಸತಿನ ಧ್ವನಿಯನ್ನು ಗುರುತಿಸಿ, ಕನ್ನಡಿಗರಿಗೆ 'ನವ್ಯತೆ'ಯ ಪರಿಕಲ್ಪನೆಯನ್ನು ಮೊತ್ತಮೊದಲಿಗೆ ತಂದುಕೊಟ್ಟವರು ಗೋಕಾಕರು. ಹಾಪ್‌ಕಿನ್ಸ್‌ನ Pied Beauty ಕವನವನ್ನು ಅವಲೋಕಿಸುತ್ತ "ಪ್ರತಿಯೊಂದು ಶಬ್ದದ ಹಿಂದೆ ಒಂದು ತೂಕವಿದೆ. ಛಂದಸ್ಸಿನ ನವೀನತೆಯು ಕವಿಯನ್ನು ಸೆಳೆಯದೆ ಬಿಡದು. ಹೀಗಿದ್ದರೂ ಆ ಸಂಯಮ, ಆ ಬುದ್ಧಿಯ ತೇಜಸ್ಸು, ಶೈಲಿಯ ತೂಕ - ಇವೆಲ್ಲ ಕೃತವೆನಿಸುವದಿಲ್ಲ ; ಒಂದು ಉತ್ಕಟ ಭಾವನೆಯ ಅಭಿವ್ಯಕ್ತಿಗಾಗಿ ಉತ್ತಮ ಸಾಧನೆಗಳಾಗುತ್ತವೆ" ಎಂದಿದ್ದಾರೆ. ಹಾಪ್‌ಕಿನ್ಸನ ಕಾವ್ಯದ ಭಾಷೆ, ಶೈಲಿ, ಛಂದಸ್ಸನ್ನು "ಸಾಧನೆ"ಗಳಾಗಿ ಗುರುತಿಸಿರುವ ಗೋಕಾಕರು, ಅವೆಲ್ಲದರಿಂದ ಹೊಮ್ಮುವ ಉತ್ಕಟ ಭಾವನೆಯ ಅಭಿವ್ಯಕ್ತಿಗೆ ವಿಶೇಷ ಮನ್ನಣೆ ಕೊಟ್ಟಿದ್ದಾರೆ. ಹಾಪ್‌ಕಿನ್ಸನಿಂದ ಆರಂಭವಾದ ಈ ನೂತನ ಪರಂಪರೆಯಲ್ಲಿನ ಭಾವದ ಉತ್ಕಟತೆಯಲ್ಲಿ ನವ್ಯತೆಯನ್ನು ಗುರುತಿಸಿ ಅದರ

ಸಮಕಾಲೀನ ಪ್ರಸುತ್ತತೆಯನ್ನು ಗ್ರಹಿಸಿದ್ದಾರೆ.

ಈ ದೃಷ್ಟಿಯಿಂದ ಗೋಕಾಕರ ವಿಮರ್ಶೆಗೆ ಅದರಲ್ಲೂ 'ನವ್ಯದ' ಬಗ್ಗೆ ಅವರ ಸಿದ್ಧಾಂತಕ್ಕೆ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ವಿಶೇಷ ಸ್ಥಾನವಿದೆ. "ನವ್ಯಕಾವ್ಯ ಬರೀ ಆಂತರಿಕತೆಯ ಆಳದಲ್ಲಿ ಮುಳುಗುವದಿಲ್ಲ ; ವಸ್ತುನಿಷ್ಠತೆಯಲ್ಲೂ ಅದು ಮಹತ್ವವಾದದ್ದು. ಬರೀ ಭಾವನಾವೇಶದಿಂದ ಅದು ತೃಪ್ತವಾಗುವುದಿಲ್ಲ. ಬುದ್ಧಿಯ ನಿಶಿತಪ್ರಯೋಗವೂ ಅದಕ್ಕೆ ಪ್ರಿಯವಾದದ್ದು. ಬರೀ ವ್ಯಕ್ತಿತ್ವ ನಿರೂಪಣೆಯೇ ಶ್ರೇಷ್ಠವೆಂದು ಅದು ತಿಳಿದುಕೊಂಡಿಲ್ಲ."

"ಪ್ರಾಚೀನ, ಅರ್ವಾಚೀನ, ಸತ್ಯ, ಸೌಂದರ್ಯ, ಭಕ್ತಿ, ಪ್ರೇಮ, ವ್ಯಕ್ತಿ, ಸಮಾಜ, ಹೃದಯ, ಬುದ್ಧಿ, ಸಾತ್ವಿಕ ಸಾಕ್ಷ - ಹೀಗೆ ಪರಸ್ಪರ ಭಿನ್ನ ಪ್ರಕಾರಗಳನ್ನು ಗ್ರಹಿಸಿ, ಒಂದು ಸಮಗ್ರ ಅನುಭವದ ಸಮನ್ವಯದಲ್ಲಿ ಅವೆಲ್ಲವನ್ನೂ ಕ್ರೋಢೀಕರಿಸಲು ನವ್ಯ ಮಾರ್ಗವು ಹವಣಿಸುತ್ತದೆ" ಎಂದಿದ್ದಾರೆ. ಜೀವನದ ಸಮಗ್ರತೆ ನವ್ಯದಲ್ಲಿ ಹೇಗೆ ಅಭಿವ್ಯಕ್ತಗೊಳ್ಳಬಹುದು ಎಂಬುದಕ್ಕೆ ಟಿ. ಎಸ್. ಇಲಿಯಟ್‌ನ ಕಾವ್ಯದಿಂದ ಒಂದು ಉದಾಹರಣೆ ಕೊಡಬಯಸುತ್ತೇನೆ. ಆಧುನಿಕ ನಾಗರಿಕತೆಯ ಕೃತಕತೆಯನ್ನೂ ಯಾಂತ್ರಿಕತೆಯನ್ನೂ ಅಲ್ಪತೆಯನ್ನೂ ಅಭಿವ್ಯಕ್ತಿಸುತ್ತ ಇಲಿಯಟ್ ಹೇಳುತ್ತಾನೆ :

"We measure our lives
In coffee spoons".

ಬದುಕಿನ ನೆಲೆಬೆಲೆಗಳನ್ನೆಲ್ಲಾ ನಾವಿಂದು ಕಾಫಿ ಚಮಚಗಳಿಂದ ಅಳೆದು ಬಿಡಬಹುದು. ಇದಕ್ಕಿಂತ ಅರ್ಥಹೀನವಾದದ್ದು ಬೇರೆ ಇದೆಯೇ ? ಬದುಕಿನ ಉದ್ವಗಲಗಳ ಆಳ ವಿಸ್ತಾರಗಳ ಕಲ್ಪನೆಯ ಹಿನ್ನೆಲೆಯಲ್ಲಿ ಆಧುನಿಕ ಜಗತ್ತಿನ ಅಲ್ಪತೆಯ ದರ್ಶನ. ಇದು ನವ್ಯದ ಮಾರ್ಗ. ನವ್ಯದ ಹರಹನ್ನೂ ಅದರ ಭಾವುಕತೆ ಬೌದ್ಧಿಕತೆ ಎರಡನ್ನೂ ಕನ್ನಡಿಗರಿಗಾಗಿ ವಿಮರ್ಶಿಸಿದವರು ಗೋಕಾಕರು. ಆಂಗ್ಲ ಸಾಹಿತ್ಯದಿಂದ ಹಲವಾರು ಉದಾಹರಣೆಗಳನ್ನು ಕೊಟ್ಟು, ಕನ್ನಡಕಾವ್ಯ ಹೇಗೆ ಆಧುನಿಕತೆಯಿಂದ ನವ್ಯಕ್ಕೆ ತಿರುಗಿ ಸತ್ವಶಾಲಿಯಾಗಬೇಕು ಎಂದವರು ಅವರು. ಪಾಶ್ಚಾತ್ಯ ಸಂಸ್ಕೃತಿ ಮುರಿದುಬೀಳತ್ತಿದೆಯೆಂದು ಹೇಳಲು ಅದರ ಪ್ರತೀಕವಾದ ಲಂಡನ್ ಸೇತುವೆ ಮುರಿದುಬೀಳುತ್ತಿದೆ ಎನ್ನುತ್ತಾನೆ ಆಂಗ್ಲಕವಿ (London Bridge is falling down). ಆಂಗ್ಲ ಸಾಹಿತ್ಯದಲ್ಲಿನ ನವ್ಯತೆಯ ಹೆಜ್ಜೆ ಗುರುತುಗಳನ್ನು ಕಂಡದ್ದೇ ಅಲ್ಲದೇ, ಅದನ್ನು ಅವಲೋಕಿಸಿ ನಮ್ಮಲ್ಲೂ ಅಂತಹ ಪ್ರಯೋಗಗಳನ್ನು ಕವಿ ನಡೆಸಿದರು. ಉದಾಹರಣೆಗೆ ಈ ಸಾಲುಗಳನ್ನು ನೋಡಿ :

'ಭೂಮಿತಾಯಿ ಹಾಸಿಗೆ ಹಿಡಿದಿದ್ದಾಳೆ.
ಒಂದೊಂದು ನಾಗರಿಕತೆಯ ಯುಗ

ಒಂದೊಂದು ಗರ್ಭಧಾರಣ.
ಆದರೆ ಜನ್ಮವಾಗುವ ಮೊದಲೇ ಗರ್ಭಸ್ರಾವ !

'ನವ್ಯತೆ' ಎಂದರೇನು ಎಂದು ಕೇಳಲಾರಂಭಿಸಿದ ಜನಕ್ಕೆ ಈ ಶತಮಾನದ ಐವತ್ತರ ದಶಕದಲ್ಲಿ ಗೋಕಾಕರು "ಬಳಕೆ ಮಾತು, ಛಂದಸ್ಸಿನಲ್ಲಿಯ ನವೀನ ಪ್ರಯೋಗ, ಪ್ರತಿಮಾ ಪ್ರಧಾನತೆ, ವಾಸ್ತವಿಕ ಚಿತ್ರಸೃಷ್ಟಿ, ಪಾರಿಭಾಷಿಕ ಶೈಲಿ- ಈ ಎಲ್ಲದರಲ್ಲೂ ಆಧುನಿಕ ಕಾವ್ಯ ಕ್ರಮೇಣ ಆಸ್ಪದವಹಿಸಿದವು." ಇವೆಲ್ಲದರ ಸಮಯೋಚಿತ ಪ್ರಜ್ಞೆಯೇ 'ನವ್ಯಪ್ರಜ್ಞೆ' ಎಂದಿದ್ದಾರೆ. ಹೀಗೆ ಹೇಳುತ್ತ ಕವಿ ಬೇಂದ್ರೆಯವರ 'ಕರಿಮರಿನಾಯಿ', ಕುವೆಂಪು ಅವರ 'ಕೋಗಿಲೆ' ಮತ್ತು 'ಸೋವಿಯಟ್ ರಷ್ಯಾ', ರಾಜರತ್ನಂ ಅವರ 'ಯೆಂಡ್ಕುಡುಕ ರತ್ನ', ವಿ.ಸೀ ಅವರ 'ಗಡಿದಾಟು', ಅಡಿಗರ 'ಕಟ್ಟುವೆವು ನಾವು', ಗೊಂದಲಪುರ, ರಾಮಚಂದ್ರ ಶರ್ಮರ 'ಏಳುಸುತ್ತಿನ ಕೋಟೆ' ಮೊದಲಾದವನ್ನು ಯಾವ ಸಂಕೋಚವೂ ಇಲ್ಲದೆ ಹೆಸರಿಸುತ್ತಾರೆ. ಇದೇ ವಸ್ತುನಿಷ್ಠೆ.

ಕಾವ್ಯದ ಬಗ್ಗೆ ಗೋಕಾಕರು ಹೇಳಿರುವ ಒಂದೆರಡು ಮಾತು ಬಹಳ ಮುಖ್ಯವಾದವು. "ಕಾವ್ಯದ ಆತ್ಮ ಯಾವಾಗಲೂ ಒಂದೇ. ದರ್ಶನ ಇಲ್ಲ ಕಾಣ್ಕೆಯೇ ಆ ಆತ್ಮ." ಇದನ್ನು ಕವಿಗಳೂ ವಿಮರ್ಶಕರೂ ಗಮನಿಸಬೇಕು. ನವ್ಯಕ್ಕೆ ಕಾವ್ಯದ ವಿಧಾನದಲ್ಲಾದ ಮಾರ್ಪಾಟು, ಈ ಮಾರ್ಪಾಟಿನಿಂದಾಗಿ ವಸ್ತುಗಳ ನೈಜಸತ್ಯದ ಸಹಜ ಅಭಿವ್ಯಕ್ತಿಯ ಕಡೆಗೆ ಈ ಮಾರ್ಗ ಕರೆದೊಯ್ಯುತ್ತದೆ. ಆದರೆ ಕವಿ ಹೇಳುವಂತೆ ಈ ಸತ್ಯ ಬರಿ ಮಾನಸಿಕ ಇಲ್ಲವೆ ಬೌದ್ಧಿಕ ದೃಷ್ಟಿಯಿಂದ ಕಂಡ ಸತ್ಯವಲ್ಲ. ಒಳಗಿನ ಆಳವಾದ ಒಂದು ಅಂತರ್‌ದೃಷ್ಟಿಯಿಂದ ನೇರವಾಗಿ ಕಂಡ ಸತ್ಯ. ಈ ಅಂತರ್ ದೃಷ್ಟಿಯೇ ಕಾವ್ಯದ ಆತ್ಮ. "Poetry is the Mantra of the Real" ಎಂದ ಶ್ರೀ ಅರವಿಂದರ ಮಾತನ್ನು ಇಲ್ಲಿ ಗಮನಿಸಬಹುದು. ವಸ್ತುನಿಷ್ಠವಾಗಿ, ನಿರಾಭರಣ ವಾಗಿ, ನೇರವಾಗಿ ಅದು ವ್ಯಕ್ತವಾಗಿದ್ದರೆ ಅದು ನವ್ಯ. ಕಾವ್ಯದಲ್ಲಿ ನವ್ಯತೆ ಎಂದರೆ ಏನು ಎನ್ನುವವರಿಗೆ ಗೋಕಾಕರ ನವ್ಯದ ವಿಶ್ಲೇಷಣೆ ಒಂದು ಅನುಭವಜನ್ಯ ದಾಖಲೆ. ಪೂರ್ಣಜೀವನ ದೃಷ್ಟಿಯ ವಿಶ್ವಾಸದಲ್ಲಿ ಪ್ರಜ್ಞಾವಿಕಾಸವೂ ಒಂದು ಸಾಹಸ. ನವ್ಯ ಸಾಹಿತಿಯು ಪ್ರಜ್ಞಾವಿಕಾಸದ ಸಾಹಸವನ್ನೂ ಮಾಡಬೇಕು.

ಗೋಕಾಕರ ವಿಮರ್ಶೆಯಲ್ಲಿ ನಾವು ಕಾಣುವ ಮತ್ತೊಂದು ಪ್ರಧಾನ ಅಂಶವೆಂದರೆ, ವಿಮರ್ಶೆಯಲ್ಲಿರಬೇಕಾದ ಸಮತೋಲನ, ವ್ಯಾಪಕತೆ, ಸಹಿಷ್ಣುತೆಯ ಬಗ್ಗೆ ಪ್ರತಿಪಾದನೆ. ಸಾಹಿತ್ಯ ಹಾಗೂ ನವ್ಯತೆ ಪ್ರಬಂಧದಲ್ಲಿ ಅವರು ಹೀಗೆ ಹೇಳಿದ್ದಾರೆ: "ವಿಕಾರವಶ ವಿಮರ್ಶೆಯನ್ನು ಬಿಟ್ಟುಬಿಡೋಣ. ಪೂರ್ವಾಪರ ವಿಚಾರವಿಲ್ಲದೆ ಸಿದ್ಧಾಂತಗಳ 'ಅಧ್ಯಾರೋಪಣೆ' ಮಾಡುವ ದೃಷ್ಟಿ ಅದು. ಆದರೆ ವಿಮರ್ಶೆಯಲ್ಲಿ

ಪವಿತ್ರದೃಷ್ಟಿಯೊಂದೇ ಸಾಲದು. ತನಗೆ ಪ್ರಿಯವಲ್ಲದ ತತ್ವಗಳನ್ನೂ ತಂತ್ರಗಳನ್ನೂ ನಿರೂಪಣಾ ಪದ್ಧತಿಗಳನ್ನೂ ಸಹ ತಿಳಿದುಕೊಳ್ಳುವ ಕುತೂಹಲವು ವಿಮರ್ಶಕ ನಲ್ಲಿರಬೇಕಾಗುತ್ತದೆ ಅನುಭಾವ, ಬುದ್ಧಿವಾದ ಎಲ್ಲವೂ ಸಂಸ್ಕೃತಿಗೆ ಸಲ್ಲಿಸುವ ಕಾಣಿಕೆಯನ್ನು ತೂಗಿ ನೋಡಬೇಕಾಗುತ್ತದೆ".

ಆದರ ಜೀವನದ ವಿವಿಧ ಕ್ಷೇತ್ರಗಳು ಮಲಿನವಾದಂತೆ ಸಾಹಿತ್ಯಕ್ಷೇತ್ರವೂ ಆಗಿದೆ. ವಿಮರ್ಶಕರಲ್ಲಿ ಕೆಲವರು ತಾವು ಹಿಡಿದ ಮೊಲಕ್ಕೆ ಮೂರೇ ಕಾಲು ಎಂದು ವಾದಿಸುವದರಲ್ಲಿ ಅದ್ವಿತೀಯರಾಗಿದ್ದಾರೆ. ಆದರೆ ಗೋಕಾಕರು ಹೇಳುವಂತೆ 'ವ್ಯಕ್ತಿ ಯಾರೇ ಇರಲಿ, ಯಾವ ಪಂಗಡಕ್ಕೇ ಸೇರಿರಲಿ, ಯಾವೊಂದು ವಿಶಿಷ್ಟ ತತ್ವವನ್ನೇ ವಿವೇಚಿಸಲಿ, ಅಡ್ಡ ದಾರಿ ಹಿಡಿಯದೆ ವಿಮರ್ಶೆಯು ನೇರವಾಗಿ ಸಾಹಿತ್ಯಗುಣವನ್ನು ಗ್ರಹಿಸಿ ತನ್ನ ಕಾರ್ಯವನ್ನು ನಿರ್ವಹಿಸಬೇಕು.'

ವಿಮರ್ಶೆ ಆರೋಗ್ಯಕರವಾಗಿ ಬೆಳೆಯಲು ಗೋಕಾಕರು ಮಾದರಿಯಾಗಿದ್ದಾರೆ 'ನಮ್ಮ ಅನುಭವ ಸತ್ವಮಯ, ಸಂಕೀರ್ಣ, ಇನ್ನೊಬ್ಬರ ಅನುಭವ ಅಗ್ಗ, ಚಿಲ್ಲರೆ, ಸರಳ" ಎಂಬುದೊಂದು ದೃಷ್ಟಿ. ಈ ದೃಷ್ಟಿ ಹೇಗೆ ಸಂಕುಚಿತ, ಅನಾರೋಗ್ಯಕರ ಎಂಬುದನ್ನು ತೋರಿಸಲೆಂದೇ ಗೋಕಾಕರು ಸಮನ್ವಯ ಸಮಿತಿಯನ್ನು ಸ್ಥಾಪಿಸಿ, 'ಸಮನ್ವಯ' ಎಂಬ ತ್ರೈಮಾಸಿಕವನ್ನು ಆರಂಭಿಸಿದರು. ಸಮನ್ವಯ ತತ್ವದ ಘೋಷಣೆ ಗೋಕಾಕರ ವಿಮರ್ಶೆಯ ಮಹತ್ತರವಾದ ಸಾಧನೆ. ಅಲ್ಲದೆ ಕೆಲವು ಸಾಹಿತಿಗಳ ಹಾಗೂ ವಿಮರ್ಶಕರ ಧೋರಣೆಗಳ ಬಗ್ಗೆ ಸ್ಪಷ್ಟವಾಗಿ ನಿರ್ಭೀತಿಯಿಂದ ಬರೆದಿರುವುದು ಗೋಕಾಕರ ವಿಮರ್ಶೆಯ ಮತ್ತೊಂದು ಗುಣ. ಉದಾಹರಣೆಗೆ 'ನವ್ಯತೆ ಹಾಗೂ ಸಮಕಾಲೀನ ಕನ್ನಡ ಸಾಹಿತ್ಯ' ಎಂಬ ಪ್ರಬಂಧದಲ್ಲಿನ ಅವರ ನಿಲುವನ್ನು ಗಮನಿಸಿ : "ಕೆಲವು ನವ್ಯ ಬರಹಗಾರರು ತಾವು ಬರೆಯುವುದಕ್ಕೆ ಮುಂಚೆ ಸಾಹಿತ್ಯದಲ್ಲಿ ಮನುಷ್ಯನ ಅನುಭವಗಳ ಒಷ್ಪಂದದ ನಿರೂಪಣೆಯೇ ಮೂಡಿ ಬಂದಿರಲಿಲ್ಲವೆಂದು ಭಾವಿಸುತ್ತಾರೆ. ಅಲ್ಲದೆ ಭಾಷೆಯನ್ನು ಸಮರ್ಥವಾಗಿ ರೂಪಿಸುವ ಪ್ರಯತ್ನ ತೀರ ಕಡಿಮೆಯಾಗಿತ್ತೆಂದು ಭಾವಿಸಿ, ಅದು ಮನುಷ್ಯನ ಮನಸ್ಸಿನ ಅನಿಸಿಕೆಗಳನ್ನು ಸಾಕಷ್ಟು ಪ್ರಮಾಣದಲ್ಲಿ ಅಭಿವ್ಯಕ್ತ ಗೊಳಿಸಲು ಸಮರ್ಥವಾಗಲಿಲ್ಲವೆಂದು ಆಕ್ಷೇಪಿಸುತ್ತಾರೆ. ಬಹುತೇಕ ಪ್ರಾಚೀನ ಕಾವ್ಯಗಳನ್ನೆಲ್ಲಾ ಇವರು ತಮ್ಮ ಮತ್ತು ಪಂಥಾಭಿಮಾನದ ಸಲುವಾಗಿ ದೂರತಳ್ಳಿದರು. ಈ ಅಪರಿಪೂರ್ಣವಾದ ಅಭಿಪ್ರಾಯದ ಪ್ರತಿಪಾದಕರು ಒಂದು ಸಹಸ್ರ ವರ್ಷಗಳ ಕನ್ನಡ ಸಾಹಿತ್ಯವನ್ನು ಮತ್ತು ಅಲ್ಲಿನ ಎಲ್ಲ ಮಹಾಕವಿಗಳೂ ತಮ್ಮ ಉಪಯೋಗಕ್ಕೆ ಭಾಷೆಯನ್ನು ಹದಗೊಳಿಸುವಲ್ಲಿ ನಡೆಸಿದ ಹೋರಾಟ ವನ್ನು ಗುರುತಿಸುವಲ್ಲಿ ಅಯಶಸ್ವಿಯಾಗಿದ್ದಾರೆ. ತಮ್ಮ ಪ್ರಯತ್ನಗಳನ್ನು ಹೊಗಳಿಕೊಳ್ಳುವ ಭರದಲ್ಲಿ ಕೆಲವು ನವ್ಯ ಬರಹಗಾರರು ತಮ್ಮ ಹಿಂದಿನ ಸಾಹಿತ್ಯವನ್ನು ಖಂಡಿಸುವ

ಸಾಮೂಹಿಕ ತಪ್ಪಿಗೆ ಪಕ್ಕಾಗಿದ್ದಾರೆ."

ಸಾಹಿತ್ಯ ವಿಮರ್ಶೆ ಹೇಗೆ ದಾರಿ ತಪ್ಪಿದೆ ಎನ್ನುವುದನ್ನು ಗೋಕಾಕರು ಸ್ಪಷ್ಟವಾಗಿ ನಮ್ಮ ಮುಂದಿಟ್ಟಿದ್ದಾರೆ. ಈ ಬಗೆಯ ನವ್ಯ ಭ್ರಾಂತಿಯಿಂದ ತಪ್ಪಿಸಿಕೊಂಡಲ್ಲದೆ ಆರೋಗ್ಯಕರವಾದ ಮತ್ತು ಸಮತೂಕವುಳ್ಳ ಸಮೀಕ್ಷೆಯನ್ನು ನಡೆಸುವದು ಅಸಾಧ್ಯವಾಗುತ್ತದೆ. ಇದು ನಿಜವಾದ ಮಾತು. ತಮ್ಮಲ್ಲಿ ಇಂತಹ ಸಮತೋಲನ ವಿರುವುದರಿಂದಲೇ ಗೋಕಾಕರು ಆಧುನಿಕ ಮಾನದಂಡದಿಂದ ಪ್ರಾಚೀನ ಅಥವಾ ಮಧ್ಯಕಾಲೀನ ಭಾಷೆಯನ್ನು ನಿರ್ಣಯಿಸಬಾರದು ಎಂದಿದ್ದಾರೆ. ಪ್ರಾಚೀನ ಕವಿಗಳ ಕಾವ್ಯ ಅವರ ಕಾಲದಲ್ಲಿ ಆಧುನಿಕವೆನಿಸಬಹುದಾದ ಸಮಕಾಲೀನ ಪ್ರಜ್ಞೆಯಿಂದ ಕೂಡಿತ್ತು. ಕಾಲಿದಾಸ ನಾಟಕವನ್ನು ನೋಡಬಂದವರನ್ನು ಕುರಿತು ಹೇಳಲಿಲ್ಲವೆ "ಪುರಾಣಮಿತ್ಯೇವ ನಸಾಧು ಸರ್ವಂ ನವಮಿತ್ಯವಧ್ಯಂ." ಕಾಲಿದಾಸನ ಕಾಲಕ್ಕೆ ಅವನ ನಾಟಕಗಳೇ "ನವ್ಯ". ಹತ್ತನೆಯ ಶತಕದ ಪಂಪ ಮತ್ತು ರನ್ನ, ಹನ್ನೆರಡನೆಯ ಶತಕದ ವಚನಕಾರರು ಹದಿನಾಲ್ಕು-ಹದಿನೈದನೇ ಶತಕದ ರತ್ನಾಕರವರ್ಣಿ ಮತ್ತು ಹರಿದಾಸರು, ಹದಿನೇಳನೆಯ ಶತಕದ ಸರ್ವಜ್ಞ - ಇವರುಗಳ ಪ್ರೌಢ ಪ್ರಾಚೀನ "ಕ್ರಾಂತಿ" ಗಮನೀಯ ಎನ್ನುತ್ತಾರೆ ಗೋಕಾಕರು. ಆಧುನಿಕ ಕವಿಗಳನ್ನು ಇದೇರೀತಿ ವಿಶ್ಲೇಷಿಸಿದ್ದಾರೆ. ಯುಗದ ಮೌಲ್ಯಗಳನ್ನು ನಿಷ್ಪಕ್ಷಪಾತವಾಗಿ ಗಮನಿಸುವದೇ ಆರೋಗ್ಯವಂತ ವಿಮರ್ಶೆಯ ಕರ್ತವ್ಯ.

ಮೂರನೆಯದಾಗಿ, ಸೌಂದರ್ಯ ಮೀಮಾಂಸೆಯ ತತ್ವಗಳನ್ನು ಕನ್ನಡ ಸಾರಸ್ವತ ಲೋಕಕ್ಕೆ ನೀಡಿರುವುದು ಗೋಕಾಕರ ಸಾಧನೆ. ಇದನ್ನು ನೇರವಾಗಿ 'ವಿಮರ್ಶೆ' ಎನ್ನಲು ಸಾಧ್ಯವಿಲ್ಲವಾದರೂ ವಿಮರ್ಶೆಯ ರೂಪುರೇಷೆಗಳನ್ನು ಗುರುತಿಸುವಲ್ಲಿ ಇವು ಗಮನಾರ್ಹ. ಸೌಂದರ್ಯವೆಂದರೇನು ? ಒಂದು ಕಲಾ ಕೃತಿಯ ಶೃಂಗಗಳ ನಡುವಿನ ಸಂಬಂಧವೇನು ? ಈ ಪ್ರಶ್ನೆಗಳಿಗೆ ಉತ್ತರವಾಗಿದೆ, ಗೋಕಾಕರೇ ಮಂಡಿಸಿರುವ 'ಸೌಂದರ್ಯ ಮೀಮಾಂಸೆ'. ಕವಿಯಾದ ಗೋಕಾಕರು, ತನ್ನ ಕಾವ್ಯ ವ್ಯಾಪಾರವನ್ನು ಕುರಿತು ಪ್ರತಿಯೊಬ್ಬ ಕವಿಯೂ ಚಿಂತಿಸಬೇಕು, ಎನ್ನುತ್ತಾರೆ. ಕಲಾಸ್ವರೂಪ, ಧ್ವನಿ ಹಾಗೂ ಪ್ರತಿಧ್ವನಿ, ರಸವೋ ಜೀವ ದೃಷ್ಟಿಯೋ - ಈ ಮೂರೂ ಉಪನ್ಯಾಸಗಳ ಸಂಕಲನವೇ ಸೌಂದರ್ಯ ಮೀಮಾಂಸೆ. ಜೀವನದೊಳಗೆಲ್ಲ ಆತ್ಮಚೈತನ್ಯವನ್ನು ತುಂಬುವುದಕ್ಕಾಗಿಯೇ ಲಲಿತ ಕಲೆಗಳ ಉಗಮವಾಗಿದೆ. ಇವು ಕಲಾದ್ವೈತ (ಶಕ್ತಿ, ಪ್ರಕೃತಿ, ಆನಂದ, ಸತ್ಯ, ಸೌಂದರ್ಯ, ಸಂಪೂರ್ತಿ), ಕಲಾವಿಧಾನ (ಸ್ಫೂರ್ತಿ, ಅನುಕೃತಿ, ಅಭಿವ್ಯಕ್ತಿ, ಸಂಬೋಧನೆ, ನಿರೂಪಣೆ, ಸಮೀಕರಣ), ಕಲಾವಿದ (ಪ್ರತಿಭೆ, ಜೀವನದೃಷ್ಟಿ, ಹೃದಯವಂತಿಕೆ, ತತ್ವಗ್ರಾಹಿ ಬುದ್ಧಿ, ಕಲ್ಪಕತೆ, ಕಾವ್ಯ ವಿವೇಕ), ಕಲಾಕೃತಿ (ಕವಿದರ್ಶನ, ರಸ, ಸಂಚಾರೀಭಾವಗಳು, ಅರ್ಥ, ರೂಪ, ಔಚಿತ್ಯ), ಸಹೃದಯ (ಸಂಸ್ಕಾರಜನ್ಯ

ಸಹಾನುಭೂತಿ, ರಸಜ್ಞತೆ, ತನ್ಮಯೀಭಾವ, ವ್ಯುತ್ಪತ್ತಿ, ಕಾವ್ಯಾನುಶೀಲನ, ಔಚಿತ್ಯ ಪ್ರಜ್ಞೆ), ಸಮಾಜಪುರುಷ (ಸ್ವಾನಂದ, ವಿವೇಕ, ಚಿತ್ತವೃತ್ತಿ, ಸಂಸ್ಕಾರ, ಭಾವೋತ್ಕರ್ಷ, ಬುದ್ಧಿವಿಕಾಸ, ಕಾಂತಾಸಂಮಿತ, ಪರಿಜ್ಞಾನ) ಇವುಗಳಿಂದ ಕೂಡಿ ಸಚ್ಚಿದಾನಂದದ ಒಂದು ಆವಿರ್ಭಾವವಾಗಿ ಸೌಂದರ್ಯ ಒಡಮೂಡಿದೆ ಎಂಬುದನ್ನು ಕವಿ ಕಂಡುಕೊಳ್ಳುತ್ತಾನೆ. ಸಹೃದಯ, ಈ ಸೌಂದರ್ಯ ದರ್ಶನದಿಂದ ಪಡೆದ ಸ್ಪಂದನವೇ ರಸಾನುಭವ.

ಹೀಗೆ ಸೌಂದರ್ಯ ಮೀಮಾಂಸೆ ಕಾವ್ಯದ ಮಹೋನ್ನತಿಯನ್ನು ಸೂಚಿಸುವದರ ಜೊತೆಗೆ ಕವಿ- ಸಹೃದಯ ಸಂಬಂಧವನ್ನೂ ಸೂಚಿಸಿ, ವಿಮರ್ಶಕನಿಗೆ ಸೌಂದರ್ಯ ಮೀಮಾಂಸೆಯ ಪರಿಜ್ಞಾನದ ಅವಶ್ಯಕತೆಯನ್ನು ಒತ್ತಿಹೇಳಿದೆ. ಗೋಕಾಕರ ಬರಹ ಅವರೊಬ್ಬ ಚಿಂತನಶೀಲರು, ಅನುಭಾವಿಗಳು, ದಾರ್ಶನಿಕರು, ಪೂರ್ಣಪ್ರಜ್ಞರು ಎಂಬುದಕ್ಕೆ ಜ್ವಲಂತ ಉದಾಹರಣೆಯಾಗಿದೆ.

ಋಗ್ವೇದದಿಂದ ಸ್ಫೂರ್ತಿ,ವಸ್ತುವನ್ನು ಪಡೆದು ಮಹಾಕಾವ್ಯವಾಗಿ ರಚಿತವಾದ 'ಭಾರತಸಿಂಧುರಶ್ಮಿ'ಗೆ ಪೂರಕವಾಗಿ 'ಋಗ್ವೇದದಲ್ಲಿ ಕ್ರಾಂತದೃಷ್ಟಿ' - ಎಂಬ ಉಪನ್ಯಾಸ, ಗೋಕಾಕರು ಹೇಗೆ ಬರೀ ಪಡುವಣವನ್ನು ಮಾತ್ರ ಗ್ರಹಿಸಿದವರಾಗದೆ, ಭಾರತೀಯ ಸಂಸ್ಕೃತಿಯ ಉಗಮವನ್ನೂ ದರ್ಶಿಸಿದ್ದಾರೆ ಎಂಬುದಕ್ಕೆ ಅತ್ಯುತ್ತಮ ನಿದರ್ಶನವಾಗಿದೆ. ವೇದಗಳ ಕಾಲ, ಕರ್ತೃತ್ವ ಶಕ್ತಿಯ ಮೇರುಕಾಲ. ಈ ಕಾಲದಲ್ಲಿನ ಅನುಭಾವಮಾರ್ಗವಾದ ವೇದಗಳ ಕ್ರಿಯಾಯೋಗ, ಮಾನವನ ಶ್ರೇಷ್ಠ ಗುರಿ ಪೂರ್ಣತೆ ಎಂಬುದನ್ನು ಸಾರಿ ತೋರಿಸಿದೆ. ಇದರ ವಿವೇಚನೆ ಈ ಉಪನ್ಯಾಸದಲ್ಲಿದೆ. ಅಲ್ಲದೆ ಕ್ರಿ. ಪೂ. ೩೦೦೦ ದಲ್ಲಿ ಸಮಾರಿಗೆ ಆರ್ಯರು ಬಂದು ನೆಲೆಸಿದ, ಅವರು ಜಯಿಸಿದ ಪ್ರದೇಶವೆಲ್ಲ ಸೇರಿ ಹೇಗೆ "ಸಪ್ತಸಿಂಧು" ಆಯಿತು ಎಂಬ ಸಿದ್ಧಾಂತವೂ ಇಲ್ಲಿದೆ.[೯]

ಒಂದು ಕಾವ್ಯಮಾರ್ಗದ ನವ್ಯತೆ, ಅದರ ವಿಶಾಲ ದರ್ಶನದಲ್ಲಿದೆ ; ವಿಕೃತಿಗಳ ಪ್ರದರ್ಶನದಲ್ಲಿಲ್ಲ ಎಂದು ಹೇಳಿ, ಅದನ್ನು ತಮ್ಮೆಲ್ಲ ವಿಮರ್ಶಾತ್ಮಕ ಬರವಣಿಗೆಯಲ್ಲಿ ತಾವೇ ಸಾಧಿಸಿ ತೋರಿಸಿರುವ ಹಿರಿಮೆ ಗೋಕಾಕರದು. ಶ್ರೀ ಅರವಿಂದರ ವಿಮರ್ಶೆಯ ಬಗ್ಗೆ ಅವರು ಏನು ಹೇಳುತ್ತಾರೋ ಅದನ್ನೇ ಗೋಕಾಕರ ವಿಮರ್ಶೆಯ ಬಗೆಗೂ ಹೇಳಬಹುದು. ಇಲ್ಲಿರುವದು ಸಾರಗ್ರಾಹಕ ವಿಮರ್ಶೆ. ಪರಿಪೂರ್ಣದೃಷ್ಟಿಯ ರಸವಿವೇಕ.

❑ ❑

ಗೋಕಾಕ : ಕಾದಂಬರಿ

– ಜಿ. ಎಂ. ಹೆಗಡೆ

ಡಾ. ವಿನಾಯಕ ಕೃಷ್ಣ ಗೋಕಾಕರು ಹೊಸಗನ್ನಡ ಸಾಹಿತ್ಯದ ಮಹಾಸ್ರೋತದಲ್ಲಿ ಮಹತ್ತರವಾದ ಸಾಹಿತ್ಯವನ್ನು ಸೃಷ್ಟಿಸಿ, ತಮ್ಮ ಸಂವೇದನಾಶೀಲ ಪ್ರತಿಭೆಯ ಅದ್ಭುತ ಸ್ವರೂಪವನ್ನು ಪ್ರಚುರಪಡಿಸಿದ ಮಹನೀಯರು. ಭಾರತೀಯ ಸಾಹಿತ್ಯದ ಮಹಾಲೇಖಕರಾಗಿ, ಅವರು 'ವರ್ಷದ ವ್ಯಕ್ತಿ' ಯಾಗಿ ಸಾಹಿತ್ಯಾಭಿಮಾನಿಗಳ ಆದರ, ವಿಮರ್ಶೆ, ಚರ್ಚೆಗೆ ಕಾರಣರಾಗಿದ್ದಾರೆ. ಗೋಕಾಕ ಸಾಹಿತ್ಯಸೃಷ್ಟಿ ಕನ್ನಡ-ಇಂಗ್ಲೀಷ್ ಎರಡೂ ಭಾಷೆಗಳಲ್ಲಿ ವೈವಿಧ್ಯಮಯವೂ ವರ್ಣಮಯವಾದುದೂ ಆಗಿದೆ. ಚೇತೋಹಾರಿಯಾದ ಜೀವನ ಪ್ರಪಂಚದಿಂದ ಕೂಡಿದ ವಿನಾಯಕರ ಸಾಹಿತ್ಯ ವಿಸ್ತಾರದಲ್ಲಿ ಎರಡು ಕೃತಿಗಳು ತಮ್ಮ ಹಿಮಾಲಯಗಾತ್ರದಿಂದ ನಮ್ಮ ಗಮನ ಸೆಳೆಯುತ್ತವೆ. ಒಂದು- ಗದ್ಯಸಾಹಿತ್ಯ ಮಹಾಕೃತಿ 'ಸಮರಸವೇ ಜೀವನ' ಕಾದಂಬರಿ, ಮತ್ತೊಂದು-ಹೊಸಗನ್ನಡ ಮಹಾಕಾವ್ಯ 'ಭಾರತಸಿಂಧುರಶ್ಮಿ'. ಇವೆರಡೂ ಗೋಕಾಕ್ ಸಾಹಿತ್ಯದ ಮಹಾಕೃತಿಗಳಾಗಿರುವಂತೆಯೇ ಕನ್ನಡಸಾಹಿತ್ಯದ ಬೃಹತ್ ಕೃತಿಗಳೂ ಆಗಿವೆ. ಕನ್ನಡ ಕಾದಂಬರಿ ಪ್ರಪಂಚದಲ್ಲಿ ಅಪರೂಪದ ಕಲಾಕೃತಿಯಾದ 'ಸಮರಸವೇ ಜೀವನ' ಕಾದಂಬರಿಯ ಬೆರಗುಗಣ್ಣಿನ ಸಹೃದಯ ವಿಮರ್ಶನ ನೋಟವೇ ಈ ಲೇಖನದ ಉದ್ದೇಶ.

ಕಾದಂಬರಿಯ ವಸ್ತು ವಿಕಾಸ :

'ಸಮರಸವೇ ಜೀವನ' ಗೋಕಾಕರ ಏಕಮೇವ ಕಾದಂಬರಿಯಾಗಿದ್ದು, ಅದು ಇಪ್ಪತ್ತೆರಡು ವರ್ಷಗಳ ನಿರಂತರ ಅನುಭವಪ್ರಪಂಚದ ಬರವಣಿಗೆಯ

ಫಲವಾಗಿದೆ. ೧೩೨೦ ಪುಟಗಳಷ್ಟು ವಿಸ್ತಾರವಾದ ಈ ಕಾದಂಬರಿ, ಕನ್ನಡ ಕಾದಂಬರಿ ಲೋಕದಲ್ಲಿಯೇ ಮಹಾಕೃತಿಯಾಗಿದೆ. ಇದನ್ನು ಮೀರಿಸುವ ಬೃಹತ್‌ಕೃತಿ ಈವರೆಗೆ ಬಂದಿಲ್ಲ. ಕೇವಲ ಗಾತ್ರದಿಂದ ಮಾತ್ರವಲ್ಲ, ಸತ್ವಶ್ರೀಮಂತಿಕೆಯಿಂದಲೂ ಇದು ಬೆಲೆಯುಳ್ಳ, ಪ್ರತಿಭಾಸೃಷ್ಟಿಯಾಗಿದೆ. 'ಸಮರಸವೇ ಜೀವನ' ವು 'ಇಜ್ಜೋಡ'ಎಂಬ ಮೊದಲ ಭಾಗವಾಗಿ ೧೯೩೫ ರಲ್ಲಿ ಪ್ರಕಟವಾಗಿ, ಅನಂತರ ೧೯೫೬ ರಲ್ಲಿ 'ಸಮರಸವೇ ಜೀವನ' ವಾಗಿ ಪೂರ್ಣಗೊಂಡಿದೆ. ಈ ಕಾದಂಬರಿಯ ರಚನಾತಂತ್ರದ ಬೆಳವಣಿಗೆ ಕುತೂಹಲಕರವಾಗಿರುವಂತೆಯೇ ವಸ್ತು ವಿಕಾಸವೂ ವೈವಿಧ್ಯಮಯವಾಗಿದೆ.

'ಸಮರಸವೇ ಜೀವನ' ಕಾದಂಬರಿಯಲ್ಲಿ ಇಜ್ಜೋಡು (೧೭೮), ಅಂತಃಸತ್ವ (೨೯೨), ಪ್ರೀತಿಯ ಯೋಗಮಾಯೆ (೪೪೪), ಏರಿಳಿತ (೫೪೨), ಸಮುದ್ರಯಾನ (೮೮೪) , ನಿರ್ವಹಣ (೧೨೨೩) ಎಂಬ ಆರು ಭಾಗಗಳಿದ್ದು, ವಿನಾಯಕ ಗೋಕಾಕರ ಐವತ್ತು ಪುಟಗಳ ಪ್ರಸ್ತಾವನೆ, ನಾಲ್ಕು ಪ್ರಸಂಗಗಳು, ಇತ್ಯಾದಿ ಸೇರಿ ಮಹಾಸ್ವರೂಪ ಪಡೆದಿದೆ. ಗೋಕಾಕರ ಮಹಾಪ್ರತಿಭೆ ಅರಳುತ್ತ ಸಾಗಿರುವದನ್ನು ಈ ಕಾದಂಬರಿಯ ಬೆಳವಣಿಗೆಯಲ್ಲಿ ನಾವು ಗುರುತಿಸಬಹುದು. ಜೀವನ ವಿಕಾಸವನ್ನು ಅಮರ ಗಾಥೆಯ ನ್ನಾಗಿರಿಸಿರುವುದೇ ಈ ಕಾದಂಬರಿಯ ವೈಶಿಷ್ಟ್ಯವಾಗಿದೆ. ಇಂಗ್ಲೀಷ ಸಾಹಿತ್ಯದ ಆಳವಾದ ಅಧ್ಯಯನವು ಗೋಕಾಕರಿಗಿರುವಂತೆಯೇ ಕನ್ನಡ ನೆಲದ ಮಣ್ಣಿನ ಮಕ್ಕಳ ಬದುಕಿನ ನಿಕಟವಾದ ಜೀವನ ಸಂಪರ್ಕದಿಂದ ಅವರ ಅನುಭವ ಪ್ರಪಂಚವು ವಿಕಾಸ ಹೊಂದಿರುವದಕ್ಕೆ ಈ ಕಾದಂಬರಿ ಸಾಕ್ಷಿಯಾಗಿದೆ.

'ಸಮರಸವೇ ಜೀವನ' ಕಾದಂಬರಿ, ಉತ್ತರ ಕರ್ನಾಟಕದ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಬದುಕಿನ ಕೈಗನ್ನಡಿಯಾಗಿದ್ದು ; ಅದು ಈ ಶತಮಾನದ ಮೊದಲ ದಶಕಗಳ ಜನಜೀವನವನ್ನು ಅರ್ಥಪೂರ್ಣವಾಗಿ ಚಿತ್ರಿಸುತ್ತದೆ. ಗಳಗನಾಥರು ಕಾದಂಬರಿಗಳಲ್ಲಿ ಕನ್ನಡ ಜನಜೀವನದ ಇತಿಹಾಸವನ್ನು ಚಿತ್ರಿಸಿದ ಹಾಗೆಯೇ ಅವರ ನಂತರ ಅದೇ ಹಾದಿಯಲ್ಲಿ ಗೋಕಾಕರು ಮುಂದುವರಿದು, ಈ ಕಾದಂಬರಿಯನ್ನು ರಚಿಸಿರುವುದು ಅತ್ಯಂತ ಮಹತ್ವದ್ದಾಗಿದೆ. ಈ ಕಾದಂಬರಿಯಲ್ಲಿ ವಾಸ್ತವವಾದದ ನೆಲೆಗಳನ್ನು ನಾವು ಕಾಣಬಹುದಾಗಿದೆ. ೧೯೩೫ರಷ್ಟೊತ್ತಿಗೆ ಗೋಕಾಕರ ವಿಚಾರ, ಕನಸು, ಆದರ್ಶ ಇವುಗಳೆಲ್ಲ ಅಂದಿನ ಸಾಹಿತ್ಯ ಪ್ರಪಂಚದಲ್ಲಿ ನೂತನ ಆವಿಷ್ಕಾರವಾಗಿದ್ದವೆಂಬುದನ್ನು ನಾವು ಗಮನಿಸಬೇಕಾಗುತ್ತದೆ. ಕೌಟುಂಬಿಕ ಜೀವನದ ರಸ, ವಿರಸಗಳನ್ನು ಚಿತ್ರಿಸುವದು ಅಂದಿನ ರಮ್ಯ ಪರಂಪರೆಯಲ್ಲಿ, ಕಾದಂಬರಿಕಾರನ ಆದರ್ಶವಾಗಿದ್ದ ಸಂದರ್ಭದಲ್ಲಿ ಸಮಕಾಲೀನ ರಾಜಕೀಯ, ಸಾಮಾಜಿಕ ಸನ್ನಿವೇಶದಲ್ಲಿ ವ್ಯಕ್ತಿಯ ವ್ಯಕ್ತಿತ್ವ ವಿಕಾಸ, ಅಂತರಂಗ ದರ್ಶನ ಮೂಡಿಸುವ ನೂತನ ಆಯಾಮವನ್ನು ತಮ್ಮ ಕಾದಂಬರಿಯಲ್ಲಿ ಗೋಕಾಕರು ಮಾಡಿರುವದು ಕಂಡುಬರುತ್ತದೆ. ಗೋಕಾಕರು ತಮ್ಮ ಸಾಹಿತ್ಯ

ಜೀವನದುದ್ದಕ್ಕೂ ಪ್ರಯೋಗಶೀಲ ಲೇಖಕರಾಗಿ ಕಾಣುವಂತೆಯೇ ಅವರು ರಚಿಸಿದ 'ಸಮರಸವೇ ಜೀವನ' ಕಾದಂಬರಿಯು ಒಂದು ಪ್ರಯೋಗಶೀಲ ಕಾದಂಬರಿಯಾಗಿಯೂ ಕನ್ನಡ ಕಾದಂಬರಿ ಪ್ರಪಂಚದಲ್ಲಿ ಸ್ಥಾನ ಪಡೆಯುತ್ತದೆ. ಸ್ವಾತಂತ್ರ್ಯಪೂರ್ವದ ಭಾರತದ ಜನತೆಯ ಜೀವನದ ಸಮಸ್ಯೆಗಳು, ಬದುಕಿನ ಸಂಗ್ರಾಮದಲ್ಲಿ ನಡೆಸಿದ ಹೋರಾಟ, ಸ್ವಾತಂತ್ರ್ಯದ ಕನಸು, ಆದರ್ಶದ ಹಂಬಲ, ವ್ಯಕ್ತಿತ್ವದ ಹುಡುಕಾಟ -ಇವುಗಳನ್ನು ಸಮರ್ಥವಾಗಿ ಧ್ವನಿಸುವ ಕಾದಂಬರಿ ಯಾಗಿಯೂ 'ಸಮರಸವೇ ಜೀವನ' ಮಹತ್ವದ ಪಾತ್ರ ವಹಿಸಿದೆ.

ಕಾದಂಬರಿಯ ಕಥಾವಸ್ತುವಿನ ಬೆಳವಣಿಗೆ :

'ಇಜ್ಜೋಡು' ಕಥೆಯ ಬೆಳವಣಿಗೆಯೇ ಕಾದಂಬರಿಯ ವಸ್ತುವಿಕಾಸವಾಗಿದೆ. ಈ ಕಥೆ ಉತ್ತರಕರ್ನಾಟಕದ 'ಮೊಗ್ಗಾವಿ' ಎಂಬ ಕಾಲ್ಪನಿಕ ಹೆಸರಿನ ಊರಿನ ಮೂಲಕ ಪ್ರಾರಂಭವಾಗುತ್ತದೆ. ಅದು ತಿರುಕಾಚಾರ್ಯರೆಂಬವರು ಬರೆದ ತಾಲ್ಲೂಕು ರಾಜಾಸ್ತೋತ್ರ ಪುರಾಣದಲ್ಲಿಯ ಮೊಗ್ಗಾವಿಯ ಸ್ಥಳ ಮಹಾತ್ಮೆಯಿಂದ ವರ್ಣಿತವಾಗಿದ್ದು, ಆನಂತರ ಮೊಗ್ಗಾವಿ ನಾಗರಿಕತೆಯ ಸಂಸ್ಪರ್ಶ ಪಡೆದು, ಬೆಳೆದ ವಿವರಣೆ ಮುಖ್ಯವಾದ ಸಂಗತಿಯಾಗಿದೆ. ಈ ಮೊಗ್ಗಾವಿಯಲ್ಲಿ ಎರಡು ಕುಟುಂಬಗಳಿವೆ. ಹಯಗ್ರೀವಾಚಾರ್ಯರದು ಮತ್ತು ದೇಸಾಯಿ ಗೋವಿಂದ ರಾಯರದು. ಈ ಎರಡೂ ಮನೆತನಗಳು ಎದುರುಬದುರು ಇದ್ದು, ಅವೆರಡರ ಮನೆತನಗಳ ಬೆಳವಣಿಗೆಯ ಕಥೆಯೇ ಕಾದಂಬರಿಯ ಮೂಲ ದ್ರವ್ಯವಾಗಿದೆ. ಆದ್ದರಿಂದ ಈ ಕುಟುಂಬಗಳ ಜೀವನ ಕಥೆಯನ್ನು ಅರಿಯುವದು ಅವಶ್ಯಕ. ಹಯಗ್ರೀವಾಚಾರ್ಯರ ನಾಲ್ಕನೆಯ ಪತ್ನಿ ರಮಾಬಾಯಿ ಹಾಗೂ ಅವರ ಮಕ್ಕಳು ನರಹರಿ, ಅವನ ಅಕ್ಕ ಪದ್ಮಾವತಿ ಒಂದೆಡೆಯಾದರೆ, ದೇಸಾಯಿ ಗೋವಿಂದರಾಯರ ಪತ್ನಿ ಜಾನಕೀಬಾಯಿ ಹಾಗೂ ಮಗಳು ಕುಸುಮಾ, ಮಗ ಕೇಶವ ಇವರದು ಇನ್ನೊಂದೆಡೆಗೆ ಸಂಸಾರ ಜೀವನ ಸಾಗಿದೆ. ಮೊಗ್ಗಾವಿಯು ಸಾಂಪ್ರದಾಯಿಕವಾದ ಊರಿನಲ್ಲಿ ಮಡಿವಂತಿಕೆ, ಆಚಾರವಂತ ಸಂಸಾರಗಳು ಹಳೆಯ ನಂಬಿಕೆಯಲ್ಲಿ ಬೆಳೆದಿರುವಂಥದು. ಭಾರತದ ಇತರ ಹಳ್ಳಿಗಳಂತೆ ಅಲ್ಲಿಯೂ ನವ ನಾಗರಿಕತೆಯ ಪ್ರಭಾವ ಉಂಟಾಗುತ್ತಿದ್ದ ಸಂದರ್ಭದಲ್ಲಿ, ಹಯಗ್ರಿವಾಚಾರ್ಯರಿಗೂ ದೇಸಾಯಿ ಗೋವಿಂದರಾಯರಿಗೂ ನೆಂಟಸ್ತಿಕೆಯ ಸಂಬಂಧವಾಗುತ್ತದೆ. ಚುರುಕು ಬುದ್ಧಿಯ ಪದ್ಮಾವತಿ ಅವಿದ್ಯಾವಂತನಾದ, ತಿರುಗಾಡಿಕೊಂಡು ಕಾಲಹರಣ ಮಾಡುವ ಕೇಶವನನ್ನು ಮದುವೆಯಾಗುವಂತಾದುದು ನಮ್ಮ ಹಳ್ಳಿಗಳಲ್ಲಿ ಜರುಗುವ ವಿಷಮ ದಾಂಪತ್ಯಕ್ಕೆ ಸಾಕ್ಷಿ ಯಾಗಿದೆ. ಈ ದಾಂಪತ್ಯ ಸಂಬಂಧದಿಂದ ನರಹರಿ ಹಾಗೂ ಕುಸುಮಾರ ಸಂಬಂಧ ಬೆಳೆಯುತ್ತದೆ. ನರಹರಿ ಆದರ್ಶವಾದಿ, ಬುದ್ಧಿವಂತ, ಓದಿನಲ್ಲಿ ಸಾಮಾಜಿಕ ಚಟುವಟಿಕೆಯಲ್ಲಿ ಜೀವಂತ ಶ್ರದ್ಧೆಯುಳ್ಳವ.

ಹಾಗೆಯೇ ಕುಸುಮಾಳು ಅವನ ಬಗ್ಗೆ ಪ್ರೀತಿಯ ಕನಸು ಕಾಣುತ್ತಾಳೆ. ಈ ಕಾದಂಬರಿಯಲ್ಲಿ ನರಹರಿ ಕುಸುಮಾರ ಆದರ್ಶ ಪ್ರೇಮದ ವಿವಿಧ ಮುಖಗಳನ್ನು ಕಾದಂಬರಿಕಾರರು ಚಿತ್ರಿಸಿರುವ ರೀತಿ ಅನ್ಯಾದೃಶವಾದದ್ದು. ಶೀನು, ನರಹರಿಯ ಗೆಳೆಯ. ಇಬ್ಬರೂ ಸಹಪಾಠಿಗಳು. ಕುಸಮಾಳ ರೂಪವು ಶೀನುವಿನ ಹೃದಯದಲ್ಲಿ ಪ್ರೇಮದ ಉದ್ವೇಗಕ್ಕೆ ದಾರಿ ಮಾಡಿಕೊಡುವದಾದರೂ ಅವಳ ಹೃದಯದಲ್ಲಿ ನರಹರಿಯೇ ಪ್ರಮುಖ ಪಾತ್ರ ವಹಿಸಿದ್ದಾನೆ. ಪ್ರೀತಿಯ ಸೆಲೆಯೇ ಇಲ್ಲದ ಶೀನು ಕುಸುಮಾಳ ಸೌಂದರ್ಯಕ್ಕಾಗಿ ಹಾತೊರೆದು ವಿಫಲನಾದ ಬಗೆ ಮಾರ್ಮಿಕ ವಾಗಿದೆ. ಒಂದು ರೀತಿಯಲ್ಲಿ ಕಾದಂಬರಿಯಲ್ಲಿ ಉದ್ದಕ್ಕೂ ಸಾಗಿನಿಂತ ನರಹರಿ ಕುಸುಮಾರ ಆದರ್ಶವಾದದ ನೆಲೆಯಲ್ಲಿ ಇದು ಸರಿಯಾಗಿದೆ. ನರಹರಿ ಕುಸುಮಾರ ಅನ್ಯೋನ್ಯತೆಯನ್ನು ಕಾದಂಬರಿಕಾರರು ಕೇವಲ ಕನಸುಗಾರಿಕೆ ಯಿಂದ ಚಿತ್ರಿಸಿಲ್ಲ. ಅದಕ್ಕೆ ಇರುವ ಭಾವಬಂಧನದಂತೆ ವಾಸ್ತವಿಕವಾದ ನೀತಿಯ ನೆಲೆಗಟ್ಟೂ ಇದೆ. ನರಹರಿ ತಾನು ಓದಿದ ಒಳ್ಳೆಯ ಪುಸ್ತಕಗಳನ್ನೆಲ್ಲಾ ಕುಸುಮಾಳಿಗೆ ತಂದುಕೊಟ್ಟು, ಅವಳನ್ನು ತನ್ನ ಹೃದಯ ಮಂದಿರದಲ್ಲಿ ಆದರ್ಶ ಮೂರ್ತಿಯನ್ನಾಗಿಸಿದ ಬಗೆ, ಕಾದಂಬರಿಕಾರರ ಧ್ವನಿಪೂರ್ಣ ಬರವಣಿಗೆಯೂ ಆಗಿದೆ. ನರಹರಿ ಹಾಗೂ ಶೀನು ಕಾಲೇಜು ವ್ಯಾಸಂಗಕ್ಕಾಗಿ ಪುಣೆ ಸೇರಿದಾಗ ವಿಷ್ಣು ಅವರಿಗೆ ಗೆಳೆಯನಾಗಿ ದೊರಕುತ್ತಾನೆ. ಆಗ ತಾಸಗಾಂವಿನ ಭಾರೀ ಶ್ರೀಮಂತರಾದ ಕೇಶವರಾಯರ ಮಗಳು ಚೆಲುವೆ ಪ್ರಮೀಳೆ ಅವರೊಂದಿಗೆ ಓದುತ್ತಿರುತ್ತಾಳೆ. ಕೆಟ್ಟ ಚಾರಿತ್ರ್ಯದ ಕುಡಚಿ ಅವಳ ಬೆನ್ನ ಹಿಂದೆ ಸುತ್ತುತ್ತಾನೆ. ಪ್ರಮೀಳೆಗೆ ಪ್ರತಿಭಾನ್ವಿತನೂ, ತೇಜಸ್ವಿ ಯುವಕನೂ ಆದ ನರಹರಿಯ ಮೇಲೆ ಅತ್ಯಂತ ಆದರ ಭಾವ. ಅಂತರಂಗದಲ್ಲಿ ಅವನನ್ನು ಪ್ರೀತಿಸುವ ಪ್ರಮೀಳೆಗೆ ನರಹರಿಯೆಂದರೆ ಪ್ರಂಚಪ್ರಾಣ. ನರಹರಿಯ ಆದರ್ಶವಾದ ಅವಳ ಮನಸ್ಸಿನ ಮೇಲೆ ಅತೀವ ಪರಿಣಾಮ ಬೀರುತ್ತದೆ. ಕುಸುಮಾಳನ್ನು ತನ್ನ ಬಾಳ ಸಂಗಾತಿಯನ್ನಾಗಿಸಬೇಕೆಂಬ ಹಂಬಲವುಳ್ಳ ನರಹರಿಗೆ ಪ್ರಮೀಳೆಯ ಸೆಳೆತವುಂಟಾಗುವದಿಲ್ಲ. ತನ್ನ ಪ್ರೇಮದ ಕನಸು ಭಗ್ನಗೊಂಡಾಗ ಅವಳು ವಿಷ್ಣುವನ್ನು ಪ್ರೀತಿಸಬೇಕಾಗುತ್ತದೆ. ನರಹರಿ ಅಂದು ದೇಶಾದ್ಯಂತ ನಡೆಯುತ್ತಲಿದ್ದ ರಾಷ್ಟ್ರೀಯ ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮುಕಿ, ರಾಜಕೀಯ ಭಾಷಣ ಮಾಡಿ, ಯುವನಾಯಕನಾಗಿ ರೂಪು ಗೊಳ್ಳುತ್ತಾನೆ. ಅಷ್ಟರಲ್ಲಿ ಕುಸುಮಾ ಹೆಚ್ಚಿನ ವ್ಯಾಸಂಗಕ್ಕಾಗಿ ಪುಣೆ ಸೇರುತ್ತಾಳೆ. ಮೊಗ್ಗಾವಿಯ ದೇಸಾಯಿ ಗೋವಿಂದರಾಯರು ತಮ್ಮ ಮಚ್ಚಿನ ರಂಗಾ ಸಾನಿಯಲ್ಲಿ ಅನುರಕ್ತಿ ಹೊಂದುವ ಆಸೆಯಿಂದ ಪುಣೆಗೆ ಬಂದು ನೆಲಸುತ್ತಾರೆ. ಕುಸುಮಾ ರಂಗಾಸಾನಿಯಲ್ಲಿ ತಾಯ್ತನದ ಪ್ರೇಮವನ್ನು, ಮಮತೆಯನ್ನು ಪಡೆಯುತ್ತಾಳೆ. ನರಹರಿ-ಕುಸುಮಾರ ಪ್ರೇಮ, ಆದರ್ಶ ಜೀವನ ಪ್ರವಾಹದಲ್ಲಿ

ಕೊಚ್ಚಿಹೋಗುವ ಸಂದರ್ಭ ಒದಗಿಬರುತ್ತದೆ. ನರಹರಿ ದಾಂಪತ್ಯ ಪ್ರೇಮದ ಮಧುಚಂದ್ರವನ್ನು ಕಾಣದೆ, ಚಳುವಳಿಯ ನೇತಾರನಾದ ಅವನು ವಿಜಾಪುರದಲ್ಲಿ ಸೆರೆಮನೆವಾಸ ಅನುಭವಿಸಬೇಕಾಗುತ್ತದೆ.

ಮೂಗ್ಗಾವಿಯ ನರಹರಿಯ ಜೊತೆಗೆ ವಿಷ್ಣುವಿನ ಬಾಳಿನ ಸುಂದರ ಅಧ್ಯಾಯಗಳನ್ನು ಕಾದಂಬರಿಕಾರರು ಚಿತ್ರಿಸಿರುವದು ಬಹುಮುಖ್ಯವಾದ ಅಂಶ. ಪುಣೆಯಲ್ಲಿ, ತನ್ನ ಅಕ್ಕ ರಂಗೂಬಾಯಿ, ಭಾವ ಮೋಡಕರರ ಪ್ರೀತಿ ವಾತ್ಸಲ್ಯದ ನೆರಳಲ್ಲಿ ಬೆಳೆದವ ವಿಷ್ಣು. ಮಕ್ಕಳಿಲ್ಲದ ಅವರು ಇವನನ್ನು ತನ್ನ ಮಗನೆಂದೇ ಪ್ರೀತಿಸಿ, ಅವನನ್ನು ಉಚ್ಚವ್ಯಾಸಂಗಕ್ಕಾಗಿ ವಿದೇಶಕ್ಕೆ ಕಳಿಸುವ ಬಯಕೆ ಇಟ್ಟುಕೊಂಡವರು. ಅದೇರೀತಿ ಶೀನು ಕೂಡ ವಿಲಾಯತಿಗೆ ಹೋಗಿ ಐ.ಸಿ.ಎಸ್. ಪಾಸಾಗುವ ಬಯಕೆಯುಳ್ಳವ. ವಿಷ್ಣು ಮತ್ತು ಶೀನು ಇಬ್ಬರೂ ಸಮುದ್ರಯಾನ ಮಾಡುವ ಮೊದಲು ತಾವು ಮದುವೆಯಾಗಿ ದಾಂಪತ್ಯಜೀವನದ ಸುಖವುಂಡ ಪ್ರಮೀಳೆ ಹಾಗೂ ಸುಶೀಲೆಯರನ್ನು ಸ್ವದೇಶದಲ್ಲೇ ಬಿಟ್ಟು ತೆರಳುವಂತಾಗುತ್ತದೆ. ಪ್ರಮೀಳೆಗೆ ವಿಲಾಯತಿಗೆ ಹೋಗುವ ಆಸೆ ಇದ್ದರೂ ಅವಳ ತಂದೆ ಕೇಶವರಾಯರಿಗೆ ಅನೀರೀಕ್ಷಿತವಾಗಿ ಪಾರ್ಶ್ವವಾಯು ಬಡಿದು, ಅವರ ಸೇವೆಗೆ ಅವಳು ನಿಲ್ಲುವಂತಾಗುತ್ತದೆ. ಹೀಗೆ ವಿಷ್ಣು ಮತ್ತು ಶೀನು ಇಂಗ್ಲಂಡಿಗೆ ಪ್ರಯಾಣವನ್ನು ಕೈಕೊಳ್ಳುವಂತಾಗುತ್ತದೆ.

ವಿಷ್ಣು ಶೀನುರ ಸಮುದ್ರಯಾನವು ಕಾದಂಬರಿಯ ಅತ್ಯಂತ ರೋಚಕವಾದ ಭಾಗವಾಗಿದೆ. ಹಡಗಿನ ಜೀವನ, ಬೇರೆ ಬೇರೆ ಜನರ ಜೀವನ, ಸಂಸ್ಕಾರ,ನಾಗರಿಕ ಜೀವನದ ವಿವಿಧ ಪರಿಗಳು- ಇವುಗಳ ಪ್ರತ್ಯಕ್ಷದರ್ಶನ ಅವರಿಗಾಗುತ್ತದೆ. ಈ ವಿದೇಶ ಪ್ರವಾಸದ ವಿವಿಧಾನುಭವಗಳು ವಿನಾಯಕರ ಆತ್ಮಚರಿತೆಯ ಭಾಗಗಳೆಂಬಂತೆ ಬಹಳ ಸ್ವಾರಸ್ಯಕರವಾಗಿ ಕಾದಂಬರಿಯಲ್ಲಿ ಮೂಡಿಬಂದಿವೆ. ಅಷ್ಟರಮಟ್ಟಿನ ತನ್ಮಯತೆ ಪಾತ್ರಗಳ, ಸನ್ನಿವೇಶಗಳ, ಸಂಭಾಷಣೆಯ ಮೂಲಕ ಚೆಲ್ಲುವರಿದಿದೆ. ಬಿಳಿಯರಾದ ಇಂಗ್ಲಂಡ ಜನರು ಭಾರತೀಯರನ್ನು ತಿರಸ್ಕಾರದಿಂದ ಕಾಣುವುದನ್ನು ನೋಡಿ, ವಿಷ್ಣುವಿಗೆ ರೋಷ ಆವೇಶ ಉಂಟಾಗುತ್ತದೆ. ಭಾರತೀಯತೆಯ ಹಿನ್ನೆಲೆಯಲ್ಲಿ ಇಂಗ್ಲಂಡನ್ನು ನೋಡುವ ವಿಷ್ಣು ಒಂದೆಡೆಗಿದ್ದರೆ, ಶೀನುವಿನ ದುರ್ಬಲ ಮನಸ್ಸಿನ ನಡವಳಿಕೆಗಳ ಚಿತ್ರಣವೂ ಆಶ್ಚರ್ಯವನ್ನುಂಟುಮಾಡುವಂಥದು. ಶೀನು, ಆ್ಯಲಿಸ್ ಸಿಂಪ್ಸನ್ ಎಂಬ ಚೆಲುವೆ ಕಲಾವಿದೆಯ ಮೋಹದಲ್ಲಿ ತನ್ನತನವನ್ನು ಕಳೆದುಕೊಂಡು, ಸುಶೀಲೆಯ ಆದರ್ಶ ಪ್ರೇಮಕ್ಕೆ ಭಂಗ ತರುತ್ತಾನೆ. ವಿದೇಶೀಯ ಸುಂದರಿಯರ ಆಕರ್ಷಣೆಗೆ ಮನಸೋಲುವ ಭಾರತೀಯ ಯುವಕರ ಪ್ರತಿನಿಧಿಯೇ ಶೀನು. ಪಾಶ್ಚಾತ್ಯರ ಸಾಮಾಜಿಕ ಜೀವನದ

ಸ್ವೈರಾಚಾರ, ನೈತಿಕತೆಯ ಅಧಃಪತನ ಮೊದಲಾದುವನ್ನು ಕಾದಂಬರಿಕಾರರು ಮಾರ್ಮಿಕವಾಗಿ ಚಿತ್ರಿಸಿದ್ದಾರೆ.

ನರಹರಿ ಕುಸುಮಾರ ಆದರ್ಶ ಸಂಸಾರಿಕ ಜೀವನದಲ್ಲಿ ಸ್ವಾಮಿದಾಸರು ಬೀರಿದ ಪ್ರಭಾವ, ಮಾಡಿದ ಸಹಾಯ, ಮಾರ್ಗದರ್ಶನ ಅಮೂಲ್ಯವಾದುವು. ಆಧ್ಯಾತ್ಮ ಸಾಧನೆಯ ಮೂಲಕ ಆತ್ಮಸಾಕ್ಷಾತ್ಕಾರ ಮಾಡಿಕೊಳ್ಳಬೇಕೆಂಬ ಅವರ ಹಂಬಲವು ಆ ಕಾಲದ ಆದರ್ಶವಾದಿಗಳಿಗೆಲ್ಲ ಮಾರ್ಗದರ್ಶಕವಾಗಿತ್ತು. ಭಾರತೀಯ ಸಂಸ್ಕೃತಿಯ ಪ್ರೀತಿ, ಅದರ ಪುನರುತ್ಥಾನ ಮಾಡಬೇಕೆಂಬ ಸ್ವಾಮಿದಾಸರಂಥ ಮಹಾನುಭಾವರ ವಿಚಾರವು ನರಹರಿಯ ಅಂತರಂಗದ ಬೆಳವಣಿಗೆಗೆ ಸಹಾಯಕವಾದುದು. ಸ್ವಾಮಿದಾಸರು ಅವನಿಗೆ ಮೊದಲು ಭೆಟ್ಟಿಯಾದುದು ರೈಲಿನಲ್ಲಿ. ಬಾಳಿನ ಪ್ರಯಾಣದ ಪಥಿಕನಿಗೆ ಮಹಾನುಭಾವರ ದರ್ಶನವಾದಂತೆ ನರಹರಿಯ ಜೀವನದಾರಿಯಲ್ಲಿ ಸ್ವಾಮಿದಾಸರು ಬಂದರೆಂಬ ಅಂಶ ಅತ್ಯಂತ ಧ್ವನಿಪೂರ್ಣವಾದುದು. ನರಹರಿ ಸೆರೆಮನೆಯಲ್ಲಿದ್ದಾಗ ಕುಸುಮಾಳ ರಕ್ಷಕರಾಗಿ ಅವರು ನಿಂತುದು, ಅವಳಲ್ಲಿ ಪವಿತ್ರ ವಾತ್ಸಲ್ಯವನ್ನು ಕಾಣುವದು ರೋಚಕ ನಡವಳಿಕೆಯಾಗಿದೆ.

ನರಹರಿ ಸೆರೆಮನೆಯಲ್ಲಿ 'ಅಂಬಾದಾಸ'ನನ್ನು ಭೇಟಿಯಾದ ಸಂದರ್ಭವೂ ಮಹತ್ವಪೂರ್ಣವಾದುದು. ಅಂಬಾದಾಸನೂ ಆದರ್ಶವಾದಿ. ಜೀವನದ ಧ್ಯೇಯಕ್ಕಾಗಿ, ಪೂರ್ಣಜೀವನದ ಅನ್ವೇಷಕನಾಗಿರುವ ಅಂಬಾದಾಸನಂತಹ ಸ್ನೇಹಜೀವಿಯ ಗೆಳೆತನ ನರಹರಿಯ ಅಂತಃಸ್ಥೈರ್ಯವನ್ನು ಬಲಪಡಿಸುತ್ತದೆ. ಸೆರೆಮನೆಯಿಂದ ಬಿಡುಗಡೆಗೊಂಡ ನರಹರಿ, ಕುಸುಮಾಳನ್ನು ನೋಡಲು ಬರುತ್ತಾನೆ. ಅವಳನ್ನು ನೋಡಲು ಬಂದಾಗ ಕುಸುಮಾಳಿಗೆ ಅಪಾರ ಆನಂದವಾಗುತ್ತದೆ. ಆದರೆ ಮೋಡಕನ ಕೆಟ್ಟಮಾತು, ಅದರಿಂದ ಬೇಸರಗೊಂಡ ಸ್ವಾಮಿದಾಸರು ಕುಸುಮಾಳ ಮನೆ ತ್ಯಜಿಸಿ, ಹಿಮಾಲಯದ ಮಡಿಲಲ್ಲಿ ಧುಮುಕುವ ಗಂಗೆಯಲ್ಲಿ ಜೀವನ್ಮುಕ್ತಿ ಪಡೆಯುವ ಸನ್ನಿವೇಶ ಅತ್ಯಂತ ಧ್ವನಿಪೂರ್ಣವಾದುದು. ಸ್ವಾಮಿದಾಸರ ಪ್ರೇರಣೆಯಿಂದ ನರಹರಿ ಕುಸುಮಾ ಅವರು 'ಪೂರ್ಣ ಜೀವನ ಕೇಂದ್ರ' ಸ್ಥಾಪಿಸಲು ನಿರ್ಧರಿಸುತ್ತಾರೆ. ಈ ಸಂದರ್ಭದಲ್ಲಿ ವಿಲಾಯತಿಗೆ ಹೋದ ಶೀನು, ತನ್ನ ವಿದೇಶಿ ಮಡದಿ ಆಲಿಸ್ ಜೊತೆಗೆ ಭಾರತಕ್ಕೆ ಬಂದಾಗ, ಅವನ ಮೊದಲ ಹೆಂಡತಿ ಸುಶೀಲೆ ಕ್ಷಯದಿಂದ ತೀರಿಕೊಳ್ಳುತ್ತಾಳೆ. ಶೀನು ಹಾಗೂ ಆಲಿಸ್ ಇಬ್ಬರೂ ನರಹರಿ ಕುಸುಮಾರ 'ಪೂರ್ಣ ಜೀವನ ಕೇಂದ್ರ' ದಲ್ಲಿ ಸಾಧನೆ ಮಾಡಲು ನಿಲ್ಲುತ್ತಾರೆ. ಹಾಗೆಯೇ ಪ್ರಮೀಳೆ ಕೂಡ 'ಪೂರ್ಣಜೀವನ ಕೇಂದ್ರ'ದಲ್ಲಿ ವಿಷ್ಣುವಿನ ಬರುವಿಕೆಗಾಗಿ ಕಾದು ಸಾಧನಮಾರ್ಗ ಸೇರುತ್ತಾಳೆ.

ಕುಸುಮಾ ನರಹರಿಯರ ಆದರ್ಶ ಪ್ರೇಮದ ಫಲವಾಗಿ ಹುಟ್ಟಿದ ಮಗುವಿಗೆ 'ಸ್ವಾಮಿದಾಸ' ಎಂದು ಹೆಸರಿಡಲಾಗುತ್ತದೆ.ಕಾದಂಬರಿಯಲ್ಲಿ ಬರುವಂತೆ ಸ್ವಾಮಿದಾಸರೆ ಪುನಃ ನರಹರಿ ಕುಸುಮಾರ ಜೀವನದಲ್ಲಿ ಮರಳಿ ಹುಟ್ಟಿ ಬಂದಿದ್ದಾರೆಂಬುದು ಅರ್ಥಪೂರ್ಣವಾದುದು. ನರಹರಿ ಕುಸುಮಾರ ಆದರ್ಶದ ಪ್ರತೀಕವಾದ 'ಪೂರ್ಣಜೀವನಕೇಂದ್ರ'ವು ಋಷಿಮುನಿಗಳು ಸಾವಿರಾರು ವರ್ಷಗಳಿಂದ ಮಾಡಿದ ಜ್ಞಾನ, ಮನನ, ಚಿಂತನಗಳ ತಪೋಜೀವನದ ಆದರ್ಶ ಮೌಲ್ಯಗಳನ್ನು, ನೀತಿ, ತತ್ವ, ವಿಚಾರಗಳನ್ನು ಪ್ರಸಾರ ಮಾಡುವ ಮಹಾಸಂಕಲ್ಪ ಹೊಂದಿರುವ ಸಂಸ್ಥೆಯಾಗಿ ರೂಪುಗೊಳ್ಳುತ್ತದೆ. ಮಾನವನ ಹೃದಯವು ವಿಶ್ವಾತ್ಮನ ಲೀಲೆಯಲ್ಲಿ ದಿವ್ಯಶಾಂತಿಯನ್ನು ಪಡೆಯುವ ಆಧ್ಯಾತ್ಮಿಕ ಸಾಧನೆಯ ಮಹಾಕೇಂದ್ರವಾಗುವದರ ಮೂಲಕ, 'ಪೂರ್ಣಜೀವನ ಕೇಂದ್ರ' ದ ಸಾರ್ಥಕತೆ, ನವಭಾರತದ ಸಂದರ್ಭದಲ್ಲಿ ಅತ್ಯಂತ ಅರ್ಥಪೂರ್ಣ ಕ್ರಿಯೆಯೆಂಬುದನ್ನು ಕಾದಂಬರಿಕಾರರು ಮಾರ್ಮಿಕವಾಗಿ ಚಿತ್ರಿಸಿದ್ದಾರೆ.

ಕಾದಂಬರಿಯ ಪಾತ್ರಪ್ರಪಂಚ :

'ಸಮರಸವೇ ಜೀವನ' ಕಾದಂಬರಿಯಲ್ಲಿಯ ಪಾತ್ರ ಪ್ರಪಂಚ ವೈವಿಧ್ಯಮಯ ವಾದುದ್ದು. ಮಾನವ ಸ್ವಭಾವದ ವಿಭಿನ್ನ ಗುಣಧರ್ಮಗಳ ಸಂಕೇತಗಳಾಗಿ ಇಲ್ಲಿಯ ಪಾತ್ರಗಳು ಮನಸೆಳೆಯುತ್ತವೆ. ಮೊಗ್ಗಾವಿಯ ಹಯಗ್ರೀವಾ ಚಾರ್ಯರು, ದೇಸಾಯಿ ಗೋವಿಂದರಾಯರು, ನರಹರಿ, ಕೇಶವ, ಶೀನು, ವಿಷ್ಣು, ಮೋಡಕ, ಕೇಶವರಾಯ, ಸ್ವಾಮಿದಾಸ, ಅಂಬಾದಾಸ, ಪರಂಜಪೆ, ಕಾಳೆ, ಪಟವರ್ಧನ ಮೊದಲಾದ ಭಾರತೀಯರಲ್ಲದೆ, ಇಂಗ್ಲಂಡಿನಲ್ಲಿರುವ ಮಿಸ್ ಬರ್ವೆ, ಮಿಸ್ ಆಲಿಸ್, ಸಿಂಪ್ಸನ, ಆಂಡರ್ಸನ್, ಲೂಯಿ ಓಂಕರಟನ್, ಡೀನ್ ಮೆಕಫರ್ಡ, ಜೇಮ್ಸ ದಂಪತಿಗಳಲ್ಲದೆ ಸ್ತ್ರೀಪಾತ್ರಗಳಾದ ಜಾನಕೀಬಾಯಿ, ರಮಾಬಾಯಿ, ಕುಸುಮಾ, ಪದ್ಮಾವತಿ, ವೆಂಕಮ್ಮ, ರಂಗಾಸಾನಿ, ಗಂಗವ್ವ ಮೊದಲಾದವರು ಮಾನವ ಪ್ರಪಂಚದ ವಿವಿಧ ಮುಖಗಳ ಮೂರ್ತಿಗಳಾಗಿದ್ದಾರೆ. ಜೀವನ ಸಂಗ್ರಾಮದಲ್ಲಿ ಈ ಎಲ್ಲ ಪಾತ್ರಗಳು ನಡೆಸುವ ಸಂಘರ್ಷ, ಬದುಕನ್ನು ಎದುರಿಸುವ ರೀತಿ, ಅವರ ಸಾಮಾಜಿಕ, ಸಾಂತ್ಕೃತಿಕ ಬದುಕನ್ನು ಗೋಕಾಕರು ಬಹಳ ಮರ್ಮಸ್ಪರ್ಶಿಯಾಗಿ ಚಿತ್ರಿಸಿದ್ದಾರೆ. ಕಾದಂಬರಿಯ ಪಾತ್ರಗಳು ತತ್ವಕ್ಕಾಗಿ ಹೋರಾಡುವವರು, ಆದರ್ಶವಾದದಿಂದ ಪ್ರೇರಿತರಾದವರು, ಆಧ್ಯಾತ್ಮವಾದದಿಂದ ಆಕರ್ಷಿತರಾದವರು, ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಿದವರು, ಬಡತನ, ಅಜ್ಞಾನ, ಮೂಢನಂಬಿಕೆಯಿಂದ ಕೂಡಿರುವವರು, ನಾಗರಿಕತೆಯ ಕಟ್ಟು ಪಾಡುಗಳಿಗೆ ಬದ್ಧರಾದವರು, ಹಳ್ಳಿಯಿಂದ ನಗರದತ್ತ ಪಯಣಿಸುವವರು, ಮಡಿವಂತಿಕೆ ಆಚಾರಪರಂಪರೆಯಲ್ಲಿ ಶ್ರದ್ಧೆಯಿಟ್ಟುಕೊಂಡವರು, ವಿದೇಶೀಯರು

ಹೀಗೆ ಬಹುವಿಧದ ಪಾತ್ರಗಳು ತಮ್ಮ ಗುರಿಯತ್ತ ಮುನ್ನಡೆಯುವದನ್ನು ನಾವು ಕಾಣಬಹುದು. ಕಾದಂಬರಿಯ ಪಾತ್ರಗಳ ಗುಣ ಸ್ವಭಾವಗಳಲ್ಲೂ ಸಾಕಷ್ಟು ವೈವಿಧ್ಯ ವೈಪರೀತ್ಯವಿದೆ. ಧರ್ಮದ ಕಟ್ಟುಪಾಡಿನಲ್ಲಿ ಸಿಲುಕಿದವರು, ಪ್ರೇಮಿಗಳಾಗಿ ಕನಸುಣಿಗಳಾದವರು, ಭಗ್ನ ಪ್ರೇಮಿಗಳು, ಆಧ್ಯಾತ್ಮವಾದಿಗಳು, ಹಳ್ಳಿಯ ಜೀವನದ ವಿವಿಧ ಜನರು, ಪುಣೆ, ಇಂಗ್ಲೆಂಡ ನಗರಗಳ ಯಾಂತ್ರಿಕ ಜೀವನದಲ್ಲಿ ತಮ್ಮ ತನವನ್ನು ಕಳೆದುಕೊಂಡವರು ಹಾಗೂ ವ್ಯಕ್ತಿತ್ವಕ್ಕಾಗಿ ಹುಡುಕಾಟ ನಡೆಸಿದವರು, ಇತ್ಯಾದಿ ವ್ಯಕ್ತಿಗಳು. ಅವರ ಬದುಕು ಒಂದು ರಮ್ಯ ನಾಟ್ಯಶಾಲೆಯನ್ನಾಗಿಸಿದೆ.

'ಸಮರಸವೇ ಜೀವನ'ವೆಂಬುದು ಕಾದಂಬರಿಯ ಪಾತ್ರಗಳು ಅಂತರಂಗ ಜೀವನದಲ್ಲಿ ಕಂಡುಕೊಂಡ ಜೀವನದರ್ಶನವಾಗಿದೆ. ನರಹರಿ-ಕುಸುಮಾ, ವಿಷ್ಣು ಪ್ರಮೀಳೆ, ಶೀನು-ಸುಶೀಲೆ ಹಾಗೂ ಆ್ಯಲಿಸ್-ಇವರ ದಾಂಪತ್ಯ ಪ್ರೇಮ, ಕನಸುಗಾರಿಕೆ, ಆದರ್ಶವಾದ ಬೆಳವಣಿಗೆ ಪಡೆದ ಬಗೆಯು ಕಾದಂಬರಿಯಲ್ಲಿ ಮುಖ್ಯ ಪಾತ್ರವಹಿಸಿದೆ. ಆದರೂ ನರಹರಿ-ಕುಸುಮಾರ ಆದರ್ಶವಾದದ ವಿಕಾಸವೇ ಕಾದಂಬರಿಯ ಕೇಂದ್ರ ತಿರುಳಾಗಿ ರೂಪಿತವಾಗಿರುವದು ಕಂಡುಬರುತ್ತದೆ. ಬಾಳಿನಲ್ಲಿ ಪ್ರೇಮದಿಂದ ವಂಚಿತರಾದವರು, ವಿದುರರು, ವಿಧವೆಯರು, ಇರುವದನ್ನು ಕಾದಂಬರಿಕಾರರು ಅನೇಕ ಪಾತ್ರಗಳ ಮೂಲಕ ಚಿತ್ರಿಸಿದ್ದಾರೆ. ಸ್ವಾಮಿದಾಸ, ಅಂಬಾದಾಸ ಮೊದಲಾದ ಪಾತ್ರಗಳ ಆದರ್ಶವು ಆಧ್ಯಾತ್ಮಿಕತೆಯಿಂದ ಪ್ರೇರಿತವಾದದ್ದಾಗಿದೆ. ಹೀಗಿದ್ದರೂ ದಾಂಪತ್ಯ ಪ್ರೇಮದ ಆದರ್ಶ ಮೂಲಕ ಪೂರ್ಣ ಜೀವನವನ್ನು ನಡೆಸುವ ಆಧ್ಯಾತ್ಮಿಕ ಸಾಧನೆ ಮಾಡುವುದೇ ಶ್ರೇಷ್ಠವಾದುದೆಂಬ ಆದರ್ಶವು, ನರಹರಿ-ಕುಸುಮಾರ ಮೂಲಕ ಕಾದಂಬರಿಕಾರರು ಚಿತ್ರಿಸಿರುವುದು ಅತ್ಯಂತ ಮಾರ್ಮಿಕವಾಗಿದೆ. ಕಾದಂಬರಿಯ ಪಾತ್ರಗಳಲ್ಲಿ ಜೀವನ ವಿಮುಖತೆ ಯಾಗಲೀ, ಬದುಕಿನ ಕಷ್ಟಗಳಿಗೆ ಹೆದರಿ ಓಡಿಹೋಗುವ ಪಲಾಯನವಾದವಾಗಲೀ ಕಾಣಿಸುವದಿಲ್ಲ. ತಮ್ಮ ತಮ್ಮ ಸ್ವಭಾವ, ಜೀವನಧರ್ಮಕ್ಕನುಗುಣವಾಗಿ ಬದುಕು ನಡೆಸುವ ಗುಣ ಇಲ್ಲಿಯ ಪಾತ್ರಗಳಲ್ಲಿ ಕಂಡುಬರುತ್ತದೆ. ಒಟ್ಟಿನಲ್ಲಿ ಈ ಮಹಾಕಾದಂಬರಿಯ ಪಾತ್ರಗಳು ವ್ಯಕ್ತಿತ್ವದ ಹುಡುಕಾಟದಲ್ಲಿ ತೊಡಗಿದವರು, ಜೀವನೋತ್ಸಾಹದಲ್ಲಿ ಮೈಮರೆತವರು, ಕನಸುಣಿಗಳು, ಆದರ್ಶವಾದಿಗಳು ಆಗಿದ್ದು ಸಮಕಾಲೀನ ಜೀವನಕ್ಕೆ ಸ್ಪಂದಿಸುವವರಾಗಿದ್ದಾರೆ. ಅಂತಹ ಜೀವಂತ ಪಾತ್ರ ಸೃಷ್ಟಿ ಗೋಕಾಕರದಾಗಿದೆ.

ಕಾದಂಬರಿಯಲ್ಲಿ ಜನಜೀವನ ಚಿತ್ರಣ :

'ಸಮರಸವೇ ಜೀವನ' ದಲ್ಲಿಯ ಜನಜೀವನ ಚಿತ್ರಣವು ಚೇತೋಹಾರಿಯಾದ ಅನುಭವ ವೈವಿಧ್ಯದ ಪ್ರತೀಕವಾಗಿದೆ. ಉತ್ತರ ಕರ್ನಾಟಕದ ಮೊಗ್ಗಾವಿಯ ವರ್ಣನೆ,

ಸ್ವಾತಂತ್ರ್ಯಪೂರ್ವದ ಸಾಮಾಜಿಕ ಜೀವನದ ಜೀವಂತ ಚಿತ್ರವಾಗಿದೆ. ಬ್ರಿಟೀಶ ಸರಕಾರದ ಕಟಿಮುಷ್ಟಿಯಲ್ಲಿ ಜನತೆ ಪಟ್ಟಪಾಡು, ಸಾಮಾಜಿಕ ವಿಷಮತೆ, ರಾಜಕೀಯ, ಸಂಗ್ರಾಮಗಳನ್ನು ಮನಮುಟ್ಟುವಂತೆ ವರ್ಣಿಸಲಾಗಿದೆ. ಮೊಗ್ಗಾವಿಯ ನಾಗರಿಕ ಜೀವನದ ವಿಕಾಸ, ಉತ್ತರ ಕರ್ನಾಟಕದ ಜನಜೀವನದ ಭಾಗವೇ ಆಗಿದೆ. ಮೊಗ್ಗಾವಿಯಿಂದ ಪುಣೆಯವರೆಗೆ ಅಂದರೆ, ಕರ್ನಾಟಕದಿಂದ ಮಹಾರಾಷ್ಟ್ರ, ಅಲ್ಲಿಂದ ಮುಂದೆ ಇಂಗ್ಲಂಡ್‌ಗೆ, ಪುನಃ ತಾಯ್ನಾಡಿಗೆ ಸಾಗುವ ಪಯಣ ಬೇರೆ ಬೇರೆ ಜನಜೀವನದ ವೈವಿಧ್ಯವಾಗಿದೆ. ಇದರಿಂದ ಸ್ವಾತಂತ್ರ್ಯ ಪೂರ್ವದ ಭಾರತೀಯ ಜೀವನ ಹಾಗೂ ಪಾಶ್ಚಾತ್ಯ ಜೀವನ ಕ್ರಮಗಳ ವ್ಯಾಪಕ ಅನುಭವ ಚಿತ್ರಣಗಳ ಮೂಲಕ ತೌಲನಿಕವಾಗಿ ಸಾಮಾಜಿಕ ಅಧ್ಯಯನ ಮಾಡಲು ಸಾಧ್ಯವಾಗುತ್ತದೆ. ಹಳ್ಳಿಯ ಮುಗ್ಧ ಜನತೆ, ಪುಣೆಯಂಥ ನಗರದ ಜನರು, ದೊಡ್ಡ ಮನುಷ್ಯರೆನಿಸಿ ಕೊಂಡವರ ಸಣ್ಣತನ, ಸಮಾಜದ ವಿವಿಧ ವರ್ಗದ ಜನತೆಯ ಆಗುಹೋಗುಗಳನ್ನು ವಿನಾಯಕರು ಚಿತ್ರಿಸುವಾಗ ವಾಸ್ತವಿಕ ದೃಷ್ಟಿಕೋನವಿಟ್ಟು ಕೊಂಡುದು ಸುಸ್ಪಷ್ಟ. ಕಾದಂಬರಿ ಕಾಲ್ಪನಿಕವಾಗಿದ್ದರೂ ಮಣ್ಣಿನ ನೆಲದ ಜೀವಂತ ಸ್ಪರ್ಶದಿಂದ, ವ್ಯಾಪಕ ಜೀವನ ಅವಲೋಕನ ಕ್ರಮದಿಂದ ನೈಜವೆನ್ನಿಸಿದೆ. ಭಾರತೀಯ ಬದುಕಿನ ಬಗೆಗೆ ಗೋಕಾಕರಿಗಿರುವ ಲವಲವಿಕೆ ಉದ್ದಕ್ಕೂ ಕಾಣುತ್ತದೆ.

ಕಾದಂಬರಿಯ ರಚನಾ ತಂತ್ರ :

'ಸಮರಸವೇ ಜೀವನ' ಮಹಾಕಾದಂಬರಿಯನ್ನು ಬರೆಯುವಾಗ ಗೋಕಾಕರು ಇಟ್ಟುಕೊಂಡ ರಚನಾ ವಿನ್ಯಾಸ ವಿಚಾರವು ಮಹತ್ವಪೂರ್ಣ ವಾದುದು. ಕಾದಂಬರಿ ಬರೆಯುವಾಗ ಒಂಬತ್ತು ಪರಿಗಳ ವಿಚಾರವಾಗಿ ಹೇಳಿ, ಅವು ಕನ್ನಡ ಕಾದಂಬರಿಗಳಲ್ಲಿ ಇರಬೇಕಾದ ಅಗತ್ಯದ ಬಗ್ಗೆ ಅವರು ಒತ್ತಿ ಹೇಳಿದ್ದಾರೆ. ಹಿಂದೆ 'ನವರಸಭರಿತ' ಎಂದು ಕೃತಿಯನ್ನು ವರ್ಣಿಸಲಾಗುತ್ತಿತ್ತು. ಆದರೆ ಈಗ 'ಸರ್ವಾಂಗಪೂರಿತ' ಎಂದು ಕರೆಯಬೇಕು. ಹೀಗೆ ಆಗುವಾಗ ಈ ರೀತಿ ವಿಷಯ ಜೋಡಣೆ ಆಗಬೇಕು : ಶೈಲಿ, ಕಥಾವಸ್ತು, ಕಾಲಮಾನ, ಹಿನ್ನೆಲೆ, ಜನಜೀವನ, ಪಾತ್ರನಿರ್ಮಾಣ, ಕಲ್ಪನಾತ್ಮಕ ಆವರಣ, ತತ್ವ, ರಸಾನುಭವ, ಮೂಲದರ್ಶನ ಎಂಬ ಒಂಬತ್ತು ಪರಿಗಳು ಕಾದಂಬರಿಗೆ ತಾತ್ವಿಕ ನೆಲಗಟ್ಟನ್ನು ನಿರ್ಮಿಸುವೆ. ಇವುಗಳಲ್ಲಿ ಕೊನೆಯದಾದ ಮೂಲದರ್ಶನವೇ ಬೀಜ. ಉಳಿದ ಅಷ್ಟಾಂಗಗಳು ಅದನ್ನು ಹೊಂದಿಯೇ ನಡೆಯಬೇಕು ಎಂದು ಹೇಳುವ ಗೋಕಾಕರು, ತಮ್ಮ ಕಾದಂಬರಿ ಮೀಮಾಂಸಾ ವಿಚಾರಕ್ಕೆ ಅನುಗುಣವಾಗಿ ತಮ್ಮ 'ಸಮರಸವೇ ಜೀವನ' ಕಾದಂಬರಿ ರಚಿಸಿದ್ದಾರೆಂದು ಹೇಳಬಹುದು. ಇದರಲ್ಲಿ ಮನುಷ್ಯನ ಪೂರ್ಣ ಜೀವನದ ಮಾರ್ಗಕ್ರಮಣವೇ ಬೀಜರೂಪವಾದ ಮೂಲದರ್ಶನ. ಈ ದೃಷ್ಟಿಯಿಂದ 'ಸಮರಸವೇ ಜೀವನ'ವು ಆದರ್ಶವಾದದ ನೆಲೆಯ ಮೇಲೆ ನಿಂತ

ಉತ್ಕೃಷ್ಟ ಕಾದಂಬರಿ. ವೈಯಕ್ತಿಕ ಬದುಕಿನ ಆಗುಹೋಗುಗಳಿಗಿಂತ ಮಾನವ ಚೇತನ ಯಾತ್ರೆಯ ಕಡೆಗೆ ಗೋಕಾಕರು ವಿಶೇಷ ಒತ್ತು ಕೊಟ್ಟು ಹೇಳಿರುವದು ಕಂಡುಬರುತ್ತದೆ. ಇಲ್ಲಿಯ ಅನೇಕ ಪಾತ್ರಗಳು ತಮ್ಮ ಬಾಳಿನಲ್ಲಿ ಒದಗಿ ಬಂದ 'ಅಗ್ನಿದಿವ್ಯ'ಗಳನ್ನು ದಾಟಿ ಮುನ್ನಡೆಯಲು ಸಮರ್ಥರಾದುದು ಸಾಕ್ಷಿಯಾಗಿದೆ. ನರಹರಿ-ಕುಸುಮಾ ಮತ್ತು ಸ್ವಾಮಿದಾಸರ ಜೀವನೋದ್ದೇಶ ತನಗೆ ತಾನೇ ರೂಪಿತವಾದದ್ದು. ಅದರ ಬೆಳವಣಿಗೆಯನ್ನು ಕಂಡಾಗ, ಯಾವುದೋ ಒಂದು ದಿವ್ಯಶಕ್ತಿಯ ನೆರಳಿನಲ್ಲಿ ಅವರು ಮುನ್ನಡಿಯಿಡುತ್ತಿದ್ದಾರೆಂದು ಭಾಸವಾಗುತ್ತದೆ. ಭಾರತೀಯ ಸಂಸ್ಕೃತಿಯ ಸಂಪನ್ನತೆಯು ಕಾದಂಬರಿಯ ಪಾತ್ರಗಳಿಗೆ ಸ್ಫೂರ್ತಿದಾಯಕವಾಗಿದೆ. ಆದ್ದರಿಂದಲೇ ವಿದೇಶದಿಂದ ಹಿಂದಿರುಗಿದ ಶೀನು ಆ್ಯಲಿಸ್ ಭಾರತೀಯ ದರ್ಶನ ಸಾಕ್ಷಾತ್ಕಾರಕ್ಕಾಗಿ ಹಂಬಲಿಸುವದು ಕೇವಲ ಸಾಂಕೇತಿಕವಷ್ಟೇ ಅಲ್ಲ. ಅದು ಅವರಿಗಾದ ಪ್ರೇರಣೆಯ ಮೂಲಸ್ರೋತವೂ ಆಗಿದೆ. ಈ ಕಾದಂಬರಿಯ ಪಾತ್ರಗಳು ಕನ್ನಡನಾಡು, ಭಾರತ, ವಿದೇಶದ ಸಂಸ್ಕೃತಿಯ ಪ್ರತಿನಿಧಿಗಳಾಗಿ ಕಾಣುತ್ತವೆ. ಭಾರತೀಯರ ದೃಷ್ಟಿಯಲ್ಲಿ ವಿದೇಶಿ ನಾಗರಿಕತೆಯ ಬಗೆಗೆ ಉಂಟಾಗುವ ಸಮಗ್ರ ದೃಷ್ಟಿಕೋನವನ್ನು ಪ್ರಚುರಪಡಿಸುವದರ ಜೊತೆಗೆ ಮಾನವನ ಆತ್ಮೋನ್ನತಿಗೆ ಮೂಲ ಪ್ರೇರಣೆ, ಸಾಧನಾಮಾರ್ಗ ಭಾರತೀಯ ದರ್ಶನದಲ್ಲೇ ಅಂತಸ್ಥವಾಗಿದೆಯೆಂಬ ವಿಚಾರವೂ ಗೋಕಾಕರ ಪರಿಣತ ದೃಷ್ಟಿಯ ಫಲವಾಗಿದೆ. 'ಇಲ್ಲೆ ಇರು ಅಲ್ಲಿ ಹೋಗಿ ಮಲ್ಲಿಗೆಯನು ತರುವೆನು' ಎಂದು ವಿದೇಶಕ್ಕೆ ಹೋಗುವಾಗ ಹೇಳಿ ಹೋದ ಕವಿ ಗೋಕಾಕರು, ತಮ್ಮ ಕಾದಂಬರಿಯಲ್ಲೂ ವಿದೇಶೀಯರ ಪ್ರಭಾವಕ್ಕೆ ತಮ್ಮತನವನ್ನು ಮರೆತು ನಡೆಯದೆ, ಪ್ರಪಂಚ ಪರ್ಯಟನದಿಂದ ಬಂದ ಅನುಭವ ಪಡೆದು, ಭಾರತೀಯನ ಆತ್ಮೋನ್ನತಿಯ ಅಥವಾ ದೃಷ್ಟಿವಿಸ್ತಾರದ, ಚೇತನ ವಿಕಾಸದ, ಆದರ್ಶಪಾತಳಿಯಲ್ಲಿ ಬೆಳೆಯಬಹುದಾದ ವ್ಯಕ್ತಿತ್ವದ ದರ್ಶನ ಮಾಡಿಸಿದ್ದಾರೆ.

ಕಾದಂಬರಿಯಲ್ಲಿ ಮನೋವಿಶ್ಲೇಷಣಾ ಹಾಗೂ ಚಿಂತನ ಎಂಬ ನೆಲೆಯಲ್ಲಿ ಆಲೋಚಿಸಿದಾಗ, ಆಧುನಿಕ ಮನಃಶಾಸ್ತ್ರಜ್ಞರ ವಿಚಾರಲಹರಿಯನ್ನು ಗೋಕಾಕರು ಪಾತ್ರಗಳಲ್ಲಿ ಅವಳಡಿಸಿ ತೋರಿಸಿರುವದು ಕಂಡುಬರುತ್ತದೆ. ಕನಸುಗಳು ಮಾನವನ ಸುಪ್ತಮನಸ್ಸಿನ ಪ್ರತಿಕ್ರಿಯೆಯಾಗಿವೆಯೆಂಬ ವಿಚಾರವನ್ನು ನರಹರಿಯ ಕನಸು (ಪುಟ. ೪೯), ಸುಶೀಲೆಗೆ ಬಿದ್ದ ಕನಸು (ಪುಟ ೮೯), ಅನಿಷ್ಟ ಸೂಚಕ ಕನಸು (ಪುಟ ೧೧೬), ವಿಲಾಯತಿಗೆ ಹೊರಡುವ ಪೂರ್ವದಲ್ಲಿ ಶೀನುನಿಗೆ ಬಿದ್ದ ಕನಸು ಇತ್ಯಾದಿ ಸ್ವಪ್ನಗಳು ಅವರ ಸೂಕ್ಷ್ಮಪ್ರಜ್ಞೆಯ ಪ್ರತೀಕಗಳಾಗಿವೆ. "ಭಾರತದಿಂದ ಯುರೋಪಿಗೆ ಪಯಣ ಬೆಳೆಸುವ ತರುಣರಲ್ಲಾಗುವ ಮಾನಸಿಕ ಪರಿವರ್ತನೆಗಳು ಮನಃಶಾಸ್ತ್ರಕ್ಕೆ ಒದಗಿಸಿಕೊಟ್ಟ ನವೀನ ಸಾಮಗ್ರಿಯಾಗಿವೆ"[೧]

೧. ವಿನಾಯಕ ಗೋಕಾಕ : ಸಮರಸವೇ ಜೀವನ, ಪ್ರಸ್ತಾವನೆ -ಪುಟ ೨೬

ಎಂದು ಗೋಕಾಕರು ಕಾದಂಬರಿಯ ಓಠಿಕೆಯಲ್ಲಿ ಹೇಳಿದ ಮಾತುಗಳಲ್ಲಿ ಯಾವದೇ ಉತ್ಪ್ರೇಕ್ಷೆಯಿಲ್ಲ. ಅಷ್ಟರಮಟ್ಟಿಗೆ ಗೋಕಾಕರ ಸೂಕ್ಷ್ಮ ಮನೋ ಪರಿಶೀಲನದೃಷ್ಟಿ ಕಲಾಸೃಷ್ಟಿಯಾಗಿ ಮೂಡಿಬಂದಿದೆ.

ಕಾದಂಬರಿಯಲ್ಲಿ ಜೀವನ ದರ್ಶನ :

ಗೋಕಾಕರು ತಮ್ಮ ಕಾವ್ಯಗುರು ಬೇಂದ್ರೆಯವರ ಪ್ರಸಿದ್ಧ ಕಾವ್ಯ ಪಂಕ್ತಿ 'ರಸವೆ ಜನನ, ವಿರಸ ಮರಣ, 'ಸಮರಸವೇ ಜೀವನ' ಎಂಬ ಜೀವನ ಸಿದ್ಧಾಂತವನ್ನು ಈ ಕಾದಂಬರಿಯ ಮೂಲದರ್ಶನ, ಕೇಂದ್ರ ವಿಷಯವನ್ನಾಗಿಸಿರುವದು ಅರ್ಥಪೂರ್ಣವಾದದ್ದಾಗಿದೆ 'ಸಮರಸವೇ ಜೀವನ' ಸಿದ್ಧಾಂತವು ಗೆಳೆಯರ ಗುಂಪಿನ ಸಾಹಿತಿಗಳ ಆದರ್ಶ ಸೂತ್ರವಾಗಿದ್ದು, ಅದನ್ನು ಗೋಕಾಕರು ಈ ಕಾದಂಬರಿಯ ಮೂಲಕ ಸಾಕಾರಗೊಳಿಸಿದಂತಾಗಿದೆ. ಕನ್ನಡಕ್ಕೆ ಗೆಳೆಯರ ಗುಂಪಿನ ಉತ್ಕೃಷ್ಟ ಕೊಡುಗೆಯಾಗಿಯೂ ಇದು ಸಾಹಿತ್ಯ ಪ್ರಪಂಚದಲ್ಲಿ ಮಾನ್ಯವಾಗಿದೆ. ಈ ಕಾದಂಬರಿಯ ಪಾತ್ರಗಳಲಿ ಕಾಣುವ ಸಾಮರಸ್ಯ ಉಲ್ಲೇಖನೀ ಯವಾದದ್ದು. ಸ್ವಾಮಿದಾಸರು ಹಾಗೂ ನರಹರಿಯ ಬದುಕಿನಲ್ಲಿ ಕಾಣುವ ಸಾಮರಸ್ಯವು ಎರಡು ಮುಖವಾದದ್ದು. ಮೊದಲನೆಯದಾಗಿ ಆಂತರಿಕ ಪರಿಪೂರ್ಣತೆಯ ಸಾಮರಸ್ಯವಾದರೆ, ಇನ್ನೊಂದು ಸಾಮಾಜಿಕಪ್ರಜ್ಞೆಯ ಸಾಮರಸ್ಯವಾಗಿದೆ. ಈ ಸಾಮರಸ್ಯವನ್ನು ಕೌಟುಂಬಿಕ ನೆಲೆಯಲ್ಲೂ ಸಂಸ್ಕೃತಿ ದರ್ಶನದಲ್ಲೂ ಸತ್ವಪೂರ್ಣವಾಗಿ ಪ್ರಕಟ ಪಡಿಸಿರುವದು ಅತ್ಯಂತ ಮಹತ್ವದ್ದಾಗಿದೆ. ಶಾಂತಿ, ಪ್ರೀತಿ, ಆನಂದಗಳಲ್ಲಿ ಸಮರಸದ ನೆಲೆಯನ್ನು ಗೋಕಾಕರು ಚಿತ್ರಿಸಿರುವದು ಅವರ ಪ್ರತಿಭೋನ್ನತಿಯ ಸಾಕ್ಷಿಯಾಗಿದೆ.

ಕಾದಂಬರಿಯ ಶೈಲಿ :

ಕಾದಂಬರಿಯ ಶೈಲಿಯ ದೃಷ್ಟಿಯಿಂದಲೂ ಗೋಕಾಕರು ಸಾಧಿಸಿದ ಅನನ್ಯತೆಯು 'ಸಮರಸವೇ ಜೀವನ' ಕಾದಂಬರಿಯಲ್ಲಿ ಅಂತಸ್ಥವಾಗಿದೆ.೧೯೩೫ ರಲ್ಲಿ ಈ ಕಾದಂಬರಿಯ ಮೊದಲ ಭಾಗ 'ಇಜ್ಜೋಡು' ಪ್ರಕಟವಾದಾಗ, ಸಾಹಿತ್ಯದಲ್ಲಿ ಬಳಕೆ ಮಾತನ್ನು ಪರಿಣಾಮಕಾರಿಯಾಗಿ ಪ್ರಯೋಗಿಸಿದ ಯಶಸ್ವೀ ಕಾದಂಬರಿ ಯಾಗಿ ಖ್ಯಾತವಾಗಿತ್ತು. ಉತ್ತರ ಕರ್ನಾಟಕದ ಸತ್ವಯುತವಾದ ಕನ್ನಡದ ನಿರೂಪಣೆ , ಈ ಕಾದಂಬರಿಯ ವೈಶಿಷ್ಟ್ಯವಾಗಿದೆ. ಮಾಸ್ತರ ಹಾಗೂ ಜಾನಕೀ ಬಾಯಿಯರ 'ತಿರುಳ್ಗನ್ನಡ', ಮೋಡಕರ 'ಮರಾಠಿಗನ್ನಡ', ಸುಬಣ್ಣಾಚಾರ್ಯರ 'ಶಿಷ್ಟಗನ್ನಡ' -ಹೀಗೆ ಬಳಕೆ ಮಾತು ವೈವಿಧ್ಯಮಯ ಕನ್ನಡದ ಸಮಾರೋಹವಾಗಿದೆ. ಸಂಭಾಷಣೆ ನೈಜವಾದ ರೀತಿಯಲ್ಲಿ ಹೆಣೆಯಲ್ಪಟ್ಟಿದ್ದು, ಎಲ್ಲಿಯೂ ಕೃತಕವಾಗಿಲ್ಲ. ಶೈಲಿಯ ದೃಷ್ಟಿಯಿಂದ ವಿನಾಯಕರ ಭಾಷೆ ಬಹುರೂಪಿಯಾದದ್ದು

ಕಂಡುಬರುತ್ತದೆ.ಕಾದಂಬರಿಯಲ್ಲಿ ಬರುವ ಮೊಗ್ಗಾವಿಯ ವರ್ಣನೆ, ನಿಸರ್ಗದ ವರ್ಣನೆ, ಇಂಗ್ಲೆಂಡಿನ ಜನಜೀವನ, ಪ್ರೇಕ್ಷಣೀಯ ಸ್ಥಳಗಳ ವರ್ಣನೆ ಮೊದಲಾದ ವರ್ಣನೆಗಳಲ್ಲಿ ವರ್ಣನಾತ್ಮಕ ಶೈಲಿಯು ಚೆಲ್ಲುವರಿದಿದೆ. "ನರಹರಿ-ಸ್ವಾಮಿದಾಸರ ಧ್ಯಾನಾನುಭವಗಳನ್ನು ಬಣ್ಣಿಸುವಾಗ ಶೈಲಿಯು ಚಿಂತನಪರವಾಗುತ್ತದೆ. ತತ್ವವಿಚಾರಕ್ಕೆ ಎಡೆಕೊಟ್ಟಾಗ ಶೈಲಿಯು ವಿವೇಚನಾಪರವಾಗುತ್ತದೆ. ಪದ್ಮಾವತಿಯ ಮರಣ, ಕಿಟ್ಟೂನ ಮರಣ, ಬ್ಲಾಲರ್ಡಓಯರ್ ದರ್ಶನ, ಸ್ವಾಮಿದಾಸರ ಕೊನೆ- ಇಂತಹ ಸಂದರ್ಭಗಳಲ್ಲಿ ಶೈಲಿಯು ಕಾವ್ಯಮಯವಾಗುತ್ತದೆ"[3]. ಇಂಗ್ಲೆಂಡಿಗೆ ವಿಷ್ಣು, ಶೀನು ಹೋದಾಗ ಅಲ್ಲಿಯ ಜನರ ಜೊತೆ ವ್ಯವಹರಿಸುವಾಗಿನ ಸನ್ನಿವೇಶವು ಗೋಕಾಕರ ವಿನೋದ ಶೈಲಿಯ ದ್ಯೋತಕವಾಗಿದೆ.

ಕನ್ನಡ ಕಾದಂಬರಿಗಳಲ್ಲಿ 'ಸಮರಸವೇ ಜೀವನ'ದ ಸ್ಥಾನ :

ಆಧುನಿಕ ಕನ್ನಡ ಸಾಹಿತ್ಯವನ್ನು ರೂಪಿಸುವಲ್ಲಿ ಗೋಕಾಕರು ಮಹತ್ವದ ಪಾತ್ರ ವಹಿಸಿದ್ದಾರೆ. ಧಾರವಾಡದ ಗೆಳೆಯರ ಗುಂಪಿನ ಕವಿ ಲೇಖಕರಾಗಿ ಹೊಸಗನ್ನಡ ಸಾಹಿತ್ಯವನ್ನು ಸಮೃದ್ಧಗೊಳಿಸುವಲ್ಲಿ ನಿರಂತರ ಯತ್ನಶೀಲರಾಗಿದ್ದಾರೆ. ಅವರೇ ಒಂದೆಡೆ 'ಆಧುನಿಕ ಕನ್ನಡ ಸಾಹಿತ್ಯ ಎಂಟು ಉಪನದಿಗಳ ಕೂಡಲಸಂಗಮ'[1] ವೆಂದು ವರ್ಣಿಸಿದ್ದಾರೆ. ಅವುಗಳಲ್ಲಿಯ ಎಲ್ಲ ಪ್ರಕಾರಗಳಲ್ಲಿ ಸಾಧನೆಯು, ಪ್ರಯೋಗ ಶೀಲತೆಯ ಹೊಸ ಆಯಾಮಗಳನ್ನು ಸೃಷ್ಟಿಸಿ, ಚಿರಂತನವಾದ ಕೃತಿಗಳನ್ನು ಕನ್ನಡಕ್ಕೆ ನೀಡಿದ್ದಾರೆ. ಈ ಹಿನ್ನಲೆಯಲ್ಲಿ ಅವರು ಕಾಂದಬರಿಲೋಕದಲ್ಲಿ ನೀಡಿದ ಅಪೂರ್ವ ಕೊಡುಗೆಯೇ 'ಸಮರಸವೇ ಜೀವನ'ವಾಗಿದೆ. "ಕಾದಂಬರಿಯ ಕಥಾವಸ್ತು, ರಚನಾಶಿಲ್ಪ, ಸನ್ನಿವೇಶಗಳು, ವರ್ಣನೆಗಳು, ಪಾತ್ರಗಳು, ಸಂಸ್ಕೃತಿಗಳ ಸಂಘರ್ಷ, ಮಾನವ ಸ್ವಭಾವದ ವಿಶ್ಲೇಷಣೆ, ಭಾಷಾಶೈಲಿ, ಸಾಮಾಜಿಕ ರಾಜಕೀಯ ಹಿನ್ನಲೆ, ಕಾದಂಬರಿಯ ಗುಣ ಗಾತ್ರ ಎಲ್ಲ ಅಂಶಗಳು ಒಟ್ಟಂದದಲ್ಲಿ ಕಾದಂಬರಿಯ ಯೋಗ್ಯತೆಯನ್ನು ಹೆಚ್ಚಿಸಿ ಕನ್ನಡ ಕಾದಂಬರಿ ಪ್ರಪಂಚಕ್ಕೆ ಒಂದು ಅಪೂರ್ವ ಕಾಣಿಕೆ ಎನಿಸುವಂತೆ ಮಾಡಿವೆ"[2] ಎಂಬ ಅಭಿಮತವು ಸತ್ಯನಿಷ್ಠ ವಿಚಾರವಾಗಿದೆ.

'ಸಮರಸವೇ ಜೀವನ'ವು ಕನ್ನಡ ಪ್ರಾದೇಶಿಕ ಕಾದಂಬರಿಗಳ ಸಾಲಿನಲ್ಲಿಯೂ ಅಗ್ರಗಣ್ಯವಾಗಿದೆ. ಶಿವರಾಮ ಕಾರಂತರ 'ಮರಳಿ ಮಣ್ಣಿಗೆ', ಕುವೆಂಪು ಅವರ 'ಕಾನೂರು ಸುಬ್ಬಮ್ಮ ಹೆಗ್ಗಡತಿ', ವಿನಾಯಕರ 'ಸಮರಸವೇ ಜೀವನ' ಕ್ರಮವಾಗಿ ಕರಾವಳಿ, ಮಲೆನಾಡು, ಉತ್ತರ ಕರ್ನಾಟಕದ ಪ್ರಾದೇಶಿಕತೆಯ ಜೀವನ ಪರಂಪರೆಯ ಪ್ರತಿನಿಧಿಯಾಗಿ ಸಾಹಿತ್ಯ ಪ್ರಪಂಚದಲ್ಲಿ ಮಾನ್ಯವಾಗಿವೆ. "ಸಮರಸವೇ ಜೀವನ", ತಾಂತ್ರಿಕವಾಗಿ ಕನ್ನಡ ಕಾದಂಬರಿಗಳ ಬರವಣಿಗೆಯ ಇತಿಹಾಸವನ್ನು ನಿರೂಪಿಸುತ್ತದೆ. ಒಂದು ದೃಷ್ಟಿಯಿಂದ ಇದು ಸಾಂಪ್ರದಾಯಕ ಕೃತಿ. ಪ್ರಾರಂಭ,

---

೧. ವಿನಾಯಕ ಗೋಕಾಕ : ಸಮರಸವೇ ಜೀವನ, ಪ್ರಸ್ತಾವನೆ - ಪುಟ ೨

೨. ವಿವರಗಳಿಗೆ ನೋಡಿ V. K. Gokak : Contemporary Indian Literature P. 106

ನಿರೂಪಣೆ ಮೊದಲಾದವುಗಳಲ್ಲಿ ವಿನಾಯಕರು ಗಳಗನಾಥ, ಆನಂದಕಂದರ ದಾರಿಯನ್ನೇ ತುಳಿದಿದ್ದಾರೆ. ಇನ್ನೊಂದು ದೃಷ್ಟಿಯಿಂದ ನೋಡಿದಾಗ ಆಧುನಿಕ ಕಾದಂಬರಿಯ ಹೊಸ ಪ್ರಯೋಗಗಳನ್ನು ಕಾಣುತ್ತೇವೆ. 'ಕಾನೂರು ಸುಬ್ಬಮ್ಮ ಹೆಗ್ಗಡತಿ'ಯ ಪ್ರಾದೇಶಿಕತೆ ಹಾಗೂ ಪಾತ್ರರಚನೆ, 'ಮರಳಿ ಮಣ್ಣಿಗೆ'ಯ ಪರಂಪರಾಗತವಾದ ಜೀವನಕ್ರಮದ ಕಥನ, ದೇವುಡು, ಶ್ರೀರಂಗರ ವೈಚಾರಿಕ ಹಿನ್ನೆಲೆ, ಇವೆಲ್ಲ ಇಲ್ಲಿ ಸಮಾವೇಶಗೊಂಡಿವೆ. ಬರವಣಿಗೆಯ ರೀತಿ, ವಾಸ್ತವತೆ, ಮನೋವಿಶ್ಲೇಷಣೆಗಳನ್ನು ಮೇಳವಿಸಿಕೊಂಡು ಸಾಂಕೇತಿಕತೆಯ ಕಡೆಗೆ ಮುಖ ಮಾಡಿವೆ" ೫ ಎಂಬ ಪ್ರಸಿದ್ಧ ವಿಮರ್ಶಕ ಕೀರ್ತಿನಾಥ ಕುರ್ತಕೋಟಿಯವರ ಅಭಿಮತವು ವಸ್ತುನಿಷ್ಠ ವ್ಯಾಖ್ಯಾನವಾಗಿದೆ. ಈ ಕಾದಂಬರಿಯ ಜೀವನ ದರ್ಶನವು ಭಾರತೀಯ ಆದರ್ಶವಾದದ ಸಾಕಾರರೂಪವಾಗಿ ಹೊರಹೊಮ್ಮಿರುವದರಿಂದಲೇ "Narhari : the Prophet of New India" ಎಂದು ಇಂಗ್ಲೀಷ ನಲ್ಲಿಯೂ ಇದರ ಆವೃತ್ತಿ ಜನಪ್ರಿಯವಾಗಿದೆ. ಇಪ್ಪತ್ತೆರಡು ವರ್ಷಗಳವರೆಗೆ ಬರೆಯಲ್ಪಟ್ಟ ಈ ಕಾದಂಬರಿಯಲ್ಲಿ ತಾಂತ್ರಿಕ ದೋಷಗಳಿವೆಯೆಂದು ಕೆಲವರು ಅಭಿಪ್ರಾಯ ಪಟ್ಟಿದ್ದಾರೆ. ಆದರೆ ಒಂದು ಪೂರ್ಣದೃಷ್ಟಿಯ ಚಿಂತನಕ್ರಮವು ಹೇಗೆ ಕಾಲಾತೀತ ವಾಗಿ ವಿಕಾಸೋನ್ನತಿಯನ್ನು ಪಡೆಯಬಲ್ಲುದೆಂಬುದಕ್ಕೆ ಇದು ಸಾಕ್ಷಿಯಾಗಿದೆ. ಯಾವುದೇ ಸಾಹಿತ್ಯಕೃತಿಯ ವಿಮರ್ಶೆ ಮಾಡುವಾಗ ಅದು ರೂಪುಪಡೆದ ಕಾಲದ ಹಿನ್ನೆಲೆಯನ್ನು ಗುರುತಿಸುವದು ಬಹಳ ಅವಶ್ಯಕ. ಯಾಕೆಂದರೆ ಸಾಹಿತ್ಯ ಪ್ರಪಂಚದಲ್ಲಿ ಪ್ರತಿಯೊಂದು ಕೃತಿಯೂ ಸಮಕಾಲೀನ ಮಹತ್ವವನ್ನು ಪಡೆದುಕೊಂಡಿರುತ್ತದೆ. ಈ ದೃಷ್ಟಿಯಿಂದ "ಸಮರಸವೇ ಜೀವನ' ಕಾದಂಬರಿಗೆ ಭಾರತೀಯ ಹಾಗೂ ವಿಶ್ವದ ಸಮಕಾಲೀನ ಮಹಾಕಾದಂಬರಿಗಳಲ್ಲಿ ಗಣ್ಯವಾದ ಸ್ಥಾನವಿದೆ. ವಿನಾಯಕರು ಪೂರ್ಣದೃಷ್ಟಿಯ ಅನ್ವೇಷಕರು, ಸಾಧಕರು. ಅವರ ಮಹಾಪ್ರತಿಭೆ, ಆದರ್ಶವಾದ ಹಾಗೂ ವಿಶ್ವಮಾನವ ದೃಷ್ಟಿಯ ಪ್ರತಿಪಾದನೆಗಳು ಸದಾ ಚಲನಶೀಲವಾಗಿವೆ. ಕನ್ನಡ ಸಾಹಿತ್ಯದ ಮಹಾಕೃತಿಗಳ ಸಾಲಿನಲ್ಲಿ "ಸಮರಸವೇ ಜೀವನ" ಕಾದಂಬರಿ ವಿಶ್ವಮಾನ್ಯವಾಗಿದ್ದು, ಭಾರತೀಯ ಸಾಹಿತ್ಯದ ಮಹಾಲೇಖಕ ಗೋಕಾಕರ ಬುದ್ಧಿ-ಭಾವಗಳ ಸಮಸರದ ಸಮನ್ವಯ ದೃಷ್ಟಿ ಪೂರ್ಣಫಲವಾಗಿದೆ. ಕನ್ನಡ ಗದ್ಯಸಾಹಿತ್ಯದಲ್ಲಿ ಈ ಕಾದಂಬರಿಯು ಹೊಸಗನ್ನಡ ಗದ್ಯವನ್ನು ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸಿದೆ. ಆಂಗ್ಲ ಲೇಖಕ ಫೀಲ್ಡಿಂಗ ವರ್ಣಿಸುವಂತೆ ಇದು ಗದ್ಯ ಮಹಾಕಾವ್ಯವಾಗಿದೆಯೆಂಬ ಉದ್ಗಾರ ಧ್ವನಿಪೂರ್ಣ ವಾದದ್ದಾಗಿದೆ. ನಡೆದಾಡುವ ಮನಷ್ಯನ ಹಿಂದೆ ಅವನ ನೆರಳು ಹಿಂಬಾಲಿಸುವ ಹಾಗೆ ದೈವದಾಟ ನಡೆದಾಡುವ ಬಗೆಯು, ಗೋಕಾಕರಿಗೆ ಕಂಡದರ್ಶನವು ಈ ಕಾದಂಬರಿ ಯಲ್ಲಿ ಬಹು ಮಾರ್ಮಿಕವಾಗಿ ಪ್ರಕಟವಾಗಿದೆ. ಹೀಗೆ ಕನ್ನಡ ಕಾದಂಬರಿ

---

೪. ಎನ್ನೆ : ವಿನಾಯಕ ಮಹಾದರ್ಶನ - ಪುಟ. ೭೯

೫. ಕೀರ್ತಿನಾಥ ಕುರ್ತಕೋಟಿ : ಯುಗಧರ್ಮ ಹಾಗೂ ಸಾಹಿತ್ಯದರ್ಶನ -ಪುಟ ೫೧೯

ಪ್ರಪಂಚದಲ್ಲಿ 'ಸಮರಸವೇ ಜೀವನ' ಕಾದಂಬರಿ ಹಲವು ದೃಷ್ಟಿ- ದರ್ಶನಗಳಿಂದ ಮಹತ್ತರವಾದ ಮಹಾಕೃತಿಯಾಗಿದೆ.

ಆಧಾರ ಗ್ರಂಥಗಳು

೧. ವಿನಾಯಕ ಗೋಕಾಕ : "ಸಮರಸವೇ ಜೀವನ"

೨. ಎನ್ಕೆ : ವಿನಾಯಕ ಮಹಾದರ್ಶನ

೩. ಹಾ. ಮಾ. ನಾಯಕ (ಸಂ) : ವಿನಾಯಕ ವಾಙ್ಮಯ

೪. ಕೀರ್ತಿನಾಥ ಕುರ್ತಕೋಟಿ : ಯುಗಧರ್ಮ ಹಾಗೂ ಸಾಹಿತ್ಯದರ್ಶನ

೫. ಚೆನ್ನವೀರ ಕಣವಿ : ಸಿದ್ಧಿವಿನಾಯಕ ಮೋದಕ

೬. ಜಿ. ಬಿ. ಜೋಶಿ, ಕೆ. ಡಿ. ಕುರ್ತಕೋಟಿ (ಸಂ.) : ವಿನಾಯಕ ಸಾಹಿತ್ಯಸಮೀಕ್ಷೆ

೭. ಶಿವರಾಮ ಕಾಡನಕುಪ್ಪೆ (ಸಂ) : ವಿನಾಯಕ - ಒಂದು ಅಧ್ಯಯನ

೮. ಎಸ್. ಚೆನ್ನಪ್ಪ (ಸಂ.) : ವಿನಾಯಕ ಸಾಹಿತ್ಯ ವಿಹಾರ

೯. Shankar Mokashi Punekar : Vinayaka Krishna Gokak.

೧೦. Vinayak Krishna Gokak : "The Agony and the Glory.

❑ ❑

ಗೋಕಾಕ : ನಾಟಕಗಳು – ಒಂದು ಪರಿಚಯ

–ಸಿದ್ಧಲಿಂಗ ಪಟ್ಟಣಶೆಟ್ಟಿ

೧

ಕಾವ್ಯ, ಕಾದಂಬರಿ, ವಿಮರ್ಶೆ ಇತ್ಯಾದಿ ಕ್ಷೇತ್ರಗಳಲ್ಲಿ ಒಳ್ಳೆಯ ಕೃಷಿ ಮಾಡಿದ ಗೋಕಾಕರು ರಚಿಸಿದ ನಾಟ್ಯಕೃತಿಗಳು ನಾಲ್ಕು: ೧. ತುಳಸಿ, ೨. ಜನನಾಯಕ, ೩. ಯುಗಾಂತರ ಹಾಗೂ ೪. ವಿಮರ್ಶಕ ವೈದ್ಯ.

೨

ತುಳಸಿ, ಒಂದು ಏಕಾಂಕ ನಾಟಕ. ಇದು 'ಕೋಲ್ಮಿಂಚು' ಎಂಬ ಸಂಗ್ರಹದಲ್ಲಿ ಮೊದಲು ೧೯೩೫ ರಲ್ಲಿ ಪ್ರಕಟವಾಗಿತ್ತು. ನಂತರ ೧೯೭೦ ರಲ್ಲಿ 'ಮುನಿದ ಮಾರಿ' ಎಂಬ ಹೆಸರಿನಿಂದ ಇದನ್ನು ಮರುಮುದ್ರಣ ಗೊಳಿಸ ಲಾಯಿತು. 'ತುಳಸಿ' ಯಲ್ಲಿ ನಾಲ್ಕು ಪ್ರವೇಶಗಳಿವೆ. ರಾಮಣ್ಣ ತನ್ನ ಹೆಂಡತಿ ದುರುಗವ್ವನ ಕೆಟ್ಟ ನಡತೆಯಿಂದ ತನ್ನ ಊರನ್ನೇ ಬಿಟ್ಟುಹೋಗಿದ್ದ. ಕೆಲ ಕಾಲದ ನಂತರ ಹೆಂಡತಿಯ ನಡತೆ ಸುಧಾರಿಸಿರಬಹುದು ಎಂದು ಭಾವಿಸಿ ಮನೆಗೆ ಮರಳಿದಾಗಲೂ ದುರುಗವ್ವ ತನ್ನ ಪ್ರಿಯಕರ ಚೆನ್ನಪ್ಪನನ್ನು ಬಿಡುವುದಿಲ್ಲ. ಆಗ ರಾಮಣ್ಣ ತನ್ನ ಹದಿನಾರು ವರ್ಷದ ಮಗಳು ತುಳಸಿಯನ್ನು ಕರೆದುಕೊಂಡು ಹೊರಟು ಬಿಡುತ್ತಾನೆ. ಈಗಾಗಲೇ ಸಾಕಷ್ಟು ಅನಾರೋಗ್ಯದಿಂದ ಬಳಲುತ್ತಿದ್ದ ರಾಮಣ್ಣ ಮಗಳೊಂದಿಗೆ ಅದೇ ಊರಿನಲ್ಲಿರುವ ಶ್ರೀಮಂತ ನಾರಾಯಣರಾಯನ ಮನೆಗೆ ಬಂದು, ಆಶ್ರಯಕ್ಕಾಗಿ ಒಂದು ಕೋಣೆಯನ್ನು ಅವನ ಮನೆಯಲ್ಲಿ ಬೇಡುತ್ತಾನೆ.

ರಾಮಣ್ಣನಿಂದ ಮನೆ ಕೂಡ ನಾರಾಯಣರಾಯನಿಗೇ ಒತ್ತೆಬಿದ್ದಿದೆ. ಸ್ವಾರ್ಥಿ, ವಿಲಾಸಿ, ಯುವಕ, ಕಾಮುಕ ನಾರಾಯಣರಾಯ ರಾಮಣ್ಣನಿಗೆ ಮನೆ ಕೊಡಲು ಮೊದಲು ಮನಸ್ಸಿರದಿದ್ದರೂ ತುಳಸಿಯನ್ನು ನೋಡಿ ಮುಂದಿನ ವಿಚಾರದಿಂದ ತನ್ನ ಮನೆಯಲ್ಲಿಯೇ ಒಂದು ಕೋಣೆಯನ್ನು ಕೆಲ ದಿನಗಳ ಮಟ್ಟಿಗೆ ಕೊಡುತ್ತಾನೆ.

ಈ ಮಧ್ಯೆ ನಾರಾಯಣರಾಯ ತುಳಸಿಯನ್ನು ಆಕರ್ಷಿಸುವಲ್ಲಿ ಯಶಸ್ವಿಯಾಗುತ್ತಾನೆ. ಇದರ ಸುಳಿವು ತಿಳಿದ ರಾಮಣ್ಣ ತುಳಸಿಗೆ ನಾರಾಯಣನ 'ಹದ್ದಿನ ಕಣ್ಣಿನ' ಬಗ್ಗೆ ಎಚ್ಚರಿಕೆ ಕೊಡುತ್ತಾನೆ. ಆದರೆ ತುಳಸಿ ವಯಸ್ಸು, ಅವಕಾಶಗಳಿಗೂ ಬೇಕಾಗಿದ್ದ ಸಂಗ ಕೂಡಿಬರುತ್ತದೆ. ರಾತ್ರಿಯಿಂದ ರಾತ್ರಿಗೆ ಅವರಿಬ್ಬರೂ ಬಹಳ ಸಮೀಪದವರಾಗುತ್ತಾರೆ. ನಾರಾಯಣರಾಯನ ಮನೆಯ ಹೊರಗೆ, ಆಮೇಲೆ ಪಡಸಾಲೆಯ ಕೋಣೆಯೊಳಗೆ, ನಂತರ ನಡುಮನೆಯಲ್ಲಿ ಒಳಗೆ ಕರೆಯಲ್ಪಟ್ಟು ಬರುವ ತುಳಸಿಗೆ ನಾರಾಯಣರಾಯರು ಮೊದಲು 'ದ್ಯಾವ್ರು' ಆಗಿದ್ದು, ನಂತರ 'ರಾಯ್ರು', ಆಮೇಲೆ 'ನಾರಣ್ಣ' ಆದ.

ಒಂದು ಮಧ್ಯರಾತ್ರಿ ನಾರಾಯಣರಾಯನ ಡ್ರಾಯಿಂಗ್ ರೂಮಿನಲ್ಲಿ ಅವರಿಬ್ಬರನ್ನು ನೋಡಿದ ರಾಮಣ್ಣ 'ಸಿಡಿಲು ಬಡಿದವನಂತೆ', 'ಹಾವು ಕಚ್ಚಿದವನಂತೆ' ಹುಚ್ಚೆದ್ದು ಹೋಗುತ್ತಾನೆ. ಆ ಆಘಾತವನ್ನು ಸಹಿಸದೇ ಕುಸಿದುಬಿದ್ದು ಸಾಯುತ್ತಾನೆ. ತಂದೆಯ ಸಾವಿನಿಂದ ಕಲ್ಲುಮನಸ್ಸಿನ ತುಳಸಿ ನಿರ್ಲಿಪ್ತಳಂತೆ ಮಾತಾಡುತ್ತಾಳೆ. ನಾರಾಯಣರಾಯ ಅವಳನ್ನು ಮದುವೆಯಾಗುವ ವಿಚಾರ ತಿಳಿಸಿದಾಗ ತಾನು, ತನ್ನ ತಾಯಿ ತಂದೆಗೆ ಕೊಟ್ಟ ನೋವನ್ನು ನೆನೆಸಿ, ತಾನೂ ತನ್ನ ತಾಯಿಯಂತೆ 'ಮಿಂಡಿ'ಯಾಗುವದು ಮಾಮೂಲು; ತನ್ನ ನೆಚ್ಚಿಗೆ ಯಾರಿಗಿದೆ ಎಂದು ವಿಕ್ಷಿಪ್ತಳಂತೆ ಕೂಗುತ್ತಾಳೆ.

ಗೋಕಾಕರೇ ಹೇಳುವಂತೆ ಒಂದು 'ವಿಶೇಷ ಕಾಂತಿಯುಳ್ಳ' ಸ್ವಭಾವಗ್ರಹಣ ಹಾಗೂ ಸನ್ನಿವೇಶ ಪ್ರಜ್ಞೆ ಇಲ್ಲಿ ಪ್ರಕಟವಾಗಿದೆ. ಮಾತೂ ಬೀಸಾಗಿ ಬಂದಿದೆ. ಸ್ತ್ರೀಯು ರಾಕ್ಷಸಿಯಾದರೆ ಹೇಗಿರಬಲ್ಲಳೆಂಬುದು ಇಲ್ಲಿ ಸ್ಪಷ್ಟವಾಗಿದೆ. ತಾಯಿಯಂತೆ ಮಗಳು. ಮಗಳು ತಂದೆಯ ಮರಣಕ್ಕೆ ಒಂದು ರೀತಿಯಿಂದ ಕಾರಣಳಾದಳು. ಮುಂದೆ ಕಾದಲನನ್ನು ಹೀಗೆಯೇ ಮುರಿಯುತ್ತಾಳೆಂಬ ಸೂಚನೆ ಈ ಏಕಾಂಕದಲ್ಲಿದೆ, ಎಂದು ತಾವು ಕಂಡ ಒಂದು ಕನಸಿನಿಂದ ಈ ಏಕಾಂಕ ರೂಪಗೊಂಡಿತೆಂದು ಹೇಳುತಾ, 'ಈ ಏಕಾಂತದ ಜಗತ್ತನ್ನು ಪಾಪಜೀವಿಗಳೇ ತುಂಬಿದ್ದಾರೆ. ಇಲ್ಲಿ ಒಳಿತೆಂಬುದು ರಾಮಣ್ಣನಂತೆ ಮಂಡೆಯ ಹುಣ್ಣಾಗಿ ಬಿದ್ದು ಹೋಗುತ್ತದೆ. ಪಾಪಜೀವಿಯಾದ ನಾರಾಯಣರಾಯನ ಮಾತಿನಲ್ಲಿ ವಿಚಿತ್ರ

ವಿದಗ್ಧತೆ ತುಂಬಿದೆ ' ಎನ್ನುತ್ತಾರೆ. ಅವರ ಪ್ರಕಾರ ಮುನಿದ ದುರುಗವ್ವ ಹಾಗೂ ಮುನಿದ ತುಳಸಿಯ ಕಥೆಯ ಈ ಏಕಾಂಕದಿಂದ ' ಆಧುನಿಕ ಸಾಮಾಜಿಕ ಪ್ರಯೋಗಗಳ ಮಾದರಿಗೆ ಒಂದು ಹೊಸ ತಿರುಪನ್ನು' ಕೊಡುವ ಪ್ರಯತ್ನ ಮಾಡಲಾಗಿದೆ. ಕೇವಲ ಓದುಗರಿಗಾಗಿ ಅಥವಾ ಪ್ರೇಕ್ಷಕರಿಗಾಗಿ ಈ ಏಕಾಂಕ ಎಂಬ ಅರಿವು ಗೋಕಾಕರಿಗಿದೆ.

೧೯೩೫ ರಲ್ಲಿ ಕನ್ನಡದಲ್ಲಿ ನಾಟ್ಯಸಾಹಿತ್ಯ ತುಂಬ ತಡವಾಗಿದ್ದ ಸಮಯದಲ್ಲಿ ರಚಿತವಾಗಿದ್ದ ಈ ನಾಟಕ ಅಥವಾ ನಂತರದ ಗೋಕಾಕರ ನಾಟಕಗಳನ್ನು ವಿಮರ್ಶೆಯ ಈಗಿನ ಮಾನದಂಡಗಳಿಂದ ಪರಿಗಣಿಸುವುದು ಸಮಂಜಸ ವಾಗಲಿಕ್ಕಿಲ್ಲ. ನಾಟಕಗಳ ಮಾದರಿ ಅಥವಾ ರಂಗಪ್ರಯೋಗಗಳ ಆದರ್ಶಗಳನ್ನು ಕಾಣದ ಗೋಕಾಕರು ತಮ್ಮ ವ್ಯಕ್ತಿತ್ವದ ಸಾಹಿತ್ಯಮುಖಗಳನ್ನು ವಿಸ್ತರಿಸಿಕೊಳ್ಳುವ ನಿಟ್ಟಿನಲ್ಲಿ ಬರೆದ ನಾಟಕಗಳೆಂದು ಇವನ್ನು ಮೆಚ್ಚಬೇಕು. 'ತುಳಸಿ' ಯಲ್ಲಿ ಸಂವಾದಗಳು ದೀರ್ಘವಾಗಿದ್ದರೂ ಆಡುಮಾತಿನ ಸಹಜ ಬಳಕೆಯ ಸ್ತುತ್ಯ ಪ್ರಯತ್ನ ಮಾಡಲಾಗಿದೆ.

೩

೧೯೩೫ ರಲ್ಲಿ ರಚಿತವಾಗಿ, ೧೯೩೬ ಜನವರಿಯಲ್ಲಿ ಪುಣೆಯ ಕರ್ನಾಟಕ ಸಂಘದಲ್ಲಿ ಮೊದಲ ಬಾರಿಗೆ ಪ್ರಯೋಗಗೊಂಡ 'ಜನನಾಯಕ ', ೧೯೩೯ ರಲ್ಲಿ ಪ್ರಕಟವಾಯಿತು. ಸಾಮಾಜಿಕ, ಆಗಿನ ಸಮಕಾಲೀನ ಜೀವನಚಿತ್ರಣವನ್ನು ನೀಡುವ ಐತಿಹಾಸಿಕ ದಾಖಲೆಯಂತಿರುವ ನಾಲ್ಕು ಅಂಕಗಳ ಬಹುದೊಡ್ಡ ನಾಟಕ ' ಜನನಾಯಕ '. ಆ ಕಾಲದ ಭಾರತೀಯ ಜಾಗೀರದಾರರು, ಸಂಸ್ಥಾನಿಕರು ತಮ್ಮ ದುರಾಡಳಿತದಿಂದ ತಮ್ಮ ಜನರಿಗೇ ಬೇಡವಾಗುತ್ತ ಬಂದಾಗ ಅಂತರ್ಜಲದಂತೆ ಜನತೆಯ ಮಧ್ಯದಲ್ಲಿಯೆ ' ಉದಿಸಿದ ಪ್ರಜಾಪ್ರಭುತ್ವದ ಮೌಲ್ಯಗಳ ಸುಂದರ ನಿರೂಪಣೆ ಈ ನಾಟಕದಲ್ಲಿ ಬಂದಿದೆ. ಅಧಿಕಾರ, ಸಂಪತ್ತು, ದರ್ಪಗಳನ್ನು ಜನತೆಗಾಗಿ ಸದುಪಯೋಗಪಡಿಸಿ ಸಾರ್ಥಕ ಜೀವನ ಬದುಕಿದ ಲಕ್ಕಣ್ಣೊಡೆ ಯರು, ಅಧಿಕಾರವನ್ನು ಅಹಂಕಾರ, ಕಾಮಭೋಗ, ವಿಲಾಸಗಳಿಗೆ ಮೀಸಲಿಟ್ಟು , ತನ್ನೊಡನೆ ತನ್ನ ಜನದ ಜೀವನವನ್ನು ಹಾಳುಗೆಡವಿದ ಹಣುಮಪ್ಪ ದೇಸಾಯಿ ಹಾಗೂ ಸಹಜವಾಗಿ ಬರುವ ಅಧಿಕಾರವನ್ನೂ ಅನುಭೋಗಿಸಲು, ಉಪಯೋ ಗಿಸಲು, ಉಳಿದವರಿಗೆ ಅದರ ಪ್ರಯೋಜನ ನೀಡಲು ಹಿಂಜರಿಯುವ, ಪಲಾಯನ ವಾದಿ ಚಿಕ್ಕ ಶ್ರೀಮಂತ - ಈ ಮೂವರ ಹಿನ್ನಲೆಯಲ್ಲಿ ಬೀವಿನಹಳ್ಳಿ ಮತ್ತು ಇಂಚಲಾಪುರದಲ್ಲಿ ಬೆಳೆಯತೊಡಗಿದ್ದ ಜನನಾಯಕತ್ವದ ಮೂಲ ಸೆಲೆಯಾಗಿ ಬಂದ ಭೀಮಣ್ಣನಾಯಕ ಹಾಗೂ ಅವನ ಪರಿವಾರವೇ ಆದ ಜನತೆಯ ಕಥೆ

ನಾಟಕಕಾರರಿಗೆ ಒಂದು ಆಹ್ವಾನವಾಗಿಯೇ ಬಂದಿದ್ದರೂ ತುಂಬ ಗಭೀರವಾಗಿ ಇದನ್ನು ನಿರ್ವಹಿಸಿದ್ದಾರೆ. ತಮ್ಮ ನಾಟಕದ ಬಗ್ಗೆ, ಅನುಭವಗಳ ಬಗ್ಗೆ ದೀರ್ಘ ಪ್ರಸ್ತಾವನೆಯನ್ನು ಬರೆದು ಗೋಕಾಕರು ಹಲವು ವಿವೇಚನ ವಿವರಗಳನ್ನು ನೀಡಿದ್ದಾರೆ.

ಪುಣೆಯ ಕರ್ನಾಟಕ ಸಂಘದ ವಾರ್ಷಿಕೋತ್ಸವದಲ್ಲಿ ಪ್ರಯೋಗಿಸುವ ದಕ್ಕಾಗಿಯೇ ಗೋಕಾಕರು ಇದನ್ನು ಬರೆದರು. ಪುಣೆಯಲ್ಲಿ ಪ್ರಯೋಗ ಕಂಡ ಮೊದಲ ಕನ್ನಡ ನಾಟಕ ಇದು. ಅಲ್ಲಿಯ ಫರ್ಗ್ಯುಸನ್ ಕಾಲೇಜದಲ್ಲಿ ಅಧ್ಯಾಪಕ ರಾಗಿದ್ದ ಗೋಕಾಕರೇ ಇದನ್ನು ನಿರ್ದೇಶಿಸಿದ್ದು, ರಂಗಪ್ರಯೋಗದ ಹಂತದಲ್ಲಿ ಯೂ ಹಲವಾರು ಬದಲಾವಣೆಗಳನ್ನು ಮಾಡಿಕೊಂಡ ನಂತರ ಪ್ರಕಟಿಸಿದ್ದಾರೆ.

ಆಗಿನ ತಮ್ಮ ಅನುಭವ ಹಾಗೂ ನಾಟಕದ ವಸ್ತುವಿನ ಬಗ್ಗೆ 'ಜನನಾಯಕ' ದಲ್ಲಿ ದೀರ್ಘ ಪ್ರಸ್ತಾವನೆಯನ್ನು ಗೋಕಾಕರು ಜೋಡಿಸಿದ್ದಾರೆ. '........ ಇದರಷ್ಟು ಗುಣಗಳಿದ್ದ ನಾಟಕಗಳಾದರೂ ಈಗ ಕನ್ನಡದಲ್ಲಿ ಎಷ್ಟು ? ವಾಚಕರು ಬೆರಳೆಣಿಸಬೇಕು' ಎಂದು ಗೋಕಾಕರು ಹೇಳಿದ್ದು, ಆಗಿನ ಸಾಹಿತ್ಯದ ವಾಸ್ತವತೆ.

'ಜನನಾಯಕ'ದ ಮುಖ್ಯವಸ್ತುವು ಪ್ರತೀಕಾರ. ಶಕ್ತಿ-ವ್ಯಕ್ತಿಗಳ ನಡುವೆ ಚಿರಂತನವಾಗಿ ನಡೆದ ಕಲಹವನ್ನು ಚಿತ್ರಿಸಲು ಗೋಕಾಕರು ಮಾಡಿದ ಪ್ರಯತ್ನ ಇಲ್ಲಿದೆ. "ಇದರಲ್ಲಿ ನಮ್ಮ ಸಮಾಜವನ್ನೇ ಹಿನ್ನೆಳಲನ್ನಾಗಿ ಇಟ್ಟುಕೊಂಡಿದ್ದೇನೆ. ಸೊಕ್ಕಿದ ಆಳರಸರೊಡನೆ ದಾಸ್ಯವೃತ್ತಿಯಲ್ಲಿದ್ದರೂ ಎದೆಗಾರಿಕೆಯಿದ್ದ ಪ್ರಜೆಗಳು, ಸಂಸ್ಥಾನಾಧಿಪತಿಗಳೊಡನೆ ಸಂಸ್ಥಾನಗಳ ಜನರು, ಜಾಗೀರದಾರರೊಡನೆ ಜಾಗೀರಿನ ಹಳ್ಳಿಯ ಜನರು ಇವರೆಲ್ಲರ ಕಲಹದಲ್ಲಿ ಒಂದೇ ಒಂದು ಮಾತು ಎದ್ದುಕಾಣುತ್ತದೆ. ಹಿಂತುಳಿದು ಮುಂತುಳಿದು ಬರುವ ದಬ್ಬಾಳಿಕೆಯನ್ನು, ಮೀರಿವರಿದು ಬರುವ ಸ್ವಾತಂತ್ರ್ಯವು ಎದುರಿಸುವ ರೀತಿ, ಸ್ವಾತಂತ್ರ್ಯದ ಈ ಸಮಸ್ಯೆ ಯನ್ನು ಚಿತ್ರಿಸಲು ನಾನು ಜಾಗೀರುಗಳ ಕಥಾವಸ್ತುವನ್ನು ಆಯ್ದು ಕೊಂಡಿದ್ದೇನೆ. ಆದರೆ ಸಮಸ್ಯೆಯ ವ್ಯಾಪಕರೂಪವು ಯಾವಾಗಲೂ ನನ್ನ ಲಕ್ಷ್ಯದಲ್ಲಿದೆ" ಎಂಬ ಗೋಕಾಕರ ಮಾತುಗಳಲ್ಲಿ ಭವಿಷ್ಯವನ್ನು ಗುರುತಿಸಿ, ಅದನ್ನು ಸೂಕ್ಷ್ಮವಾಗಿ ಚಿತ್ರಿಸುವ ಶಕ್ತಿ ಅಡಗಿರುವುದನ್ನು ನಾವು ಒಪ್ಪಬೇಕಾಗುತ್ತದೆ

ಸಜ್ಜನರಾಗಿದ್ದ ವೃದ್ಧ ದೇಸಾಯಿ ಲಕ್ಕಣ್ಣೊಡೆಯರು ನಿಧನ ಹೊಂದಿದ ನಂತರ ಬೇವಿನಹಳ್ಳಿಯ ಜಾಗೀರದಾರನಾಗಿ ಹಣುಮಪ್ಪ ದೇಸಾಯಿ ಅಧಿಕಾರಕ್ಕೆ ಬಂದ. ಲಂಪಟತೆ, ಅಹಂಕಾರ, ಕಾಮುಕತೆ, ದುಷ್ಟತನಗಳ ಆಗರವಾಗಿದ್ದ ಹಣುಮಪ್ಪ ದೇಸಾಯಿ ತನ್ನ ತಂದೆಯ ಕಾಲದಿಂದಲೂ ಕಾರಭಾರಿಯಾಗಿದ್ದ ಅನುಭವಸ್ಥ ರಾಮಣ್ಣನವರನ್ನೂ ಕಡೆಗಣಿಸಿ, ತನ್ನದೇ ವಯಸ್ಸಿನ

ಕಾರಕೂನನಾಗಿದ್ದ ದುಷ್ಟ ಸಣ್ಣತಮ್ಮನನ್ನು ಆ ಹುದ್ದೆಗೆ ಏರಿಸುತ್ತಾನೆ. ಜನರನ್ನು ಸುಲಿಯುವ, ವಂಚಿಸುವ, ಹೀಗಳೆದು ಅವಮಾನಿಸುವ ನೀತಿಯನ್ನು ದೇಸಾಯಿ, ಅವನ ಹೊಸ ಕಾರಭಾರಿ ಮುಂದುವರೆಸುತ್ತಾರೆ. ಸಣ್ಣ ತಮ್ಮನಿಂದಾಗಿ ಹಣುಮಪ್ಪನ ನಡತೆ ಇನ್ನೂ ನೀತಿಗೆಡಲಾರಂಭಿಸುತ್ತದೆ. ಇದರಿಂದಾಗಿ ಅಸಹಾಯಕರಾದ ಮುಗ್ಧಜನರು ನೀತಿವಂತ, ಶ್ರೀಮಂತ ನಾಗರಿಕನಾಗಿದ್ದ ಭೀಮಣ್ಣನಾಯಕನಲ್ಲಿ ತಮ್ಮ ಸಂರಕ್ಷಕನನ್ನು ಕಂಡುಕೊಳ್ಳುತ್ತಾರೆ.

ಸದ್ಗುಣಿ, ವಿವೇಕಶೀಲ, ವಿನಯಿಯಾದ ಭೀಮಣ್ಣ ಬರುಬರುತ್ತಾ ಜನನಾಯಕನಾಗಿ ರೂಪುಗೊಳ್ಳುತ್ತಾನೆ. ಹಣುಮಪ್ಪನ ವಯಸ್ಸಿನವನೇ ಆಗಿದ್ದ ಭೀಮಣ್ಣ ತೀರಿ ಹೋದ. ದೇಸಾಯರಿಗೆ ಮಾತು ಕೊಟ್ಟಂತೆ ಹಣುಮಪ್ಪನ ಉಪದ್ವ್ಯಾಪಗಳನ್ನು ಸಹಿಸಲು ಬಹಳಷ್ಟು ಶ್ರಮಿಸಬೇಕಾಗುತ್ತದೆ. ಆದರೆ ಭೀಮಣ್ಣನನ್ನು ಕರೆಸಿಕೊಂಡು ಹಣುಮಪ್ಪ ಮತ್ತು ಸಣ್ಣತಮ್ಮ ಅವನ ರುಮಾಲನ್ನು ಕಸಿದು ಅಪಮಾನ ಮಾಡಿದಾಗಿನಿಂದ ಭೀಮಣ್ಣ ಬಹಳ ನೊಂದುಕೊಳ್ಳುತ್ತಾನೆ. ಭೀಮ್ಮನ ಮನೆಯ ದರೋಡೆ ಮಾಡಿಸುವ ಪ್ರಯತ್ನವನ್ನೂ ಮಾಡಲಾಗುತ್ತದೆ. ಭೀಮಣ್ಣ ಕಟ್ಟಿಸಿದ ಈಶ್ವರ ದೇವಾಲಯಕ್ಕೆ ಭೀಮಣ್ಣ ತಾಯಿ ಲಕ್ಷ್ಮಮ್ಮ ಮತ್ತು ಹೆಂಡತಿ ಸುಭದ್ರಾಬಾಯಿ ಹೋದಾಗ ಸುಭದ್ರಾಬಾಯಿಯನ್ನು ಅಪಹರಿಸುವ ಮಟ್ಟಕ್ಕೂ ಈ ದುಷ್ಟದ್ವಯರು ತಲುಪುತ್ತಾರೆ.

ಇಷ್ಟು ಹೊತ್ತಿಗೆ ಇವರಿಬ್ಬರಿಂದ ದೂರವಾಗಿದ್ದ ರಾಮಣ್ಣನು ಭೀಮಣ್ಣನಲ್ಲಿ ಬಂದು ಜಾಗೀರದಾರರ ಅಧಿಕಾರದಲ್ಲಿದ್ದ ಈ ಬೇವಿನಹಳ್ಳಿಯನ್ನೇ ಬಿಟ್ಟು, ಹತ್ತಿರದಲ್ಲಿ ನಾಲ್ಕೇ ಮೈಲುಗಳ ಅಂತರದಲ್ಲಿದ್ದ ಸರಕಾರದ ಆಗಿನ ಇಂಗ್ಲೀಷ ಅಧಿಕಾರಿಗಳ ನೇರ ಆಡಳಿತದಲ್ಲಿದ್ದ ಇಂಚಲಾಪುರಕ್ಕೆ ಹೋಗಿ ವಾಸಿಸಲು ಸಲಹೆ ನೀಡುತ್ತಾನೆ. ಅಲ್ಲಿದ್ದುಕೊಂಡೇ ಜನರ ಕಲ್ಯಾಣಕ್ಕಾಗಿ ದುಡಿಯಬಹುದೆಂಬ ಮಾತನ್ನು ಒಪ್ಪಿ ಭೀಮಣ್ಣ ಕುಟುಂಬದೊಂದಿಗೆ ಅಲ್ಲಿಗೆ ಹೋಗಿ ನೆಲಸುತ್ತಾನೆ.

ಬೇವಿನಹಳ್ಳಿಯಲ್ಲಿ ಏಕಾಕಿಯಾಗಿ ಬಾಳುತ್ತಿದ್ದ ರಾಮಣ್ಣನವರಿಗೆ ಈ ದುಷ್ಟರು ವಿಷಪ್ರಾಶನ ಮಾಡಿಸುತ್ತಾರೆ. ಅದರಿಂದಾಗಿ ಮರಣಾಂತಿಕ ಕಾಯಿಲೆಗೆ ರಾಮಣ್ಣ ತುತ್ತಾದಾಗ, ಅವರನ್ನು ನೋಡಲು ಭೀಮಣ್ಣ ಬೇವಿನಹಳ್ಳಿಗೆ ಬರುತ್ತಾನೆ. ಈ ಸಮಯದಲ್ಲಿ ಸುಭದ್ರಾಬಾಯಿಯನ್ನು ಅಪಹರಿಸಲು ದುಷ್ಟ ದೇಸಾಯಿ ತನ್ನ ಸೇವಕರನ್ನು ಕಳಿಸುತ್ತಾನೆ. ಭೀಮಣ್ಣನ ವಿಶ್ವಾಸದ ಸೇವಕರ ಸಕಾಲಿಕ ಎಚ್ಚರಿಕೆಯಿಂದ ಈ ಪ್ರಯತ್ನ ವಿಫಲವಾಗುತ್ತದೆ. ಮುಂದೆ ರಾಮಣ್ಣ ತೀರಿಕೊಂಡಾಗ, ನೊಂದ ಜನರೆಲ್ಲ ಹಿರಿಯ ದೇಸಾಯಿ ಲಕ್ಕಣ್ಣೊಡೆಯರ

ಸಮಾಧಿಯ ಹತ್ತಿರ ಸಭೆ ಸೇರಿ, ಜನನಾಯಕನಾಗಿ ಒಡಮೂಡುತ್ತಿದ್ದ ಸಜ್ಜನ ಭೀಮಣ್ಣ, ಸಿದರಾಮಶೆಟ್ಟಿ ಮುಂತಾದವರ ನೇತೃತ್ವದಲ್ಲಿ ಮೇಲಿನ ವರಿಷ್ಠ ಅಧಿಕಾರಿಯಾದ ಬ್ರಿಟಿಶ್ ಕಮೀಶನರರಿಗೆ ಆರು ಕಲಮುಗಳಲ್ಲಿ ಎಲ್ಲ ವಿವರಗಳುಳ್ಳ ಅರ್ಜಿ ಬರೆಯಲು ನಿರ್ಧರಿಸಿ, ಸಹಿ ಮಾಡಿ ಕಳಿಸುತ್ತಾರೆ.

ಈ ವಿಷಯಗಳೆಲ್ಲ ಪತ್ರಿಕೆಗಳಲ್ಲಿ ಬಂದುದನ್ನು ಹಣಮಪ್ಪನ ಮಗ ಚಿಕ್ಕ ಶ್ರೀಮಂತ ಗಮನಿಸುತ್ತಾನೆ. ಮುಂಬಯಿಯಲ್ಲಿ ಓದಲು ಹೋಗಿದ್ದ ಅವನು ಊರಿಗೆ ಮರಳಿ ತನ್ನ ತಂದೆಯ ಮತ್ತು ಸಣತಮ್ಮನ ದುಷ್ಟತನಗಳನ್ನು ಪ್ರತಿರೋಧಿಸುವಾಗ , ಮಗನನ್ನೇ ಕತ್ತಲುಕೋಣೆಯಲ್ಲಿ ಬಂಧಿಸಿಡುವ ಮಟ್ಟಕ್ಕೆ ಹಣುಮಪ್ಪನ ನೀಚತನ ಹೋಗುತ್ತದೆ. ಅದೇ ಹೊತ್ತಿಗೆ ವಿಚಾರಣೆಗಾಗಿ ಬೇವಿನಹಳ್ಳಿಗೆ ಆಗಮಿಸಿದ ಕಮೀಶನರರು ಭೀಮಣ್ಣನಾಯಕ ಮತ್ತು ಸಿದರಾಮಶೆಟ್ಟಿ ಮುಂತಾದವರ ಎದುರಿನಲ್ಲಿಯೇ ವಿಚಾರಣೆ ನಡೆಸಿ, ಎಲ್ಲ ವಿವರಗಳನ್ನು ಕಲೆಹಾಕುತ್ತಾರೆ. ಹಣುಮಪ್ಪನ ದುಷ್ಟ ನಡತೆ ಸಿದ್ಧವಾಗಿ ಅವನಿಂದ ಜಾಗೀರಿನ ಅಧಿಕಾರವನ್ನು ಕಸಿದುಕೊಂಡು, ಅದನ್ನು ಚಿಕ್ಕಶ್ರೀಮಂತನಿಗೆ ನೀಡಲಾಗುತ್ತದೆ. ಸಣತಮ್ಮನಿಗೆ ಸೆರೆವಾಸದ ಶಿಕ್ಷೆಯಾಗುತ್ತದೆ.

ಕಮೀಶನರರ ಈ ನಿರ್ಧಾರಗಳಿಂದ ಜನರಿಗೆ ಸಂತೋಷವಾಗುತ್ತದೆ. ಸದ್ಗುಣಗಳಿಗೆ, ಸಹನಶೀಲತೆಗೆ ಭೀಮಣ್ಣ, ಸಿದರಾಮಶೆಟ್ಟಿ, ನಿಷ್ಠಾವಂತ ಸೇವಕರಾದ ಕರಿಯ , ಗಂಗಜ್ಜ ಮತ್ತು ಭೀಮಣ್ಣ, ತಾಯಿ, ಪತ್ನಿಯ ಒಳ್ಳೆಯ ಹಾರೈಕೆಗಳಿಗೆ ಸಿಕ್ಕ ಗೆಲುವು ಇದಾಗಿತ್ತು. ಆ ದಿನ ಸಂಜೆ ಮೋಡ ಕವಿದು ಬಿರುಗಾಳಿ ಬೀಸತೊಡಗುತ್ತದೆ. ಸಿಡಿಲು - ಗುಡುಗು - ಮಿಂಚುಗಳ ಆರ್ಭಟದ ನಡುವೆಯೇ ಕರೆಯಲು ಬಂದಿದ್ದ ಕರಿಯನೊಡನೆ ಭೀಮಣ್ಣ ಇಂಚಲಾಪುರಕ್ಕೆ ಹೊರಟಾಗ, ಸೆರೆಯಿಂದ ಹೇಗೋ ತಪ್ಪಿಸಿಕೊಂಡು ಬಂದಿದ್ದ ಸಣತಮ್ಮ ಕೊಡಲಿಯಿಂದ ಭೀಮಣ್ಣನನ್ನು ಕೊಚ್ಚುತ್ತಾನೆ. ಸಜ್ಜನ ಭೀಮಣ್ಣ ಇದನ್ನು ಸಹ ಸಿಡಿಲು ಬಿದ್ದಿತೆಂದೇ ಸ್ವೀಕರಿಸುತ್ತಾನೆ. ಅದೇ ಹೊತ್ತಿಗೆ ಸಣತಮ್ಮನನ್ನು ಹಿಂಬಾಲಿಸಿ ಬಂದಿದ್ದ ಗಂಗಜ್ಜನೆಂಬ ಹಣಮಪ್ಪನ ಸೇವೆಯಿಂದ ಈಗ ದೂರವಾಗಿದ್ದ ಯುವಕ ಸೇವಕ ಚೂರಿ ಹಾಕಿ ಚೂರು ಚೂರು ಮಾಡುತ್ತಾನೆ. ಗಂಗಜ್ಜನ ಪ್ರೇಯಸಿ ಮಲ್ಲವ್ವನನ್ನು ಅವನಿಂದ ಹಾರಿಸಿಕೊಂಡು ಹೋಗಿದ್ದರ ಸೇಡನ್ನು ತೀರಿಸಿಕೊಳ್ಳುತ್ತಾನೆ. ಆದರೆ ತನ್ನ ನೆಚ್ಚಿನ ನಾಯಕ ಭೀಮಣ್ಣನನ್ನು ಉಳಿಸಲಾಗದ ನೋವಿನಿಂದ ತತ್ತರಿಸುತ್ತಾನೆ.

ಕಮೀಶನರರ ನಿರ್ಣಯದವರೆಗೆ ಏಕರೂಪವಾಗಿ ಬೆಳೆಯುತ್ತ ಹೋಗುವ ನಾಟಕ, ಕೊನೆಯಲ್ಲಿ ಒಮ್ಮೆಲೇ ದುಃಖಾಂತವಾಗಿ ಮಾರ್ಪಡುತ್ತದೆ.

ದುಷ್ಟತನಗಳು ನಿರ್ನಾಮಗೊಳ್ಳುವಾಗ ಕೆಲವು ಸದ್ಗುಣಗಳೂ ನಾಶವಾಗಬೇಕಾಗುವ ಅನಿವಾರ್ಯ ಪ್ರಕೃತಿಧರ್ಮವನ್ನು ಗೋಕಾಕರು ಎತ್ತಿ ಹಿಡಿಯುತ್ತಾರೆ. ಇದು ದೈವಜನ್ಯ ರುದ್ರನಾಟಕ. ಇಲ್ಲಿ ಸಿದರಾಮಶೆಟ್ಟಿ ಮುಂತಾದವರ ಏಳ್ಗೆಯ ಸೂಚನೆ ಅಂಕುರಿತವಾಗುವುದನ್ನು ಹಾಗೂ ಭೀಮಣ್ಣನ ಹೆಂಡತಿ ಸುಭದ್ರಾಬಾಯಿಯ ಹೊಟ್ಟೆಯಲ್ಲಿ ಹುಟ್ಟಲಿರುವ ಕೂಸಿನ ಮೂಲಕ ಭವಿಷ್ಯದ ಜನಭಾವನೆಯನ್ನೂ ಬಿಂಬಿಸಲಾಗಿದೆ.

ಶೇಕ್ಸಪಿಯರನ ದುಃಖಾಂತ ನಾಟಕಗಳ ಮಾದರಿಯನ್ನು ತಾವು ಅನುಕರಿಸಿದ್ದಾಗಿ ಗೋಕಾಕರು ಸ್ಪಷ್ಟಪಡಿಸಿದ್ದಾರೆ. ವಿಶೇಷವಾಗಿ ಜ್ಯೂಲಿಯಸ್ ಸೀಜರ ನಾಟಕ ಅವರ ತಲೆಯಲ್ಲಿದ್ದಿರಬೇಕು. ಭಾಷೆಯ ಕಾವ್ಯಾತ್ಮಕ ಬಳಕೆ, ಭಾಷಣಗಳ ವೈಖರಿ, ಬಹುಸಂಖ್ಯೆಯಲ್ಲಿರುವ ಆಲಂಕಾರಿಕ, ಲಯಾತ್ಮಕವಾದ, ಅನೇಕ ಸಲ ಸುದೀರ್ಘವೆನಿಸುವ ಹಾಗೂ ಅಸಹಜವೆನಿಸುವ ಸಂವಾದಗಳ ಬಾಹುಳ್ಯ ಇತ್ಯಾದಿಗಳು ಇದ್ದರೂ ಆಗಿನ ಕಾಲದಲ್ಲಿ ತುಂಬ ಯಶಸ್ವಿಯಾದ ನಾಟಕ ' ಜನನಾಯಕ'.

ಆಗಷ್ಟೇ ಆರಂಭವಾಗಿದ್ದ ಅಮೇಚೂರ್ ನಾಟಕಗಳು ಹಾಗೂ ಕಂಪನಿ ನಾಟಕಗಳ ಮಧ್ಯದ ಕೊಂಡಿಯಾಗಿ ಈ ನಾಟಕವನ್ನು ತಲೆಯಲ್ಲಿಟ್ಟುಕೊಂಡು ಗೋಕಾಕರು ಬರೆದಿದ್ದು, ತಮ್ಮ ಉದ್ದೇಶದಲ್ಲಿ ಅವರು ಸಫಲರಾಗಿದ್ದಾರೆ. ಹಲವಾರುಸಲ ಮೇಲಿಂದ ಮೇಲೆ ದೃಶ್ಯಸ್ಥಳಗಳ ಬದಲಾವಣೆ, ಆರೇಳು ದೊಡ್ಡ ದೊಡ್ಡ ಹಾಡುಗಳು ಮುಂತಾದವನ್ನು ಒಳಗೊಂಡ ಸಾದ್ಯಂತ ಗಂಭೀರ ನಡೆಯ, ವೈಚಾರಿಕವಾದ ಈ ನಾಟಕವನ್ನು ಆಧುನಿಕ ರಂಗತಂತ್ರಗಳಿಗೆ ಹೊಂದುವಂತೆ ಬದಲಾವಣೆಗಳನ್ನು ಮಾಡಿ, ಪುನಃ ಬರೆದು ಈಗಲೂ ಯಶಸ್ವಿಯಾಗಿ ರಂಗದ ಮೇಲೆ ತರಬಹುದಾಗಿದೆ ಎನ್ನುವುದೇ ಇದರ ವೈಶಿಷ್ಟ್ಯ.

೪

೧೯೪೫-೪೭ ರಲ್ಲಿ ರಚಿಸಲ್ಪಟ್ಟು, ೧೯೪೭ ರಲ್ಲಿ ಪ್ರಕಟವಾದ ನಾಟಕ ' ಯುಗಾಂತರ ' ವನ್ನು ಗೋಕಾಕರು ' ಹೊಸಬಾಳಿನ ಸುಕುಮಾರ ಪ್ರಯೋಗ ' ಎಂದು ಕರೆದಿದ್ದಾರೆ. ವಿಜ್ಞಾನದ ಅದ್ಭುತ ಪ್ರಗತಿ, ಮಾರ್ಕ್ಸವಾದದ ವಿಚಾರಧಾರೆ, ಭಾರತದ ಸನಾತನಸಂಸ್ಕೃತಿಯ ಬೆಳಕಿನಲ್ಲಿರುವ ಮಾನವನ ಪ್ರೀತಿ, ಸ್ನೇಹ, ಕರುಣೆ, ಸೌಂದರ್ಯಗಳ ಹಾದಿಯ ಸಾಧನಮಾರ್ಗಗಳನ್ನು ಸಮಾನವಾಗಿ ಸ್ವೀಕರಿಸಿದ ಸಮನ್ವಯ ಪಥದಲ್ಲಿ ಸಾಗುವುದು ಮಾತ್ರ ತಾರಕವಾದುದು. 'ಜಗತ್ತನ್ನು ಎದುರಿಸಿದ ಜಟಿಲ ಸಮಸ್ಯೆಗೆ ಈ ಸಮನ್ವಯವೇ ಸಮರ್ಪಕ ಉತ್ತರ' ಎಂದು ಗೋಕಾಕರ ಪ್ರತಿಪಾದನೆ. ತಮ್ಮ ವಿಚಾರಗಳನ್ನು ' ಯುಗಾಂತರ'ದಲ್ಲಿ

ಅವರು ತುಂಬ ನಾಟ್ಯಾಯಮಾನವಾಗಿ, ಸುಂದರವಾಗಿ ಚಿತ್ರಿಸಿದ್ದಾರೆ. ಮೂರು ಅಂಕಗಳುಳ್ಳ ಈ ನಾಟಕದ ಪಾತ್ರಗಳು ಉತ್ತರಭಾರತದವಾಗಿದ್ದರಿಂದ ಆರಂಭದಲ್ಲಿ ಸ್ವಲ್ಪ ಹೆಸರುಗಳು ಗೊಂದಲ ಉಂಟುಮಾಡಿದರೂ ಮುಂದೆ ಬೇಗನೆ ನಾಟಕ ಹಿಡಿತಸಾಧಿಸುತ್ತದೆ. ದಿಲ್ಲಿಯ ಶ್ರೀಮಂತ ದಂಪತಿಗಳಾದ ಕಿಶನ್‌ಕಿಶೋರ ಮತ್ತು ರುಕ್ಮಿಣಿದೇವಿ ಬಹುಕಾಲದಿಂದ ಸಮಾಜ ಸೇವೆಯಲ್ಲಿ ತೊಡಗಿದ್ದವರು. ಈಗ ಆ ಜೀವನದಿಂದ ಬೇಸತ್ತು ಏಕಾಂತದ, ಆಧ್ಯಾತ್ಮಿಕ ಧಾರ್ಮಿಕ ಪ್ರಶಾಂತ ಜೀವನವನ್ನು ಬದುಕುವ ಉದ್ದೇಶದಿಂದ ನರ್ಮದಾನದಿ ತೀರದ ಮಾಹುವಿನ ಹತ್ತಿರ ಅರಣ್ಯದಲ್ಲಿ ಒಂದು ಬಂಗ್ಲೆಯನ್ನು ಖರೀದಿಸಿ, ಅಲ್ಲಿ ವಾಸಿಸಲು ಹೊರಟಿದ್ದಾರೆ. ಅವರ ಟ್ರೇನ್ ಬರಲು ತಡವಾಗಿದೆ. ಹಳೆದಿಲ್ಲಿಯ ರೇಲ್ವೆಯ ಪ್ರಥಮದರ್ಜೆಯ ನಿಲ್ಮನೆಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದಾರೆ. ಮಧುರಾದಿಂದ ಆಗಮಿಸಿದ ಶ್ರೀಮಂತ ದಂಪತಿ ಕಾಂತಿಚಂದ್ರ ಮತ್ತು ರೋಹಿಣಿದೇವಿ ದಿಲ್ಲಿಗೆ ಆಗಮಿಸಿ, ತಮ್ಮನ್ನು ಕೊಂಡೊಯ್ಯಲು ಬರಲಿದ್ದ ತಮ್ಮ ಆಪ್ತರ ಮಗಳು ಕಾಮ್ರೇಡ್ ಮೃಣಾಲಿನಿಗಾಗಿ ಕಾಯುತ್ತ, ಇದೇ ನಿಲ್ಮನೆಯಲ್ಲಿ ಕುಳಿತಿದ್ದಾರೆ. ಮಧುರೆಯಲ್ಲಿ ಇಷ್ಟುದಿನ ಧಾರ್ಮಿಕಕಾರ್ಯಗಳಲ್ಲಿ ತೊಡಗಿದ್ದ ಅವರು, ಈಗ ದಿಲ್ಲಿಯಲ್ಲಿ ವಾಸಿಸಿ ಸಾಮಾಜಿಕ ಕಾರ್ಯಗಳಲ್ಲಿ ಸೇವೆಗೈಯಲು ಮನಸ್ಸು ಮಾಡಿದ್ದಾರೆ. ' ನೀವು ಕೈಬಿಟ್ಟ ಧರ್ಮವನ್ನು ನಾನು ಎತ್ತಿ ಹಿಡಿಯಬೇಕನ್ನುತ್ತೇನೆ. ನಾನು ತಡೆದು ನಿಲ್ಲಿಸಿದ ಪ್ರವೃತ್ತಿಯೆಡೆಗೆ ನೀವು ಪ್ರವೃತ್ತರಾಗಿದ್ದೀರಿ. ಬಾಳುವೆಯ ತಿರುವು ಮುರುವನ್ನು ಅಳೆಯುವುದು ಅಸಾಧ್ಯ ' ಎಂಬ ಕಿಶನ್‌ಕಿಶೋರನ ಮಾತಿನೊಂದಿಗೆ ಅವರೆಲ್ಲರ ಸೋಜಿಗದ ಭೆಟ್ಟಿಯಾಗುತ್ತದೆ. ಇಲ್ಲಿಯೇ ನಂತರ ಬಂದ ಕಾಮ್ರೇಡ್ ಮೃಣಾಲಿನಿ ಹಾಗೂ ಮಾಹುವಿಗೆ ಕಿಶನ್‌ಕಿಶೋರರೊಂದಿಗೆ ಹೊರಟಿದ್ದ ಉದಿತೋದಿತ ಕವಿ ಕೋಸಲೇಂದ್ರರ ಆಗಮನ ಹಾಗೂ ಪರಿಚಯವೂ ಆಗುತ್ತದೆ. ಸಾಮ್ಯವಾದಿ ಸಿದ್ಧಾಂತ ತರ್ಕಗಳಿಗೆ ತನ್ನನ್ನು ಸಂಪೂರ್ಣವಾಗಿ ಸಮರ್ಪಿಸಿಕೊಂಡ ಮೃಣಾಲಿನಿ, ತನ್ನ ತಂದೆತಾಯಿಯರನ್ನು ಲೆಕ್ಕಿಸದೇ, ತನ್ನ ವಿಚಾರ - ಪ್ರಚಾರ ಹಾಗೂ ಕಾರ್ಯ ಚಟುವಟಿಕೆಗಳಲ್ಲಿ ತೊಡಗಿದವಳು. ಸೌಂದರ್ಯ, ಪ್ರೀತಿ, ಕರುಣೆಗಳ ಮೂಲಕ ಬದುಕಿನ ವಿಶಾಲ ಆಯಾಮಗಳನ್ನು ಕಾಣಬಯಸುವ ಕವಿ ಕೋಸಲೇಂದ್ರನ ವಿಚಾರಗಳನ್ನು ವ್ಯಂಗ್ಯವಾಗಿ ಕಂಡರೂ ಅವನಿಂದ ಮೃಣಾಲಿನಿ ಮೊದಲ ಭೆಟ್ಟಿಯಲ್ಲಿಯೇ ಆಕರ್ಷಿತಳಾಗುತ್ತಾಳೆ. ತಮ್ಮ ಗಾಡಿ ಹತ್ತಿ ಹೋಗುವಾಗ ಕಿಶನ್‌ಕಿಶೋರರು ದಿಲ್ಲಿಯ ಸ್ವಾರ್ಥಸಾಧಕ, ವಂಚಕ, ರಾಜಕೀಯದಾಟದಲ್ಲಿ ಪಳಗಿದ ಬನಸೀಲಾಲನ ಬಗ್ಗೆ ಎಚ್ಚರಿಕೆಯನ್ನು ನೀಡುತ್ತಾರೆ.

ಇತ್ತ ದಿಲ್ಲಿಯಲ್ಲಿ ಕಾಂತಿಚಂದ್ರ - ರೋಹಿಣಿದೇವಿ ವಿವಿಧ ಸಂಸ್ಥೆಗಳಿಗೆ ಸಹಾಯ ಮಾಡುತ್ತ, ದಿಲ್ಲಿಯ ಅಧಿಕಾರಸ್ಥಾನಗಳನ್ನು ಹೊಂದುತ್ತ ಮುನ್ನಡೆ

ಯುತ್ತಾರೆ. ಇನ್ನೊಂದು ಕಡೆ ಮಾಹು ಹತ್ತಿರ ನರ್ಮದಾ ತೀರದ ಬಂಗ್ಲೆಯಲ್ಲಿ ಆಧ್ಯಾತ್ಮಿಕ ಜೀವನ, ಶಾಂತಿ, ಸೌಂದರ್ಯದಲ್ಲಿ ಕಿಶನ್‌ಕಿಶೋರ ದಂಪತಿಗಳೊಂದಿಗೆ ಕೆಲಕಾಲವಿದ್ದು, ಕೋಸಲೇಂದ್ರ, ಮರಳಿ ದಿಲ್ಲಿಗೆ ಬರುತ್ತಾನೆ. ಒಂದು ರೀತಿಯಲ್ಲಿ ಕಾಂತಿಚಂದ್ರ, ದಂಪತಿಗಳು ಹೇಸರಾಜಕೀಯದ ಮಧ್ಯ ಅಧಿಕಾರಕ್ಕಾಗಿ ನಡೆದ ಕಚ್ಚಾಟದ ದಾರಿಯಲ್ಲಿ ಸಿಲುಕಿ ಹಣ್ಣಾಗುತ್ತಾರೆ. ಬನಸೀಲಾಲನ ಕ್ರೂರ ವಂಚನೆಯಿಂದ ತತ್ತರಿಸಿಹೋಗುತ್ತಾರೆ. ಅತ್ತ ಆ ದಂಪತಿಗಳ ಅರಣ್ಯಜೀವನ ಆರಂಭದಲ್ಲಿ ಹಿತಕರವೆನಿಸಿದರೂ, ನಂತರ ಅಲ್ಲಿಯ ಕ್ರೂರ ಭಯಾನಕತೆ, ಹಾವು, ಘಟಸರ್ಪ, ಹುಲಿಗಳ ಭಯ, ಕೆಲಸದವರ ಅಸಹಕಾರ ಮುಂತಾದವುಗಳಿಂದ ಬೇಸರಗೊಂಡು ದಿಲ್ಲಿಗೇ ಮರಳಲು ನಿರ್ಧರಿಸುತ್ತಾರೆ.

ಈ ಮಧ್ಯೆ ಕೋಸಲೇಂದ್ರ, ಮೃಣಾಲಿನಿ ತುಂಬ ಹತ್ತಿರ ಬಂದಿದ್ದಾರೆ. ಬೆಂಕಿಯ ಜ್ವಾಲೆಗಳನ್ನೇ ಉಗುಳುತ್ತಿದ್ದ ಮೃಣಾಲಿನಿ, ಈಗ ಮುಗ್ಧ ಕಮಲಿನಿಯಂತೆ ಕವಿಯ ಹೃದಯಕ್ಕೆ ಹತ್ತಿರದವಳಾಗಿದ್ದಾಳೆ. ಕವಿ ಕೋಸಲೇಂದ್ರ ಸಹ ಅವಳ ಮಾರ್ಕ್ಸವಾದವನ್ನು ಒಪ್ಪಿಯೂ ಜೀವನದ ನಿರಂತರತೆಯ ಮಧ್ಯೆ ಅಗತ್ಯವಾಧ ಮಾನವೀಯ ಭಾವನೆಗಳ ಮಹತ್ವವನ್ನು ಬಿಂಬಿಸುವಲ್ಲಿ ಯಶಸ್ವಿಯಾಗುತ್ತಾನೆ. ಕೇವಲ ಪುಸ್ತಕಗಳ ಜ್ಞಾನವಾಗಿದ್ದ ಮೃಣಾಲಿನಿಯ ಮಾರ್ಕ್ಸವಾದ, ಈಗ ಕವಿಯ ಸಹವಾಸದಲ್ಲಿ ಜೀವಂತ ಜನರನ್ನು, ಕೊರೆಯುವ ಬಡತನದ ಮಧ್ಯದಲ್ಲಿಯೂ ಚಿಗುರುವ ಕರುಣೆ, ಪ್ರೀತಿ, ಸಹಕಾರ, ಸಮಾನತೆಯ ನಿದರ್ಶನಗಳನ್ನು ಕಂಡು ತನ್ನನ್ನು ತಾನೇ ತಿದ್ದಿಕೊಳ್ಳುತ್ತಾಳೆ. ಹಿರಿಯರ ತ್ಯಾಗದಿಂದ ನಿರ್ಮಾಣಗೊಂಡ ಜೀವನವನ್ನು ಮುಕ್ತ ಹೃದಯದಿಂದ ಸ್ವಾಗತಿಸಿ, ಬೆಳೆಸಬೇಕಾದ ಅಗತ್ಯವನ್ನು ಕಂಡುಕೊಳ್ಳುತ್ತಾಳೆ. ಹೀಗೆ ಮೃಣಾಲಿನಿಯ ಉತ್ಸಾಹ, ಜ್ಞಾನಗಳು ಕವಿಯ ಸದ್ಭಾವ-ಪ್ರೀತಿಗಳ ಜೊತೆಗೂಡಿ ಸಮನ್ವಯಗೊಂಡು ಹೊಸ ಬದುಕಿನ ಬೆಳಕಾಗುತ್ತವೆ.

ಹೀಗೆ ಬದಲಾಗಿ ದಂಪತಿಗಳಾಗಲು ನಿರ್ಧರಿಸಿಕೊಂಡ ಮೃಣಾಲಿನಿ ಕೋಸಲೇಂದ್ರರು ಮಾಹು ಬಂಗ್ಲೆಯನ್ನು ಕಿಶನ್‌ಕಿಶೋರರು ಬಿಡಲಿದ್ದ ದಿನವೇ ಬಂದು ಭೆಟ್ಟಿಯಾಗುತ್ತಾರೆ. ನಂತರ ಎಲ್ಲರೂ ಕೂಡಿ ದಿಲ್ಲಿಗೆ ಬರುತ್ತಾರೆ. ಮಕ್ಕಳಿಲ್ಲದ ದಿಲ್ಲಿಯ ದಂಪತಿಗಳಿಗೆ ಕೋಸಲೇಂದ್ರ, ಮಗನಾಗಿ, ಮಥುರಾ ದಂಪತಿಗಳಿಗೆ ಮೃಣಾಲಿನಿ ಮಗಳಾಗಿ ಅವರೆಲ್ಲರ ಜೀವನವನ್ನು ಸಮನ್ವಯದ ಬೆಳಕಿನಲ್ಲಿ ಸ್ವಚ್ಛಗೊಳಿಸುತ್ತಾರೆ. ಮುಂದೆ ಬನಸೀಲಾಲನಂಥವರ ದುಷ್ಟತನ ವನ್ನು ಎದುರಿಸುವಲ್ಲಿ, ಈ ಮಕ್ಕಳ ಸಹಾಯದೊಂದಿಗೆ ತಮ್ಮ ತಮ್ಮ ಮೂಲ ಭಾವನೆಗಳನ್ನು ಉಳಿಸಿಕೊಳ್ಳುತ್ತಲೇ ತಮ್ಮ ವ್ಯಕ್ತಿತ್ವಕ್ಕೆ ಹೊಸ ಆಯಾಮಗಳನ್ನು ಪಡೆಯುತ್ತಾರೆ.

ಯಾವುದೇ ವಿಚಾರದ ಅತಿರೇಕ ಅಥವಾ ಧರ್ಮ ಇಲ್ಲವೆ ಅಧಿಕಾರ ದಾಹಗಳ ಏಕಪಥದಲ್ಲಿ ನಡೆಯುವುದಕ್ಕಿಂತ ಎಲ್ಲ ಭಾವ ವಿಚಾರಗಳ ಸಮನ್ವಯದ ವಿಚಾರವನ್ನು ಬಿಂಬಿಸುವಲ್ಲಿ 'ಯುಗಾಂತರ' ಯಶಸ್ವಿಯಾಗಿದೆ. ಕವಿ ಕೋಸಲೇಂದ್ರನ ಸುಂದರ ಕವಿತೆಗಳು ನಾಟಕಕ್ಕೆ ಭಾರವೆನಿಸುವುದಿಲ್ಲ. ದೀರ್ಘ ಸಂವಾದಗಳು ಮಾತ್ರ ಅಲ್ಲಲ್ಲಿ ಓದುಗರನ್ನು ತಡೆಯುತ್ತವೆ. ಆದರೆ ಅವುಗಳಲ್ಲಿ ತುಂಬಿದ ವೈಚಾರಿಕ ತರ್ಕಗಳಾಗಲಿ, ಭಾವನಾತ್ಮಕ ರಸಪ್ರಸಂಗಗಳಾಗಲಿ ತುಂಬ ಆಕರ್ಷಕ, ರಂಜಕ ಶೈಲಿಯಲ್ಲಿ ಬಂದಿರುವುದರಿಂದ ಸಹಜವಾಗಿ ಓದಿಸಿಕೊಂಡು ಹೋಗುತ್ತವೆ. ವಿಶಾಲಭಾವನೆಯೊಂದಿಗೆ ' ವ್ಯಕ್ತಿತ್ವದ ತಿರುಳನ್ನೆಲ್ಲ ಜೀವಿತಕ್ಕೆ ತಿರುಗಿಸುವುದೇ ಪೂರ್ಣತೆಯ ಕುರುಹು. ಇದನ್ನುಳಿದ ಪೂರ್ಣತೆ ಯಾವುದು ? ಎಂದು ಮೃಣಾಲಿನಿಯ ಬಾಯಿಯಲ್ಲಿಯೇ ಹೇಳಿಸಿದಾಗ, ನಾಟಕದ ಸುಖಾಂತವು ' ಮನವ ಮಾಗಿಸಿರುವ ' 'ನವರಸದ ' ' ಘನಾನಂದ ' ' ಭವ್ಯದಿವ್ಯ' 'ಪಾವನ ಜೀವನ ' ವಾಗಿ ಮಾರ್ಪಡುತ್ತದೆ. ಬದುಕಿನ ಚಿರಂತನ ಸಮಸ್ಯೆಗಳನ್ನು ಒಳಗೊಂಡಿರುವುದರಿಂದ ಬಹುಕಾಲ ಉಳಿಯುವ ನಾಟಕ ಇದಾಗಿದೆ. ದಿಲ್ಲಿ - ಮಾಹುವಿನ ದೃಶ್ಯಗಳು, ಪಾತ್ರಗಳು ಇರುವುದರಿಂದ ಸಂವಾದಗಳಲ್ಲಿ ಅಂಥ ಪದ ಪುಂಜಗಳನ್ನು ಮತ್ತು ಆಗಿನ ವಾತಾವರಣಕ್ಕೆ ಹೊಂದುವ ನೆಹರೂ ಭಾಷಣ, ಆಸಫ್ ಅಲಿ ಚುನಾವಣೆಯ ಹುರಿಯಾಳಾಗಿರುವುದು ಇತ್ಯಾದಿ ಈ ನಾಟಕಕ್ಕೆ ವಾಸ್ತವಿಕತೆಯ ರಂಗನ್ನು ನೀಡುತ್ತವೆ.

೧೯೪೨ ರಲ್ಲಿಯೇ ಪ್ರಕಟವಾದ ' ವಿಮರ್ಶಕ ವೈದ್ಯ ' ವಿನೂತನ ಬಗೆಯ ಸಾಹಿತಿಕ ವ್ಯಂಗ್ಯದ ದೊಡ್ಡ ಏಕಾಂಕ. ಆ ಕಾಲದಲ್ಲಿ ಅನೇಕ ಕಾಲೇಜುಗಳಲ್ಲಿ ವಾರ್ಷಿಕೋತ್ಸವಗಳ ಸಂದರ್ಭದಲ್ಲಿ ಆಡಲ್ಪಡುತ್ತಿದ್ದ ಹಾಸ್ಯ ನಾಟಕಗಳ ಸಾಲಿಗೆ ಸೇರುವಂಥ, ಈಗಿನ ಕಾಲದಲ್ಲಿ ತುಂಬ ಕೃತ್ರಿಮವೆನಿಸುವ, ಆದರೂ ಆ ಕಾಲದ ಸಾಹಿತ್ಯ ವಿಚಾರಗಳನ್ನು ತಿಳಿಯುವ ದೃಷ್ಟಿಯಿಂದ ಮಹತ್ವದ್ದಾಗಿರುವ ' ವಿಮರ್ಶಕ ವೈದ್ಯ ' ಗೋಕಾಕರಿಗೆ ಅನೇಕ ಸಾಹಿತ್ಯಶತ್ರುಗಳನ್ನು ಹುಟ್ಟಿಸಿಕೊಟ್ಟಿರಬಹುದು.

'ವಿಮರ್ಶಕ ವೈದ್ಯವು ಹಾಸ್ಯ ವಿಡಂಬನೆಗಳ ದ್ವಾರವಾಗಿ ಸತ್ಯ ಹಾಗೂ ಔಚಿತ್ಯದ ಪಕ್ಷವನ್ನು ಸಮರ್ಥಿಸುತ್ತದೆ. ಇದು ಮುಖ್ಯತಃ ಸತ್ಯ ಔಚಿತ್ಯಗಳ ಬೆಳಕಿನಲ್ಲಿ ಇಂದಿನ ಪದ್ಯಕಾವ್ಯದ ವಿವಿಧ ಪ್ರಕಾರಗಳನ್ನು ಪರೀಕ್ಷಿಸುತ್ತದೆ ' ಎಂದ ಗೋಕಾಕರು, 'ಇಂದಿನ ಕೆಲವೊಂದು ಸಾಹಿತಿಗಳ ಕೃತಿಗಳಿಂದ ಉದಾಹರಣೆಗಳನ್ನು ಆಯ್ದುಕೊಂಡ ಮಾತ್ರಕ್ಕೆ ಅವರನ್ನು ವಿಡಂಬಿಸುವುದೇ ಇಲ್ಲಿಯ ಉದ್ದೇಶವಿದೆ ಎಂದು ಯಾರೂ ತಿಳಿಯಬಾರದು' ಎಂದು ಬಿನ್ನವಿಸಿದ್ದಾರೆ. ಏಕಾಂಕವನ್ನು ಓದುತ್ತ ಹೋದಂತೆ ಈ ಬಿನ್ನಹದ ಹಿಂದಿನ ಅನೇಕ ಕವಿ - ಮುಖ - ಧ್ವನಿಗಳು ಸ್ಪಷ್ಟವಾಗುತ್ತವೆ. ಆದರೂ ಇಲ್ಲಿಯ ನಾಟ್ಯಪ್ರಯತ್ನ

ಹೊಸದಾಗಿ ಕಾಣುವುದೆಂಬ ಮಾತನ್ನು ಒಪ್ಪಬೇಕು.

ಇಲ್ಲಿಯ ಕೇಂದ್ರಪಾತ್ರ ವಿಮರ್ಶಕ ವೈದ್ಯನಾದ ಡಾ. ದಿನಕರರಾಯ. ಬಿ. ಎ. ಆದನಂತರ ಇದ್ದುಬಿದ್ದ ಆಸ್ತಿಯನ್ನೆಲ್ಲ ಮಾರಿ, ರಷ್ಯಾದೇಶಕ್ಕೆ ಹೋಗಿ, ಡಿ. ಎಲ್‌ಸಿ - ಅಂದರೆ ಡಾಕ್ಟರ್ ಆಫ್ ಲಿಟರರಿ ಕ್ರಿಟಿಸಿಜಮ್ - ವಿಮರ್ಶಾಶಾಸ್ತ್ರಜ್ಞ ಎಂಬ ಡಿಗ್ರಿ ಸಂಪಾದಿಸಿಕೊಂಡು ಬಂದಿದ್ದಾನೆ. 'ಏಕೀಕೃತ ಕರ್ನಾಟಕದ ವಿಶಾಲವಾದ ನಗರವೊಂದರಲ್ಲಿ ಬಾಕೀಕೃತರ ಬೀದಿ' ಯಲ್ಲಿ ಒಂದು ಕಟ್ಟಡದಲ್ಲಿ ತನ್ನ ಸಾಹಿತ್ಯ ಚಿಕಿತ್ಸಾಲಯವನ್ನು ಇಂದೇ ಆರಂಭಿಸಿದ್ದಾನೆ. ಅವನ ಸಹಾಯಕನಾಗಿ, ಕಂಪೌಂಡರ ಆಗಿ ಅವನ ಬಾಲ್ಯದ ಲಂಗೋಟಿ ಗೆಳೆಯ ಭೀಮಣ್ಣನೇ ಬಂದಿದ್ದಾನೆ. ದಿನಕರರಾಯನ ಹೊಸಹೊಸ ಸಾಹಿತ್ಯ ಸಿದ್ಧಾಂತಗಳ ಲೇಖನಗಳು ಬೇರೆಬೇರೆ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಜೀವನದಲ್ಲಿ ಏನೇನಾಗಬೇಕು, ಏನೇನಾಗಬಾರದು ಇತ್ಯಾದಿ ವಿಷಯಗಳ ಹಲವು ಗ್ರಂಥಗಳು ಅವನ ಹತ್ತಿರ ಇವೆ. ಈ ಚಿಕಿತ್ಸಾಲಯದ ಮೊದಲ ದಿನವೇ ಮುಂಜಾನೆ ೧೧ ಗಂಟೆಯಿಂದ ಸಂಜೆ ೫ ಗಂಟೆಯ ವರೆಗೆ ನಡೆದ ಪ್ರಸಂಗಗಳೇ ಈ ನಾಟಕದ ವಸ್ತು.

ಇಲ್ಲಿ ಮಾಥ ಸುತರಾಂ ಇಲ್ಲವೆಂಬುದು ಇಲ್ಲಿಯ ಮುಖ್ಯ ಮಾತು. ಭೀಮಣ್ಣ 'ಚಿಕಿತ್ಸೆಗೆ ಫೀ' ಎಂಬ ಬೋರ್ಡ ಬರೆಸಿದ್ದು, ಅದರಲ್ಲಿ ಭಾವಗೀತಾ ಚಿಕಿತ್ಸೆ, ಪ್ರಬಂಧ ಚಿಕಿತ್ಸೆ, ಲಘುಕಥಾ ನಿವಾರಣೆ, ಕಾದಂಬರೀ ನಿರೀಕ್ಷೆ, ನಾಟಕಾವಲೋಕನ, ಗದ್ಯಗ್ರಂಥಗಳು, ಕಲೋಪಾಸಕನ ಮಸ್ತಕಪರೀಕ್ಷೆ, ಕಲೋಪಾಸಕನ ಸಮಗ್ರ ಪರೀಕ್ಷೆ ಇತ್ಯಾದಿಗಳ ಭಿನ್ನ ಭಿನ್ನ ಫೀ ದರಗಳನ್ನು ನಮೂದಿಸಿದ್ದಾನೆ. ದುಡ್ಡಿಲ್ಲದ ಜಾತಿಯವರಾದ ಕವಿಗಳಿಂದ ಫೀ ಪಡೆದೇ ಒಳಗೆ ಬಿಡುವ ನಿಯಮವಿದ್ದರೂ ಇಂದು ಮೊದಲದಿನವಾದ್ದರಿಂದ ಜಾಹೀರಾತು ಮಾಡಲೋಸುಗ ಚಿಕಿತ್ಸೆಯನ್ನು ಪುಕ್ಕಟೆಯಾಗಿ, ಧರ್ಮಾರ್ಥವಾಗಿ ಇಡಲಾಗಿದೆ.

ಒಬ್ಬೊಬ್ಬರಾಗಿ ಬಗೆಬಗೆಯ ಕವಿಗಳು ಚಿಕಿತ್ಸಾಲಯಕ್ಕೆ ಬರುತ್ತಾರೆ. ಮೊದಲು ಪರಮಪಂಡಿತರಾದ ಚಂಪೂಕವಿ ನೀಲಕಂಠಶಾಸ್ತ್ರಿಗಳು ಆಗಮಿಸುತ್ತಾರೆ. ವೃತ್ತ, ಕಂದಗಳಲ್ಲಿ ಪ್ರವೀಣರಾದ ಶಾಸ್ತ್ರಿಗಳು ಉಳಿದ ಪ್ರಕಾರಗಳಲ್ಲಿ ಇಂದು ಕನ್ನಡದಲ್ಲಿ ಕಾವ್ಯ ರಚಿಸುವವರನ್ನು ಶಪಿಸುತ್ತಾರೆ. ತಮ್ಮ ' ವತ್ಸನ ಮಾತೃಶೋಧ ' ಎಂಬ ಖಂಡಕಾವ್ಯವನ್ನು ಓದುತ್ತ ' ತಂತೋ ತಂತಮ ತಂತುನಾಭ ತರಲಂ ತನ್ ತಂತು ತಂತೋತ್ತಮಾ ' ಇತ್ಯಾದಿ ಶಾರ್ದೂಲವಿಕ್ರೀಡಿತದಿಂದ ಕೊರೆತವನ್ನು ಆರಂಭಿಸುತ್ತಾರೆ. ದಿನಕರನು ಅವರಿಗೆ ' ಪುನರ್ಜನ್ಮವು ಬರುವ ತನಕ ಕವಿಯಾಗುವ ಆಶೆಯನ್ನು ನೀವು ಬಿಟ್ಟುಬಿಡಿರಿ ' ಎಂದು ಸ್ಪಷ್ಟವಾಗಿ ಔಷಧ ಸೂಚಿಸಿ, ಕಳಿಸಿಬಿಡುತ್ತಾನೆ. ನಂತರ ಬಂದ ' ಅಪಹರಣ ' ಕರ್ತೃಗಳಾದ ಕೊಳ್ಳಿ

ಮಾಸ್ತರರು ಭಾಮಿನಿ ಷಟ್ಪದಿಯಲ್ಲಿ ಬರೆದ ' ಪಲಾಂಡು ಕನ್ಯಾಪಹರಣ ' ವೆಂಬ ಕಾವ್ಯವನ್ನು ಓದಲಾರಂಭಿಸುತ್ತಾರೆ. ಪೋಲಂಡ್ ದೇಶವನ್ನು ಅಪಹರಿಸಿದ ಹಿಟ್ಲರನ ವಸ್ತು ಇದರದು. ೧೯೩೯ ರಲ್ಲಿ ಆಗಿದ್ದ ಮಹಾಯುದ್ಧದ ವಿವರಗಳನ್ನು ತಮಗೆ ತಿಳಿತಿಳಿದಂತೆ ತುಂಬಿದ್ದಾರೆ. "ಕಾವ್ಯವಸ್ತುವಿಗೆಂದು ವರ್ತಮಾನಪತ್ರಗಳ ಸಂದಿಗೊಂದಿಗಳನ್ನು ಹುಡುಕಿ, ನಿಮಗೆ ಸಂಧಿವಾತವು ಹಿಡಿದಿದೆ. ಹೊಸ ವಾತಾವರಣ ಉಸಿರಾಡಲು ದೊರೆಯದೆ ಹೋಗಿ ನಿಮ್ಮ ಬುದ್ಧಿಗೆ ಕ್ಷಯರೋಗ ಹಿಡಿದಿದೆ......ಈ ರಾಜಯಕ್ಷ್ಮವನ್ನು ಕಳೆಯಬೇಕಾದರೆ ನೀವು ಆಂಗ್ಲಭಾಷೆಯನ್ನು ಕಲಿಯಬೇಕು. " ಎಂದು ದಿನಕರ ಅವರನ್ನು ಸಾಗಹಾಕುತ್ತಾನೆ. ಅನಂತರ ಪಾಯಪ್ಪ ಎಂಬ ಹಳ್ಳಿಯ ಕವಿ ಮತ್ತು ' ರಾಗಧ್ವನಿ ' ಪ್ರಚಾರಕನಾದ ನಗರಕವಿ ಏಕಾಂಬರರಾಯ ಕೂಡಿಯೇ ಬರುತ್ತಾರೆ. ಪಾಯಪ್ಪ ಹೇಳುವ ಲಾವಣಿ, ಬೀಸುವ ಕಲ್ಲು ಹಾಡು ಇತ್ಯಾದಿ ಎಲ್ಲ ಹಳ್ಳಿಯ ಪದಗಳ ಧಾಟಿ, ಲಯ, ಟ್ಯೂನ್ಸ್ ಮಾತ್ರ ಈಗಿನ ನಮ್ಮ ಕಾವ್ಯಕ್ಕೆ ಬೇಕು ಎಂಬುದು ಏಕಾಂಬರರಾಯರ ವಾದ. ದಿನಕರರಾಯ ಪಾಯಪ್ಪನಿಗೆ ಸಂಯಮದಿಂದ ಪದ ಕಟ್ಟಿ ಹಾಡಲು ಹೇಳುತ್ತಾನೆ. ಏಕಾಂಬರರಾಯನಿಗೆ ' ನಾದದ ನಾದ ಹತ್ತಿದವನಿಗೆ ಉನ್ಮಾದವಾಯಿತೆಂದೇ ತಿಳಿಯಬೇಕು. ಅರ್ಥವ್ಯಕ್ತಿ, ವ್ಯಂಗ್ಯ, ಶಬ್ದವಿಲಾಸ' ಇತ್ಯಾದಿ ಕೂಡ ಮುಖ್ಯ ಎಂದು ಹೇಳಿ, ಒಳ್ಳೆಯ ಕಾವ್ಯಾರ್ಥಗ್ರಂಥ ಓದಲು ಸೂಚಿಸಿ ಕಳಿಸುತ್ತಾನೆ. ಆಮೇಲೆ ಕನ್ನಡಕಾವ್ಯ ತನ್ನಿಂದಲೇ ಸುರುವಾಗಿದ್ದುದೆಂದು ಭಾವಿಸಿದ್ದ, ತಾನು ಶೇಕ್ಸಪಿಯರನ ಚಿಗಪ್ಪ, ಮಿಲ್ಟನ್‌ನ ಮುತ್ತಜ್ಜ, ನೂತನ ಕಾವ್ಯದ ಪಿತಾಮಹ ಎಂದು ತಿಳಿದಿದ್ದ ಅಭಿನವ ಚಾಸರ್‌ನು ಬರುತ್ತಾನೆ. ಅವನು ಕಾವ್ಯದ ಎಲ್ಲ ಪ್ರಕಾರಗಳಲ್ಲಿ ತಾನೇ ಮೊದಲ ಹೊಸ ಕವಿತೆಗಳನ್ನು ಬರೆದವನೆಂದು, ಕನ್ನಡ ನಾಡಿನ ವರ್ಡ್ಸ್‌ವರ್ತನು ತಾನೆಂದು ಹೇಳುತ್ತ, ಹಲವು ಪದ್ಯಗಳ ಉದಾಹರಣೆ ನೀಡುತ್ತಾನೆ. ' ಆಂಗ್ಲ ಕವಿತೆಗಳನ್ನು ಕೇಳಿ ಕೇಳಿ ನಿಮಗೆ ಪಾಂಡುರೋಗವಾಗಿದೆ. ನೀವು ತಿಳಿಗನ್ನಡದ ನೆಲ್ಲೀಕಾಯಿ ಚೂರ್ಣವನ್ನು ತೆಗೆದುಕೊಳ್ಳಬೇಕು ' ಎಂದು ಉಪದೇಶಿಸಿ ಕಳಿಸಲಾಗುತ್ತದೆ. ಅನಂತರ ಅನುಭವಿಯಾದ ಕಿಶೋರಕವಿ, ಪ್ರಚಾರಕಾವ್ಯ ನಿಪುಣನಾದ ಶರಣೇಂದ್ರಕವಿ ಕೂಡಿಯೇ ಬರುತ್ತಾರೆ. ಯಾವಾಗಲೂ ಕಾವ್ಯ ಸಮಾಧಿಯಲ್ಲಿ ಬಡಬಡಿಸುವ ಕಿಶೋರಕವಿಯನ್ನು ದಿನಕರರಾಯ ತಾನೇ 'ನೂತನತರ ಬ್ರಹ್ಮರೂಪ' ಯಾದ ಇಂಗ್ಲೀಷ ಕಾವ್ಯ ಹೇಳಿ ಹೆದರಿಸಿ, ಕಿಶೋರಕವಿಯೊಡನೆ ತತ್ವ ತತ್ವಗಳ ಬಡಿದಾಟ ಮಾಡುವ ಶರಣೇಂದ್ರನಿಗೂ ಅವನಿಗೂ 'ಆದರ್ಶಾಂಧತೆಯ ಪರಿ ಬಿಚ್ಚುವಂಥ ವಾಸ್ತವಿಕಾಂಜನ' ಹಚ್ಚಿಸಿಕೊಳ್ಳಲು ಸೂಚಿಸಿ ಕಳಿಸುತ್ತಾನೆ.

ಅಷ್ಟೊತ್ತಿಗೆ ಮಧ್ಯಾಹ್ನವಾಗುತ್ತದೆ. ರೇಡಿಯೋದಲ್ಲಿ ನಾಟಕಕಾರ

ಭಟ್ಟಾರಕನು ತನ್ನ 'ಹಳದಿನೃಪವಿಜಯ' ಓದುವುದನ್ನು ದಿನಕರರಾಯ ಮತ್ತು ಭೀಮಣ್ಣ ಕೇಳುತ್ತಾರೆ. ಪ್ರಪಂಚದಲ್ಲಿ ಎಲ್ಲವನ್ನೂ ಹಳದಿಕಣ್ಣಿನಿಂದಲೇ ನೋಡುವ ಈ ನಾಟಕಕಾರನ ಪ್ರಭಾವದಿಂದಾಗಿ ಸ್ವಲ್ಪ ಹೊತ್ತು ದಿನಕರರಾಯನ ಮಾತುಗಳೂ ಹಳದಿಮಯವಾಗುತ್ತವೆ. ಅಷ್ಟರಲ್ಲಿ ರೇಡಿಯೋದಲ್ಲಿ ಊಹಾಪೋಹರಾಯ ಎಂಬ ವೃತ್ತಿಶಾಸ್ತ್ರಜ್ಞನ ಭಾಷಣ ಸುರುವಾಗುತ್ತದೆ. ಇಡೀ ವಿಶ್ವಕ್ಕೆ ಮೂಲ ಕರ್ನಾಟಕ, ಎಲ್ಲ ಭಾಷೆಗಳ ಹುಟ್ಟು ಕನ್ನಡದಿಂದ, ಸಾವಿರಾರು ವರ್ಷಗಳ ಹಿಂದೆಯೇ ಕನ್ನಡಿಗರು ಚಂದ್ರಲೋಕ ಮಂಗಳ ಲೋಕಗಳಲ್ಲಿ ವಾಸಿಸಿದ್ದಾರೆ ಎಂದೆಲ್ಲ ಊಹೆಗಳ ಬಂಡಲು ಬಂಡಲು ಬಿಚುತ್ತ ಹೋಗುವ ಊಹಾಪೋಹ ರಾಯರ ಭಾಷಣದ ಪ್ರಭಾವದಿಂದ ಭೀಮಣ್ಣನೂ 'ಜೈ ಕನ್ನಡ, ಜೈ ಕರ್ನಾಟಕ' ಎಂದು ಘೋಷಿಸತೊಡಗುತ್ತಾನೆ.

ಅಷ್ಟರಲ್ಲಿ ರಣಹಲಗೆ ಬಾರಿಸುತ್ತ ಕುಂಡಲಿನಿಕವಿ ಒಂದು ಮೊಹರಮ್ ಹುಲಿ, ಝೇಂಡಾ ಹಿಡಿದಿರುವ ಶಿಷ್ಯ, ಗೆಜ್ಜೆ ಬಾರಿಸುವ ಶಿಷ್ಯರೊಂದಿಗೆ ಬರುತ್ತಾನೆ. ಹುಲಿಯ ಕುಣಿತ ತೋರಿಸುತ್ತ ಬಂದು ದಿನಕರರಾಯನ ತಲೆಯನ್ನು ಕೆಡಿಸುತ್ತಾನೆ. ಮೊಹರಮ್ಮಿನ ಹುಲಿಯಂತೆ ಕುಂಡಿಲಿನಿಕವಿಯನ್ನೇ ಕಟಿಯನ್ನಾಗಿ ಕುಣಿಸಲು ಹೇಳಿ, ಅವರನ್ನೆಲ್ಲ ಹೊರಗೆ ಹಾಕಿಸುವಷ್ಟೊತ್ತಿಗೆ ದಿನಕರರಾಯನಿಗೆ ಸಾಕು ಬೇಕಾಗಿ ಹೋಗಿದೆ. ವಕೀಲನಾಗಿ ಸುಳ್ಳು ಹೇಳಿ, ದುಡ್ಡು ಗಳಿಸಬಹುದು, ಡಾಕ್ಟರನಾಗಿ ಇಂಜೆಕ್ಷನ್ ಕೊಟ್ಟು ಹಣ ಸಂಪಾದಿಸಬಹುದು. ಆದರೆ ವಿಮರ್ಶಕನಿಗೆ ತಲೆ, ನಾಲಿಗೆ, ಮೆದುಳು, ಕೈ ಎಲ್ಲವೂ ಸರಿಯಿರಬೇಕಾಗುತ್ತದೆ. ಇದ್ದರೂ ಅವನನ್ನು ಕೇಳುವವರಿಲ್ಲ. ಇನ್ನು ಈ ಸಾಹಿತ್ಯ ಉಸಾಬರಿಯನ್ನು ಬಿಟ್ಟು ಮಾನಸಶಾಸ್ತ್ರವನ್ನು ಹಿಡಿಯುತ್ತೇನೆ ಎಂದು ಹೇಳುತ್ತಾರೆ. ಆದರೆ ಭೀಮಣ್ಣನಿಗೆ ಇವನ ಬೆನ್ನು ಹತ್ತಿದರೆ ಹೊಟ್ಟೆ ತುಂಬುವುದು ಕಷ್ಟ ಎಂದು ಖಾತ್ರಿಯಾಗಿದ್ದರಿಂದ ಇಲ್ಲಿಂದ ಓಟ ಕೀಳುತ್ತಾನೆ. ದಿನಕರರಾಯನು ಅವನನ್ನು ಹಿಂಬಾಲಿಸುವುದರೊಂದಿಗೆ ದೃಶ್ಯ ಮುಗಿಯುತ್ತದೆ.

ಪಾತ್ರಗಳ ಆಗಮನದಲ್ಲಿ ಕೃತ್ರಿಮತೆಯಿದೆ. ಅವುಗಳ ಪದ್ಯಗಳಾಗಲಿ, ಮಾತುಗಳಾಗಲಿ ಆ ಕ್ಷಣಕ್ಕೆ ನಗೆ ತರಿಸಿರಬಹುದು. ಆದರೆ ಈಗ ತುಂಬ ಅಸಹಜವೆನಿಸುವ ಇಲ್ಲಿಯ ಸಂವಾದಗಳಿಂದಾಗಿ ಹಾಗೂ ಕೆಲವು ಕವಿಗಳನ್ನು ಮಾತ್ರ ಗೇಲಿ ಮಾಡಲು ಬೇಕಂತಲೇ ಬರೆದ ನಾಟಕ ಎಂಬ ಧ್ವನಿ ಮೂಡುವುದರಿಂದ ನಾಟಕ ಪರಿಣಾಮ ಬೀರುವುದಿಲ್ಲ.

೬

'ತುಳಸಿ'ಯ ರಾಮಣ್ಣನಲ್ಲಿ, 'ಜನನಾಯಕ'ದ ಕಾರಭಾರಿ ರಾಮಣ್ಣ,

ಭೀಮಣ್ಣನಾಯಕ, ಸಿದರಾಮಶೆಟ್ಟಿ, ಕರಿಯ, ಗಂಗಜ್ಜ, ಲಕ್ಷ್ಮಮ್ಮ, ಮುಂತಾದವರಲ್ಲಿ 'ಯುಗಾಂತರ'ದ ಕೋಸಲೇಂದ್ರನಲ್ಲಿ ಹಾಗೂ 'ವಿಮರ್ಶಕ ವೈದ್ಯ'ದ ಡಾಕ್ಟರ ದಿನಕರರಾಯನಲ್ಲಿ ಗೋಕಾಕರ ವಿಚಾರಗಳನ್ನು, ಸಮನ್ವಯ ಸಾಧನೆಯ ತತ್ವಗಳನ್ನು ಗುರುತಿಸಬಹುದು. ಒಳ್ಳೆಯ ನಾಟಕಕಾರರಾಗಿ ಗೋಕಾಕರು ಖ್ಯಾತಿಯನ್ನು ಪಡೆಯದಿದ್ದರೂ ಕನ್ನಡದಲ್ಲಿ ನಾಟಕಗಳೇ ಇಲ್ಲದ ಕಾಲದಲ್ಲಿ ನಾಟಕಗಳನ್ನು ರಚಿಸಿ, ಆ ಕ್ಷೇತ್ರದ ಕೊರತೆಯನ್ನು ನೀಗಿಸುವಲ್ಲಿ ಶ್ರಮಿಸಿದ್ದು ಸ್ತುತ್ಯ ಪ್ರಯತ್ನ.

❑ ❑

ಗೋಕಾಕ : ಪ್ರಬಂಧಸಾಹಿತ್ಯ

–ಎಚ್. ವಿ. ನಾಗೇಶ

೧

ಡಾ. ವಿ. ಕೃ. ಗೋಕಾಕರು ಪ್ರಥಮತಃ ಕವಿ ; ನಂತರ ವಿಮರ್ಶಕ, ನಾಟಕಕಾರ, ಪ್ರಬಂಧಕಾರ, ವೈಚಾರಿಕ, ಶಿಕ್ಷಣತಜ್ಞ ಮತ್ತೇನೆಲ್ಲ ! ಅವರು ಕಾವ್ಯಶಿಖರವನ್ನು ಏರಿದಷ್ಟು ಸರಾಗವಾಗಿ ಪ್ರಬಂಧದ ಏರನ್ನು ಏರಿಲ್ಲ. ಆದರೆ ಕನ್ನಡ ಪ್ರಬಂಧದ ಇತಿಹಾಸವನ್ನು ಬರೆಯುವವರು ಅವರನ್ನು ಹೆಸರಿಸಿಯೇ ಮುಂದೆ ಹೋಗಬೇಕು ಎಂಬ ಮಾತು ಕೂಡ ಸುಳ್ಳಲ್ಲ. ಇದಕ್ಕೆ ಹಲವಾರು ಕಾರಣಗಳಿವೆ. ಕನ್ನಡ ಪ್ರಬಂಧಸಾಹಿತ್ಯ ರಚನೆಯಲ್ಲಿ ಭಾಷಾಂತರದ ಮೊದಲ ಘಟ್ಟ ಮುಗಿದು, ೧೯೩೧ ರ ನಂತರ ಪ್ರಾರಂಭವಾದ ಸ್ವತಂತ್ರ ಕೃತಿರಚನೆಯ ಎರಡನೆಯ ಘಟ್ಟದಲ್ಲಿ ಗೋಕಾಕರ ಹೆಸರನ್ನೂ ಹೇಳಬೇಕು. ೧೯೩೧ ರಲ್ಲಿ ಎಂ. ಜಿ. ವೆಂಕಟೇಶಯ್ಯನವರ 'ಪುಲ್ಲಯ್ಯನ ಪ್ರಬಂಧಗಳು' ಎಂಬ ಅನುಪಮ ಸಂಕಲನ ಪ್ರಕಟವಾಯಿತು. ಅದೇ ವರ್ಷ ಉತ್ತರ ಕರ್ನಾಟಕದ ಸುಪ್ರಸಿದ್ಧ ಲೇಖಕರಾದ ಬೇಂದ್ರೆ, ಗೋಕಾಕ, ಮುಗಳಿ, ಹಲಸಂಗಿ ಚೆನ್ನಮಲ್ಲಪ್ಪ ಮುಂತಾದವರ 'ಹರಟೆಗಳು' (ಹನ್ನೆರಡು ಹಾಸಪರಿಹಾಸಗಳು) ಎಂಬ ಸಂಕಲನ ಪ್ರಕಟವಾಯಿತು. ಗೋಕಾಕರ ಮಟ್ಟಿಗೆ ಹೇಳುವುದಾದರೆ ಈ ಮೊದಲ ಹೆಜ್ಜೆಯ ನಂತರ ಮುಂದಿನ ಏಳೆಂಟು ವರ್ಷ ಅವರು ಪ್ರಬಂಧಕೃಷಿ ನಡೆಸಿದಂತೆ ಕಾಣುವುದಿಲ್ಲ. ಆದರೆ ಪ್ರಯೋಗಪ್ರಿಯರಾದ ಅವರು ಆ ದಶಕದ ಕೊನೆಗೆ ಪ್ರಬಂಧ ಸಾಹಿತ್ಯದಲ್ಲಿಯೂ ವಿನೂತನ ಪ್ರಯೋಗ ಗಳನ್ನು ನಡೆಸಲು ನಿರ್ಧರಿಸಿ ಯಶಸ್ವಿಯೂ ಆದರು. 'ಚೆಲುವಿನ ನಿಲುವು' ಮತ್ತು

'ಜೀವನ ಪಾಠಗಳು' ಇವೆರಡು ಅವರ ವೈಶಿಷ್ಟ್ಯಪೂರ್ಣವಾದ ಸಂಕಲನಗಳು. ಅವು ಮೊದಲು 'ಜೀವನ' ಪತ್ರಿಕೆಯಲ್ಲಿ ಬೆಳಕುಕಂಡು, ಮುಂದೆ ಸಂಕಲನಗೊಂಡವು. ಸಂಕಲನಗಳು ತಡವಾಗಿ ಪ್ರಕಟವಾದರೂ ಅಲ್ಲಿಯ ಪ್ರಬಂಧಗಳು ರೂಪು ಗೊಂಡದ್ದು ಈ ಕಾಲಾವಧಿಯಲ್ಲಿಯೇ ಎನ್ನಬಹುದು.

ಇನ್ನೊಂದು ಕಾರಣಕ್ಕಾಗಿ ಗೋಕಾಕರನ್ನು ಹೆಸರಿಸಿ ಮುಂದೆ ಹೋಗಬೇಕು. ೧೯೩೪ ರಲ್ಲಿ ಪ್ರಕಟವಾದ 'ಸುಳಿವು-ಹೊಳವು' ಎಂಬ ಮೊಟ್ಟಮೊದಲ ಪ್ರಾತಿನಿಧಿಕ ಪ್ರಬಂಧ ಸಂಗ್ರಹದಲ್ಲಿ ಗೋಕಾಕರ 'ಕೋಗಿಲ' ಎಂಬ ಪ್ರಬಂಧವಿದೆ ('ಚೆಲುವಿನ ನಿಲುವು' ಸಂಕಲನದಲ್ಲಿ ಇದು 'ಚೆಲುವಿನ ಪರಂಪರೆ' ಎಂದು ಹೆಸರುಪಡೆದು ಸೇರ್ಪಡೆಯಾಗಿದೆ). ಅದು ಗೋಕಾಕರು ಮುಂದೆ ಪ್ರಚಾರಕ್ಕೆ ತಂದ ಒಂದು ಪ್ರಬಂಧ ಪ್ರಕಾರದ ಮುನ್ಸೂಚನೆ ಕೊಡುತ್ತದೆ. ಆದರೆ ಅದಕ್ಕಿಂತ ಮುಖ್ಯವಾಗಿ, ಅವರು ಆ ಸಂಗ್ರಹಕ್ಕೆ ಬರೆದ ಹದಿನೈದು ಪುಟಗಳ ಸುದೀರ್ಘ ಮುನ್ನುಡಿಗೆ ಐತಿಹಾಸಿಕ ಮಹತ್ವವುಂಟು. ಅದು ಆ ಸಂಕಲನದ (ಈಗ ಸುಪ್ರಸಿದ್ಧರಾಗಿರುವ) ಅನೇಕ ಪ್ರಬಂಧಕಾರರನ್ನು ಪರಿಚಯಿಸುವುದಲ್ಲದೆ, ಕನ್ನಡ ಸಾಹಿತ್ಯಕ್ಕೆ ಹೊಸ ಪ್ರಕಾರವೊಂದು ಪ್ರವೇಶಮಾಡಿದ ಉದ್ಘೋಷಣೆಯಂತಿದೆ ; ಕನ್ನಡ ಪ್ರಬಂಧದ ರಂಗಪ್ರವೇಶದ ಸೂಚನೆಯೂ ಹೌದು (ನೋಡಿ : ಎಚ್. ವಿ. ನಾಗೇಶ- ಪ್ರಬಂಧ ಪ್ರಪಂಚ, ೧೯೯೦, ಭಾಗ - ೩ ರ ಓಲಿಕೆ)

ಗೋಕಾಕರು ಬರೆದ ಈ ಮುನ್ನುಡಿಯ ಮೊದಲ ಎಸಳಿನಲ್ಲಿ ಭಾವಗೀತೆಗೂ ಲಘುಪ್ರಬಂಧಕ್ಕೂ ಇರುವ ಸಾಮ್ಯ-ಭೇದಗಳನ್ನು ಸೂಚಿಸಿ, ಎರಡನೆಯ ಎಸಳಿನಲ್ಲಿ ಪ್ರಬಂಧವು ಗದ್ಯಕಾವ್ಯದ ಪ್ರಕಾರವೆಂದೂ, ಅದು ಚಿಕ್ಕದಾದ ಚೊಕ್ಕಾದ ಬರವಣಿಗೆಯೆಂದೂ ಹೇಳಿ, ಪ್ರಬಂಧವನ್ನು ನಿಬಂಧ ಮತ್ತು ಹರಟೆ ಎಂಬ ಎರಡು ವಿಭಾಗಗಳಾಗಿ ವಿಂಗಡಿಸಲಾಗಿದೆ. ಅವರು ಹೇಳಿರುವಂತೆ ನಿಬಂಧವೆಂದರೆ ಮಾಹಿತಿ, ವಿಮರ್ಶೆ ಅಥವಾ ವಿಚಾರ ಪ್ರಚಾರಕ್ಕಾಗಿ ಬರೆದ ಗದ್ಯಲೇಖ. ಇದು ಸಣ್ಣದಿದ್ದರೂ ಸರಿ, ಇಡೀ ಒಂದು ಪುಸ್ತಕದಷ್ಟು ದೊಡ್ಡದಿದ್ದರೂ ಸರಿ ! ಇದರಲ್ಲಿ ರಸಲೀಲೆಯಿಲ್ಲ. ನಿಬಂಧಕಾರನು 'ನೂತನಬ್ರಹ್ಮ'ನಲ್ಲ ; ಆತನು ಪ್ರಪಂಚದ ಭಾಷ್ಯಕಾರ, ಮಲ್ಲಿನಾಥ ಇಲ್ಲವೆ ಸಂಗ್ರಾಹಕ. ಆದರೆ ಹರಟೆಮಲ್ಲನ ರೀತಿ ಬೇರೆ. ಅವನ ವಿಷಯವು ಯಾವುದೇ ಆಗಿರಲಿ, ಅದನ್ನು ಕುರಿತು ತನ್ನಲ್ಲಿ ಜನಿಸಿದ ಭಾವನಾಲಹರಿ, ವಿಚಾರಲಹರಿಗಳನ್ನಷ್ಟು ಅವನು ಬಿಚ್ಚಿಡುತ್ತಾನೆ. ವ್ಯಕ್ತಿತ್ವ ನಿರೂಪಣೆಯೇ ಅವನ ಮುಖ್ಯ ಕಾರ್ಯವಾಗಿದೆ. ಆದಕಾರಣ ಚಿಕ್ಕದಾಗಿದ್ದರೂ ಗೀತೆಯಲ್ಲಿಯಂತೆ ಹರಟೆಯಲ್ಲಿ ಪರಿಪೂರ್ಣತೆಯು ಒಡಮೂಡುತ್ತದೆ - ಆಲದೆಲೆಯ ಮೇಲೆ ರಂಗನು ಮಲಗಿದಂತೆ. 'ನಿಬಂಧಕಾರನು ಶೈಲಿಶಿಲ್ಪಿ ; ಹರಟೆಮಲ್ಲನು ಆತ್ಮವಿನೋದಿ.' 'ಹರಟೆಯು ಬುಗ್ಗೆಯಂತೆ ಹೃದಯದಿಂದ ಪುಟಿಯುವ ಬದುಕು ; ನಿಬಂಧವು

ಒಕ್ಕಲುತನಕ್ಕೆಂದು ಕಟ್ಟಿ ಹರಿಯಿಸಿದ ಕಾಲುವೆ.' - ಹೀಗೆ ಗೋಕಾಕರು ಪ್ರಬಂಧದ ಬಗೆಗೆ ತಮ್ಮ ಭಾಷ್ಯ ಹೇಳುವುದರ ಜೊತೆಗೆ ಆಂಗ್ಲ ವಿಮರ್ಶಕರ ಕೆಲವು ಮಾತುಗಳನ್ನು ಕೂಡ ಸಂಗ್ರಹಿಸಿ ಹೇಳಿದ್ದಾರೆ.

ನಿಬಂಧ ಮತ್ತು ಹರಟೆಗಳ ನಡುವಿನ ಭೇದಗಳು ಹಲವಿದ್ದರೂ ಅವು ಅನೇಕ ಸಲ ಪರಸ್ಪರ ಬೆರೆಯುವುದುಂಟು ಎಂಬ ಸಂಗತಿ ಗೋಕಾಕರ ಗಮನಕ್ಕೆ ಬಂದಿದೆ. ಹೀಗೆ ಬೆರೆಯುವುದರಿಂದ ಉದ್ಭವಿಸುವ ಸಣ್ಣಪುಟ್ಟ ಭೇದ ಅಥವಾ ಪ್ರಕಾರಗಳನ್ನು ಅವರು ಸೂಚಿಸಿದ್ದಾರೆ. ಅವುಗಳಲ್ಲಿ ೧. ಚಿಂತನಪರ ಪ್ರಬಂಧ, ೨. ಚರಿತ್ರ ಪ್ರಬಂಧ, ೩. ಐತಿಹಾಸಿಕ ಪ್ರಬಂಧ, ೪. ವೈಜ್ಞಾನಿಕ ಪ್ರಬಂಧ, ೫. ವಿಮರ್ಶಾತ್ಮಕ ಪ್ರಬಂಧ, ೬. ಸ್ವಭಾವವಿಭಜನ ಪ್ರಬಂಧ, ೭. ಲಘುಕಥಾ ಪ್ರಬಂಧ, ೮. ವರ್ಣನಪರ ಪ್ರಬಂಧ, ೯. ಪತ್ರಪ್ರಬಂಧ, ೧೦. ಹರಟೆ, ೧೧. ವಿನೋದ, ವಿಡಂಬನೆ - ಇವುಗಳನ್ನು ಹೆಸರಿಸಿ ಕೊನೆಗೆ ಅವು ವಿವಿಧ ರೀತಿಗಳಲ್ಲಿ ಕೂಡಿಕೊಳ್ಳಬಹುದು ಎಂದಿದ್ದಾರೆ (ನೋಡಿ : ಸುಳವು-ಹೊಳವು, ಮೂರನೇ ಆವೃತ್ತಿ, ಪುಟ i ರಿಂದ xiv). ಗೋಕಾಕರು ಹೇಳಿದ ವರ್ಗೀಕರಣ ಮತ್ತು ಆಗ ಹೇಳಿದ ಹೆಸರುಗಳು ಇಂದು ಇದ್ದಕ್ಕಿದ್ದಂತೆ ಸ್ವೀಕೃತವಾಗಿಲ್ಲ. ಹೊಸ ಪ್ರಕಾರಗಳು ಪ್ರಚಾರಕ್ಕೆ ಬಂದಿವೆ. ಹಳೆಯ ಪ್ರಕಾರಗಳಿಗೆ ಹೊಸ ಹೆಸರುಗಳು ಬಂದಿವೆ. ಕೆಲವು ಪ್ರಕಾರಗಳಂತೂ ಬಳಕೆಗೆ ಬಂದೇ ಇಲ್ಲ. ಸ್ವತಃ ಗೋಕಾಕರ ಪರಿಶ್ರಮವಿರುವ 'ಪತ್ರಪ್ರಬಂಧ' ಅಷ್ಟಾಗಿ ಬೆಳೆದಿಲ್ಲ. ಸೌಂದರ್ಯಶಾಸ್ತ್ರ ಅಥವಾ ಜೀವನ ಮಾರ್ಗದರ್ಶನದಂಥ ಗಂಭೀರ ವಿಷಯ ಗಳನ್ನು ಕುರಿತ ಪ್ರಬಂಧ ರಚನೆ ವಿರಳವಾಗಿ ದೊರೆಯುವ ಸರಕು ಎಂದರೆ ತಪ್ಪಿಲ್ಲ. ಗೋಕಾಕರು ಈ ವಿಷಯದಲ್ಲಿ ಪುರೋಗಾಮಿ ಪ್ರಯೋಗಗಳನ್ನು ಮಾಡಿದ್ದರು. ಪ್ರಬಂಧವನ್ನು ತಮ್ಮ ಗದ್ಯಸಾಹಿತ್ಯದ ವಾಹಕವನ್ನಾಗಿ ಮಾಡಲು ಗಂಭೀರ ಪ್ರಯತ್ನ ಮಾಡಿದ್ದರು. ಆದರೆ ಮುಂದೆ ಮತ್ತೆ ಕಾವ್ಯಕ್ಕೆ ತಿರುಗಿ, ನಂತರ ನಾಟಕ ಮತ್ತು ಕಾದಂಬರಿ ಪ್ರಕಾರಗಳಲ್ಲಿ ತೊಡಗಿಕೊಂಡು, ಅನಂತರ ವಿಮರ್ಶೆ, ಚಂಪೂ ಮತ್ತು ಮಹಾಕಾವ್ಯದಲ್ಲಿ ವಿಹರಿಸಿದರೇ ಹೊರತು ಪ್ರಬಂಧ ಕ್ಷೇತ್ರದ ಕಡೆಗೆ ಮತ್ತೆ ಗಮನ ಕೊಡಲಿಲ್ಲ. ಅದೇನೇ ಇದ್ದರೂ ಅವರ ಎರಡು ಸಂಕಲನಗಳು ಪ್ರಯೋಗ ಮತ್ತು ಪರಿಣತಿ ಇವೆರಡೂ ದೃಷ್ಟಿಗಳಿಂದ ಗಮನಾರ್ಹವಾಗಿವೆ.

೨

ಪ್ರಕಟಣೆಯ ಕಾಲಕ್ರಮದಲ್ಲಿ 'ಚೆಲುವಿನ ನಿಲುವು' ಮೊದಲಿನದು. ಮೊದಲ ಆವೃತ್ತಿ ೧೯೪೪ ರಲ್ಲಿ ಹೊರಬಂತು. ಆನಂದವನ ಪ್ರಕಾಶನದಲ್ಲಿ ಕೆಲವೇ ಪ್ರತಿಗಳನ್ನು ಪ್ರಕಟಿಸಿದ್ದರಿಂದ ಪ್ರತಿಭಾ ಗ್ರಂಥಮಾಲೆಯಲ್ಲಿ ೧೯೬೧ ರಲ್ಲಿ ಪುನರ್‌ಮುದ್ರಣ ಪಡೆಯಿತು. ಮುನ್ನುಡಿಯಲ್ಲಿ ಲೇಖಕರೇ ಹೇಳುವಂತೆ ಇಲ್ಲಿಯ ಪ್ರಬಂಧ ಗಳನ್ನು ಬರೆದುದು ೧೯೪೦ ಅಥವಾ ಅದಕ್ಕೂ ಮೊದಲು. ಈ ಸಂಗ್ರಹದ

ಲೇಖನಗಳು ೧೯೪೦ ರಿಂದ ಮುಂದೆ 'ಜೀವನ' ಪತ್ರಿಕೆಯಲ್ಲಿ ಅಚ್ಚಾಗಿದ್ದವು. 'ಚೆಲುವಿನ ಪರಂಪರೆ' ಪ್ರಬಂಧ 'ಸುಳಿವು-ಹೊಳವು' ಸಂಗ್ರಹದಲ್ಲಿ ೧೯೫೪ ರಲ್ಲಿ ಪ್ರಕಟವಾಗಿತ್ತು. ತಮ್ಮ ಸಂಗ್ರಹವನ್ನು ಲೇಖಕರು 'ನೆನಹು-ಕತೆಗಳ ರಸನಿಮಿಷ ಮಾಲೆಯೊಂದು' ಎಂದು ಕರೆದುಕೊಂಡಿದ್ದಾರೆ. ಸಂಗ್ರಹದ ಉದ್ದೇಶದ ಬಗ್ಗೆ ಲೇಖಕರು ಹೀಗೆ ಹೇಳುತ್ತಾರೆ : 'ಸೌಂದರ್ಯದ ಬಗ್ಗೆ ಕೆಲವೊಂದು ಮೂಲ ತತ್ವಗಳನ್ನು ಇಲ್ಲಿ ಸೋದಾಹರಣವಾಗಿ ವಿಶದಗೊಳಿಸಲು ಹವಣಿಸಿದೆ. ಈ ತತ್ವಗಳ ಪವಣಿಕೆಯು ಆಗಿದ್ದು ಒಂದು ದೃಷ್ಟಿಯಲ್ಲಿ-ಅರ್ಥಾತ್ ನನ್ನ ದೃಷ್ಟಿಯಲ್ಲಿ. ಆದರೆ ಈ ದೃಷ್ಟಿಗೆ ಒಂದು ಪರಂಪರೆಯಿದೆ ಎಂಬುದನ್ನು ಸಹೃದಯರು ಇಲ್ಲಿ ಸಹಜವಾಗಿ ನೆನೆಯದೆ ಇರರು. ವಿವಿಧ ದೃಷ್ಟಿಗಳಿಗೂ ಆಯಾ ದೃಷ್ಟಿಯ ಪರಂಪರೆ ಇರುತ್ತದೆ' (ನೋಡಿ : ಚೆಲುವಿನ ನಿಲುವು, ೧೯೬೧, ಪು. ೪). ಸೌಂದರ್ಯಶಾಸ್ತ್ರದಂಥ ಗಂಭೀರ ಗಡಚು ವಸ್ತುವನ್ನು 'ಸೌಂದರ್ಯಶಾಸ್ತ್ರದ ಗೊಡವೆಗೆ ಹೋಗುವ ಮನಸ್ಸು ಇಲ್ಲದ' ಸಾಮಾನ್ಯ ಓದುಗರಿಗೆ 'ಕಥಾತ್ಮಕ ನಿಬಂಧಮಾಲೆ'ಯಾಗುವಂತ ಹಣೆಯಲು ಪ್ರಯತ್ನಿಸಿದ್ದಾರೆ. ಕೆಲವೊಂದು ಮೂಲತತ್ವಗಳನ್ನು ಸೋದಾಹರಣವಾಗಿ ವಿವರಿಸಿದ್ದಾರೆ. ಇಲ್ಲಿಯ ಹದಿಮೂರು ಪ್ರಬಂಧಗಳು ಸೌಂದರ್ಯದ ಹದಿಮೂರು ಪೈಲುಗಳನ್ನು ತೋರಿಸುವ ಪ್ರಯತ್ನ ಮಾಡಿವೆ.

'ಜೀವನದಲ್ಲಿಯ ಆನಂದ' ಎಂಬ ಮೊದಲನೆಯ ಪ್ರಬಂಧ ಮತ್ತು ಕೊನೆಯ (ಹಾಗೂ ಹದಿಮೂರನೆಯ) ಪ್ರಬಂಧವಾದ 'ದೈವ' ಇವುಗಳು ನೇರವಾಗಿ ಸೌಂದರ್ಯಶಾಸ್ತ್ರದ ತತ್ವಗಳನ್ನು ನಿರೂಪಿಸುವದಿಲ್ಲ. ಅವುಗಳನ್ನು ಜೀವನ ಸೌಂದರ್ಯವನ್ನೂ ದೈವಿಕ ಸಂದೇಶವನ್ನೂ ಕಾಣುವ ಪ್ರಯತ್ನಗಳೆಂದು ಹೇಳುವುದೇ ಹೆಚ್ಚು ಉಚಿತ. ಮೊದಲ ಪ್ರಬಂಧದಲ್ಲಿ ಲೇಖಕರು ಪ್ರಾರಂಭದಲ್ಲಿ ಪ್ರೀತಿ, ಪ್ರಕೃತಿ, ಅಂತರಾತ್ಮ, ಸಾಹಿತ್ಯ, ಗೆಳೆತನಗಳ ಬಗ್ಗೆ ವಿಚಾರಗಳ ಲಹರಿಯನ್ನು ಹರಿಸುತ್ತ, ನಂತರ ಆಕ್ಸಫರ್ಡಿಗೆ ಬಂದ ಹೊಸತರಲ್ಲಿ ಆದ ಒಂದು ಅನುಭವವನ್ನು ವಿವರಿಸುತ್ತಾರೆ. ಆ ಕಾಲದಲ್ಲಿ ಅವರಿಗೆ ಹದ್ದುಪಾರಾದವರ ಬಾಳಿನಂಥ ತೀವ್ರತರವಾದ ಏಕಾಂಗಿತನದ ಭಾವನೆ ಉಂಟಾಗಿತ್ತು. ಬೆನ್ನೆಲುಬು ಮುರಿಯುವ ಥಂಡಿ, ಭಾರತೀಯರೆಲ್ಲ ಗುಲಾಮರೆಂಬ ಮೂಗುಮುರಿಯುವ ಜನ, ಒಬ್ಬನೇ ಕೋಣೆಯಲ್ಲಿ ಕೈದಿಯಂತೆ ಕುಳಿತು ತಿನ್ನುವ ವಿಚಿತ್ರ ಆಹಾರ-ಇವುಗಳನ್ನೆಲ್ಲ ನೆನೆಯುತ್ತ, ಈ ನಗರಕ್ಕೇಕೆ ಬಂದೆ ಎಂದು ತನ್ನನ್ನು ತಾನೇ ಶಪಿಸಿಕೊಳ್ಳುತ್ತಿದ್ದರು. ಅಂಥ ಒಂದು ದಿನ, ಓದಿಗಾಗಿ ಹೊಸತಾಗಿ ಅಲ್ಲಿಗೆ ಬಂದ ಪಂಜಾಬಿ ತರುಣನೊಬ್ಬನ ಭೇಟಿಯಾಯಿತು. ಇನ್ನೊಬ್ಬ ಭಾರತೀಯ ಎಂಬ ಸಹಜ ಅನುಕಂಪದಿಂದ ಅವನನ್ನು ಮಾತನಾಡಿಸಿದಾಗ ಆ ಪಂಜಾಬಿ ತರುಣನ ದುಃಖ ಒತ್ತರಿಸಿ ಬಂದು, ಆತ ತನ್ನ ಏಕಾಂಗಿತನದ ಗೋಳು ತೋಡಿಕೊಳ್ಳುತ್ತಾನೆ. ಅವನನ್ನು ಹೇಗೋ ಹೇಗ

ಸಂತವಿಸಿ ತಮ್ಮ ಕೋಣೆಗೆ ಬರುವಷ್ಟರಲ್ಲಿ, ಅವರ ಸ್ವಂತದ ದುಃಖ ಅರ್ಧಕ್ಕೆ ಅರ್ಧ ಕಡಿಮೆಯಾಗಿತ್ತು. ಈ ಘಟನೆ ತಮಗೊಂದು ಸಂದೇಶಕೊಟ್ಟಿದೆಯೆಂದು ಗೋಕಾಕರು ತಿಳಿಯುತ್ತಾರೆ. ಇದೊಂದು ಆಕಸ್ಮಿಕ ಘಟನೆಯಲ್ಲ, ತಮ್ಮ ಬಾಳಿನ ತೆಪ್ಪ ಹೊಯ್ದಾಡುತ್ತಿರುವಾಗ ಕಾಣದ ಕೈಯೊಂದು ಅದನ್ನು ಸರಿಯಾಗಿಸಿದೆ ಎಂಬ ದೃಢವಾದ ಭಾವನೆಯೂ ಅವರಲ್ಲಿ ಉಂಟಾಯಿತು.

ಸಂಗ್ರಹದ ಕೊನೆಯ ಪ್ರಬಂಧ 'ದೈವ' ಇಂಥದೇ - ಆದರೆ ಇದಕ್ಕಿಂತ ಸಾಂದ್ರವಾದ ಅನುಭವಗಳನ್ನು ನಿರೂಪಿಸುತ್ತದೆ. ಪರೀಕ್ಷೆಗಳು ಮುಗಿದು 'ಮೌಖಿಕ ' ಪರೀಕ್ಷೆ ತಿಂಗಳೊಪ್ಪತ್ತು ಇರುವಾಗ ಗೋಕಾಕರು ಸ್ಕಾಟಲಂಡಿನ ಪ್ರವಾಸದಲ್ಲಿದ್ದರು. ಅಲ್ಲಿಯ ನಗರಗಳನ್ನು, ನದೀದಂಡೆಗಳನ್ನು, ಕಾದಂಬರಿಕಾರ ಸ್ಕಾಟ್ ಮತ್ತು ಕವಿ ಬರ್ನ್ಸ್ ಅವರ ಊರು-ಮನೆಗಳನ್ನು ನೋಡುತ್ತಿರುತ್ತಾರೆ. ಇಂಥ ಭೌತಿಕ ಸೌಂದರ್ಯದರ್ಶನ ಪಡೆಯುತ್ತಿರುವಾಗಲೇ ಅವರಿಗೆ ಜನಾಂಗಭೇದದ ವಿಕೃತದರ್ಶನವೂ ಆಗುತ್ತದೆ. ಅವರು ಪ್ರಯಾಣಿಸುತ್ತಿದ್ದ ಬಸ್ಸಿನಲ್ಲಿದ್ದ ಬಿಳಿಯರ ಮಗುವೊಂದು ಗೋಕಾಕರನ್ನು ವಿಚಿತ್ರ ಪ್ರಾಣಿಯೊಂದನ್ನು ನೋಡುವಂತೆ ನೆಟ್ಟ ಕಣ್ಣುಗಳನ್ನು ಕದಲಿಸದೇ ನೋಡುತ್ತಿತ್ತು. ಪಾಪ ! ಆ ಮಗು ಅವರೆಗೆ ಕಂದು-ಕರಿಯನೊಬ್ಬನನ್ನು ನೋಡಿಯೇ ಇರಲಿಲ್ಲವೇನೊ ! ಈ ಅನುಭವ ಅವರ ಹೊಟ್ಟೆಯಲ್ಲಿ ಕಸಿವಿಸಿ ಉಂಟು ಮಾಡುತ್ತದೆ. ಈ ಕಸಿವಿಸಿ ಸಾಲದೇನೋ ಎಂಬಂತೆ ಅದೇ ಹೊತ್ತಿಗೆ ಅವರಿಗೆ ತೀವ್ರವಾದ ಹೊಟ್ಟೆನೋವು ಬೇರೆ ಕಾಣಿಸಿಕೊಂಡಿತು. ಆ ನೋವನ್ನು ಹೊಟ್ಟೆಯಲ್ಲಿಟ್ಟುಕೊಂಡೇ ಅಥವಾ ಅದನ್ನು ಮರೆಯಲು - ಅವರು ಗ್ಲಾಸ್ಗೋದ ಮೋಜಿನ ಜಾತ್ರೆಗೆ ಹೋಗುತ್ತಾರೆ. ಆ ಹೊತ್ತಿಗೆ ಹೊಟ್ಟೆನೋವು ಉಲ್ಬಣಿಸಿಕೊಂಡಿತು. ಯಾರು ಯಾರೋ ಸೇರಿಕೊಂಡು ಅವರನ್ನು ಎಡಿನ್‌ಬರೋ ವಿಶ್ರಾಂತಿಧಾಮದಿಂದ ಆಸ್ಪತ್ರೆಗೆ ಸಾಗಿಸಿದರು. ಪ್ರಯಾಣದಲ್ಲಿ ಸೇರಿಕೊಂಡ ಒಬ್ಬ ಭಾರತೀಯ ವೈದ್ಯರು ಗೋಕಾಕರ ಶಸ್ತ್ರಚಿಕಿತ್ಸೆಗೂ ಏರ್ಪಾಡು ಮಾಡಿದರು. ಆ ವೈದ್ಯರಿಲ್ಲದಿದ್ದರೆ ಗೋಕಾಕರ ಜೀವ ಅಪಾಯದಲ್ಲಿತ್ತು ; ಶಸ್ತ್ರಚಿಕಿತ್ಸೆ ಮುಗಿದು ಚೇತರಿಸಿಕೊಳ್ಳುವ ಮೊದಲೇ ಮೌಖಿಕ ಪರೀಕ್ಷೆಯ ದಿನ ಬಂತು. ಒಂದು ವರ್ಷ ವ್ಯರ್ಥವಾಯಿತು ಎಂದು ಗೋಕಾಕರು ಕೊರಗುತ್ತಿರುವಾಗ ಅವರನ್ನು ಬಹಳವಾಗಿ ಮೆಚ್ಚಿದ್ದ ಪ್ರೊಫೆಸರರು ಇಲಾಖೆಯ ಮನವೊಲಿಸಿ, ಪರೀಕ್ಷೆಯಿಲ್ಲದೆ ಗೋಕಾರನ್ನು ಪ್ರಥಮ ವರ್ಗದಲ್ಲಿ ಉತ್ತೀರ್ಣಗೊಳಿಸಿದ ಸಂತೋಷದ, ಆಶ್ಚರ್ಯದ ಸುದ್ದಿ ಬರುತ್ತದೆ. ರೋಗಿ, ಅವನ ವೈದ್ಯರು ಮತ್ತು ದಾಯಿಗಳು ಇಂಥ ಸುದ್ದಿಯಿಂದ ಸಂತೋಷಪಡುತ್ತಿರುವಾಗ ಗೋಕಾಕರು ನಡೆದ ಘಟನೆಗಳಿಗೆ ಅರ್ಥಹಚ್ಚಲು ತೊಡಗಿದರು. ಹರ ಕಾಯಲ್ ಪರ ಕೊಲ್ಲನ ? ಘಟನೆಗಳ ಹಿಂದೆ ಮಾನವ ಸ್ನೇಹ

ಮತ್ತು ಅಗೋಚರ ದೈವೀಶಕ್ತಿಗಳ ಕೈವಾಡ ಕಾಣಿಸಿತು. ಜೀವನದ ಚೆಲುವು ಕಾಣಿಸಿಕೊಳ್ಳುವ ಪರಿಗಳೆಷ್ಟು ವಿಧ ಎಂದು ಅವರಿಗೆ ಅನಿಸಿರಬೇಕು. ಹೀಗೆ 'ದೈವ' ಅವರ ಆತ್ಮಕಥನದ ಒಂದು ತುಣುಕು ; ಜೀವನ ಸೌಂದರ್ಯ ಶೋಧದ ಒಂದು ಪ್ರಯಾಸ ; ಕಥಾತ್ಮಕವಾದ ಒಂದು ನಿಬಂಧ. ಪ್ರಬಂಧದಲ್ಲಿ ಅವರು ತಮ್ಮ ಅನುಭವದ ಹಿನ್ನಲೆಯಲ್ಲಿ ಅವರು ತಮ್ಮನ್ನೇ ತಾವು ಕಂಡುಕೊಂಡಿದ್ದಾರೆ. ಹಾಗೂ ಪ್ರಬಂಧದ ಕೊನೆಯಲ್ಲಿ ಅವರು ತಾವು ಕಂಡ ಸತ್ಯಕ್ಕೆ ಹೀಗೆ ಪ್ರಾರ್ಥಿಸಿಕೊಂಡಿದ್ದಾರೆ :

'ಬದುಕಿಸಿದೆ ನೀನೆನ್ನ ಯಾವ ಬದುಕೇನೆನಗೆ
ನಿನ್ನಾಣತಿಯೆ ನನ್ನ ಜೀವಿತದ ಗುರಿಯು ;
ನೀನಿತ್ತ ಕೀರ್ತಿಯನು ಹೇಗೆ ಬಳಸುವುದೆಂಬ
ಅರಿವನೀವುದು ಅದುವೆ ಜೀವಿತದ ಝರಿಯು ' (ಚೆ. ನಿ., ಅದೇ, ಪು. ೧೪೭)

ಸ್ತ್ರೀ ಸೌಂದರ್ಯದ ಶಕ್ತಿ-ಇತಿಮಿತಿಗಳನ್ನು ಹೇಳುವ ಎರಡು ಪ್ರಬಂಧ ಗಳನ್ನು ಇಲ್ಲಿ ಒಟ್ಟಾಗಿ ಹೆಸರಿಸಬೇಕು. ಮೊದಲನೆಯದು 'ಸ್ತ್ರೀರೂಪ ೧- ರೂಪದ ಬಗ್ಗೆ ಸಂಯಮ '; ಎರಡನೆಯದು 'ಸ್ತ್ರೀರೂಪ ೨ - ರೂಪದ ಶಕ್ತಿ.' ಇವುಗಳನ್ನು ಕಥೆಗಳೆಂದರೂ ಸರಿ ; ಕಥನಾತ್ಮಕ ಪ್ರಬಂಧಗಳೆಂದರೂ ಸರಿ. ಎನ್ನೆಯವರು ಹೇಳುವಂತೆ 'ಮೊದಲನೆಯ ಸ್ತ್ರೀರೂಪದಲ್ಲಿ ತರುಣ ತರುಣಿಯರ ಮಧ್ಯದಲ್ಲಿ ತರುಣಿಗೆ ತರುಣನಲ್ಲಿ ಉಂಟಾಗುವ ಕೇವಲ ದೈಹಿಕ ಆಸಕ್ತಿಯನ್ನು ತರುಣನು ಅಲ್ಲಗಳೆಯಲು ಆಕೆಗೆ ಉಂಟಾಗುವ ನಿರಾಸೆಯಿದೆ. ಇಲ್ಲಿ ತರುಣನೆಂದರೆ ಒಬ್ಬ ಭಾರತೀಯ ಪ್ರಾಧ್ಯಾಪಕ. ವಿದೇಶಕ್ಕೆ ಹೋಗಿದ್ದಾನೆ. ಅಲ್ಲಿ ಹ್ಯಾಂ ಸ್ಟೆಡ್ ಎಂಬ ಲಂಡನ್ನಿನ ಒಂದು ಸ್ಥಳದಲ್ಲಿ ಇಳಿದುಕೊಂಡಾಗ, ಆ ಮನೆಯ ಸೇವಕಿ ಈ ಪ್ರೊಫೆಸರನು ಕ್ರಿಸ್‌ಮಸ್ ಮುನ್ನಾದಿನ ಶುಭಾಶಯದೊಂದಿಗೆ ಅವಳಿಗ ನೀಡಿದ ಒಂದು ಶಿಲಿಂಗ್ ಕಾಣಿಕೆಯನ್ನು ಸ್ವೀಕರಿಸಿ, ಹಠಾತ್ತನೆ ಆತನಲ್ಲಿ ಅನುರಕ್ತ ಳಾಗುತ್ತಾಳೆ. ಎಷ್ಟೆಷ್ಟೋ ರೀತಿಯಿಂದ ತನ್ನ ಮೈಮನಗಳ ಸುಳಿಯಲ್ಲಿ ಆತನನ್ನು ಕೆಡುಹುವುದಕ್ಕೆ ಪ್ರಯತ್ನಿಸುತ್ತಾಳೆ. ಆದರೆ ಆ ಪ್ರಾಧ್ಯಾಪಕ ಸನಾತನಿ. ಒಂದಿಷ್ಟು ನೈತಿಕ ಮೌಲ್ಯಗಳಿಗೆ ಮಹತ್ವಕೊಡತಕ್ಕಂಥವನು. ಅಂತೆಯೇ ಆತನಿಗೆ ಈ ಶ್ವೇತ ಕುಮಾರಿಯ ಮುಗುಳ್ನಗೆ ಬೇಡವಾಗುತ್ತದೆ. ಇದೂ ಒಂದು ಬಗೆಯ ಚೆಲುವಿನ ನಿಲುವು. ಕೇವಲ ಬಾಹ್ಯಸೌಂದರ್ಯಕ್ಕೆ ಸಂಬಂಧಿಸಿದ್ದು. ಮತ್ತೊಂದು ಕಥೆ, ಗುಜರಾತದಲ್ಲಿಯ ಅಬೂಪಹಾಡದ ಲಕ್ಷ್ಮೀಶಿಖರದ ಐತಿಹಾಸಿಕತೆಗೆ ಸಂಬಂಧಿ ಸಿದ್ದು. ಇದರಲ್ಲಿ ಲಕ್ಷ್ಮಿಯ ಅಪ್ರತಿಮವಾದ ದೈವೀ ಸೌಂದರ್ಯ, ಆಕೆಯ ಸ್ವದೇಶಪ್ರೇಮ, ಶೌರ್ಯ ಧೈರ್ಯ, ಸ್ವದೇಶಕ್ಕಾಗಿ ಆಕೆ ಗೈದ ಆತ್ಮಾಹುತಿ ಇವೆಲ್ಲವೂ ಮೈಮೇಲೆ ರೋಮಾಂಚವೇಳುವ ರೀತಿಯಲ್ಲಿ ಚಿತ್ರಿತವಾಗಿವೆ. ಇದರ ಕಥೆ ಸ್ಥಲ್ಪದರಲ್ಲಿಯೇ ಇಷ್ಟು : ಲಕ್ಷ್ಮಿ ದೇಶೀಯ ಸಂಸ್ಥಾನವೊಂದರಲ್ಲಿ ಬ್ರಿಟಿಷರ ವಿರುದ್ಧ

ಬಂಡಾಯವೆಬ್ಬಿಸುವ ಆರೋಪಕ್ಕೆ ಗುರಿಯಾಗಿ, ತನ್ನ ಪ್ರೀತಿಯ ಪತಿಯೊಂದಿಗೆ ಮರಣದಂಡನೆಗೆ ಒಳಗಾಗಿ ಕಾರಾಗೃಹದಲ್ಲಿ ಇರುತ್ತಾಳೆ. ಇವರ ನಿಷ್ಠಾವಂತ ರಾಜಭಕ್ತ ವಿಜಯಕುಮಾರ ದರ್ಬಾರಿನಲ್ಲಿ ಲಕ್ಷ್ಮೀದೇವಿಯನ್ನು ಹೀಗಳೆದು ಹೀನಾಯದಿಂದ ನುಡಿದ ಅಧಿಕಾರಿಯಾದ ಶಂಕರಸಂಗನನ್ನು ಆವೇಶದಲ್ಲಿ ಕೊಲೆ ಮಾಡಿ, ತಾನೂ ಶಿಕ್ಷೆಗೆ ಗುರಿಯಾಗಿ ಕಾರಾಗೃಹದಲ್ಲಿ ಸೇರುತ್ತಾನೆ . . . . ಸ್ವಪ್ನದಲ್ಲಿ ದೊರೆತ ಆದೇಶದ ಮೇರೆಗೆ ವಿಜಯಕುಮಾರ ಅಬೂಪಹಾಡಕ್ಕೆ ತೆರಳಿ, ಅಲ್ಲಿ ಲಕ್ಷ್ಮೀದೇವಿಯ ಮಗಳನ್ನು ಮದುವೆಯಾಗಿ, ಅಲ್ಲೇ ಲಕ್ಷ್ಮೀದೇವಿಯ ನೆನಪಿಗೆ ಒಂದು ಆಶ್ರಮವನ್ನು ಸ್ಥಾಪಿಸಿ, ನಡೆದ ಘಟನೆಗಳನ್ನು ಬರೆದಿಡುತ್ತಾನೆ. ಈ ಐತಿಹ್ಯವನ್ನು ನೆನೆದಾಗ ಸ್ತ್ರೀರೂಪದ ದ್ವೈವಿಕ ಭಾವನೆ ಮೂಡಿನಿಲ್ಲುತ್ತದೆ (ನೋಡಿ : ಎನ್ಕೆ : ವಿನಾಯಕ ಮಹಾದರ್ಶನ, ೧೯೮೬, ಪುಟ. ೩೩೭-೩೩೮). ಒಂದು ಸ್ತ್ರೀರೂಪದ ಶೃಂಗಾರಮುಖವಾದರೆ, ಇನ್ನೊಂದು ವೀರಮುಖ.

'ಸಾಹಿತ್ಯದಲ್ಲಿ ಸೌಂದರ್ಯ' ಎಂಬ ನಿಬಂಧ ವಿಡಂಬನಾತ್ಮಕವಾದುದು. 'ಕಾವ್ಯವೆಂದರೆ ಒಂದು ದೊಡ್ಡ ಪ್ರಮಾದ, ಇನ್ನೂ ಜನತೆಯು ಅಜ್ಞಾನದ ಅಂಧಕಾರದಲ್ಲಿರುವುದರಿಂದ ಕವನಗಳನ್ನು ಜನರು ಓದುವರು' ಎಂಬ ಆಧುನಿಕ ವಿಜ್ಞಾನಿಯ ಟೀಕೆಗೆ ಈ ಲೇಖನ ಉತ್ತರಕೊಡುತ್ತದೆ. 'ವೈಜ್ಞಾನಿಕ ಕವಿತೆ' ಹೊಸೆದರೆ ಎಂಥ ಆಭಾಸ ಆಗುವುದೆಂದು ವಿಡಂಬಿಸಿ ತೋರಿಸಿದ್ದಾರೆ. ಚುಕ್ಕಿಯು ಬಿಳಿಯ ಕುರಿ ಹಾಕಿರುವ ಅಚ್ಚಬಿಳಿ ಹಿಕ್ಕೆಯಂತೆ ಕಂಡದ್ದು, ಮ್ಯಾಗ್ನೇಸಿಯಂ ಸಲ್ಫೇಟದ ಮೇಲೆ ಕವಿತೆ ಬರೆಯಲು ತೊಡಗಿ, ಅದರ ಪೂರ್ಣಜ್ಞಾನವಿಲ್ಲದೆ ಕೊರಗಿದ್ದು, ಕಪ್ಪೆಯನ್ನು ಕೊಯ್ಯುವ ಚಿತ್ರಕ್ಕೆ ಬಂದಕೂಡಲೇ ಲೆಕ್ಕಣಿ ನಿಂತದ್ದು ಇತ್ಯಾದಿ ಪ್ರಸಂಗಗಳನ್ನು ಉಲ್ಲೇಖಿಸಿದ್ದಾರೆ. ಕವಿಗಳು ಸದಾ ಕನಸಿನ ಲೋಕದಲ್ಲಿ ಇರುತ್ತಾರೆಂಬ ಟೀಕೆಗೆ ಗೋಕಾಕರ ಉತ್ತರ : 'ಜಗತ್ತೆಲ್ಲ ಕನವರಿಸುವುದು. ಮಾನವರೆಲ್ಲರೂ ತಮ್ಮ ತಮ್ಮ ಸಂಸಾರದ ಕನಸುಗಳಲ್ಲಿ ಮುಳುಗಿ ಏಳುತ್ತಿರುವರು. ವಿಜ್ಞಾನಿಗಳಾದ ನೀವು ಕೂಡ ನಿಮ್ಮ ಪ್ರಪಂಚದಲ್ಲಿ ಅನೇಕ ಸುಖಜನ್ಯ ದುಃಖಜನ್ಯ ಪ್ರಸಂಗಗಳನ್ನು ಕಂಡುಕೊಂಡಿರುವಿರಿ. ಹೀಗೆ ಕನವರಿಸುವದು ದೇವರು ಮಾನವನ ಹೃದಯದಲ್ಲಿ ನಿರಂತರವಾಗಿಸಿದ ದೀಪದ ಕುಡಿಗಳಲ್ಲಿ ಒಂದು' (ಚೆ. ನಿ., ಪು. ೬೫). ಆದುದರಿಂದ ಕವಿಗಳು ಕನವರಿಸಲಿ ಬಿಡಿ ! ಕವಿಗಳು ಕಂಡ ಸೌಂದರ್ಯವನ್ನಷ್ಟೇ ನೀವು ಸವಿಯುವಿರಿ ಎನುತ್ತಾರೆ, ಕವಿ ವಿನಾಯಕರು.

'ಚೆಲುವಿನ ಪರಂಪರೆ' ಸೌಂದರ್ಯ ತತ್ವವೊಂದನ್ನು ಹೇಳುತ್ತದೆ. ಎಂ.ವಿ. ಸೀತಾರಾಮಯ್ಯನವರ ಮಾತುಗಳಲ್ಲಿ ಹೇಳುವದಾದರೆ 'ಪರಂಪರಾಗತ ಸೌಂದರ್ಯ ವರ್ಣನೆಯನ್ನು ತಿರಸ್ಕರಿಸುವ ಮುನ್ನ ಅದರ ಹಿಂದಿನ ಅನುಭವದ ಸತ್ಯವನ್ನು ಗುರುತಿಸುವುದನ್ನು ಕಲಿತರೆ, ಅದೇ ಅನುಭವ ತನಗಾದಾಗ ಅದಕ್ಕೆ

ಹೊಸ ರೂಪವನ್ನು ಕೊಡಲು ಸಾಧ್ಯವಾಗಬಹುದು ಎಂಬುದೇ 'ಚೆಲುವಿನ ಪರಂಪರೆ' ಎಂಬ ನಿಬಂಧದ ವಿಷಯ. ಕವಿಗಳಿಗೋಸ್ಕರ ಚೆಲುವು ತನ್ನ ನಿಲುವನ್ನು ಮಾರ್ಪಡಿಸಿಕೊಳ್ಳುವುದಿಲ್ಲ. ಕವಿಯ ಒಲವು ಇದ್ದಂತೆ ಚೆಲುವಿನ ನಿಲುವು. "ಕೋಗಿಲೆಯ ಕೂಗು ಒಂದೇ. ಆದರ ಕೂಗು ಬೇರೆ ಬೇರೆಯವರಿಗೆ ಬೇರೆ ಬೇರೆಯಾಗಿ ಕೇಳಿಸುತ್ತದೆ" ಎಂಬ ಸತ್ಯವನ್ನು ಸ್ವಂತ ಅನುಭವದಿಂದ ಕಂಡುಕೊಂಡ ಸಂಗತಿಯನ್ನು ಲೇಖಕರು ಉದಾಹರಿಸಿ, "ಅಂದಿನಿಂದ ನಾನು ಪರಂಪರೆಯೆಂದರೆ ಕೀಳು, ಹಾಗೂ ಪ್ರಯೋಗವೆಂದರೆ ಮೇಲೆಂಬ ತಿಳುವಳಿಕೆಯನ್ನು ಬಿಟ್ಟುಬಿಟ್ಟಿದ್ದೇನೆ. ನಿರ್ಣಯ ಬುದ್ಧಿಯೆಂಬ ಕುದುರೆಗೆ ಇಂತಿಷ್ಟು ನಿಯಮಗಳೆಂಬ ಕಣ್ಣು ಕುಲಾಯಿಗಳನ್ನು ಹಾಕಿದರೆ ಸಾಲದು. ಸದಾ ಜಾಗೃತವಾಗಿರುವ ವಿವೇಕವೆಂಬ ಕಡಿವಾಣವು ಅದಕ್ಕೆ ಅವಶ್ಯಕವಾಗಿ ಬೇಕು" ಎಂಬ ಎಚ್ಚರಿಕೆಯನ್ನು ನೀಡಿದ್ದಾರೆ. ಈ ಎಚ್ಚರಿಕೆಯ ಬೆಳಕಿನಲ್ಲಿ ಪ್ರಾಚೀನ ಕಾವ್ಯ ಮಾರ್ಗದ ಅಲಂಕಾರಗಳು, ಅಷ್ಟಾದಶವರ್ಣನೆ, ಕವಿಸಮಯ ಮುಂತಾದ ಕಾವ್ಯಾಂಗಗಳಲ್ಲಿ ಕವಿಗಳ ಸೌಂದರ್ಯದರ್ಶನ ಹೇಗೆ ಪ್ರಕಟಗೊಂಡಿದೆ ಎಂಬುದನ್ನು ಆಧುನಿಕದೃಷ್ಟಿಯಿಂದಲೇ ಪುನಃಪರಿಶೀಲನೆ ಮಾಡಿದರೆ, ಕಾವ್ಯ ಪ್ರಪಂಚದ ಚೆಲುವಿಗೂ ಒಂದು ಅರ್ಥಪೂರ್ಣ ಪರಂಪರೆ ಇರುವದು ವ್ಯಕ್ತಪಡುವದು. ಈ ದೃಷ್ಟಿಯಿಂದ ವಿಚಾರ ಮಾಡಿದಾಗ ಪರಂಪರೆಗೂ ಪ್ರಯೋಗ ಶೀಲತೆಯಿಂದ ಆವಿರ್ಭವಿಸುವ ನವ್ಯತೆಗೂ ಸಮನ್ವಯವನ್ನು ಸಾಧಿಸಬೇಕೆಂಬುದೇ ಗೋಕಾಕರ ಆಶಯ ಎಂಬುದು ಸ್ಪಷ್ಟವಾಗುತ್ತದೆ' (ನೋಡಿ : ಹಾ. ಮಾ. ನಾ. (ಸಂ.) 'ವಿನಾಯಕ ವಾಙ್ಮಯ' : ಪು. ೩೫೦).

'ದೃಷ್ಟಿದೋಷ' ಪ್ರಬಂಧದಲ್ಲಿ ಒಂದು ಕಾಲಕ್ಕೆ ಕಸವೆನಿಸಿದ್ದ ಒಂದು ಕವಿತೆ, ಇನ್ನೊಂದು ಕಾಲದಲ್ಲಿ ಹೇಗೆ ರಸವೆನಿಸಿತು ಎಂಬ ಸ್ವಾರಸ್ಯಕರ ಪ್ರಸಂಗ ಬರುತ್ತದೆ. ಕವಿಮಿತ್ರ 'ರಸಿಕ' ಎಂಬವನು ಒಂದು ಪತ್ರಿಕೆಯ ಸಂಪಾದಕನಾಗಿದ್ದಾಗ ಈ ಪ್ರಸಂಗ ನಡೆಯಿತು. ರಸಿಕನ ಮಿತ್ರ ಶಿವರಾಮ ಒಂದು ಕವನ ಬರೆದು ಪ್ರಕಟಣೆಗಾಗಿ ಕಳುಹಿಸಿದ್ದ. ಅದೇ ಕಾಲಕ್ಕೆ ಪ್ರಣಯಗೀತಗಳನ್ನು ಬರೆಯುವ ಅನುಭವ ಶೂನ್ಯರಾದ ಲೇಖಕರನೇಕರ ಕವನಗಳನ್ನು ಓದಿಓದಿ 'ರಸಿಕ'ನಿಗೆ ಪ್ರಣಯಗೀತಗಳ ಬಗ್ಗೆ ಇನ್ನಿಲ್ಲದಂಥ ಜಿಗುಪ್ಸೆ ಉಂಟಾಗಿತ್ತು. ರಸಿಕ ಅಂಥ 'ಮೂಡಿ'ನಲ್ಲಿರುವಾಗ ಮಿತ್ರನ ಕವನ ರಸಿಕನ ಮೇಜಿಗೆ ಬಂತು ; ಕಸದ ಬುಟ್ಟಿಗೂ ಹೋಯಿತು. ಮುಂದೊಂದು ದಿನ ಮಿತ್ರರ ಮಧ್ಯದಲ್ಲಿ ಆ ಕವನವನ್ನು ರಸವತ್ತಾಗಿ ಓದಿದಾಗ , ಅದು ರಸಿಕ ಮತ್ತು ಉಳಿದೆಲ್ಲರ ಅದ್ಭುತ ಮೆಚ್ಚಿಗೆ ಪಡೆಯಿತು. ಹೀಗೇಕೆ ? ಹಿಂದೆ ಕಸದ ಬುಟ್ಟಿಗೆ ಹೋದ ಕವನ ಈಗ ಚಪ್ಪಾಳೆ ತಟ್ಟಿಕೊಂಡಿದ್ದು ಏಕೆ ? ಗೋಕಾಕರು

ಹೇಳುವಂತೆ 'ಆ ಕವಿತೆಯ ಚೆಲುವನ್ನು ತಿಳಿಯುವ ಪ್ರಯತ್ನಕ್ಕೆ ಅಡ್ಡಬಂದ ದೃಷ್ಟಿದೋಷವು ಹೋಗಿ, ರಸಿಕನ ಹೃದಯವು ಕವಿತೆಯಲ್ಲಿ ಕವಿಹೃದಯದೊಡನೆ ಸಮರಸವಾಗಿ ಬೆರೆಯಲು ಅವನಿಗೆ ನಿಜವಾದ ರಸಾನುಭವವಾಯ್ತು.' ಸೌಂದರ್ಯತತ್ವವೊಂದನ್ನು ವಿವೇಚಿಸುವ ಈ ನಿಬಂಧ, ಒಂದು ಸೂಕ್ತ ಉದಾಹರಣೆಯ ಮೂಲಕ ಮನಸ್ಸನ್ನು ಹಿಡಿದುಕೊಳ್ಳುತ್ತದೆ.

'ಸೌಂದರ್ಯವೇ ಸತ್ಯ' ಪ್ರಬಂಧ, ಕವಿ ವಿನಾಯಕರ ಮೇಲೆ ಬಹಳವಾಗಿ ಪ್ರಭಾವ ಬೀರಿದ ಕೀಟ್ಸ ಕವಿಯ ಜೀವನ ಮತ್ತು ಕಾವ್ಯಸೌಂದರ್ಯದ ಪರಿಚಯ ಮಾಡಿಕೊಡುತ್ತದೆ. 'ಸೌಂದರ್ಯವೇ ಸತ್ಯ ; ಸತ್ಯವೇ ಸೌಂದರ್ಯ' ಎಂದು ನಂಬಿದ ಕವಿಯು 'ಕವಿಯಾದವನು ತನ್ನ ದುಃಖಗಳನ್ನು ತಾನು ನುಂಗಿಕೊಂಡು ಜಗತ್ತಿಗೆ ಬೇಕಾದ ಶಾಂತಿಯನ್ನು ಕರುಣಿಸುತ್ತಾನೆ' ಎಂದು ಹೇಳಲು ಮರೆಯಲಿಲ್ಲ. ಎಲ್ಲೆಡೆಗೂ ತುಂಬಿಕೊಂಡಿರುವ ಸೌಂದರ್ಯವನ್ನು ಶೋಧಿಸುವ ಕೀಟ್ಸ ಕವಿಯ ಕಾವ್ಯಾದರ್ಶನವನ್ನು ಕವಿಯಾಗಿ ಗೋಕಾಕರು ಮೈಗೂಡಿಸಿಕೊಳ್ಳಲು ಹವಣಿಸಿದುದರ ದ್ಯೋತಕ, ಈ ಪ್ರಬಂಧ.

'ಅಂತರಂಗದ ಕದ' ವಾರ್ಷಿಕೋತ್ಸವವೊಂದರಲ್ಲಿ ತಮ್ಮನ್ನು ಉಪೇಕ್ಷೆ ಮಾಡಿದರೆಂದು ಸಿಟ್ಟಿಗೆದ್ದ ಹುಡುಗರು ಗಲಾಟೆ ಮಾಡಿದಾಗ, ಅಂದಿನ ಅತಿಥಿಗಳು ವಿದ್ಯಾರ್ಥಿಗಳ ಅತೃಪ್ತಿ-ಮುನಿಸುಗಳನ್ನು ಅರ್ಥಮಾಡಿಕೊಂಡು, ಅದು ಕೂಡ ಒಂದು ಸಹಜ ಭಾವನೆಯೆಂದು ತಿಳಿದು, ಅವರೊಡನೆ ಉದಾರವಾಗಿ ನಡೆದು ಕೊಂಡರು. ಪ್ರಸಂಗ ಸುಖಾಂತವಾಯಿತು. ಆ ಪ್ರಸಂಗವನ್ನು ನೆನೆಯುತ್ತ ಲೇಖಕರು ಹೇಳುವ ಮಾತಿದು : 'ಬಾಳುವೆಯ ವೈವಿಧ್ಯವೇ ಅದರ ಮೋಹ ಕತೆಯನ್ನು ಹೆಚ್ಚಿಸಿದೆ. ಅದರಿಂದ ದೊರಕುವ ವಿಧವಿಧದ ರಸಾನುಭವವೇ ಅದರ ಸೌಂದರ್ಯಕ್ಕೆ ರೂಪವನ್ನು ಕೊಟ್ಟಿದೆ. ಶೋಕ, ವಿನೋದ, ಪ್ರೀತಿ, ಕ್ರೋಧ ಇವೇ ಮುಂತಾದ ಭಾವನೆಗಳಿಗೂ ಅನುಭವದಲ್ಲಿ ಸ್ಥಾನವಿದೆ. ಮಹತ್ತರವಾದ ಕೆಲವು ಶೋಕಮಯ ಸನ್ನಿವೇಶಗಳು ಬಾಳುವೆಗೆ ಹೊಸತೊಂದು ಅರ್ಥವನ್ನು ಸಲ್ಲಿಸುವುವು. ಮುನಿಸು ಕೀಳಾದ ಭಾವನೆಯೆಂದು ಎಲ್ಲರಿಗೂ ಗೊತ್ತಿದೆ. ಆದರೆ ಹೊತ್ತು ಬಂದಾಗ ಮುನಿಸೂ ಕೂಡ ದೈವಿಕವಾಗುವುದುಂಟು' (ಚೆಲುವಿನ ನಿಲುವು, ಪು.೯). ನಮ್ಮ ಅಂತರಂಗದ ಕದ ಎಲ್ಲ ಭಾವನೆಗಳಿಗೂ ತೆರೆದಿದ್ದರೆ ಮಾತ್ರ ಜೀವನ ಸೌಂದರ್ಯವನ್ನು ಕಾಣಬಹುದೆಂಬುದು ಲೇಖಕರ ಅಭಿಮತ.

ಇನ್ನುಳಿದ 'ಸೃಷ್ಟಿ-ದೃಷ್ಟಿಗಳ ಸಮ್ಮಿಲನ', 'ಚೆಲುವಿನ ನಾಲ್ಕು ಲೋಕಗಳು', 'ಪ್ರಕೃತಿಯ ರೂಪರಾಶಿ' ಮತ್ತು 'ಪ್ರೀತಿ -ಶಾಂತಿ' ಪ್ರಬಂಧಗಳು ಸೌಂದರ್ಯಶಾಸ್ತ್ರದ

ಒಂದಲ್ಲ ಒಂದು ಪಾಠವನ್ನು ಹೇಳುತ್ತವೆ. ಉದಾಹರಣೆಗೆ, 'ಸೃಷ್ಟಿ-ದೃಷ್ಟಿಗಳ ಸಮ್ಮಿಲನ' ದಲ್ಲಿ ಬರುವ ಮಾತಿದು ; 'ಜೀವಿಗೆ ರಸಾನುಭವವನ್ನು ಪಡೆಯಲು ನೂರಾರು ಹಾದಿಗಳಿವೆ. ಅದನ್ನು ದೊರಕಿಸಿಕೊಡಲು ನೂರಾರು ತರಹದ ವಸ್ತುಗಳಿವೆ. ಜಾಗೃತಿ, ಸ್ವಪ್ನ, ಸುಷುಪ್ತಿ, ಸಮಾಧಿ ಇವು ಅವನ ಅನುಭವ ಲೋಕಗಳು. ಈ ಲೋಕಗಳಲ್ಲಿರುವಂಥವೆಲ್ಲ ಅವನ ಅನುಭವದ ವಸ್ತುಗಳು. ಆಯಾ ಲೋಕದ ವಸ್ತುಗಳಲ್ಲಿ ರಸಾನುಭವವನ್ನು ಪಡೆಯಲು ಅವನಿಗೆ ಅಂಥ ದೃಷ್ಟಿಬೇಕು . . . .' (ಚೆ. ನಿ., ಪು. ೧೪).

ಈ ನಾಲ್ಕೂ ಪ್ರಬಂಧಗಳಲ್ಲಿ ಪ್ರಜ್ಞೆಗೆ ಸಾಕಷ್ಟು ಪಾಠವಿದೆ ; ಆದರೆ ಪ್ರಬಂಧ ಗಳಾಗಿ ಇವು ಉಳಿದ ಪ್ರಬಂಧಗಳಂತೆ ನಮ್ಮ ಮನಸ್ಸನ್ನು ಆಕರ್ಷಿಸುವುದಿಲ್ಲ. ಅಷ್ಟಾಗಿ ಸಂತೋಷಕೊಡುವುದಿಲ್ಲ (ಚೆಡರ್ ಗವಿಗಳೂ ಕೂಡ). ಅದೇನೇ ಇದ್ದರೂ ಹದಿಮೂರು ಪ್ರಬಂಧಗಳುಳ್ಳ ಈ ಕಟ್ಟಿನಲ್ಲಿ ಸೌಂದರ್ಯ ತತ್ವದಂಥ ಗಂಭೀರ ವಿಷಯಗಳು ಸುಂದರ ಪ್ರಬಂಧಗಳಾಗಿ ಹರಳುಗಟ್ಟಿರುವದು ಎರಡನೆಯ ಘಟ್ಟದ ಕನ್ನಡ ಪ್ರಬಂಧ ಸಾಹಿತ್ಯದ ಹಿರಿಮೆಯ ಸಾಧನೆ. ಈ ಸಂಗ್ರಹದ ಸಾಧನೆಯನ್ನು ಎಂ.ವಿ.ಸೀತಾರಾಮಯ್ಯನವರ ಮಾತುಗಳಲ್ಲಿಯೇ ಮುಗಿಸ ಬಹುದು. : 'ಮೊತ್ತದಲ್ಲಿ, ನವೀನ ರೀತಿಯಲ್ಲಿ 'ಲಕ್ಷಣಲಕ್ಷ್ಯ ಸಮನ್ವಯ' ಮಾಡುತ್ತ, ಸೌಂದರ್ಯ ಮೀಮಾಂಸೆಯನ್ನು ಶುಷ್ಕವಾದ ವಿಚಾರಮಾರ್ಗದಿಂದ ಮನೋಜ್ಞವಾದ ವಿಹಾರಮಾರ್ಗಕ್ಕೆ ಒಯ್ಯುವ ಶ್ಲಾಘ್ಯವೂ ಯಶಸ್ವಿಯೂ ಆದ ಪ್ರಯತ್ನಗಳನ್ನು ಒಳಗೊಂಡ ಅಪೂರ್ವಗ್ರಂಥ 'ಚೆಲುವಿನ ನಿಲುವು'. ವಿಚಾರವಂತರಿಗೆ ವಿಚಾರದ ಬೆಲೆ ಇದೆ. ಇಲ್ಲಿ ; ರಸಿಕರಿಗೆ ಸಾಹಿತ್ಯಧರ್ಮದ ನೆಲೆಯೂ ಇದೆ' (ಹಾ.ಮಾ.ನಾ. (ಸಂ.) ವಿನಾಯಕ ವಾಙ್ಮಯ, ಪುಟ. ೩೫೩).

೩

'ಜೀವನ ಪಾಠಗಳು' ಪ್ರಕಟವಾದುದು ೧೯೪೯ ರಲ್ಲಿ. ಇದರಲ್ಲಿ ಎಂಟು ಓಲೆಗಳೂ ಹನ್ನೆರಡು ಪ್ರಬಂಧಗಳೂ ಇವೆ. ಹಿಂದೆ ಈ ಓಲೆಗಳು 'ಜೀವನ' ಪತ್ರಿಕೆಯಲ್ಲಿ 'ವನಮಾಲಿ' ಅಂಕಿತವುಳ್ಳ ಲೇಖಕನ ಪತ್ರಗಳಾಗಿ 'ವನಮಾಲಿಯ ಒಲವಿನೋಲೆಗಳು' ಎಂಬ ಶೀರ್ಷಿಕೆಯೊಡನೆ ಪ್ರಕಟವಾಗಿದ್ದವು. ಎಂದಿನಂತೆ ಈ ಗ್ರಂಥವೂ ಗೋಕಾಕರ ಪ್ರಯೋಗಪ್ರಿಯತೆಯ ಸಾಕ್ಷಿಯಾಗಿದೆ. ಪತ್ರಪ್ರಬಂಧಕ್ಕೆ ಕನ್ನಡದಲ್ಲಿ ನೆಲೆಯೇ ಇಲ್ಲದ ಕಾಲದಲ್ಲಿ ಈ ಪತ್ರಗಳು ಪ್ರಕಟವಾದವು. ಹೊಸ ಹಾದಿಯೊಂದು ತೆರೆಯಿತು. ಆದರೆ ದುರದೃಷ್ಟವಶಾತ್ ಮುಂದಿನ ಕಾಲ ದಲ್ಲಿಯೂ ಈ ಕ್ಷೇತ್ರದಲ್ಲಿ ಹೆಚ್ಚಿನ ಬೆಳೆಯಾಗಲಿಲ್ಲ. ನಿರಂಜನ, ಸಿ. ಕೃಷ್ಣ

ಇನ್ನೊಂದಿಬ್ಬರ ಪತ್ರಪ್ರಬಂಧಗಳನ್ನು ಬಿಟ್ಟರೆ, ಸಾಹಿತ್ಯಿಕ ಮೌಲ್ಯದಿಂದ ಕೂಡಿದ ಪತ್ರಪ್ರಬಂಧ ಕನ್ನಡದಲ್ಲಿ ಬೆಳೆಯದೇ ಹೋದುದನ್ನು ನೋಡಿದರೆ, ಗೋಕಾಕರ ಈ ಪ್ರಯತ್ನದ ಮಹತ್ವದ ಅರಿವಾಗುತ್ತದೆ.

ಇಲ್ಲಿಯ ಪತ್ರಗಳು ಜೀವನ ಪಾಠಗಳನ್ನು ಹೇಳುತ್ತವೆ. ಪಾಠಗಳನ್ನು ಹೇಳುವಾತ ಇನ್ನೂ ವಿದ್ಯಾರ್ಥಿಯಾಗಿದ್ದ, ಕವಿತ್ವ ಪಕ್ಷಪಾತಿಯಾದ ತರುಣ ಪತಿ. ಪಾಠ ಹೇಳಿಸಿಕೊಳ್ಳುವವಳು ದಾಂಪತ್ಯದಲ್ಲಿ ಕಾಲಿಟ್ಟ ನವವಧು ಲಲಿತೆ. ದಾಂಪತ್ಯವೇನೋ ಹೊಸತು. ಆದರೆ ಅದಕ್ಕೆ ಸಹಜವೆನಿಸಬಹುದಾದ ಪ್ರೇಮಾಲಾಪ ಇಲ್ಲಿಲ್ಲ. ಇವು ಸುಮಧುರ ಭಾವನೆಯ, ಕಟುಮಧುರ ವಿರಹವನ್ನು ತೋಡಿಕೊಳ್ಳುವ ಪತ್ರಗಳಲ್ಲ. ತನ್ನ ತವರುಮನೆಯಲ್ಲಿಯೇ ಇರುವ ನವ ವಧುವಿನ 'ಬುದ್ಧಿ ವಿಕಾಸ' ಕ್ಕೆಂದು ಪ್ರೀತಿಯ ಲೇಪದೊಡನೆ ಪತಿಯು ಕಳುಹಿಸಿದ ಸಂದೇಶಗಳಿವು. ಗೋಕಾಕರ ವ್ಯಕ್ತಿತ್ವ ಮತ್ತು ಬರವಣಿಗೆಯ ಪರಿಚಯವುಳ್ಳ ಯಾರೇ ಆಗಲಿ, 'ವನಮಾಲಿ' ಯಾರೆಂದು ಸುಲಭವಾಗಿ ಗುರುತಿಸ ಬಹುದು. ಕೊನೆಗೆ ಪ್ರಬಂಧಕಾರನು ವರ್ಣಿಸುವದು ತನ್ನನ್ನೇ ಎಂಬ ಸುಪ್ರಸಿದ್ಧ ಮಾತೊಂದಿದೆ. ಈ ಬರಹಕ್ಕೂ ಆ ಮಾತು ಅನ್ವಯಿಸದೇ ಇರದು.

ವನಮಾಲಿಯ ಪತ್ರಗಳಿಗೆ ಸ್ಪಷ್ಟವಾದ ಉದ್ದೇಶವಿತ್ತು. ಯೌವನದ ಹೊಸ ಹುರುಪಿನಲ್ಲಿ ಬರೆದಿದ್ದರೂ ಅವನ ಪತ್ರಗಳಲ್ಲಿ ಒಲವಿನ ಚೆಕ್ಕಂದದಾಟ ಇರಲಿಲ್ಲ. ಗೋಕಾಕರು ಮುನ್ನುಡಿಯಲ್ಲಿ ಹೇಳುವಂತೆ 'ಆಗ ಲಲಿತಾ ಇನ್ನೂ ಚಿಕ್ಕವಳು. ಆದೇ ಮೈನೆರೆದಿದ್ದಳು. ತನ್ನ ಶಿಕ್ಷಣವನ್ನು ಮುಗಿಸಿಕೊಂಡು ಸಂಸಾರ ರಥವನ್ನು ಹೂಡಬೇಕೆಂದಿದ್ದ ವನಮಾಲಿಯು ಲಲಿತೆಗೆ ಅವಳ ತವರುಮನೆಯಲ್ಲೇ ಅವಳ ಶಿಕ್ಷಣವನ್ನು ಮುಂದೆ ಸಾಗಿಸುವ ಅನುಕೂಲತೆಯನ್ನು ಕಲ್ಪಿಸಿ ಕೊಟ್ಟಿದ್ದ. ಅಲ್ಲದೆ ಇವನ ಒಲವಿನೋಲೆಗಳು ಲಲಿತೆಗೆ ಉಚ್ಚತರಗತಿಯ ಶಿಕ್ಷಣದ ಹೊಳವನ್ನು ಕೊಡುತ್ತಲಿದ್ದವು... ' (ಜೀವನ ಪಾಠಗಳು, ೧೯೪೯, ಪು. ೪).

ಮುನ್ನುಡಿಯಲ್ಲಿ ಪತ್ರರೂಪದ ಈ ಪಾಠಗಳ ಹಿನ್ನೆಲೆಯನ್ನು ಸ್ವಾರಸ್ಯಕರವಾಗಿ ವಿವರಿಸಲಾಗಿದೆ. ಎನ್ಕೆಯವರು ಹೇಳುವಂತೆ 'ಜೀವನ ಪಾಠಗಳ ಮುನ್ನುಡಿ ಒಂದು ಹೊಸ ತಂತ್ರವನ್ನು ಕಲ್ಪಿಸಿ ಈ ಓಲೆಗಳ ಬರವಣಿಗೆಯ ಉದ್ದೇಶವನ್ನು ಸಮಂಜಸವಾಗಿ ಸ್ಪಷ್ಟಪಡಿಸುತ್ತದೆ. ವನಮಾಲಿ ಲೇಖಕರ (ಕಾಲ್ಪನಿಕ) ಮಿತ್ರ. ಲಲಿತಾ ವನಮಾಲಿಯ ನವ-ವಧು. ವನಮಾಲಿ ಮನೆಗೆ ಬಂದ ಲೇಖಕರನ್ನು ಸ್ವಾಗತಿಸಿ ಉಪಚರಿಸುವ ಹೊತ್ತಿನಲ್ಲಿ ಅವರ ಮನೆಯ ಅಚ್ಚುಕಟ್ಟು ತನ, ಲಲಿತೆಯ ರಸಿಕತೆ, ವನಮಾಲಿಯ ಸಂಸ್ಕೃತಿ ಇವೆಲ್ಲ ಅವರನ್ನು ಮುಗ್ಧ

ಗೊಳಿಸುತ್ತವೆ. ಮಧುರಗಾನದಂತೆ ವನಮಾಲಿಯ ದಾಂಪತ್ಯವು ದಿವ್ಯ ಶ್ರುತಿ ಹಿಡಿದು ಮುಂದೆ ಸಾಗಿದುದರ ರಹಸ್ಯವೇನು ಎಂದು ಲೇಖಕರು ಪ್ರಶ್ನಿಸಲು, ವನಮಾಲಿ ಅದೇ ಊಟ ಮುಗಿಸಿ ಲಲಿತೆ ಕೊಟ್ಟ ವೀಳ್ಯವನ್ನು ಮೆಲುತ್ತ "ಅದರಲ್ಲಿ ಏನಿದೆ ? ನಮ್ಮ ಪತ್ರರೂಪ ಪ್ರಶ್ನೋತ್ತರಗಳೇ ಅಂತರಂಗದ ಕದವನ್ನು ತೆರೆದವು" ಎಂದಾಗ ಲೇಖಕರು ಕುತೂಹಲದಿಂದ ಈ ಓಲೆಗಳನ್ನು ಓದಲು ಅಪೇಕ್ಷೆ ಪಡುತ್ತಾರೆ, ಅದೂ ದಂಪತಿಗಳಿಗೆ ಆಕ್ಷೇಪ ಇಲ್ಲದಿದ್ದರೆ. ಲಲಿತೆ ಓಲೆಗಳ ಕಟ್ಟನ್ನೇ ಲೇಖಕರ ಕೈಗೆ ನೀಡುತ್ತಾಳೆ. ಲೇಖಕರು ಒಂದೊಂದೇ ಓಲೆಯನ್ನು ತೆರೆಯು ತ್ತಿದ್ದಂತೆ ಅದು ವಾಚಕನ ವಶವಾಗುತ್ತದೆ. (ಎನ್ಕೆ : ವಿನಾಯಕ ಮಹಾದರ್ಶನ ಪು. ೩೧೯).

ಇನ್ನು ಓಲೆಗಳನ್ನು ಬರೆದ ವಿಷಯಗಳು ಯಾವುವು ? ಅವುಗಳ ಶೈಲಿ ಎಂಥದು ? ಸ್ವಾರಸ್ಯವೇನು ? ಈ ಪ್ರಶ್ನೆಗಳನ್ನು ಉತ್ತರಿಸಲು ಒಂದೆರಡು ಪತ್ರಗಳನ್ನು ಸಂಕ್ಷಿಪ್ತವಾಗಿಯಾದರೂ ತೆರೆದು ನೋಡೋಣ. ಮೊದಲನೆಯ ಓಲೆ- 'ಮೊದಲಗಿತ್ತಿ.' 'ನನ್ನ ಜೀವನ ಗೆಳತಿ ! ಇದೀಗ ನಮ್ಮ ಉತ್ಸವ. ಈಗ ನೀನು ನನ್ನ ಮನೆಯ ನಂದಾದೀಪವಾದೆ. ನನ್ನ ಗೃಹದೇವತೆಯಾದೆ. ನನ್ನ ಸಹಧರ್ಮಿಣಿ ಯಾದೆ. ನನ್ನ ಧರ್ಮ-ಕರ್ಮಗಳಲ್ಲಿ ಪಾಲುಗಾರಳಾದೆ. ನನ್ನ ಮನೆತನವನ್ನು ನಿಲ್ಲಿಸುವ ಧ್ವಜಸ್ತಂಭವಾದೆ. ನನ್ನ ಇರುವಿಕೆಯ ಸರ್ವಸ್ವವಾದ ಪ್ರೇಮಯೋಗದ ಗುರಿಯಾದೆ. ಹೆಚ್ಚೇನು ? ನನ್ನ ಜೀವ ಜೀವಾಳವಾದೆ ! ನಾನೇ ನೀನಾಗಿ ಹೋದೆ ! ಎಲ್ಲರ ಜೀವನದ ಗುಟ್ಟನ್ನು ಬಲ್ಲ ದೇವದೇವನು ಇಂದು ನಮ್ಮನ್ನು ಕೂಡಿಸಿದನು. . .' ಹೀಗೆ ಪ್ರೀತಿಯ ಮಧುರ ಭಾವಗಳಿಂದ ಪ್ರಾರಂಭವಾದ ಪತ್ರ , ತಡವಿಲ್ಲದೆ ವನಮಾಲಿಯ ಜೀವನದ ಉದ್ದೇಶಗಳು, ಅವನು ನಂಬಿದ ಪ್ರೇಮ ಯೋಗ, ಪ್ರೀತಿಯ ಅರ್ಥ, ಅವನ ಮತ್ತು ಸ್ನೇಹಿತರ ನಡುವಿನ ಅನ್ಯೋನ್ಯ ಪ್ರೇಮ, ತುಂಬಾ ಕಲಿತ ತಾನು ಕನ್ನಡವನ್ನಷ್ಟೇ ಕಲಿತ ಲಲಿತೆಯನ್ನು ಮದುವೆಯಾದುದರ ಉದ್ದೇಶ. ಇನ್ನು ಮುಂದೆ ಲಲಿತೆ ಇಂಗ್ಲೀಷ್ ಕಲಿತರೆ ಅದರಿಂದ ಬರುವ ಲಾಭ, ಪ್ರೀತಿಯ ಮಹತಿ ಇತ್ಯಾದಿ ವಿಷಯಗಳ ಬಗ್ಗೆ ಹೇಳುತ್ತದೆ. ಕೊನೆಗೆ 'ಈ ಪ್ರೀತಿ ಯೆಂದರೆ ಏನೆಂದು ಕೇಳುವಿಯಾ? ಅದು ಸಹಜವಾಗಿರುವುದು. ತನ್ನಷ್ಟಕ್ಕೆ ತಾನೆ ಮನಸ್ಸಿನಲ್ಲಿ ಹುಟ್ಟಿ ಬರುವುದು. ಈಗ ನೀನು ನಿನ್ನ ತಾಯಿಯನ್ನು ಪ್ರೀತಿಸುವುದಿಲ್ಲವೇ ? ಯಾವುದಾದರೊಂದು ಸುಂದರವಾದ ವಸ್ತುವನ್ನೂ ಹೂವನ್ನೂ ಮನೋಹರವಾದ ನೋಟವನ್ನೂ ಪ್ರೀತಿಸುವುದಿಲ್ಲವೇ ? ಬೆಳದಿಂಗಳು ಬಿದ್ದಕೂಡಲೇ ನಿನ್ನ ಮನಸ್ಸಿನಲ್ಲಿ ಆನಂದವಾಗುವುದಿಲ್ಲವೇ ? ಅದರಂತೆ ದೇವಾಂಶವೇ ಆದ ಒಂದು ಆತ್ಮವನ್ನು-ಅಂದರೆ ಜೀವವನ್ನು ನೋಡಿ

ಮನಸ್ಸಿನಲ್ಲಿ ಸಹಜವಾಗಿ ಉತ್ಪನ್ನವಾಗುವ ಉದ್ರೇಕಕ್ಕೆ - ಅಂದರೆ ಸಂತೋಷಕ್ಕೆ ಪ್ರೀತಿಯೆನ್ನುತ್ತಾರೆ. ಈಗ ನಾನು ನಿಮ್ಮ ಮನೆಗೆ ಬಂದರೆ ನಿನಗೆ ಸಂತೋಷ ವಾಗುವುದಿಲ್ಲವೇ ? ಅದೇಕಾಗುವುದು ? ನಿನ್ನಲ್ಲಿ ನನ್ನ ವಿಷಯಕ್ಕೆ ಪ್ರೀತಿ ಯಿರುವದೆಂದು !'

ಎರಡನೆಯ ಓಲೆ 'ದೇವ-ಜೀವ' ವೂ ಕೂಡ ಹೀಗೆಯೇ ಪ್ರಾರಂಭವಾಗುತ್ತದೆ : 'ನಾನು ಅಭ್ಯಾಸಕ್ಕೆ ಕುಳಿತ ಕೋಣೆಯಲ್ಲಿ ನೀನು ಸುಳಿಯುತ್ತಿರುವೆ. ನಾನು ತಿರುಗಾಡಲು ಹೋದಾಗ ಮೆಲ್ಲನೆ ಬಂದು ಸೋಂಕುವ ತಣ್ಣಲರಿನಲ್ಲಿ ನಿನ್ನ ಉಸಿರನ್ನು ತೇಲಿಸುತ್ತಿರುವೆ. ನನ್ನ ಕನಸಿನಲ್ಲಿ ಮನೆಮಾಡಿಕೊಂಡಿರುವೆ. ನನ್ನ ಇಂದಿನ ಅಭ್ಯಾಸಕ್ರಮದ ಮೇಲೆ ನನ್ನ ಮುಂದಿನ ಜೀವನದ ಆರ್ಥಿಕ ಸ್ವಯಂ ಪೂರ್ಣತೆಯು ನಿಂತಿರದಿದ್ದರೆ ಅದೆಂದಿಗೋ ನೀನಿದ್ದಲ್ಲಿಗೆ ಬಂದು ಆತ್ಮ ವಿನೋದದಲ್ಲಿ ಕಾಲಕಳೆಯುತ್ತಿದ್ದೆ ! ಈಗ ಉಕ್ಕಿ ಬರುತ್ತಿರುವ ಲಹರಿಗಳನ್ನೆಲ್ಲ ಪತ್ರಗಳಲ್ಲಿ ತುಂಬಿಕೊಳ್ಳಬೇಕಾಗಿದೆ.' ವನಮಾಲಿ ಏನೇ ಹೇಳಲಿ, ಅವನು ಪ್ರಸ್ತಾಪಮಾಡಿದ ಲಹರಿಗಳಲ್ಲಿ ಭಾವನಾಲಹರಿಗಳಿಗಿಂತ ವಿಚಾರ ಲಹರಿಗಳೇ ಹೆಚ್ಚು. ಅವು ದೇವ-ಜೀವರ ಬಗ್ಗೆ, ಜನನ-ಮರಣಗಳ ಬಗ್ಗೆ, ವಿಶ್ವದ ಹೃದಯದಿಂದ ಸದಾ ಹೊರಸೂಸುವ ದಿವ್ಯ ಸಂಗೀತದ ಬಗ್ಗೆ ತಿಳಿಸುವ ಪ್ರಯತ್ನ ಮಾಡುತ್ತವೆ. ಲಲಿತೆಗೆ ಎಷ್ಟು ತಿಳಿಯಿತೋ, ಎಷ್ಟು ದಿಟ್ಟಿತೋ ವನಮಾಲಿಗೆ ಅಂದಾಜಿಲ್ಲ ; ನಾವೂ ತಿಳಿಯೆವು. ಆದರೆ ಓಲೆಯ ಕೊನೆಯ ವಾಕ್ಯದಲ್ಲಿ ವನಮಾಲಿಗೇ ಈ ಅಳುಕು ಇರುವಂತೆ ಕಾಣುತ್ತದೆ : 'ಕಲಿಯಬೇಕೆಂಬ ಹವ್ಯಾಸವುಳ್ಳ ನನ್ನಲ್ಲಿ, ಹರಟೆಕೊಚ್ಚಿ ದಂಗುಬಡಿಸಬೇಕೆಂಬ ಒರಟುತನವಿದೆಯೋ ಏನೋ !'

ಆರನೆಯ ಓಲೆ, ವನಮಾಲಿ ನಂಬಿದ ಪ್ರೇಮಯೋಗವನ್ನು ವಿವರಿಸುತ್ತದೆ. ಪ್ರತಿಯೊಬ್ಬ ಮಾನವನಲ್ಲಿಯೂ ದೇವರ ಅಂಶವಿದೆ. ಅದು ಪ್ರೀತಿಸಲು ಕಲಿಸುತ್ತದೆ. ಆತ್ಮಗಳ ಮಧುರ ಸಂಬಂಧ ಕಲ್ಪಿಸುತ್ತದೆ. ಅದು ಮರಣರಹಿತವಾಗಿದೆ. ಪರಮಾತ್ಮನೆಡೆಗೆ ಕರೆದೊಯ್ಯುವ ಸೋಪಾನವೇ ಪ್ರೀತಿ. 'ಎಲ್ಲ ಆದರ್ಶಗಳಲ್ಲಿ ವಿಶ್ವಾಸವನ್ನು ಕಳೆದುಕೊಂಡಿರುವ ಇಂದಿನ ನಾಗರಿಕತೆಗೆ ಪ್ರೀತಿಯು ಒಳ್ಳೆಯ ಮದ್ದಾಗಿ ಪರಿಣಮಿಸುವುದರಲ್ಲಿ ಸಂದೇಹವಿಲ್ಲ. ಇಂಥ ಪ್ರೀತಿಯಲ್ಲಿಯೇ ನಮ್ಮ ಪರಂಪರೆಯು ಬೆಳೆಯಲಿ' ಎಂದು ವನಮಾಲಿ ಪತ್ರ ಮುಗಿಸುತ್ತಾನೆ.

ಏಳನೆಯ ಓಲೆ - 'ಜ್ಞಾನ'. ಇದರಲ್ಲಿ ಲಲಿತೆಯ ಮುಂದಿನ ಪಾಠ ಆರಂಭ. ವನಮಾಲಿ ಜ್ಞಾನದ ಅವಶ್ಯಕತೆಯ ಬಗ್ಗೆ ಹೇಳುತ್ತಾನೆ. ಪರಮಾರ್ಥ ಸಾಧಿಸುವುದಕ್ಕೆ ಜ್ಞಾನ ಬೇಕಿಲ್ಲ. ಕನ್ನಡ ನಾಡಿನ ಸಂತರನೇಕರು ಇತಿಹಾಸ-

ವಿಜ್ಞಾನಗಳನ್ನು ತಿಳಿದಿರಲಿಲ್ಲ ಎಂಬುದು ನಿಜ. ಆದರೂ ಜ್ಞಾನಿಯಾದ ಅನುಭಾವಿಗೆ ಜೀವನ ರಹಸ್ಯದ ವಿವಿಧತೆಯು ಇನ್ನೂ ಹೆಚ್ಚು ಸ್ಪಷ್ಟವಾಗಿ ಗೋಚರಿಸುವದು. ಮಹಾನ್ ಸಂತ ಶರೀಫರು ಬರಿ ಒಂದು ಗಿರಣಿಯನ್ನು ನೋಡಿದ ಮೇಲೆ 'ಗಿರಣಿ ವಿಸ್ತಾರ ನೋಡಮ್ಮ ! ಶರಣು ಕೊಡಮ್ಮ !' ಎಂದು ದೇಹವನ್ನು ಗಿರಣಿಗೆ ಹೋಲಿಸಿ ಹಾಡಿದರು. ಆದರೆ ಅನುಭಾವಿಗಳಾಗಿಯೂ ಶಾಸ್ತ್ರ-ವಿಜ್ಞಾನಗಳ ತಳಬುಡವನ್ನು ಅರಿತ ಶ್ರೀ ಅರವಿಂದರ ಜೀವನ-ದೃಷ್ಟಿ ಹೆಚ್ಚು ವ್ಯಾಪ್ತಿ ಹೊಂದಿದೆಯೆಂದು ವನಮಾಲಿ (ಸರಿಯಾಗಿಯೇ) ಗ್ರಹಿಸಿದ್ದಾನೆ.

ವಿವಿಧ ಜ್ಞಾನಶಾಖೆಗಳ ಬಗ್ಗೆ ಚುಟುಕಾಗಿ ಅವನು ಹೇಳುತ್ತ ಹೋಗುತ್ತಾನೆ. ಅಂಥ ವಿವರಣೆ ಕೊಡುವ ಒಂದು ದೀರ್ಘ ಪ್ಯಾರಾ ಹೀಗಿದೆ :

'ಇತಿಹಾಸವನ್ನೋದಿದಾಗ ಮಾನವಜಾತಿಯ ದುಃಖಪರಂಪರೆಯಲ್ಲಿ ವೈಯಕ್ತಿಕ ಕಷ್ಟ-ನಷ್ಟಗಳನ್ನು ನಾವು ಮರೆತುಬಿಡುತ್ತೇವೆ. ನಿಸರ್ಗದೊಡನೆ ಹೋರಾಡಿ ಮಾನವನು ಮನಗಾಣಿಸಿಕೊಟ್ಟ ಪೌರುಷವನ್ನು ಕಂಡು ಹಿಗ್ಗುತ್ತೇವೆ. ಸಾಹಿತ್ಯವನ್ನೋದಿ ನಮ್ಮ ಭಾವನೆಗಳನ್ನೂ ಜೀವನಕ್ರಮವನ್ನೂ ನಾವು ಪವಿತ್ರತರವಾಗಿ, ಸೂಕ್ಷ್ಮತರವಾಗಿ ಪಲ್ಲಟಗೊಳಿಸುತ್ತೇವೆ. ನಮ್ಮ ಸುಖದುಃಖಗಳಿಗೆ ಒಂದು ಹೊಸ ನಯವನ್ನು ತಂದುಕೊಡುತ್ತೇವೆ. ವಿಜ್ಞಾನಶಾಸ್ತ್ರದ ಪರಂಪರೆಯಲ್ಲಿ ಓದಿ ತಿಳಿದಾಗ ಸೃಷ್ಟಿಯ ವಿಶಾಲತೆಯೂ ಅದ್ಭುತವೂ ನಮ್ಮ ಕಣ್ಣೆದುರಿಗೆ ಬಂದು ನಿಲ್ಲುತ್ತವೆ.; ಅಂತರಾಳ-ವಿಕರಾಳವಾಗಿ ಕಾಣುವ ಈ ಸೃಷ್ಟಿಯು ಸಹ ಕೆಲವು ನಿಯಮಗಳಂತೆ ನಡೆಯುವುದು ನಮಗೆ ಮನದಟ್ಟಾಗುತ್ತದೆ. ಅದ್ಭುತವಾದ ಶಕ್ತಿಯೊಂದು ಮಣ್ಣಿನಲ್ಲಿ ಮೈಗೊಂಡು, ಮರಬಳ್ಳಿಗಳಲ್ಲಿ ರೂಪತಾಳಿ, ಪಶುಪಕ್ಷಿಗಳಾಗಿ ಸಂಚರಿಸಿ, ಮಾನವನಾಗಿ ಧೇನಿಸಿ ದೈವಿಕತೆಯನ್ನು ಸ್ಫುಟವಾಗಿಸಲು ಹಾಕಿದ ಹೊಂಚು ಕಂಡುಬರುತ್ತದೆ. ಚಿತ್ರಕಲೆಯೇ ಈ ಶಕ್ತಿಯ ಸೌಂದರ್ಯದ ಚಿತ್ರ ಸೃಷ್ಟಿ. ಮೂರ್ತಿಶಿಲ್ಪವೇ ಆ ಸೌಂದರ್ಯದ ಮೂರುತಿಯನ್ನು ನಮ್ಮ ಕಣೆದುರಿಗೆ ನಿಲ್ಲಿಸುವ ಕಲೆ ...... ಮಾನವ ಜಾತಿಯ ಅನ್ನದ ಪ್ರಶ್ನೆಯು ಹೇಗೆ ಬಿಡಬೇಕೆಂಬುದನ್ನು ಅರ್ಥಶಾಸ್ತ್ರವು ತೋರಿಸಿದರೆ, ಮಾನವರು ಹೇಗೆ ಒಟ್ಟುಗೂಡಿ ಬಾಳಬೇಕೆಂಬುದನ್ನು ಸಮಾಜಶಾಸ್ತ್ರವು ಸೂಚಿಸುತ್ತದೆ..... ಈ ಎಲ್ಲ ಕೂಟಪ್ರಶ್ನೆಗಳ ಚಕ್ರವ್ಯೂಹವಾದ ಮಾನವೀಯ ಜೀವನದಲ್ಲಿ ಸಮ್ಯಕ್ ಜ್ಞಾನವನ್ನೂ ಸಮತೂಕವನ್ನೂ ಹೇಗೆ ಒಡಮೂಡಿಸಬೇಕೆಂಬುದನ್ನು ಮಹಾಪುರುಷರ ಚರಿತ್ರೆಗಳು ಉದಾಹರಿಸಿ ತೋರಿಸುತ್ತವೆ . . . .' ಎಂದಿನಂತೆ ವನಮಾಲಿ ಹೆಸರಿನ ಗೋಕಾಕರಲ್ಲಿ ಇಲ್ಲಿಯೂ ಭಾವದ ಕಾವಿಗಿಂತ ವಿಚಾರದ ಬೆಳಕು ಹೆಚ್ಚು ತೀಕ್ಷ್ಣವಾಗಿ ಕಾಣುತ್ತದೆ.

'ಕರ್ಮಕುಶಲತೆ' ಎಂಬ ಪತ್ರದಲ್ಲಿ ವನಮಾಲಿ ನಾಳೆ ಗೃಹಿಣಿಯಾಗಿ ಸಂಸಾರ ತೂಗಿಸಿಕೊಂಡು ಹೋಗಬೇಕಾಗಿರುವ ಲಲಿತೆಗೆ ವ್ಯವಹಾರದ ಕಿವಿಮಾತುಗಳನ್ನು ಹೇಳುತ್ತಾನೆ. ಅಂಥ ಒಂದು ಪಾಠ : 'ಆಳು - ಹೋಳುಗಳನ್ನು ನಡೆಯಿಸಿಕೊಳ್ಳುವ ರೀತಿಯನ್ನು ನೋಡು ! ಇಂಥವರೊಡನೆ ಪ್ರೇಮದಿಂದ ನಡೆದುಕೊಳ್ಳ ಬೇಕೆಂಬುದನ್ನೇ ಅನೇಕರು ಮರೆಯುತ್ತಾರೆ. ಪಗಾರ ಕೊಟ್ಟ ಮೇಲೆ ಬೆಣ್ಣೆ ಹಚ್ಚುವ ಕೆಲಸವೇಕೆಂದು ಇವರ ಪ್ರಶ್ನೆ ! ಆದರೆ ಮಾನವನು ಯಾವ ಉದ್ಯೋಗವನ್ನೇ ಅನುಸರಿಸಲಿ, ಅವನಿಗೊಂದು ಹೃದಯವಿರುವುದು ಸುಳ್ಳೆ ? ಒಳ್ಳೆಯ ಮಾತಿಗಳಿಂದ ಬಡತನ ಬಂತು ? ಬಳ್ಳೊಳ್ಳೆಯನ್ನು ಕೊಳ್ಳಲು ಬೇಕಾದ ದುಡ್ಡು ಒಳ್ಳೆಯ ಮಾತಿನ ಹಸಿವನ್ನು ಹೇಗೆ ಕಳೆದೀತು ?' ಜೀವನ ಕಲೆಯ ಬಗ್ಗೆ ಜಿಜ್ಞಾಸೆ ಮಾಡುತ್ತ ವನಮಾಲಿ ಭರತೇಶನ ಕರ್ಮಯೋಗ, ಅಲ್ಲಮಪ್ರಭುವಿನ ನಿಷ್ಕರ ಜ್ಞಾನವಂತಿಕೆ ಮತ್ತು ಪುರಂದರದಾಸರ ನಿಸ್ಸೀಮ ಭಕ್ತಿ ಸಾಧನೆ - ಹೀಗೆ ಕರ್ಮಯೋಗ, ಜ್ಞಾನಯೋಗ, ಭಕ್ತಿಯೋಗಗಳ ಸಮನ್ವಯ ಸಾಧಿಸಬೇಕೆಂಬ ನಿಲುವಿಗೆ ಬಂದು ಮುಟ್ಟುತ್ತಾನೆ.

ಮುಂದಿನ ಹನ್ನೆರಡು ಪ್ರಬಂಧಗಳು ದಾಂಪತ್ಯ, ದೇಹಾರೋಗ್ಯ, ಕಾಮ-ಕ್ರೋಧ-ಮದ-ಅಸೂಯೆಗಳೆಂಬ ಬೇಟೆನಾಯಿಗಳಿಗೆ ಸಿಗುವ ಅಮಾಯಕ ಮೊಲಗಳಾಗದೇ, ಆ ಬೇಟೆನಾಯಿಗಳನ್ನು ಗುರುತಿಸಿ ನಿಯಂತ್ರಿಸುವ ವಿಧಾನ, ಮಂಗನಂತಿರುವ ಮನಸ್ಸಿನ ನಿಯಂತ್ರಣ, ಮನೆಯೆಂಬ ದೇಗಲ, ಉದರ ನಿರ್ವಾಹದ ರೀತಿ, ಸಮಾಜ ಸೇವೆ, ರಾಜಸಿಕ ಸಮಾಜದಲ್ಲಿ ಸಾತ್ವಿಕ ವ್ಯಕ್ತಿ ಇತ್ಯಾದಿ ವಿಷಯಗಳ ಮೇಲೆ ಹೆಣೆಯಲ್ಪಟ್ಟಿವೆ. ಈ ಪ್ರಬಂಧಗಳಲ್ಲಿ 'ಮನೆ', 'ಉದರ ನಿರ್ವಾಹ', 'ಸಮಾಜಸೇವೆ', 'ಸುಖದುಃಖಗಳ ದ್ವಂದ್ವ' -ಇವು ಚಿಕ್ಕ ಚಿಕ್ಕ ಬರಹಗಳು. ಪ್ರತಿಯೊಂದೂ ಒಂದು ಭಾವರೂಪಕದಂತಿವೆ. 'ಮನೆ' ಒಂದೂವರೆ ಪುಟದಷ್ಟು ಗಾತ್ರದ ಗದ್ಯಗೀತೆ ಎನ್ನುವುದೇ ಹೆಚ್ಚು ಸೂಕ್ತ.

'ಜೀವನ ಪಾಠಗಳು' ಸಂಗ್ರಹದ ಬಗ್ಗೆ ಸೀತಾರಾಮಯ್ಯನವರು ಹೇಳಿದ ಒಂದು ಮಾತನ್ನು ಇಲ್ಲಿ ಎತ್ತಿಹೇಳಬಹುದು : 'ಸರ್ವಜ್ಞ ವಚನಗಳು', 'ಮಂಕುತಿಮ್ಮನ ಕಗ್ಗ', 'ರಂಗಬಿನ್ನಪ' - ಈ ಪರಂಪರೆಯಲ್ಲಿ ಜೀವನದ ತಾತ್ವಿಕ ಸೌಂದರ್ಯವನ್ನು ಪರಿಚಯ ಮಾಡಿಕೊಡುವ ಈ ಓಲೆ-ಬರಹಗಳಲ್ಲಿ ಅವುಗಳ ವಿಸ್ತಾರ ವೈವಿಧ್ಯಗಳಿಲ್ಲದಿದ್ದರೂ, ಜೀವನವನ್ನು ಒಳಹೊಕ್ಕು ನೋಡುವ ಅದೇ ಪರಾಮರ್ಶ ದೃಷ್ಟಿಯಿದೆ ಎಂದೇ, ಇವುಗಳ ಮೌಲ್ಯ ಪ್ರಧಾನವಾಗಿ ಉಪದೇಶಾತ್ಮಕ, ನೈತಿಕ, ಕೆಲವೊಮ್ಮೆ ಆಧ್ಯಾತ್ಮಿಕ. ಕಾವ್ಯಮೌಲ್ಯ ಇಲ್ಲವೆಂದಲ್ಲ .....'

ಈ ಸಂಗ್ರಹದ ಒಂದು ವೈಶಿಷ್ಟ್ಯವೆಂದರೆ ೬೨ ಪುಟಗಳ ಬರಹದಲ್ಲಿ ಏನಿಲ್ಲೆಂದರೂ ಪುಟಕ್ಕೊಂದರಂತೆ ಗೋಕಾಕರ ಸುಭಾಷಿತ-ಅಣಿಮುತ್ತುಗಳನ್ನು ಹೆಕ್ಕಿಕೊಳ್ಳ ಬಹುದು. ಕೆಲವು ಅಣಿಮುತ್ತುಗಳಿಗೆ ಕಾವ್ಯದ ಹೊಳಪಿದ್ದರೆ, ಮತ್ತೆ ಕೆಲವಕ್ಕೆ ವಿಚಾರದ ಪ್ರಖರತೆಯಿದೆ. ಗೋಕಾಕರು ತಮಗೆಷ್ಟು ಸಾಧ್ಯವೋ ಅಷ್ಟು ಪರಿಯಾಗಿ ತತ್ವಮಂಡನೆಯನ್ನು ಹಗುರಗೊಳಿಸಲು ಯತ್ನಿಸಿದ್ದಾರೆ. ಲಲಿತೆ ಗೋಸ್ಕರ ಲಲಿತವಾಗಬೇಕಷ್ಟೇ ! ಪಾಠಗಳು ಲಲಿತಕ್ಕನಿಗೆ ಬೆಳೆಯದೇ ಹೋದರೆ ಲಾಭವೇನು ಎಂಬ ಅವರ ಅಳುಕು ಸಹಜವಾದುದು. 'ಲಲಿತಕ್ಕನು ತಿಳಿಯುವಂತಹದನ್ನು ನಾಡ ಎಳೆಯರೂ ತಿಳಿದುಕೊಂಡಾರು' ಎಂಬುದು ಅವರ ಪ್ರಾಮಾಣಿಕ ಅನಿಸಿಕೆ. ಈಗ ಐವತ್ತು ವರ್ಷಗಳ ಹಿಂದಿನ ಎಳೆಯರ ಮಾತು ಹೇಗೋ ಗೊತ್ತಿಲ್ಲ ; ಈಗಿನ ಎಳೆಯರಿಗಂತೂ ಹೀಗೆ ತಿಳಿದುಕೊಳ್ಳುವ ಬಯಕೆ ಯಾಗಲಿ, ತಾಳ್ಮೆಯಾಗಲಿ ಇದೆಯೇ ಎಂಬ ಸಂಶಯ ನಮ್ಮನ್ನು ಕಾಡುತ್ತದೆ.

❑ ❑

ಗೋಕಾಕ : ಇಂಗ್ಲೀಷ ಬರಹಗಳು

– ಜಿ. ಬಿ. ಸಜ್ಜನ

ನೂರು-ನೂರೈವತ್ತು ವರುಷಗಳ ಕಾಲ ಬ್ರಿಟಿಷರು ಭಾರತವನ್ನು ಆಳಿ ಹೋದಕಾರಣ, ಇಂಗ್ಲೀಷಭಾಷೆ ಭಾರತದಲ್ಲಿ ಬೇರೂರಲು ಸಾಧ್ಯವಾಯಿತು. ಸ್ವಾಂತ್ರ್ಯಪೂರ್ವಯುಗದಲ್ಲಿ ಶಿಕ್ಷಣದ ಮಾಧ್ಯಮ, ಪ್ರಾಥಮಿಕ, ಮಾಧ್ಯಮಿಕ ಶಾಲೆಗಳಲ್ಲಲ್ಲದಿದ್ದರೂ, ಕಾಲೇಜು ವಿಶ್ವವಿದ್ಯಾಲಯ ಮಟ್ಟದಲ್ಲಿ ಇಂಗ್ಲೀಷೇ ಆಗಿದ್ದುದರಿಂದ, ಹಾಗೂ ಎಲ್ಲ ಹಂತಗಳಲ್ಲಿ ಆಡಳಿತ ಮತ್ತು ಸರ್ಕಾರೀ ವ್ಯವಹಾರಗಳು ಇಂಗ್ಲೀಷನಲ್ಲೇ ನಡೆಯುತ್ತಿದ್ದದರಿಂದ, ಆ ಭಾಷೆಯಲ್ಲಿ ಪರಿಣತಿಯನ್ನು ಗಳಿಸುವುದು ಅನೇಕ ಭಾರತೀಯರಿಗೆ ಅನಿವಾರ್ಯವಾಗಿತ್ತು. ಬ್ರಿಟಿಷರು ಭಾರತವನ್ನು ಬಿಟ್ಟು ಹೋದನಂತರವೂ, ಆ್ಯಂಗ್ಲೋ-ಇಂಡಿಯನ್ನರ ಭಾಷೆ ಎಂದು ಮಾತ್ರವಲ್ಲದೆ, ಇತರ ಕಾರಣಗಳಿಂದ ಅಂತರ್-ರಾಜ್ಯ ಸಂಪರ್ಕ ಮಾಧ್ಯಮವೆಂದೂ, ಅಂತರ್‌ರಾಷ್ಟ್ರೀಯ ವ್ಯವಹಾರಗಳಿಗೆ ಹಾಗೂ ಪಾಶ್ಚಿಮಾತ್ಯ ವಿಜ್ಞಾನ-ತಂತ್ರಜ್ಞಾನದ ಆರ್ಜನೆಗೆ ಆವಶ್ಯಕವಾದ ನಮಗಿರುವ ಏಕೈಕಮಾಧ್ಯಮವೆಂಬ ಕಾರಣದಿಂದಲೂ-ಇಂಗ್ಲೀಷ ಪ್ರಮುಖ ಭಾರತೀಯ ಭಾಷೆಗಳಲ್ಲೊಂದು ಎಂದು ಪರಿಗಣಿಸಲ್ಪಟ್ಟಿತು. ಅನ್ಯಭಾಷಾ ಕಲಿಕೆಯ ಬಗೆಗೆ ಸಹಜವಾದ ಲವಲವಿಕೆಯನ್ನು ಪಡೆದಿರುವ ಭಾರತೀಯರು ಇಂಗ್ಲೀಷನ್ನು ತಮ್ಮದನ್ನಾಗಿ ಮಾಡಿಕೊಂಡುದು ಆಶ್ಚರ್ಯಕಾರಕವೇನಲ್ಲದಿರಬಹುದು. ಆದರೆ, ಅದರಲ್ಲಿ ಹಲಕೆಲವರು ಸಿದ್ಧಿಸಿಕೊಂಡ ಭಾಷಾಪ್ರಭುತ್ವ ನಿಜಕ್ಕೂ ಪ್ರಶಂಸನೀಯ.

ಈ ಪ್ರಭುತ್ವ ಎಂಥದ್ದು,? ಯಾವ ಮಟ್ಟದ್ದು ?, ಯಾವ ಯಾವ ತರಹದ ಅಭಿವ್ಯಕ್ತಿಗೆ ಅನುಗುಣವಾದ ಸಾಮರ್ಥ್ಯ ? ಎಂಬುದು ಮಹತ್ವದ ಪ್ರಶ್ನೆ. ಮಾತೃಭಾಷೆ ಬೇರೊಂದೇ ಆಗಿರುವ ಜನಕ್ಕೆ ಆಗಿರುವ ಜನಕ್ಕೆ ಎಷ್ಟರಮಟ್ಟಿಗೆ ವಿಚಾರ ಹಾಗೂ ಭಾವನಾ-ಲಹರಿಗಳು ಅಂತಃಸ್ಫೂರ್ತವಾಗಿ ಇಂಗ್ಲೀಷಿನಲ್ಲೇ ಮೂಡಿ ಬರಬಲ್ಲವು ? ಎಷ್ಟೇ ಆದರೂ, ಭಾರತೀಯರು ತಮ್ಮ ಮಾತೃಭಾಷೆಯಲ್ಲಿಯೇ ಮೊದಲು 'ಚಿಂತಿಸಿ', 'ಭಾವಿಸಿ' ತದನಂತರದಲ್ಲಿ ಆ ಚಿಂತನೆ-ಭಾವನೆಗಳನ್ನು ಭಾಷಾಂತರಿಸುವಂಥವರು ; ಅವರು ಇಂಗ್ಲೀಷಿನಲ್ಲಿ ಕಾವ್ಯ ರಚಿಸಿದರೆ ಅದು ಮ್ಯಾಥ್ಯೂ ಆರ್ನಲ್ಡನಿಗೆ ಸೀರೆ ಉಡಿಸಿ ನಿಲ್ಲಿಸಿದಂತೆ ಕಾಣುವುದು - ಅದರಲ್ಲಿ ಸ್ವೋಪಜ್ಞತೆ ಸಾಧಿಸಲಾಗದು ಎಂದು ಮುಂತಾಗಿ ಟೀಕಿಸುವ ಒಂದು ಕಾಲವೂ ಇತ್ತು. ಈ ಪಂಥದವರ ದೃಷ್ಟಿಯಲ್ಲಿ, ಯಾವುದೇ ಭಾರತೀಯನು ತನ್ನ ಮಾತೃಭಾಷೆಯನ್ನು ಬಿಟ್ಟು ಇಂಗ್ಲೀಷಿನಲ್ಲಿ ಸೃಜನಾತ್ಮಕ ಬರಹದ ಉಜ್ಜುಗಕ್ಕೆ ಕೈಹಾಕಿರುವುದೆಂದರೆ "ಅವ್ಯಾಪಾರೇಷು ವ್ಯಾಪಾರಃ".

ಆದರೆ, ಇಂಗ್ಲೀಷನ್ನು ಬಹುಕಾಲ ಅಭ್ಯಸಿಸಿದ ಭಾರತೀಯರನೇಕರಿಗೆ ಅದು 'ಪರಕೀಯಭಾಷೆ'ಯಾಗಿರದೆ 'ದ್ವಿತಿಯಭಾಷೆ'ಯಾಗಿದೆ ; ಇಂಥ ಭಾಷೆಯಲ್ಲಿ ಕಲಾತ್ಮಕ ಸೃಜನಾತ್ಮಕ ಅಭಿವ್ಯಕ್ತಿ ಸಾಧ್ಯ ಎಂಬ ನಿಲುಮೆ ಇತ್ತೀಚಿನ ದಿನಗಳಲ್ಲಿ ರೂಢವಾಗಿದೆ.

ದ್ವಿಭಾಷಿಗನಾಗಿ ಎರಡು ಸಾಂಸ್ಕೃತಿಕ ಸ್ತರಗಳಲ್ಲಿ ಜೀವನ ನಡೆಯಿಸುವ ಸುಶಿಕ್ಷಿತನಾದ ಭಾರತೀಯನಿಗೆ ತನ್ನ ಮಾತೃಭಾಷೆಯಲ್ಲಿ ಸೃಜನಾತ್ಮಕ ಅಭಿವ್ಯಕ್ತಿ ಸಾಧಿಸಿದ್ದಾಗ, ಇನ್ನೊಂದರಲ್ಲೂ (ಅಂದರೆ ಇಂಗ್ಲೀಷಿನಲ್ಲೂ) ಅದನ್ನು ಸಾಧಿಸ ತೊಡಗಿದ. ಮೊದಮೊದಲು ಈ ಪ್ರಯತ್ನ ವ್ಯಾವಹಾರಿಕ ಅನಿವಾರ್ಯತೆ ಎನಿಸಿದ್ದರೂ (ಅಂದರೆ, ನಮ್ಮ ಬರೆಹ ಇಂಗ್ಲೀಷ ಮಾತನಾಡುವ ಜಗದ್ವ್ಯಾಪಿ ವಾಚಕ ವೃಂದವನ್ನು ತಲಪುವಂತಾದರೆ ಇನ್ನೂ ವಾಸಿ. ನಮ್ಮ ಭಾಷೆಯಲ್ಲಷ್ಟೇ ಬರೆದರೆ ನಮ್ಮ ಸಾಹಿತ್ಯವನ್ನು ಎಷ್ಟು ಜನ ಓದಿಯಾರು ? ಎಂಬ ಧೋರಣೆ) ಬರಬರುತ್ತ ಇದೊಂದು ಸಾಂಸ್ಕೃತಿಕ ಅನಿವಾರ್ಯತೆ ಎನ್ನಿಸತೊಡಗಿತು. ಭಾರತೀಯ ಜನಜೀವನ ಹಾಗೂ ಸಂಸ್ಕೃತಿಯನ್ನು ಹೊರಗಿನ ಜಗತ್ತು ತಿಳಿದುಕೊಳ್ಳಬೇಕಾದರೆ, ಇವುಗಳನ್ನು ಇಂಗ್ಲೀಷಿನಲ್ಲಿ-ಬೇಕಿದ್ದರೆ, ರಾಜಾರಾವ್ ಅವರು ಪ್ರಯೋಗಿಸಿದಂತೆ, ತಕ್ಕ ಮಾರ್ಪಾಟುಗಳೊಂದಿಗೆ-ಪಡಿಮೂಡಿಸುವುದು ಅಗತ್ಯ ಎಂಬ ಧೋರಣೆ ಬಲಗೊಳ್ಳುತ್ತಿದೆ.

ಈ ಒಂದು ಸನ್ನಿವೇಶ ಹಾಗೂ ಹಿನ್ನೆಲೆಯಲ್ಲಿ ಭಾರತೀಯ ಆಂಗ್ಲಸಾಹಿತ್ಯ ಹುಟ್ಟಿ ಬೆಳೆದಿದೆ. ಮೊದಮೊದಲು 'ಅಷ್ಟಿ ಇಲ್ಲ' 'ತಕ್ಕಮಟ್ಟಿಗೆ ಚೆನ್ನಾಗಿದೆ' ಎಂಬ

ಬೆನ್ನು ತಟ್ಟುವ ಪ್ರೋತ್ಸಾಹ-ಶ್ಲಾಘನೆ ಪಡೆದ ಸಾಹಿತ್ಯ, ಇಂದು ಜಾಗತಿಕ ಸಾಹಿತ್ಯದಲ್ಲಿ ತನ್ನದೇ ಆದ ಒಂದು ಸ್ಥಾನವನ್ನು, ಗಣನೀಯ ಸಾಧನೆಯೆಂಬ ಖ್ಯಾತಿಯನ್ನು ಪಡೆದಿದೆ. ವಿಶೇಷತಃ, ಆಧುನಿಕ ಯುಗದಲ್ಲಿ ಜೀವಿಸುತ್ತಿರುವ ಯಾವುದೇ ಭಾರತೀಯ ಬುದ್ಧಿಜೀವಿಗೆ, ಪೂರ್ವ-ಪಶ್ಚಿಮಗಳ ಸಂಸ್ಕೃತಿಗಳನ್ನು ತನ್ನಲ್ಲಿ ಮೇಳವಿಸಿಕೊಳ್ಳಬೇಕಿರುವ ಅನಿವಾರ್ಯತೆಯ ಎದುರಲ್ಲಿ, ಇಂಗ್ಲೀಷ ಏಕೈಕ ಸೃಜನಾತ್ಮಕ ಅಭಿವ್ಯಕ್ತಿ ಮಾಧ್ಯಮ ಎನ್ನಿಸಿದ್ದರೆ ಆಶ್ಚರ್ಯವೇನಲ್ಲ. ಇಂಥ ಸಂದರ್ಭದಲ್ಲಿ ಸ್ವಾತಂತ್ರ್ಯೋತ್ತರ ಕಾಲದ ಭಾರತೀಯ ಆಂಗ್ಲ ಸಾಹಿತ್ಯ ಇನ್ನೂ ಹರವಾಗಿ ಹರಿಯುವ ಹೊಳೆಯಾಗುತ್ತಿದೆ.

ಕನ್ನಡದ ಕಟ್ಟಾಭಿಮಾನಿಗಳೂ, ಇಂಗ್ಲೀಷಿನ ಉದ್ದಾಮ ಪಂಡಿತರೂ ಆದ ವಿನಾಯಕ ಕೃಷ್ಣ ಗೋಕಾಕರು ಉಭಯಭಾಷೆಗಳಲ್ಲೂ ಸಾಹಿತ್ಯಕೃಷಿ ಗೈದಿದ್ದಾರೆ. ಮೊನ್ನೆ ಮೊನ್ನೆ ತಾನೇ ತಮ್ಮ ಕನ್ನಡದಲ್ಲಿನ ಸಾಹಿತ್ಯಸಾಧನೆಗಾಗಿ-ವಿಶೇಷತಃ ತಮ್ಮ 'ಭಾರತಸಿಂಧುರಶ್ಮಿ' ಎಂಬ ಮಹಾಕಾವ್ಯಕ್ಕಾಗಿ ಭಾರತೀಯ ಜ್ಞಾನಪೀಠದ ಪುರಸ್ಕಾರವನ್ನು ಪಡೆದವರಾಗಿದ್ದಾರೆ. ಕನ್ನಡದಲ್ಲಿನ ಅವರ ಸಾಹಿತ್ಯಸೃಷ್ಟಿಯ ಹರವು ದೊಡ್ಡದು. ಅಲ್ಲೂ ಕಾವ್ಯ ಬರೆದಿದ್ದಾರೆ ('ನವ್ಯಕಾವ್ಯ ಪ್ರವರ್ತಕರು' ಎನಿಸಿ ಕೊಂಡಿದ್ದಾರೆ). ವಿಮರ್ಶೆ ಬರೆದಿದ್ದಾರೆ, ಬೃಹತ್ ಗಾತ್ರದ ಕಾದಂಬರಿ ಸರಣಿಯನ್ನು ಕನ್ನಡ ಸಾರಸ್ವತಲೋಕಕ್ಕೆ ಕೊಟ್ಟಿದ್ದಾರೆ. ಮಹಾಕಾವ್ಯವನ್ನೂ ನೀಡಿದ್ದಾರೆ. ಇಂಗ್ಲೀಷಿನಲ್ಲಿ ಅವರು ಸೃಷ್ಟಿಸಿದ ಸಾಹಿತ್ಯದ ಗಾತ್ರ ಅದಕ್ಕೆ ಸಮನಾಗಲಿಕ್ಕಿಲ್ಲ. ಆದಾಗ್ಯೂ ಇಂಗ್ಲೀಷಿನಲ್ಲಿ ಅವರು ಬರೆದ ವಿಮರ್ಶಾ ಹಾಗೂ ಪಾಂಡಿತ್ಯಪೂರ್ಣ ಕೃತಿಗಳ ಸಂಖ್ಯೆ ಹಾಗೂ ವ್ಯಾಪ್ತಿ ದೊಡ್ಡದು. ಪ್ರಥಮವರ್ಗದಲ್ಲಿ ಪ್ರಥಮರಾಗಿ ಮುಂಬಯಿ ವಿಶ್ವವಿದ್ಯಾಲಯದ ಬಿ. ಎ. ಹಾಗೂ ಎಂ. ಎ. ಮತ್ತು ಆಕ್ಸಫರ್ಡ ವಿಶ್ವವಿದ್ಯಾಲಯದ ಬಿ.ಎ. ಪದವಿಯನ್ನು ಪಡೆದ ಅವರು, ಇಂಗ್ಲೀಷ ಪ್ರಾಧ್ಯಾಪಕರಾಗಿ ಇಂಗ್ಲೀಷ ಹಾಗೂ ವಿದೇಶಿ ಭಾಷೆಗಳ ಮಧ್ಯವರ್ತಿ ಸಂಸ್ಥೆ (ಹೈದರಾಬಾದ)ಯ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ ಅವರು, 'ಭಾರತದಲ್ಲಿ ಇಂಗ್ಲೀಷಿನ ವರ್ತಮಾನಸ್ಥಿತಿ ಹಾಗೂ ಭವಿತವ್ಯ' (೧೯೬೪) ಎಂಬ ವಿಷಯಕ ಗ್ರಂಥ ಬರೆದಿದ್ದಾರೆ. ಪ್ರಸ್ತುತವಿಷಯದ ಮೇಲೆ ಪ್ರಭುತ್ವಪೂರ್ಣವಾಗಿ ಬರೆಯುವ ಅಧಿಕಾರಲೇಖನಿ ಅವರದಿದ್ದಂತೆ ಬಹುಶಃ ಇನ್ನಾರದಿರದು. ಅಲ್ಲದೆ, ೧೯೫೨ ರಷ್ಟು ಹಿಂದೆಯೇ 'ಕಾವ್ಯದ ದೃಷ್ಟಿಕೋನದಿಂದ ಭಾಷೆಯ ಅಭ್ಯಾಸ' ಎಂಬ ಗ್ರಂಥವನ್ನು ಬರೆದರು. ಇವುಗಳಲ್ಲದೆ,The Golden Treasury of Indo-Anglian Poetry (1970), studies in Indo-Anglian Poetry (1972), India and World Culture (1972), D. R. Bendre : Poet and Seer (1970), Sri. Aurobindo : Seer and Poet, The Concept of Indian literature

(1979), An Integral view of Poetry : An Indian Perspective (1975) ಹಾಗೂ Coleridge's Aesthetics (1975) ಎಂಬ ಸಂಪಾದನ ಹಾಗೂ ಮಿರ್ಶಾ ಗ್ರಂಥಗಳನ್ನು ಹೊರತಂದಿದ್ದಾರೆ. ಗುರುತರ ಆಡಳಿತಾತ್ಮಕ ಜವಾಬ್ದಾರಿಗಳ ಹೊರೆ ಅವರ ಮೇಲೆ ಇದ್ದಾಗಲೂ ಗೋಕಾಕರು ತಮ್ಮ ಪಾಂಡಿತ್ಯಪೂರ್ಣ ಹಾಗೂ ಸೃಷ್ಯಾತ್ಮಕ ಒಲವುಗಳಿಗೆ ವಿಮುಖರಾಗಲಿಲ್ಲ. ದೇಶದ ಮೂಲೆಮೂಲೆಗಳಲ್ಲಿನ ಗ್ರಂಥಾಲಯಗಳಿಗೆ ಭೇಟಿಕೊಟ್ಟು, ಅಪರೂಪದ ಆಕರ ಗ್ರಂಥಗಳನ್ನು ದೊರಕಿಸಿ, ತಮ್ಮThe Golden Treasury of Indo Anglian Poetry ಗ್ರಂಥವನ್ನು ಸಂಪಾದಿಸಿದ್ದಾರೆ. ಅನೇಕ ಪಿಎಚ್.ಡಿ. ಪ್ರಬಂಧಗಳಿಗೆ ರೂಪರೇಷೆ ಒದಗಿಸ ಬಹುದಾದ ಚರಿತ್ರಾತ್ಮಕ ಲೇಖನ ಪ್ರಸ್ತಾವನೆಯನ್ನು ಅದಕ್ಕೆ ಒದಗಿಸಿದ್ದಾರೆ. ಅವರ Studies in Indo-Anglian Poetry ಒಂದು ದೃಷ್ಟಿಯಲ್ಲಿ ಕೊರತೆಯ ಆಭಾಸವನ್ನುಂಟು ಮಾಡುತ್ತದೆ, ನಿಜ. ಭಾರತೀಯ ಆಂಗ್ಲಕಾವ್ಯದ ಸಮಗ್ರ ಇತಿಹಾಸವನ್ನು ಅಪೇಕ್ಷಿಸುವವನಿಗೆ ಇದು ಸ್ವಲ್ಪ ನಿರಾಸೆಯನ್ನುಂಟುಮಾಡಿದರೆ, ಅದು ಗೋಕಾಕರ ತಪ್ಪಲ್ಲ.ಅಂಥ ಸಮಗ್ರ ಇತಿಹಾಸ ಅದರ ಗುರಿಯಲ್ಲವೆಂಬುದನ್ನು ಸೂಚಿಸುವುದಕ್ಕಾಗಿಯೇ ಅವರು ಅದಕ್ಕೆ 'ಸ್ಟಡೀಸ್' ಎಂದು ಹೆಸರಿಸಿದ್ದಾರೆ. ಆದರೆ, ಇದರಲ್ಲಿ ಒಂದು ಹೊಸ ಅಂಶ ಇದೆ. ಅದೆಂದರೆ, ಭಾರತೀಯ ಆಂಗ್ಲ ಕಾವ್ಯದ ಅಯಶಸ್ವೀ ನಮೂನೆಗಳು ಎರಡು ಅಧ್ಯಾಯ. ಕಾವ್ಯಸೌರಭ ಎಲ್ಲೆಲ್ಲಿ ಚೆಲ್ಲುವರಿದಿದೆ ಎಂದು ಎತ್ತಿ ತೋರಿಸುವ ವಿಮರ್ಶಕರನೇಕರಿದ್ದಾರೆ. ಆದರೆ, ಒಳ್ಳೆಯದನ್ನೂ ಕೆಟ್ಟದ್ದನ್ನೂ- ಎಲ್ಲವನ್ನೂ ಓದಿ, ಜೊಳ್ಳು ಎಲ್ಲೆಲ್ಲಿದೆ, ಕಾವ್ಯ ಏಕೆ ಸೋತಿದೆ ಎಂದು ಎತ್ತಿ ತೋರಿಸುವ ಪ್ರಯಾಸವನ್ನು ಗೋಕಾಕರು ಮಾಡಿದ್ದಾರೆ. ಅದು ಸ್ತುತ್ಯ. ಇಂಥ ಕಾರ್ಯಕ್ಕೆ ನಿಷ್ಠುರತೆ, ನಿರ್ದಾಕ್ಷಿಣ್ಯಪರತೆ ಬೇಕು. ಉದಾಹರಣೆಗಾಗಿ, ೧೯೬೪ ರಷ್ಟು ಇತ್ತೀಚೆಗೂ

When lap is Virgin
Jesus lay

ಎಂಬಂತಹ ಅಸಂಬದ್ಧ ಇಂಗ್ಲೀಷ ಪದಬಂಧದ ಕವನಗಳು (ಬರೆದವರು ಸ್ವಾಮಿ ಶಂಕರಾನಂದ) ಪ್ರಕಟಗೊಳ್ಳುತ್ತಿದ್ದವು ಎಂಬ ಸಖೇದಾಶ್ಚರ್ಯವನ್ನುಂಟು ಮಾಡುವ ಸಂಗತಿ ನಮಗೆ ಈ ಮೂಲಕ ಗೋಚರವಾಗುತ್ತದೆ.

ಅನಭಾವಿ ತಿರುಳನ್ನೊಳಗೊಂಡ ಹಾಗೂ ಪ್ರತೀಕ ಪ್ರಧಾನವಾದ ಕಾವ್ಯ ಭಾಷೆಯ ಅರವಿಂದ ಸಾಹಿತ್ಯದ ಬಗೆಗೆ ಗೋಕಾಕರಿಗೆ ಎಲ್ಲಿಲ್ಲದ ಪ್ರೀತಿ, ಒಲವು, ಉತ್ಸಾಹ. ಆ ಕಾರಣ ಪ್ರಸ್ತುತ ವಿಮರ್ಶಾಗ್ರಂಥ 'ಅರವಿಂದಮಯ'ವಾಗಿದ್ದಲ್ಲಿ ಆಶ್ಚರ್ಯವಿಲ್ಲ. ಕಾವ್ಯದ ಉತ್ಕೃಷ್ಟತೆಗೆ ಗೋಕಾಕರ ದೃಷ್ಟಿಯಲ್ಲಿ ಅರವಿಂದರೇ

ಸರ್ವಶ್ರೇಷ್ಠ ಉದಾಹರಣೆ.

ರಾಷ್ಟ್ರೀಯ ಮಟ್ಟದಲ್ಲೂ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲೂ ಶ್ರೇಷ್ಠದರ್ಜೆಯ ವಿಮರ್ಶಕರೆಂದು ಗೋಕಾಕರು ಹೆಸರು ಮಾಡಿದ್ದಾರೆ. ಆದರೆ, ಈ ವಿಮರ್ಶಾಗ್ರಂಥಗಳ ವಿವೇಚನೆಗಿಂತಲೂ ನಮಗೆ ಈಗ ಹೆಚ್ಚು ಪ್ರಸ್ತುತವಿರುವುದು ಅವರ ಸೃಜನಾತ್ಮಕ ಬರಹಗಳು.

ಗೋಕಾಕರ ಸೃಜನಾತ್ಮಕ ಬರಹಗಳೆಂದರೆ : The Song of Life and other Poems (1948), In Life's Temple (1965) ಹಾಗೂ Kashmir and the Blind Man (1977) ಎಂಬ ಮೂರು ಕವನಸಂಕಲನಗಳು. ಅಲ್ಲದೆ Narahari: Prophet of New India (1972) ಎಂಬ ಒಂದೇ ಒಂದು ಕಾದಂಬರಿ. ಅವರು The Goddess Speaks ಎಂಬ ನಾಟಕವೊಂದನ್ನೂ ಬರೆದಿದ್ದಾರೆ ಎಂದು ಉಲ್ಲೇಖಗಳಿಂದ ತಿಳಿದುಬರುತ್ತಾದರೂ ಕೃತಿ ಈಗ ಲಭ್ಯವಿಲ್ಲ.

ಗೋಕಾಕರದು ಸವ್ಯಸಾಚಿ ಕಾವ್ಯಪ್ರತಿಭೆ. ಸ್ಫೂರ್ತಿ ಹೇಗೆ ಬಂತೋ ಹಾಗೆ, ಇಂಗ್ಲೀಷಿನಲ್ಲೇ ಪ್ರಥಮ ಅಭಿವ್ಯಕ್ತಿಯನ್ನು ಕಂಡ ಕವನಗಳಿವೆ ; ಕೆಲವು, ಮೊದಲಲ್ಲಿ ಕನ್ನಡದಲ್ಲಿ ಮೂಡಿಬಂದ ಕವನಗಳನ್ನು ಅವರೇ ಕನ್ನಡೇತರ ಓದುಗರಿಗಾಗಿ ಇಂಗ್ಲೀಷಿಗೆ ಅನುವಾದಿಸಿದ್ದಾರೆ. ಇಂಥ ಅನುವಾದಗೊಂಡ ಕೆಲ ಕವನಗಳು ಅವರ ಎರಡನೇ ಸಂಕಲನವಾದ In Life's Templeನಲ್ಲಿ ಸಮಾವೇಶಗೊಂಡಿವೆ. ಉಭಯಭಾಷೆಗಳಲ್ಲೂ ಬರೆಯುವ ಕೆಲವೇ ಕೆಲವು ಭಾರತೀಯ ಸಾಹಿತಿಗಳ ಮಾಲಿಕೆಗೆ ಸೇರುತ್ತಾರೆ, ಗೋಕಾಕರು.

ಗೋಕಾಕರ ಕಾವ್ಯಪ್ರತಿಭೆಯ ಪ್ರಮುಖ ಲಕ್ಷಣವೆಂದರೆ, ಅನೇಕ ಕಡೆಗಳಲ್ಲಿ ಅದು ಮಿಂಚಿಸುವ ಬಹುಶ್ರುತತ್ವ(Ecclecticism). ಇಂಗ್ಲೀಷಿನ ಉದ್ದಾಮ ಪಂಡಿತರಾಗಿ, ಪ್ರೊಫೆಸರರಾಗಿ ಕೆಲಸ ಮಾಡಿದ ಅವರ ಪ್ರಜ್ಞಾಪಾತಳಿಯಲ್ಲಿ ಅವರು ಓದಿ ಅರಗಿಸಿಕೊಂಡ ಅನೇಕಾನೇಕ ಕವಿಗಳ-ಕಾವ್ಯಪದಗಳ ಅನುರಣನ ಅನಿವಾರ್ಯ. 'ಒಂದು ಮಗುವಿನ ರೇಲ್ವೆ ರಮ್ಯಕತೆ'ಯೆಂಬ ಕವನದಲ್ಲಿನ ಈ ಸಾಲುಗಳು ಬ್ಲೇಕ್ ಕವಿಯ ಕವನವೊಂದನ್ನು ಪ್ರತಿಧ್ವನಿಸುವಂತಿದೆ :

In what dreamlit forests
Is your Whistle blowing ?

ಅದರಂತೆ,

O God, if winter winds are rough and strong
Give me the heart that turns then into spring

ಎಂಬ ಸಾಲುಗಳಲ್ಲಿ, ಶೆಲ್ಲಿಯ

He is gone to the Dandi marches (Gandhiji)

ಎಂಬಲ್ಲಿ ವಾಲ್ಟರ್ ಸ್ಕಾಟ್‌ನ 'Lochinvar' ಎಂಬ ಕವನದ ಛಂದಸ್ಸು ಹಾಗೂ ಭಾಷೆಯ ಛಾಯೆಯನ್ನು ಕಾಣಬಹುದಾಗಿದೆ. ಕೀಟ್ಸ್ (Keats) ಕವಿಯ ಪಾಲಿಗೆ ಹೇಗೋ ಹಾಗೆ ಗೋಕಾಕರಿಗೂ ಸೌಂದರ್ಯದಲ್ಲಿಯೇ ಸತ್ಯದರ್ಶನವಿದೆ :

Plunge into this infinity of beauty
And gather truth. (The Rhythm and Beauty of Earth)

ಈ ಪಂಡಿತಪ್ರತಿಭೆಯ ಉತ್ತಮೋತ್ತಮ ಆವಿಷ್ಕಾರವೆಂದರೆ ಸಮನ್ವಯ ಪ್ರಜ್ಞೆ. ಗೋಕಾಕರ ಕಾವ್ಯಧಾರೆಯಲ್ಲಿ ಕಾಣಬರುವುದು ಬುದ್ಧ ಹಾಗೂ ಕ್ರಿಸ್ತ, ಹೆಲನ್ ಹಾಗೂ ಪದ್ಮಿನಿ, ರಾಮರಾಜ್ಯ ಹಾಗೂ ನ್ಯೂಜೆರುಸಲೆಮ್, ಶಿವ-ಪಾರ್ವತಿ ಹಾಗೂ ಜ್ಯುನೋ-ಜ್ಯೂಪಿಟರ್-ಇವರನ್ನೆಲ್ಲ ಒಳಗೊಂಡ, ಆಧುನಿಕಯುಗಕ್ಕನು ಗುಣವಾದ, ಸಂಕೀರ್ಣಪ್ರಜ್ಞೆ - ಯಾವ ವೈರುಧ್ಯಗಳನ್ನೊಳಗೊಳ್ಳದ ಸಮನ್ವಯ ಪ್ರಜ್ಞೆ, ಪರಕೀಯ ಸಂಸ್ಕೃತಿಯ ಉತ್ತಮೋತ್ತಮ ಅಂಶಗಳನ್ನೊಳಗೊಂಡ ಭಾರತೀಯಪ್ರಜ್ಞೆ.

ಗೋಕಾಕರ ಪ್ರತಿಭಾವೈಶಿಷ್ಟ್ಯದ ಹೊಳಹು ಕಂಡುಬರುವದು - ಇಂಗ್ಲೀಷ ಭಾಷೆಗೆ, ಸಂಸ್ಕೃತಿಗೆ ಸಹಜವಲ್ಲದ ಕಲ್ಪನೆಗಳಿಗೆ, ಭಾವಸಂಕೀರ್ಣಗಳಿಗೆ ಸಮಾಸಪದಗಳನ್ನು ಸೃಷ್ಟಿಸುವಲ್ಲಿ.

I felt the mighty moon-stir in my mind (The Moon-Man)

ಎಂಬ ಉಕ್ತಿಯಲ್ಲಿ ಚಂದ್ರನ ಪ್ರಭಾವದಿಂದಾಗಿ ಸಮುದ್ರದಲ್ಲುಂಟಾಗುವ ಬೊಬ್ಬುಳಿಯ ಕಲ್ಪನೆ Moon-stir ಎಂಬ ಸಮಾಸಪದದಲ್ಲಿ ಸೂಚಿತವಾಗುತ್ತದೆ. 'ಶಂಕರಗೌಡ' ಎಂಬ ಕವನದಲ್ಲಿ ಬರುವ The winds of Passion blow dark deep ಸಾಲಿನಲ್ಲಿ, dark-deep ಎಂಬ ಸಮಾಸಪದದಲ್ಲಿ ರಾಬರ್ಟ ಫ್ರಾಸ್ಟನ 'The woods are lovely, dark and deep' ಎಂಬ ಸಾಲಿನ ಅರ್ಥವತ್ತತೆಯನ್ನು ಇನ್ನೂ ಸಾಂದ್ರವಾಗಿ, ಬೇರೊಂದು ಅರ್ಥವನ್ನು ಸೂಸುವ ಹಾಗೆ, ತುಂಬಲಾಗಿದೆ. ಅಲ್ಲದೆ, 'Blow dark-deep' ಎಂಬ ಪದವೇ ವಿಶಿಷ್ಟ ಪ್ರಯೋಗ. ಅನೇಕ ಕಡೆಗೆ, ಸಾಂದರ್ಭಿಕ ಅವಶ್ಯಕತೆಗನುಗುಣವಾಗಿ ಇಂಥ ಸೃಷ್ಟ್ಯಾತ್ಮಕ ಭಾಷಾಪ್ರಯೋಗ ವನ್ನು ನಾವು ಗೋಕಾಕರಲ್ಲಿ ಕಾಣಬಹುದಾಗಿದೆ. 'Horizon', 'diamond' ಮುಂತಾದ ನಾಮಪದಗಳನ್ನು ಕ್ರಿಯಾಪದಗಳನ್ನಾಗಿ ರೂಪಾಂತರಿಸಿ, 'horizoned', 'diamonded' ಎಂದು ಬಳಸಿದ್ದಾರೆ. ಅಂತಯೇ 'Pilgrim' ಎಂಬ

ಪದವನ್ನು ಕ್ರಿಯಾಪದವನ್ನಾಗಿ ಬಳಸುತ್ತಾರೆ. ಈ ಮಣ್ಣು ಶರೀರದಲ್ಲಿ ಆತ್ಮದ ಬೆಳಕನ್ನು ತುಂಬಿಕೊಂಡು ಬಂದಿರುವ ಅರವಿಂದರ ಜನ್ಮಾವತಾರವನ್ನು 'Light-housed in clay' ಎಂಬ ವಿಶಿಷ್ಟ ಪದಪ್ರಯೋಗದಿಂದ ಬಹಳ ಪರಿಣಾಮಕಾರಿಯಾಗಿ ವ್ಯಂಜಿಸಿದ್ದಾರೆ. 'The snake' ಎಂಬ ಕವನದಲ್ಲಿ, ಅಡ್ಡಲಾಗಿ ಬಿದ್ದಿರುವ ಹಾವನ್ನು 'ಕತ್ತಲೆಗೆ ಹೊಸತಿಲವಾಗಿ "thresholding the night' ಎಂಬ ಹೊಚ್ಚಹೊಸ ಕಲ್ಪನೆಯ ಅಭಿವ್ಯಕ್ತಿಗೆ ಭಾಷೆಯನ್ನು ಹೊಸೆಯುತ್ತಾರೆ.

ಗೋಕಾಕರು ಬರೀ ಶಬ್ದಚಮತ್ಕೃತಿಯನ್ನು ತೋರುವವರಲ್ಲ ; ಅವರದು ಹಲವೆಡೆ ಸೃಜನಾತ್ಮಕ, ನವ-ನವೀನ ಪ್ರಯೋಗ. ನೆಹರೂರವರು ದೇಶದ ಜನತೆಯ ಕಣ್ಮಣಿಯೆಂಬ ಕಲ್ಪನೆಯನ್ನೂ, ಅವರ ಮನೆತನ ಮೂಲತಃ ಕಾಶ್ಮೀರದಿಂದ ಬಂದದ್ದೆಂಬ ಸಂಗತಿಯನ್ನೂ ಹೊಸೆದು He was the Cashmere apple of our eye ಎಂದು ಹೇಳುತ್ತಾರೆ. ಸೇಬುಗಳಲ್ಲಿ ಕಾಶ್ಮೀರ ಸೇಬು ವಿಶೇಷದ್ದು ಎಂಬರ್ಥವೂ ಮೇಲಿನ ಪದೋಕ್ತಿಯಲ್ಲಿ ಧ್ವನಿತವಾಗುವುದೂ ಇಲ್ಲಿನ ವಿಶೇಷತೆ. ಇಂತಹದೇ ಒಂದು ಕಲ್ಪನೆಯನ್ನು Christ was your carpenter of souls ಎಂಬ ಕಾವ್ಯೋಕ್ತಿಯಲ್ಲಿ, ಕ್ರಿಸ್ತನ ತಂದೆ ಬಡಿಗನಾಗಿದ್ದ ಸಂಗತಿಗೇ ಹೊಸ ಅರ್ಥ ಹೊಸೆದು ಕ್ರಿಸ್ತನಿಗೆ 'ಆತ್ಮಗಳಿಗೆ ಹೊಸ ರೂಹು ನೀಡುವ ಬಡಿಗ' ಎಂದು ಅನ್ವರ್ಥಕವಾಗಿ ಹೇಳಲಾಗಿದೆ. The Avatar ಎಂಬ ಕವನದಲ್ಲಿನ

The Divine asks for a pearl
And man gives him a precious stone

ಎಂಬ ಸಾಲುಗಳಲ್ಲಿ ಮಾನವನು ದೇವರು ಬೇಡುವ ಮುತ್ತನ್ನು (ಇದಕ್ಕೆ ಸಾಂಕೇತಿಕ ಅರ್ಥ ಇದೆ - 'ಆತ್ಮ' ಎಂದು) ಕೊಡುವ ಬದಲು, ವಜ್ರ-ವೈಢೂರ್ಯಗಳನ್ನು ನೀಡುತ್ತಾನೆ. ತನ್ನ ಐಸಿರಿಯನ್ನು ಪ್ರದರ್ಶಿಸುವ ಭಕ್ತಿಯನ್ನು. ಆದರೆ ಈ ನೈವೇದ್ಯ ಆತನಿಗೆ ಸಲ್ಲ – ಎಷ್ಟು 'precious' ಆಗಿದ್ದರೂ, ಅದು ಕಲ್ಲಿಗೆ ಸಮ ಎಂಬರ್ಥ ಇಲ್ಲಿ ಧ್ವನಿತವಾಗುತ್ತದೆ.

ಕಾವ್ಯಸ್ಫೂರ್ತಿಯ ಕುಲುವೆಯಲ್ಲಿ ಭಾಷೆ ಹಾಗೂ ಕವಿಕಲ್ಪನೆ ಎರಡೂ ಬೆಸೆದುಕೊಂಡು, ಅನನ್ಯರೀತಿಯ ಅರ್ಥವಿನ್ಯಾಸ ಹಾಗೂ ಪ್ರತಿಮಾರೂಪವನ್ನು ಧಾರಣೆಮಾಡುವ ಕ್ರಿಯೆ-ಕ್ರಿಯಾ ವಿಧಾನ ಮನನೀಯ. ನಾವು ಅದನ್ನು ಅಭ್ಯಸಿಸಿದಷ್ಟೂ ಆನಂದ-ವಿಸ್ಮಯಗಳನ್ನುಂಟು ಮಾಡುತ್ತದೆ. ಏಕಕಾಲಕ್ಕೆ ಸತ್ಯದ ಅನೇಕ ಮಜಲುಗಳ, ಆಯಾಮಗಳ ದರ್ಶನಮಾಡಿಸುವ ಈ ಶಬ್ದ ಮೋಡಿ, ಅಸದೃಶವಾದುದು.

ಗೋಕಾಕರು ಇಂಗ್ಲಿಷ ಭಾಷೆಯ ಲಯದ ಮೇಲಾಗಲೀ, ಪ್ರಾಸವಿನ್ಯಾಸದ

ಸಹಜತೆ-ಸುಭಗತೆಯ ಮೇಲಾಗಲೀ ಪಡೆದಿರುವ ಪ್ರಭುತ್ವವೂ ಅಸಾಧಾರಣ. ಅವರು ತಮ್ಮ ಹಾಸ್ಯ ಅಥವಾ ವಿಡಂಬಕದೃಷ್ಟಿಯನ್ನು ಪ್ರಾಸದ ಮೂಲಕ ಮಿಂಚಿಸುವುದುಂಟು. ಉದಾ :

Touch woman and she is but thorn
Man is a fool both made and born. (A Husbond in Love)

Delivering Sermons on the Mount
That must be taken with a discount' (The Nationalist)

ಹಾಪ್ಕಿನ್ಸ(Hopkins)ನಂತೆ ಗೋಕಾಕರು ಶಬ್ದನಾದಭೃಂಗದ ಬೆನ್ನೇರಿ ಅರ್ಥಲೋಕದ ಸಂಚಾರ ಮಾಡುವುದೂ ಉಂಟು. ಉದಾಹರಣೆಗಾಗಿ

Dripping, dropping, draping mist ('Mist')

ಎಂಬ ಸಾಲಿನಲ್ಲಿ ಶಬ್ದನಾದಸಾದೃಶ್ಯವೂ ಅರ್ಥೌಚಿತ್ಯವೂ ಮೇಳವಿಸಿವೆ.

ಗೋಕಾಕರ ಕಾವ್ಯರಚನಾತಂತ್ರಸಿದ್ಧಿಯೂ ಅಭ್ಯಸನೀಯ :

'yes, North Gujarat is my home'

ಎಂದು ಆಡುಭಾಷೆಯ ರೀತಿಯಲ್ಲಿ ಕವನವೊಂದನ್ನು(Visnagar) ಪ್ರಾರಂಭಿಸುತ್ತಾರೆ. ಶ್ಲೋಕರಚನಾವೈವಿಧ್ಯವೂ ಅವರ ತಂತ್ರಸಿದ್ಧಿಗೆ ಸಾಕ್ಷಿ (ಉದಾಹರಣೆಗೆ ಅವರ 'An Air Journey' ನೋಡಿ).

The Song of life and other poems ದ ಹೊದಿಕೆಯ ಮೇಲಣ ವಿಮರ್ಶಾ ಉದ್ಧರಣವು(blurb) ಗೋಕಾಕರ ಕಾವ್ಯವಸ್ತುವಿನ, ಕಾವ್ಯವಿಚಾರಧಾರೆಯ ವೈವಿಧ್ಯವನ್ನು ಘೋಷಿಸುತ್ತದೆ.

" Here are poems on the contemporary Indian scene and poems which reveal man as a pilgrim of eternity ; poems which explore the meaning of life in the text and context of the writer's own personality.... poems that are romantic, with others that are modernist."

ಗೋಕಾಕರದು ಬರೀ ಆಕಾಶದಲ್ಲಿ ಓಲಾಡುವ, ಚಿಕ್ಕೆಗಳ ಚುಂಬಿಸಬಯಸುವ (ಕನ್ನಡ ಸಾಹಿತ್ಯ ಸಂದರ್ಭದಲ್ಲಿನ ನವೋದಯಕಾಲದ) ರಮ್ಯಪ್ರಕೃತಿಯಷ್ಟೇ ಅಲ್ಲ. ಅದರಲ್ಲಿ ಧರಿತ್ರಿಯ ಮೇಲೆ ಓಡಾಡುವ ಮಗುವಿನ ಸರಳತೆಯೂ, ನಿತ್ಯಸತ್ಯದ ಸಾಮಾನ್ಯ ಸಂಗತಿ/ಘಟನೆಗಳನ್ನು ಗಮನಿಸುವ ವಾಸ್ತವತಾಪ್ರಜ್ಞೆಯನ್ನೂ ಕಾಣುತ್ತೇವೆ. ಉದಾಹರಣೆ : 'A Maiden on Womanhood' ಎಂಬ ಕವನದಲ್ಲಿನ ಈ ಉಪಮೆಯನ್ನು ನೋಡಿ :

The Pandavas divided Draupadi
As children would a guava

('ಮಕ್ಕಳು ಪೇರಲಹಣ್ಣನ್ನು ಹಂಚಿಕೊಳ್ಳುವ ರೀತಿಯಲ್ಲಿ ಪಾಂಡವರು ದ್ರೌಪದಿಯನ್ನು ಹಂಚಿಕೊಂಡರು'). ಆ ಕವನದ ಮುಖ್ಯ ಆಶಯವಾದ ಹೆಣ್ಣಿನ ಕ್ಲೇಶ, ಗೋಳು, ವಿವಶತೆಯನ್ನು ಮನದಟ್ಟಾಗಿಸುವಾಗಲೂ, ಈ ಉಪಮೆಯ ಸರಳತೆ-ಸಾಮಾನ್ಯತೆ ಗೋಕಾಕರ ವಾಸ್ತವತಾಪ್ರಜ್ಞೆಗೆ ಕನ್ನಡಿ ಹಿಡಿಯುತ್ತದೆ. ಕಹಿರಹಿತ ವಿಡಂಬನೆಯಂತೂ ಗೋಕಾಕರ ತಿಳಿಹಾಸ್ಯದೊಡಗೂಡಿ ಬಹು ಸುಂದರವಾಗಿ ಒಡಮೂಡಿ ಬರುವುದುಂಟು. ಉದಾಹರಣೆಗೆ, ಇದೇ ಕವನದಲ್ಲಿ ಸಂಸ್ಕೃತ ಕವಿಗಳನ್ನು ಗೋಕಾಕರು ವಿಡಂಬಿಸಿದ ರೀತಿಯನ್ನು ಗಮನಿಸಬಹುದು:

But they sinned against our kind.
They measured our waists and listed us
Ass lion-waisted, deer-shaped, elephantine.
They in their emporium humg us limb by limb,
Likening the nose to the champak, eyes to the bees . . .

ಗೋಕಾಕರು ಸ್ವಾತಂತ್ರ್ಯೋತ್ತರ ಭಾರತದ ಸ್ಥಿತಿ-ಗತಿ ನೋಡಿ ಕೆರಳಿದ್ದಾರೆ-ಅವರ ಸಾಮಾಜಿಕಪ್ರಜ್ಞೆ ಇಂಥ ಸಂದರ್ಭಗಳಲ್ಲಿ ಮಾರ್ಮಿಕವಾದ ಅಣಕುನುಡಿಗಳಲ್ಲಿ ಅಭಿವ್ಯಕ್ತಿಗೊಳ್ಳುವುದುಂಟು. 'The Curshed Voice' ಎಂಬ ಕವನದಲ್ಲಿ ನಾಯಿಯೊಂದು ಕಾರಿನ ಕೆಳಗೆ ಸಿಕ್ಕು ಸತ್ತ ದೃಶ್ಯಗಳನ್ನು ಚಿತ್ರಿಸುತ್ತ

In this wide world where each man lives his
own sweet life at the expenses of others
Where to live is to tyrannize in the right royal sense,
Is it so grave on error
That a dog should be trampled down by a car ?

ಎಂದು ಪ್ರಶ್ನಿಸುವಲ್ಲಿ ಕವಿಯ ಲೇಖನಿ ಅಣಕುನುಡಿಯ ಮೊನಚನ್ನು ಪಡೆಯುವುದುಂಟು.

ಗೋಕಾಕರ ಕಾವ್ಯ ಒಂದು ಕಡೆ ಮುಗ್ಧತೆಯ ಧ್ರುವವನ್ನು ಮುಟ್ಟಿದರೆ, ಇನ್ನೊಂದೆಡೆ ಪಾರಮಾರ್ಥಿಕ ಚಿಂತನೆಯ ಧ್ರುವವನ್ನು ತಲುಪುತ್ತದೆ. ಯೌವನಕ್ಕೆ ಸಹಜವಾದ (ದಾಂಪತ್ಯಕ್ಕೆ ಹೊರತಾದ) ಪ್ರೇಮ ಗೋಕಾಕರ ಜೀವನದಲ್ಲಿ ಇಣುಕಿಲ್ಲವೆಂದಲ್ಲ. 'A husband in love' ಎಂಬ ಕವನ, ಇಂಥ ಪ್ರೇಮ ಪ್ರಕರಣದ ಕುರಿತಾದ್ದು ; ಅದರಲ್ಲೂ ಅವರ ಮುಗ್ಧ, ನಿಷ್ಕಪಟ ಹೃದಯದ ಪ್ರತಿಬಿಂಬವನ್ನೇ ನಾವು ಕಾಣುತ್ತೇವೆ. ಆ ಪ್ರೇಯಸಿಯೊಂದಿಗೆ 'ಸಮಾಗಮ' ವೆಂಬ

ಸಲ್ಲದ ವಿಚಾರವನ್ನು ಕೂಡ ಮಾಡುವುದೆಂದರೆ ಆಕೆಯ ಲಾವಣ್ಯಕ್ಕೆ ಅಪಚಾರ ಬಗೆದಂತೆ ಎಂದು ಅತ್ಯಂತ ಸುಸಂಸ್ಕೃತ ಹೃದಯದ ಈ ಕವಿ ಬಗೆಯುತ್ತಾನೆ. ಗೋಕಾಕರ ದೃಷ್ಟಿಯಲ್ಲಿ ಪ್ರೇಮವೆಂದರೆ ' the call of mind to mind.' ಅಲ್ಲದೆ,

When two souls
Love and are one on earth, they live transfigured
The human made devine.

ದಾಂಪತ್ಯಪ್ರೇಮವೂ ಒಂದು ತೆರನಾದ, ಯೋಗವೇ ಸೈ ಎಂದು ಅವರು ಹೇಳುವುದುಂಟು. ಇಡೀ ಮಾನವಜೀವನವೇ ದೈವಸಾಕ್ಷಾತ್ಕಾರಕ್ಕೆಳಸುವ ಒಂದು ಯಜ್ಞ.

A Seedling sprouting through the soul
And growing towards the sky . . . .

ಎಂದಾಗ, ಸತಿಪತಿಗಳೊಂದಾದ ಭಕ್ತಿಯೂ ಇಂಥ ದೈವಸಾಕ್ಷಾತ್ಕಾರದ ಸಾಧನಾಮಾರ್ಗ.

ಹದಿನೇಳನೆಯ ಶತಮಾನದಲ್ಲಿ ಮೆಟ್ಯಾಫಿಜಿಕಲ್(Metaphysical) ಕವಿಗಳು ಗಂಭೀರಚಿಂತನೆಯನ್ನೂ ಭಾವನಾ ಉತ್ಕಟತೆಯನ್ನೂ ಒಂದಾಗಿ ಹೊಸೆದು ಸೃಷ್ಟಿಸಿದ ಕಾವ್ಯದಂತೆ, ಆಧುನಿಕಯುಗಕ್ಕನುಗುಣವಾದ ಸಂಕೀರ್ಣ ಪ್ರಜ್ಞೆಯು. ಏಕಮುಖದ ಸಂವೇದನಾಶೀಲತೆ(Unified Sensibility)ಯನ್ನು ಹೊಂದಿದ್ದಾಗ, ಶ್ರೇಷ್ಠಕಾವ್ಯ ಹೊರಹೊಮ್ಮಬಲ್ಲದು. ಅಂಥ ರಸಧಾರೆ ಗೋಕಾಕರ ಕಾವ್ಯದಲ್ಲಿ ಅಲ್ಲಲ್ಲಿ ಚಿಮ್ಮುವುದನ್ನು ನಾವು ಕಾಣಬಹುದು. ಉದಾಹರಣೆಗಾಗಿ, 'English Words' ಎಂಬ ಕವನದ ಈ ಸಾಲುಗಳನ್ನು ಗಮನಿಸಬಹುದು :

In the beginning was the word
And the word was God.
The Word is in the middle
And the Word is Man.
In the end will be the Word
And the Word will be God in Man.

ಗೋಕಾಕರ ಕಾವ್ಯದಲ್ಲಿ ದೋಷಗಳಿಲ್ಲವೆಂತಲ್ಲ. ಉದಾ :

If my soul were to encompass in flight
The seven worlds and even if aeons passed in bliss of being
('The Song of Earth')

ಎಂಬುವಲ್ಲಿ ಎರಡನೇ ಸಾಲಿನಲ್ಲಿ ಗದ್ಯದ ಛಾಯೆ ನುಸುಳುವುದು. ಅಲ್ಲದೆ, ದೇಶೀಯ ಪದಗಳಿಗೆ(ರಾಜಾರಾವ್ ಅವರಂತೆ) ಇಂಗ್ಲೀಷಿನಲ್ಲಿ ಸಮಾಸ ಪದಗಳನ್ನು ಸೃಷ್ಟಿಸುವಲ್ಲಿ, ಒಮ್ಮೊಮ್ಮೆ ಆ ಪರಕೀಯ ಭಾಷೆಯ ಜಾಯಮಾನಕ್ಕೆ ಒಗ್ಗದ ಪದಗಳನ್ನೂ ಸೃಷ್ಟಿಸುವುದುಂಟು. ಉದಾಹರಣೆಗೆ, 'ನಖಶಿಖಾಂತ' ಎಂಬ ಪದಕ್ಕೆ 'tip-top' ಎಂಬ ಪದವನ್ನು ಗೋಕಾಕರು ಬಳಸಿದ್ದಾರೆ :

'burning tip-top at the shame' ("Lokamanya Tilak")

ಅದು ಸಾಧುವೆಂದು ಹೇಳಲಿಕ್ಕಾಗಲಿಲ್ಲ (ಇದು ವಸ್ತುತಃ 'tip-to-top' ಎಂದಿದ್ದು ಮುದ್ರಣದಲ್ಲಿ tip-top ಎಂದು ಆಗಿರಲೂಬಹುದು).

ಒಟ್ಟಿನಲ್ಲಿ, ಗೋಕಾಕರು ಇಂಗ್ಲೀಷಿನಲ್ಲಿಯೂ ಅತ್ಯುತ್ತಮ ಭಾವಗೀತಗಳನ್ನು ಬರೆದ ಭಾರತೀಯ ಕವಿಗಳಲ್ಲೊಬ್ಬರು ಎಂಬ ಅಭಿಮತ ಬೇರೂರಿ ನಿಲ್ಲುತ್ತದೆ. ಆಕಾಶವನ್ನೇ ಅಪ್ಪಿಕೊಳ್ಳುವ ಟಾಗೋರರ ಆದರ್ಶವಾದಿತ್ವ, ಅಮೂರ್ತ ಆಧ್ಯಾತ್ಮಿಕ ಜಗತ್ತಿನ ಸೂತ್ರಗಳನ್ನು ಮೂರ್ತೀಕರಿಸಿದ ಅರವಿಂದರ ಕಲ್ಪನಾಸಾಮರ್ಥ್ಯ, ಸರೋಜಿನಿ ನಾಯ್ಡುರವರ ಕಾವ್ಯಶೃಂಗಾರ-ಇವುಗಳೆಲ್ಲವೂ ಗೋಕಾಕರ ಕಾವ್ಯದಲ್ಲಿ ಮುಪ್ಪುರಿಗೊಂಡಿವೆ. ಗೋಕಾಕರ ಕಾವ್ಯ-ನೆಯ್ಗೆಯಲ್ಲಿ ಮೆಟಾಫಿಜಿಕಲ್ ಕವಿಗಳಲ್ಲಿ ಕಂಡುಬರುವ ಮೂಲಭೂತ ಬೌದ್ಧಿಕ ಕಸರತ್ತು(Fundamental brain-work) ಇರುವುದಲ್ಲದೆ, ಇಂಗ್ಲೀಷ ಅಭಿವ್ಯಕ್ತಿ-ಮಾಧ್ಯಮವನ್ನು ಸ್ವಾಮ್ಯಾತ್ಮಕವಾಗಿ ದುಡಿಸಿಕೊಳ್ಳುವ ಸಾಮರ್ಥ್ಯ, ಆ ಭಾಷೆಯ ತಾಳ-ಲಯಗಳ ಮೇಲೆ ಹೊಂದಿರುವ ಪ್ರಭುತ್ವ, ಕಾವ್ಯತಂತ್ರಸಿದ್ಧಿ, ಸೂಕ್ಷ್ಮಸಂವೇದನಾಶೀಲತೆ, ಆದರ್ಶಪರತೆ, ಕಲ್ಪನಾವಿಲಾಸ, ಹೃದಯಸಂಪನ್ನತೆ, ಸಮನ್ವಯ ವಿಚಾರಧಾರೆ ಮುಂತಾದವುಗಳನ್ನೆಲ್ಲ ಸಮನಿಸಿಕೊಂಡ ಗೋಕಾಕರು ಭಾರತೀಯ ಆಂಗ್ಲಕವಿಗಳಲ್ಲೇ ಭೀಮಕಾಯದ ವ್ಯಕ್ತಿ.

ಗೋಕಾಕರ Narahari : Prophet of new India ಎಂಬ ಕೃತಿ, ಅವರು ಆಂಗ್ಲಭಾಷೆಯಲ್ಲಿ ಬರೆದ ಏಕಮೇವ ಕಾದಂಬರಿ. ತನ್ನದೇ ಆದ ವಿಶಿಷ್ಟ ಪ್ರಕಾರವನ್ನು ಸ್ಥಾಪಿಸಿದ ಈ ಕಾದಂಬರಿ, ಏಕಮೇವಾದ್ವಿತೀಯವೂ ಹೌದು.

೧೨೬೮ ಪುಟಗಳಷ್ಟು ಬೃಹದ್ಗಾತ್ರದ 'ಸಮರಸವೇ ಜೀವನ' ಎಂಬ ಗೋಕಾಕರ ಕನ್ನಡ ಕಾದಂಬರಿ ಪರಿಸಮಾಪ್ತಿಗೊಳ್ಳುವದು ಈ ಇಂಗ್ಲೀಷ ಕಾದಂಬರಿಯಲ್ಲಿ ! ಕಥೆಯ ಎಳೆಗಳನ್ನು ಆ ಕಾದಂಬರಿಯ ಕೊನೆಯಲ್ಲಿ ಎಲ್ಲಿ ನಿಲ್ಲಿಸಲಾಗಿದೆಯೋ, ಅಲ್ಲಿಂದ ಎತ್ತಿಕೊಳ್ಳಲಾಗಿದೆ, ನರಹರಿಯಲ್ಲಿ. 'ಸಮಸರವೇ ಜೀವನ' ಓದಿರದವರು ಇದನ್ನು ಸ್ವಯಂಪೂರ್ಣ ಹಾಗೂ ಸ್ವತಂತ್ರ ಕಾದಂಬರಿಯಂತೆ ಓದಲೂ ಬರುತ್ತದೆ (ಒಂದೆರಡು ಕಡೆ ಮಾತ್ರ - ಉದಾ, ವಿಷ್ಣು ಹಾಗೂ ಪ್ರಮೀಳೆಯರ ವಿರಸದ ಕಾರಣ

ಏನು ? ಎಂಬುದರ ಬಗೆಗೆ ಓದುಗನ ಕುತೂಹಲ ನಿರಾಸೆಗಳೊಳಕ್ಕೃತ್ತದಷ್ಟೇ). ಆ ಕನ್ನಡ ಕಾದಂಬರಿಯನ್ನೋದಿದವರು ಇದನ್ನು ಅದರ Culmination and apotheosis ಅರ್ಥಾತ್ 'ಗೌರಿಶಂಕರಶಿಖರ'ವೆಂತಲೂ ಬಗೆಯಬಹುದಾಗಿದೆ.

ಧಾರವಾಡದ ಮೊಗ್ಗಾವಿಯಿಂದ ಪ್ರಾರಂಭವಾಗಿ, ಇಡೀ ಆರ್ಯಾವರ್ತವನ್ನೇ ಸುತ್ತಿದ್ದಲ್ಲದೆ, ಐರೋಪ್ಯ-ಅಮೇರಿಕಾ ಖಂಡಗಳನ್ನೂ ತನ್ನ ಭೂಮಿಕೆ (canvas) ಯಲ್ಲಿ ಒಳಗೊಳ್ಳುವ, ಒಂದು ತಲೆಮಾರಿನ ಅನೇಕ ಪಾತ್ರಗಳನ್ನು-ನರಹರಿ, ಕುಸುಮಾ, ಶೀನು, ಸುಶೀಲಾ, ವಿಷ್ಣು, ಪ್ರಮೀಳೆ, ಕೇಶವ, ತಿಪ್ಪ, ಭೀಮು ಮುಂತಾದ - ಅವರವರ ವೈವಿಧ್ಯ-ವೈಶಿಷ್ಟ್ಯ-ಪ್ರತ್ಯೇಕತೆಯೊಂದಿಗೆ ನಮ್ಮ ಕಣ್ಮುಂದೆ ಮೂರ್ತವಾಗಿ ನಿಲ್ಲುವಂತೆ ಕಡೆದಿಡುತ್ತ, ಅವರ ಜೀವನದೊಂದಿಗೆ ಬೆರೆತು ಬೇರ್ಪಡುವ, ಬೇರಾಗಿ ಮತ್ತೆ ಬೆರೆಯುವ, ವಿಭಿನ್ನಭಾಷೆಯ, ಸಂಸ್ಕೃತಿಯ, ಸಂಪ್ರದಾಯಗಳ ಇತರ ಅನೇಕಾನೇಕ ಪಾತ್ರಗಳ ಜೀವನವಾಹಿನಿಗಳ ನಕ್ಷೆಯನ್ನೂ ನೀಡುತ್ತ, ಒಟ್ಟಂದದಲ್ಲಿ ಜೀವನದ ಅಸಂಖ್ಯಮುಖಗಳನ್ನು ಕಂಡರಿಸುವ ವಿರಾಟ್‌ದರ್ಶನವೊಂದರ ಅನುಭವ ಮೂಡಿಸುತ್ತ ಸಾಗುವ ಈ ಮಹಾಕಾವ್ಯ ಗಾತ್ರದ ಕಾದಂಬರಿ(Epic novel)ಯ ಎಳೆಗಳನ್ನು, ಕಾದಂಬರಿಕಾರರು ಅಲ್ಲಿಂದಲೂ ಮುಂದುವರಿಸಿ, ಅವುಗಳನ್ನೆಲ್ಲ ಅಚ್ಚುಕಟ್ಟಾಗಿ ಜೋಡಿಸಿ, ಕಥಾನಕದ ನೆಯ್ಗೆ ಪೂರ್ಣಗೊಳ್ಳುವಂತೆ ಮಾಡುತ್ತಾರೆ, ಈ ಇಂಗ್ಲೀಷ ಕಾದಂಬರಿಯಲ್ಲಿ.

ಈ ಕಾದಂಬರಿ ಪ್ರಾರಂಭವಾಗುವದು ನಿರ್ಮಲಾ ನದಿಯ ತಟದಲ್ಲಿ, ನರಹರಿ 'ಪೂರ್ಣಜೀವನದ ಕೇಂದ್ರ'ವೆಂಬ ಆಶ್ರಮ ಸ್ಥಾಪಿಸಿ ೩೫ ವರ್ಷಗಳೇ ಸಂದ ಸಮಯದಿಂದ (ಅನಂತರ ಕಥೆಯು ಓಟ ಹಿನ್ನೋಟದಿಂದ). ನರಹರಿಗೆ ಅರವತ್ತು ವರ್ಷಗಳು. ಆತನ ಪ್ರೇರಕಶಕ್ತಿಯಾದ, ಆಶ್ರಮದ ಚೈತನ್ಯಸೆಲೆಯಾದ ಹೆಂಡತಿ ಕುಸುಮಾ ಕಣ್ಮರೆಯಾಗಿದ್ದರೂ ಆಕೆಯ ಅಮೂರ್ತಚೇತನ ಆಶ್ರಮವನ್ನು ಆವರಿಸಿದೆ. ಇವರಿಬ್ಬರೂ ರಾಮಸೀತೆಯರಂತಿದ್ದರೆ, ಇವರಿಗೆ ಲಕ್ಷ್ಮಣನಂತಿದ್ದ ಅಂಬಾದಾಸನು ತನ್ನ ಓತ್ರಾರ್ಜಿತ ಸ್ಥಿರಾಸ್ತಿಯನ್ನು ಆಶ್ರಮಸ್ಥಾಪನೆಗೆ ನೀಡಿ, ನೆರವಾಗಿದ್ದಾನೆ. ಆಶ್ರಮದಲ್ಲಿ ಚಿರಸ್ಥಾಯಿಯಾಗಿ ವಾಸಿಸಲು ಶೀನು, ಆತನ ಎರಡನೆಯ ಹೆಂಡತಿ ಆ್ಯಲೀಸ್ ಹಾಗೂ ಅವರ ಮಗ ಅರುಣ ಬಂದಿದ್ದಾರೆ. ಬೇರ್ಪಟ್ಟ ದಂಪತಿಗಳಾದ ವಿಷ್ಣು ಹಾಗೂ ಪ್ರಮೀಳೆಯರೂ ಬಂದಿದ್ದು, ಮತ್ತೆ ಸಮರಸದ ಬಾಳ್ವೆ ಬಾಳುತ್ತಿದ್ದಾರೆ. ಸಹಸ್ರಾರು ವರ್ಷಗಳ ಪೂರ್ವದಲ್ಲಿ ಭಾರತೀಯರೇ ಆಗಿದ್ದೇವೆಂಬ ಜನ್ಮಾಂತರದ ಸ್ಮರಣೆಯುಳ್ಳ ಜೇಮ್ಸ ದಂಪತಿಗಳೂ ಬಂದಿದ್ದಾರೆ. ಕಾಲೇಜು ಪ್ರೊಫೆಸರರಾದ ಜಿಜ್ಞಾಸು ಹಾಗೂ ಹೆಂಡತಿ ಸಾಧನಾ ಇವರೂ ಇದ್ದಾರೆ. ಇವರಲ್ಲದೆ, ಡಾಕ್ಟರರು, ಇಂಜಿನಿಯರರು, ಸಹಜ ಮಾರ್ಗಿಗಳು, ಬುದ್ಧಿಜೀವಿಗಳು, ಆದರ್ಶವಾದಿಗಳು, ವಿವಿಧ ಹಂತಗಳಲ್ಲಿನ (ನಿಜ ಇಲ್ಲವೆ ಭ್ರಮಿತ) ಮುಮುಕ್ಷುಗಳು, ಆಕರ್ಷಿತರು ಇಲ್ಲಿಗೆ ಬಂದು, ಇಲ್ಲಿನ

ಜೀವನಕ್ಕೆ ಹೊಂದಿಕೊಂಡಿದ್ದಾರೆ ಇಲ್ಲವೆ ಭ್ರಾಂತಿನಿರಸನ ಹೊಂದಿ, ತಿರುಗಿ ಹೋದವರಿದ್ದಾರೆ. ಸಮಾನ ಪ್ರಕೃತಿಯ ಚೇತನಗಳು(like-minded spirits) ಜಗತ್ತಿನ ಇತರೆಡೆ ಇಂಥ ಕೇಂದ್ರಗಳನ್ನು ತೆರೆದು, ಜಾಗತಿಕ ನವನಾಗರಿಕತೆಯೊಂದರ ಬೀಜ ಬಿತ್ತಿ ಬೆಳೆಯುವ ಕಾರ್ಯದಲ್ಲಿ ಸಹಕರಿಸುತ್ತಿದ್ದಾರೆ. ಅವರಿಗೆಲ್ಲ ನರಹರಿಯ 'ಪೂರ್ಣಜೀವನಕೇಂದ್ರ' ಸ್ಫೂರ್ತಿಯ ಸೆಲೆ.

ಈ ಕೇಂದ್ರವೆಂದರೆ, ಕೆಲವರು ಭ್ರಮಿಸಿದಂತೆ ಆರೋಗ್ಯಧಾಮವೂ ಅಲ್ಲ, ಸನ್ಯಾಸಿಗಳ ಮಠವೂ ಅಲ್ಲ. ಸಂಸಾರದಿಂದ ಪಲಾಯನ ಮಾಡುವವರ ತಂಗುದಾಣ(asylum)ವಂತೂ ಸರ್ವಥಾ ಅಲ್ಲ. ಇಲ್ಲಿರುವವರೆಲ್ಲ ಒಂದು ರೀತಿಯ ಆಧ್ಯಾತ್ಮಜೀವನದ ಸಾಹಸಿಗಳು. ಕೇಂದ್ರನಿವಾಸಿಗಳು ಕೇವಲ ಧ್ಯಾನ ತಪಸ್ಸುಗಳಲ್ಲಿ ತೊಡಗಿದವರಲ್ಲ. ಕರ್ಮಕ್ಕೂ ಅಷ್ಟೇ ಮಹತ್ವ ಇಲ್ಲಿ. ದುಡಿಮೆ, ದೇಹವು ದೇವನಿಗೆ ಸಲ್ಲಿಸುವ ಪ್ರಾರ್ಥನೆ ಎಂದು ಬಗೆಯಲಾಗಿತ್ತು. ಈ ಕೇಂದ್ರ, ಪ್ರಪಂಚದ ಮಧ್ಯದಲ್ಲಿದ್ದು (ಕಮಲದೋಪಾದಿಯಲ್ಲಿ) ಅದರ ಸೋಂಕು ಇಲ್ಲದಂತಿತ್ತು ಎಂದು ತಿಳಿಯುತ್ತೇವೆ.

ಪೂರ್ಣಕೇಂದ್ರದ ವರ್ಣನೆಯನ್ನು (ಅಧ್ಯಾಯ ಎರಡು) ಓದುತ್ತಿದ್ದಾಗ ಇದು ಪಾಂಡಿಚೇರಿಯ ಅರವಿಂದಾಶ್ರಮವನ್ನಾಗಲೀ ಶ್ರೀ ಸತ್ಯಸಾಯಿಬಾಬಾ ಅವರ ಆಶ್ರಮವನ್ನಾಗಲೀ ಹೋಲುತ್ತದೆಯೇ ಎಂದು (ಇವುಗಳ ಬಗೆಗೆ ಕೇವಲ ಕೇಳಿ/ಓದಿ ಪರಿಚಯವಿರುವ) ಓದುಗ ಅನುಮಾನಿಸುವುದು ಸಹಜ. ಆದರೆ ಪ್ರಸ್ತಾವನೆಯಲ್ಲಿಯೇ ಗೋಕಾಕರು ಹೇಳಿದ್ದನ್ನು ಓದಿದ್ದರೆ, ಆತನಿಗೆ ಈ ಕಲ್ಪನಾಗೋಪುರಕ್ಕೆ ವಾಸ್ತವಾಂಶ ಎಷ್ಟು ದ್ರವ್ಯವನ್ನು ಒದಗಿಸಿದೆ ಎಂಬುದು ವಿದಿತವಾಗುತ್ತದೆ :

".....the description of the four deities installed on the Sacred Hill is based on a few lines from Sri. Aurobindo's Savitri. The Philosophical analysis Manimoy uses in the novel in his discussion with Ambadas is bound to be familiar to readers of Sri. J. Krishnamurti's writings. A few of the utterances of Narahari are adopted from the Sayings and observations of Bhagawan Satya Sai Baba."

ಆದರೆ ವಾಸ್ತವಾಂಶ(ಇದು ಬೇರೆ ಸಾಹಿತ್ಯದಿಂದ ಬಂದಿದ್ದರೂ)ದೊಂದಿಗೆ ಕವಿಕಲ್ಪನೆಯೂ ಕಾರ್ಯಮಾಡಿದ್ದನ್ನು ಗುರುತಿಸಬಹುದಾಗಿದೆ. ಪವಿತ್ರ ವೇದಿಕೆಯ ಮಗ್ಗುಲಲ್ಲಿ ಒಂದು ಬಹಳ ಹಳೆಯದಾದ(as old as time) ದೈತ್ಯಾಕಾರದ ಆಲದಮರವೊಂದಿತ್ತು ಎಂದೋದುವಾಗ, ಮದ್ರಾಸಿನ ಥಿಯಾಸಾಫಿಕಲ್ ಸೊಸಾಯಟಿಯ ಆವರಣದಲ್ಲಿನ ಆಲದಮರ ಮೂಲ ದ್ರವ್ಯವಾಗಿರಬೇಕು ಎನಿಸದೆ ಇರುವುದಿಲ್ಲ.

ಆದರೆ, "Needless to say, the characters and situations in this novel are purely imaginary" ಎಂಬ (ಅದೇ ಪ್ರಸ್ತಾವನೆಯಲ್ಲಿ ಗೋಕಾಕರು ಹೇಳುವ) ಮಾತನ್ನು ಹೇಗೆ ಗ್ರಹಿಸಬೇಕು ? ಎಂಬುದು ನಿರ್ಧರಿಸಬೇಕಾದ ಪ್ರಶ್ನೆ. ಈ ಪ್ರಶ್ನೆಗೆ ನಾವು ಕಂಡುಕೊಳ್ಳುವ ಉತ್ತರದ ಮೇಲಂತೂ ಈ ಕಾದಂಬರಿಯ ಮೌಲ್ಯ ಮಾಪನ ಸರ್ವಥಾ ನಿಂತಿಲ್ಲ, ಆ ಮಾತು ಬೇರೆ. ಆದರೆ, ನರಹರಿಯ ಇಲ್ಲಿನ ಪಾತ್ರ ಚಿತ್ರಣ - ಆತನ ಮಾಂತ್ರಿಕ ಆಧ್ಯಾತ್ಮಬಲ, ಕಾದಂಬರಿಯಲ್ಲಿ ಆತನಿಗೆ ಆರೋಪಿತ ವಾದ ಕೆಲ ಪವಾಡಸದೃಶ ಘಟನೆಗಳು(ನ್ಯಾಯವಾದಿಯೊಬ್ಬನ ಮಗನನ್ನು, ಕೆಮಿಸ್ಟ್ರಿ ಪ್ರೊಫೆಸರರೊಬ್ಬರ ಮಗಳನ್ನು ಗುಣಪಡಿಸಿದುದು ಇತ್ಯಾದಿ)- ಇವೆಲ್ಲವು ಗಳಿಂದ ಇದು ಶ್ರೀ ಸತ್ಯಸಾಯಿಬಾಬಾ ಅವರದ್ದೇ ಆಗಿದೆಯೆಂಬ ಅಂಶವನ್ನು ಅಲ್ಲಗಳೆಯಲಿಕ್ಕಾಗದೇನೋ. ಘಟನಾವಳಿ ಕಲ್ಪನಾ ಕುಲುಮೆಯಲ್ಲಿ ಅಲ್ಪಸ್ವಲ್ಪ ರೂಪಾಂತರ ಹೊಂದಿದ್ದರೆ, ಹೊಂದಿದ್ದಿರೂ ಸಾಧ್ಯ. ಶ್ರೀ ಸತ್ಯಸಾಯಿಬಾಬಾರ ಬಗೆಗೆ ಕೇಳಿದ, ಅವರ ಬಗೆಗಿನ ಟೀಕೆಯನ್ನೂ ಓದಿದ, ವಾಚಕ ಇಲ್ಲಿ ಬರುವ ವಿವರಣೆ/ಸಮರ್ಥನೆಗಳನ್ನೆಲ್ಲ ಓದುವಾಗ, ಅವನ ಕಣ್ಮುಂದೆ ಸಾಯಿಬಾಬಾರೇ ಸುಳಿಯುತ್ತಾರೆ (ನರಹರಿಯು ಪಾದಗಳು ಕಾಣದಂಥ ಉದ್ದ ನಿಲುವಂಗಿ - ಅದೂ ರೇಷ್ಮೆಯದನ್ನು ತೊಟ್ಟುಕೊಳ್ಳುತ್ತಿದ್ದ ಎಂದೂ ಓದಿ ತಿಳಿಯುತ್ತೇವೆ). ಶ್ರೀ ಸತ್ಯಸಾಯಿಬಾಬಾರ ಆರಾಧಕರಾಗಿ, ಅವರ ಆಧ್ಯಾತ್ಮಜ್ಞಾನಸಂಸ್ಥೆಯ ಕುಲಪತಿ ಗಳಾಗಿ, ಆಶ್ರಮದ ಅವಿಭಾಜ್ಯ ಅಂಗವಾಗಿ ಬಾಳಿದ ಗೋಕಾಕರ ಈ ಅನುಭವ ಇಲ್ಲಿ ಸಾಹಿತ್ಯದ್ರವ್ಯವಾಗಿದ್ದರೆ, ಆಶ್ಚರ್ಯವೂ ಅಲ್ಲ, ಆಕ್ಷೇಪಾರ್ಹವೂ ಅಲ್ಲ.

ಕೇಂದ್ರದ ಬಗೆಗೆ, ಕೇಂದ್ರ ನಿವಾಸಿಗಳ ಬಗೆಗೆ ಪ್ರತ್ಯೇಕ ಅಧ್ಯಾಯಗಳಿದ್ದಂತೆ, ನರಹರಿಯ ವ್ಯಕ್ತಿತ್ವ, ಮಾನವ ಪ್ರೇಮ, ಶಿಷ್ಯರೊಂದಿಗಿನ ಸಂಬಂಧ ಹಾಗೂ ಆತನ ಮಹಿಮೆ ಮುಂತಾದವುಗಳ ಬಗೆಗೂ ಪ್ರತ್ಯೇಕ ಅಧ್ಯಾಯಗಳಿವೆ. ಇವುಗಳನ್ನು ಬರೆಯುವಾಗ ಸಂವಾದಗಳೂ, ನಿರೂಪಣಾ ಜೋಡಣೆಗಳೂ (ನಾಮಮಾತ್ರದ ಕೊಂಡಿಗಳು) ಬರುತ್ತವೇನೋ ನಿಜ. ಆದರೆ ಇವು ಕಾದಂಬರಿಯ ರೂಪದಲ್ಲಿ ಬರದೆ ಚರಿತ್ರರೂಪದಲ್ಲಿ ಬಂದ ಆಭಾಸ ಅನಿವಾರ್ಯ. ಕಥನತಂತ್ರಕ್ಕೆ ಇನ್ನಷ್ಟು ಲಕ್ಷ್ಯ ಕೊಡಬೇಕಾಗಿತ್ತೇನೋ ಕಾದಂಬರಿಕಾರರು.

ನರಹರಿಯದು ಅಸಾಧಾರಣ, ಅನನ್ಯ ವ್ಯಕ್ತಿತ್ವ. ಮಾನವಜೀವನದ ಅಲೌಕಿಕ ಸೌಂದರ್ಯ ಹಾಗೂ ಸಾಧ್ಯತೆಗಳನ್ನು ಕಂಡುಕೊಂಡ ವ್ಯಕ್ತಿ. ನವ್ಯ ಸಮಾಜ ಹಾಗೂ ನವಭಾರತದ ನಿರ್ಮಾಣದ ಕನಸನ್ನಿರಿಸಿಕೊಂಡ ನರಹರಿ ಕೇವಲ ದೇಶಪ್ರೇಮಿ ಯಲ್ಲ. ಮಾನವಜೀವನದ ವಿಕಾಸಪ್ರಕ್ರಿಯೆಯಲ್ಲಿ ಸನ್ನಿಹಿತವಾದ ಮುಂದಿನ ಘಟ್ಟದ ಕನಸನ್ನೂ ಆತ ಕಾಣುತ್ತಿದ್ದಾನೆ. ಆತ ವಿಶ್ವಪ್ರೇಮಿ, 'ಲೋಕನಾಥ.' ಸಾಧಕಸ್ಥಿತಿಯನ್ನು ದಾಟಿ ಸಿದ್ಧನಾಗಿ ನಿಂತ ಪುರುಷ, ಜೀವನ್ಮುಕ್ತ ಹಾಗೂ ಮಾನವಕುಲದ ರಕ್ಷಕ ದತ್ತಾತ್ರೇಯ. ಒಮ್ಮೆ ಸಾಧನಾ (ಜಿಜ್ಞಾಸುವಿನ ಹೆಂಡತಿ)

ನೋಡುತ್ತಿದ್ದಂತೆ ಆತನ ಸ್ಥಳದಲ್ಲಿ ಬಾಲಕೃಷ್ಣ ಕಾಣಿಸಿಕೊಂಡಿದ್ದ. ಆತ ಪೂರ್ಣತೆಯ ಅಧಿದೇವತೆಯಾದ ಮಹಾಸರಸ್ವತಿಯ ವರಪುತ್ರನೆಂದೂ ಅನ್ನುತ್ತಾರ, ಕಾದಂಬರಿಕಾರರು (ಸಾಹಿತ್ಯದಲ್ಲಿ ನಾವು ಸಾಮಾನ್ಯವಾಗಿ ಕಾಣುವುದು-ಕಾಣಬಯಸುವುದು - ಇಂಥ ಸಿದ್ಧಪುರಷರನ್ನಲ್ಲ ಅಲ್ಲವೇ ?).

ಆತ ನವ್ಯಯುಗದ ಪ್ರವರ್ತಕ, ಪ್ರವಾದಿ. ಆತನಲ್ಲಿ ಆತ್ಮಜ್ಞಾನ, ಲೋಕಜ್ಞಾನ, ಭಗವಜ್ಞಾನ ಮೇಳವಿಸಿರುವದರಿಂದ ಆಶ್ರಮಕ್ಕೆ ಬರುವ ಹವ್ಯಾಸಿಗಳಲ್ಲಿ ಅರ್ಹತೆ ಯಾರಿಗಿದೆ, ಯಾರಿಗಿಲ್ಲ ಎಂಬುದನ್ನು ಅಳೆಯುವ ಶಕ್ತಿ ಇದೆ.

ಬಹಳಷ್ಟು ಕಥಾಭಾಗ ಭೀಮುವಿಗೆ ಸಂಬಂಧಿಸಿದೆ (ಈತ ಒಂದು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ). ಸ್ವಾತಂತ್ರ್ಯೋತ್ತರ ಭಾರತದಲ್ಲಿ ತನ್ನ ಆದರ್ಶಗಳು, ಮೌಲ್ಯಗಳು ತಲೆ ಕೆಳಗಾಗುವುದನ್ನು ನೋಡಲಾಗದೆ ನಿರಾಸೆಯಲ್ಲಿ ಕೆಲದಿನ ವಿಶ್ರಾಂತಿಗೆಂದು ಪೂರ್ಣಜೀವನಕೇಂದ್ರಕ್ಕೆ ಬಂದವ. ಆತನ ಹೆಂಡತಿ ಮಕ್ಕಳೂ ಕೆಲದಿನ ಬಂದು ಅಲ್ಲಿ ವಾಸಿಸಿದ, ನಂತರ ಅವರೆಲ್ಲ ಆಶ್ರಮದ ಜೀವನಮಾರ್ಗಕ್ಕೆ ಮಾರುಹೋದವರಾಗುತ್ತಾರೆ. ನಿರಾಸೆಯನ್ನು ಜಯಿಸಿದ ಭೀಮು ಪುನಃ ತನ್ನ ಹುದ್ದೆಗೆ ಮರುಳುತ್ತಾನೆ. "ಜೀವನವೊಂದು ಬೃಹತ್ ನಾಟಕ - ಅದರಲ್ಲಿ ನೋವಿದೆ, ನಲಿವಿದೆ, ನಗುವಿದೆ, ಅಳು ಇದೆ. ಬಂದುದೆಲ್ಲವನ್ನೂ ನಗುನಗುತ ಸ್ವೀಕರಿಸುವುದೇ ಬದುಕಿನ ಮರ್ಮ" ಎಂಬುದನ್ನು ಮನಗಂಡು, ತನ್ನ ಕಾರ್ಯಕ್ಷೇತ್ರಕ್ಕೆ ಮರುಳುವುದರೊಂದಿಗೆ ಕಾದಂಬರಿ ಕೊನೆಗೊಳ್ಳುತ್ತದೆ.

ಸರ್ವದರ್ಶಿತ್ವವನ್ನಾರೋಪಿಸಿಕೊಳ್ಳುವ ಸಾಂಪ್ರದಾಯಿಕ ಕಾದಂಬರಿಕಾರನು ನೇರವಾಗಿ ಕಥೆಯನ್ನು ನಿರೂಪಿಸಿದಂತೆಯೇ ಪ್ರಾರಂಭಿಸಿದ ಗೋಕಾಕರು, ಈ ಪಾತ್ರವನ್ನು ಕ್ರಮೇಣ ಶೀನುವಿಗೆ, ಅಂಬಾದಾಸನಿಗೆ, ಜಿಜ್ಞಾಸುವಿಗೆ ಹಾಗೂ ಇನ್ನಿತರರಿಗೆ ವಹಿಸಿಕೊಟ್ಟಂತೆ ತಂತ್ರದಲ್ಲಿ ಮಾರ್ಪಾಟು ಮಾಡಿಕೊಳ್ಳುತ್ತಾರಾದರೂ, ನೇರನಿರೂಪಣೆಯ ಆಭಾಸ ಮಾಯವಾಗುವುದಿಲ್ಲ. ಅಂಬಾದಾಸನ ದಿನಚರಿಯಿಂದ ಕೆಲವು ಭಾಗಗಳನ್ನು ಎತ್ತಿಕೊಂಡಂತೆ ತೋರಿದ್ದಾರೆ. ಕೆಲವೊಂದು ತಾತ್ವಿಕ ಅಂಶಗಳು (ಉದಾ : ಮಣಿಮೊಯ್ ಹಾಗೂ ಅಂಬಾದಾಸ ಅವರ ಮಧ್ಯದ ಸಂಭಾಷಣೆ) ಸಂವಾದರೂಪದಲ್ಲಿ ಬರುತ್ತವೆ. ವಿಶ್ವದ ಹುಟ್ಟಿನ ಬಗೆಗೆ ಎಡಿಥ್ ಅವರ ಚಿತ್ರಗಳ ಸಾಂಕೇತಿಕತೆಯ ವಿವರಣೆ, ಅವರ ಪತಿ ಆರ್ಥರ್ ಜೇಮ್ಸ ಮೂಲಕ ಪಡೆಯುತ್ತೇವೆ. ನರಹರಿಯ ವ್ಯಕ್ತಿತ್ವದ ಚಿತ್ರಣ, ಭೀಮುವು ದೀರ್ಘಕಾಲದ ಆಶ್ರಮವಾಸಿಗಳನ್ನು ತಡಕಿ ಕಲೆಹಾಕಿದ ಮಾಹಿತಿಯಿಂದ ಬಂದದ್ದು ಎಂದು ನಮಗೆ ಹೇಳಲಾಗುತ್ತದೆಯಾದರೂ, ಓದುತ್ತಿದ್ದಾಗ ಆ ಭಾಸ ನಮಗಾಗುವುದಿಲ್ಲ.

ಕಾದಂಬರಿಯ ಭಾಷೆ, ಸಾಹಿತ್ಯಿಕ ಭಾಷೆ, ಕೆಲವುಕಡೆ (ಅನಿವಾರ್ಯವೇನೋ) ಆಲಂಕಾರಿಕ ಭಾಷೆ. ಅನೇಕ ಇಂಗ್ಲೀಷ ಬರೆಹಗಾರರ ಅನುಕರಣಾನ - 'ಕೇಂದ್ರವು

ದಣಿದ ನಾವಿಕರಿಗಾಗಿರ್ದ ಕಮಲದ್ವೀಪವಾಗಿರಲಿಲ್ಲ,' ಪುಟ ೩ ; ಪವಿತ್ರವೇದಿಕೆ, ಪವಿತ್ರಬೆಟ್ಟದ ಮೇಲೆ ಸಾಗುವ ದಾರಿ, ಮಂದಿರಗಳು, ತುದಿಯಲ್ಲಿನ ಶಿವಲಿಂಗ - ಇವೆಲ್ಲ 'ದಂತಗೋಪುರಕ್ಕೆ ಹೋಗುವ ಸುತ್ತು ಸೋಪಾನವಾಗಿರಲಿಲ್ಲ', ಪುಟ ೭ ; 'ಕುಸುಮಳು ಕೀಟ್ಸನ ಹೈಪೀರಿಯನ್ ಕವನದಿಂದ ಹೊರಬಂದ ಮೊನೆ ಟಾಳಂತಿದ್ದಳು ; ಪುಟ ೧೩ ; 'ಅವನು ನರಹರಿಗೆ, ಹಾಗೂ ಅವನಿಗೆ ನರಹರಿಯು ಏನಾಗಬೇಕಿತ್ತು ?' ಪು. ೧೭೭, ಮುಂತಾದೆಡೆಗಳಲ್ಲಿ ಇಂಥ ಅನುರಣನ ಇದೆ. 'Sowing stars in ether' ಅಥವಾ ' the sunlit spaces in his soul', ಅಥವಾ 'wrapped in a golden shawl of silence' ಎನ್ನುವಲ್ಲಿ, ಭಾಷೆ ಅನಿವಾರ್ಯ ವಾಗಿ (ಈ ಪಾತಳಿಯಲ್ಲಿ ವಿಷಯವನ್ನು ಅಭಿವ್ಯಕ್ತಿಸಬೇಕಾದಾಗ/ ಸಂವಹಿಸ ಬೇಕಾದಾಗ ಇಂಥ ಭಾಷೆ ಅನಿವಾರ್ಯವೇನೋ) ಆಲಂಕಾರಿಕವಾಗುತ್ತದೆ. ಆದರೆ, 'She lay still like a sunset without the seen' ಎಂಬಲ್ಲಿಯಾಗಲೀ 'The Kendra was an orient pearl, a rounded whole' ಎಂಬಲ್ಲಿಯಾಗಲೀ ಭಾಷೆ ಕಾವ್ಯಭಾಷೆಯೇ ಆಗುತ್ತದೆ.

ಗೋಕಾಕರ ತಿಳಿಹಾಸ್ಯ, ಅವರ ಸಾಹಿತ್ಯದ ಅವಿಭಾಜ್ಯ ಅಂಗ - ಎಂಥ ಗಂಭೀರ ಪ್ರಸಂಗದಲ್ಲೂ ಅವರಿಗೆ ಶಬ್ದಗಳೊಡನೆ ಚಕ್ಕಂದವಾಡುವ ಮೋಹ. ಉದಾ :

'The Libraries contained books but not books about books.' (ಪು ೯)

ಸ್ವಾತಂತ್ರ್ಯೋತ್ತರ ಭಾರತದಲ್ಲಿ 'There was something basically wrong about Basic education.' ಇತ್ಯಾದಿ.

ಒಟ್ಟಾರೆ, ನರಹರಿಯ ವಾಚನ, ಒಂದು ಮನನೀಯ ಅನುಭವ. ಅದೊಂದು ಅದ್ಭುತ ಕಾದಂಬರಿಯೆಂದು ಹೇಳಲಾಗದಿದ್ದರೂ, ಅದ್ಭುತ ಬರಹ ಎಂದು ಒಪ್ಪಿಕೊಳ್ಳಲೇಬೇಕಾಗುತ್ತದೆ.

❑ ❑

ಡಾ. ವಿ. ಕೃ. ಗೋಕಾಕರ ಜೀವನದ ಕೆಲವು ಪ್ರಮುಖ ಘಟನೆಗಳು

1909 ಆಗಸ್ಟ ೯	ಜನನ
1925	ಸವಣೂರು (ಧಾರವಾಡ ಜಿಲ್ಲೆ) ಹೈಸ್ಕೂಲಿನಿಂದ ಮೆಟ್ರಿಕ್ ಪರೀಕ್ಷೆ ತೇರ್ಗಡೆ; ಇಂಗ್ಲೀಷಿನಲ್ಲಿ ಕಾವ್ಯರಚನೆ ಆರಂಭ.
1925-26	ಕಾವ್ಯಗುರು ದ. ರಾ. ಬೇಂದ್ರೆ, ಅವರ ಪ್ರಥಮ ಪರಿಚಯ, ಸ್ನೇಹ ಸಂಪಾದನೆ.
1929	ಗೆಳೆಯರ ಗುಂಪಿನ (ಬೇಂದ್ರೆಯವರ ನೇತೃತ್ವದಲ್ಲಿ) ಸದಸ್ಯ, ಬಿ.ಎ. ತೇರ್ಗಡೆ, 'ಎಲಿಸ್ ಪ್ರೈಜಮನ್' ಮತ್ತು 'ಜಯಕರ್ನಾಟಕ' ಮಾಸಪತ್ರಿಕೆಯ ವಾಙ್ಮಯ ವಿಮರ್ಶಕ.
1930	ವಿವಾಹ (ಶಾರದಾದೇವಿಯೊಡನೆ) ಧಾರವಾಡದಲ್ಲಿ.
1931	ಮುಂಬಯಿ ವಿಶ್ವವಿದ್ಯಾಲಯದಿಂದ ಎಂ. ಎ. (ಇಂಗ್ಲೀಷ) ತರಗತಿಯಲ್ಲಿ ಪ್ರಥಮ ಸ್ಥಾನ ಪಡೆದುದು. ಪುಣೆಯ ಫರ್ಗ್ಯುಸನ್ ಕಾಲೇಜಿನಲ್ಲಿ ಅಧ್ಯಾಪನ ವೃತ್ತಿಯ ಆರಂಭ.
1934	'ಸಮರಸವೇ ಜೀವನ' ಕಾದಂಬರಿಯ ಪ್ರಥಮ ಭಾಗದ ಪ್ರಕಾಶನ, ರಾಯಚೂರ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿಯ ಅಧ್ಯಕ್ಷತೆ.
1936	ಉನ್ನತ ವಿದ್ಯಾಭ್ಯಾಸಕ್ಕಾಗಿ ಇಂಗ್ಲಂಡಿಗೆ ಪ್ರಯಾಣ.

1938 ಎಡಿನ್‌ಬರೋದಲ್ಲಿ ಕರುಳಿನ ಬೇನೆಗಾಗಿ ಯಶಸ್ವಿಶಸ್ತ್ರಚಿಕಿತ್ಸೆ, ಆಕ್ಸ್‌ಫರ್ಡ ವಿಶ್ವವಿದ್ಯಾಲಯದಲ್ಲಿ ಆಂಗ್ಲಸಾಹಿತ್ಯವನ್ನು ಮುಖ್ಯ ವಿಷಯಾವಾಗಿಟ್ಟುಕೊಂಡು ಪ್ರಥಮ ಶ್ರೇಣಿಯಲ್ಲಿ ಪ್ರಥಮವಾಗಿ ತೇರ್ಗಡೆ ಹೊಂದಿದ ಪ್ರಪ್ರಥಮ ಭಾರತೀಯ, "ಸಮುದ್ರ ದಾಚೆಯಿಂದ" ಪ್ರಕಟಣೆ, ಸಾಂಗ್ಲಿಯ ವಿಲಿಂಗ್ಡನ್ ಕಾಲೇಜಿನಲ್ಲಿ ಉಪಪ್ರಾಚಾರ್ಯ, ಆಡಳಿತಗಾರ ಜೀವನದ ಆರಂಭ.

1940 ಸಾಂಗ್ಲಿ ವಿಲಿಂಗ್ಡನ್ ಕಾಲೇಜ ಪ್ರಿನ್ಸಿಪಾಲ ಮತ್ತು 'ವರುಣ ಕುಂಜ' ಎಂಬ ಕನ್ನಡ ಎಳೆಗೆಳೆಯರ ಬಳಗದ ಸಂವರ್ಧನೆ (ಮುಗಳಿಯವರ ಜೊತೆಗೆ), "ಸಮುದ್ರಗೀತಗಳು" ಪ್ರಕಟನೆ.

1942 ಧಾರವಾಡದಲ್ಲಿ ಜರುಗಿದ ಉತ್ತರ ಕರ್ನಾಟಕ ಶಿಕ್ಷಣ ಸಮ್ಮೇಳನದ ಅಧ್ಯಕ್ಷರು.

1945 ಉಸ್ಮಾನಿಯಾ ವಿಶ್ವವಿದ್ಯಾಲಯ(ಹೈದರಾಬಾದ)ದಲ್ಲಿ ಇಂಗ್ಲೀಷ ಪ್ರಾಧ್ಯಾಪಕರು.

1946 ಗುಜರಾತದ ವೀಸನಗರ ಕಾಲೇಜಿನ ಸಂಸ್ಥಾಪಕ ಪ್ರಿನ್ಸಿಪಾಲರು.

1949 ಕೊಲ್ಹಾಪೂರ ರಾಜಾರಾಮ ಕಾಲೇಜದ ಪ್ರಿನ್ಸಿಪಾಲರು.

1950 ಶ್ರೀ ಅರವಿಂದರು ಮತ್ತು ಶ್ರೀಮಾತೆಯವರ ಪ್ರಥಮ ದರ್ಶನ, ಮುಂಬಯಿ ಸಾಹಿತ್ಯ ಸಮ್ಮೇಳನದ ಸಾಹಿತ್ಯಗೋಷ್ಠಿ ಅಧ್ಯಕ್ಷರು.

1952 ಧಾರವಾಡ ಕರ್ನಾಟಕ ಕಾಲೇಜ ಪ್ರಿನ್ಸಿಪಾಲರು.

1956 ದಿಲ್ಲಿ ಸಾಹಿತ್ಯ ಸಮಾರೋಹದಲ್ಲಿ ಕನ್ನಡದ ಪ್ರತಿನಿಧಿ.

1957 'ದ್ಯಾವಾ ಪೃಥಿವಿ' ಪ್ರಕಟನೆ. ಜಪಾನಿಗೆ ಭೆಟ್ಟಿ, ಪಿ. ಇ. ಎನ್. ಅಧಿವೇಶನ (ಟೋಕಿಯೊ)ದಲ್ಲಿ ಭಾರತದ ಪ್ರತಿನಿಧಿ, ಹಿಂದಿಕವಿ ಅಜ್ಞೇಯ ರೊಂದಿಗೆ ಸ್ನೇಹ.

1958 ಬಳ್ಳಾರಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು.

1959 ಬೆಲ್ಜಿಯಮ್ ದೇಶಕ್ಕೆ ಭೆಟ್ಟಿ, ಅಂತರರಾಷ್ಟ್ರೀಯ ಕವಿ ಸಮ್ಮೇಳನದಲ್ಲಿ ಭಾರತದ ಪ್ರತಿನಿಧಿ. ಹೈದರಾಬಾದದ 'Central Institute of English' ನ ಡೈರೆಕ್ಟರ.

1960 'ದ್ಯಾವಾ ಪೃಥಿವೀ' ಗೆ ಕೇಂದ್ರಸಾಹಿತ್ಯ ಅಕಾಡೆಮಿ ಬಹುಮಾನ ; ಪೂರ್ವ

ಆಫ್ರಿಕಕ್ಕೆ ಭೆಟ್ಟಿ ; "ಪದ್ಮಶ್ರೀ" ಪ್ರಶಸ್ತಿ ; ಅಖಿಲ ಭಾರತ ಇಂಗ್ಲೀಷ ಅಧ್ಯಾಪಕರ ಸಮ್ಮೇಳನದ ಅಧ್ಯಕ್ಷರು.

1961 ಇಂಗ್ಲಂಡಿಗೆ ಪ್ರಯಾಣ. ಯುಗಾಂಡಾ (ಪೂರ್ವ ಆಫ್ರಿಕಾ)ದಲ್ಲಿ 'ಕಾಮನ್‌ವೆಲ್ತ' ಸಮ್ಮೇಲನ ದಲ್ಲಿ ಉಪಾಧ್ಯಕ್ಷರಾಗಿ ಭಾಗವಹಿಸಿದರು.

1962 'ಇಂಗ್ಲೀಷ ಅಧ್ಯಾಪನ' ಸಮ್ಮೇಲನದಲ್ಲಿ ಉದ್ಘಾಟನಾ ಭಾಷಣ ಮಾಡಲು ಕೆಂಬ್ರಿಜ್‌ಗೆ ಪ್ರಯಾಣ.

1965 ಇಂಗ್ಲಂಡಿಗೆ ಮತ್ತೆ ಭೆಟ್ಟಿ, ಕೆಂಬ್ರಿಜ್‌ದಲ್ಲಿ ನಡೆದ ಕಾಮನ್‌ವೆಲ್ತ ರಾಷ್ಟ್ರಗಳ 'ಆಂಗ್ಲ ಸಾಹಿತ್ಯ ಶಿಕ್ಷಣ ಸಮ್ಮೇಲನ'ದಲ್ಲಿ ಭಾರತದ ಪ್ರತಿನಿಧಿ.

1966 ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ.

1967 'ಸಮನ್ವಯ' ಪತ್ರಿಕೆಯ ಆರಂಭ, ಕರ್ನಾಟಕ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ ಪದವಿ. 'ಸಮರಸವೇ ಜೀವನ' (ಒಂದೇ ಸಂಪುಟದಲ್ಲಿ) ಪ್ರಕಟಣೆ.

1969 ಷಷ್ಠ್ಯಪೂರ್ತಿ ಸಮಾರಂಭ, ರಾಜ್ಯದ ವಿವಿಧ ಭಾಗಗಳಲ್ಲಿ ಸಾರ್ವನಿಕ ಸತ್ಕಾರ.

1970 ಸಿಮ್ಲಾದಲ್ಲಿಯ "Indian Institute of Advance Studies" ದ ಡೈರೆಕ್ಟರ. ಕೆಲಿಫೋರ್ನಿಯಾದ ಪೆಸಿಫಿಕ್ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ ಪದವಿ.

1977 ಭಾರತೀಯ ಜ್ಞಾನಪೀಠ ಪುರಸ್ಕಾರ ಸಮಿತಿಯ ಅಧ್ಯಕ್ಷರು.

1978 ಕೇಂದ್ರ ಸಾಹಿತ್ಯ ಅಕಾಡೆಮಿಯ ಉಪಾಧ್ಯಕ್ಷರು.

1981 ಪುಟಪರ್ತಿ ಶ್ರೀ ಸತ್ಯಸಾಯಿಬಾಬಾ ವಿಶ್ವವಿದ್ಯಾಲಯದ ಕುಲಪತಿ. ಕರ್ನಾಟಕ ವಿಶ್ವವಿದ್ಯಾಲಯದ 31 ನೆಯ ಘಟಿಕೋತ್ಸವದ ಭಾಷಣ.

1982 ಮಹಾಕಾವ್ಯ 'ಭಾರತಸಿಂಧುರಶ್ಮಿ' ಪ್ರಕಟಣೆ.

1983 ಕೇಂದ್ರ ಸಾಹಿತ್ಯ ಅಕೆಡೆಮಿಯ ಅಧ್ಯಕ್ಷರು, 'ಭಾರತಸಿಂಧುರಶ್ಮಿ'ಗೆ ಪುರಸ್ಕಾರ.

1983 ರೋಮದಲ್ಲಿ ಒಂದು ವಿಚಾರಗೋಷ್ಠಿಯ ಅಧ್ಯಕ್ಷತೆ. ಈ ಗೋಷ್ಠಿ ಯಲ್ಲಿ ಯುರೋಪ ಮತ್ತು ದಕ್ಷಿಣ ಏಶಿಯಾದ ದೇಶಗಳಿಂದ

ಎರಡು ಸಾವಿರ ಪ್ರತಿನಿಧಿಗಳ ಆಗಮನ . ಇಂಡೋಗ್ರಿಕ್ ಲಲಿತಕಲೆ ಉತ್ಸವದಲ್ಲಿ ಭಾಗವಹಿಸಲು ಗ್ರೀಸ್‌ಗೆ ಪ್ರಯಾಣ.

1987 'ಭಾರತಸಿಂಧುರಶ್ಮಿ' ಗೆ ಐ.ಬಿ.ಎಚ್. ಟ್ರಸ್ಟ ಪುರಸ್ಕಾರ.

1991 ಭಾರತೀಯ ಜ್ಞಾನಪೀಠ ಪುರಸ್ಕಾರ.

1991 ನವೆಂಬರ 1 ರಂದು ಮುಂಬಯಿಯಲ್ಲಿ ಪ್ರಧಾನಮಂತ್ರಿ ಪಿ.ವ್ಹಿ. ನರಸಿಂಹರಾವ ಅವರಿಂದ ಜ್ಞಾನಪೀಠ ಪ್ರಶಸ್ತಿ ಪ್ರದಾನ ಸಮಾರಂಭ.

ಡಾ. ವಿ. ಕೃ. ಗೋಕಾಕ ಅವರ ಕೃತಿಗಳು

ಕನ್ನಡ ಕೃತಿಗಳು

ಕಾವ್ಯ

ಕಲೋಪಾಸಕ ಮತ್ತು ಇತರ ನೀಳ್ಗವನಗಳು – 1934
ಪಯಣ – 1937
ಸಮುದ್ರಗೀತಗಳು – 1940
ತ್ರಿವಿಕ್ರಮರ ಆಕಾಶಗಂಗೆ – 1945
ಅಭ್ಯುದಯ – 1946
ನಮ್ಮಕವಿತೆಗಳು – 1950
ಹಿಗ್ಗು – 1950
ಬಾಳದೇಗುಲದಲ್ಲಿ – 1953
ಉಗಮ – 1955
ದ್ಯಾವಾ ಪೃಥಿವೀ – 1957
ಊರ್ಣನಾಭ – 1961
ಕಾಶ್ಮೀರ – 1962
ಚಿಂತನ – 1964
ತ್ರಿಶಂಕುವಿನ ಪ್ರಜ್ಞಾಪ್ರಭಾತ – 1965
ಇಂದಿಲ್ಲ ನಾಳೆ – 1965
ಪುಣ್ಯಭೂಮಿ – 1966
ಭಾವರಾಗ – 1968

ಕೊನೆಯ ದಿನ - ಕಲ್ಯಾಣದಲ್ಲಿ ಬಸವಣ್ಣನವರ ಕೊನೆಯದಿನ – 1970
ಸಿಮ್ಲಾ ಸಿಂಫನಿ – 1973
ಪಾರಿಜಾತದಡಿಯಲ್ಲಿ – 1977
ಭಾರತಸಿಂಧುರಶ್ಮಿ (ಮಹಾಕಾವ್ಯ) – 1982
ಪ್ರವೇಶ ಸಮಾಪ್ತಿ – 1988

ಕಾದಂಬರಿ

ಸಮರಸವೇ ಜೀವನ (ಒಂದೇ ಸಂಪುಟದಲ್ಲಿ) – 1967

ನಾಟಕ

ಜನನಾಯಕ – 1939
ಯುಗಾಂತರ – 1947
ವಿಮರ್ಶಕ ವೈದ್ಯ – 1947
ಮುನಿದ ಮಾರಿ – 1970

ಪ್ರಬಂಧ

ಜೀವನ ಪಾಠಗಳು – 1949
ಚೆಲುವಿನ ನಿಲುವು – 1961

ಪ್ರವಾಸ ಸಾಹಿತ್ಯ

ಸಮುದ್ರದಾಚೆಯಿಂದ – 1938
ಸಮುದ್ರದೀಚೆಯಿಂದ – 1960
ಇಂದಿಲ್ಲ ನಾಳೆ (ಚಂಪೂ ಶೈಲಿಯಲ್ಲಿ) – 1965

ವಿಮರ್ಶೆ

ಕವಿಕಾವ್ಯಮಹೋನ್ನತಿ – 1935
ಸಾಹಿತ್ಯದಲ್ಲಿ ಪ್ರಗತಿ – 1944
ಇಂದಿನ ಕನ್ನಡಕಾವ್ಯದ ಗೊತ್ತು ಗುರಿಗಳು – 1946
ನವ್ಯತೆ ಹಾಗೂ ಕಾವ್ಯಜೀವನ – 1955
ಆಂಗ್ಲಕಾವ್ಯ ನೀಡಿದ ಸ್ಫೂರ್ತಿ – 1973
ಕಾವ್ಯಮೀಮಾಂಸೆ – 1974
ನವ್ಯತೆ – 1975
ವಿಮರ್ಶೆಯ ತತ್ವಗಳು ಮತ್ತು ಪ್ರಾಯೋಗಿಕ ವಿಮರ್ಶೆ – 1976

ಕವನಗಳಲ್ಲಿ ಸಂಕೀರ್ಣತೆ	–	1978
ಕಲಿಯು ನೆಲ	–	1978

ಇಂಗ್ಲೀಷ ಕೃತಿಗಳು

Bendre : Poet and Seer	—	1970
Sri Bhagwan Satya Saibaba	—	1975
Coleridges Aesthetics	—	1975
English in India - National Perspective	—	1975
English in India- its Present and Future	—	1964
Integral view of poetry- Indian Perspective	—	1979
The Poetic Approach to language	—	1952
Kashmir and the Blindman	—	1977
Sri Aurobindo : Seer and Poet	—	1973
Studies in Indo Anglian Poetry	—	1972
Winged words -Vocabulary Poetry	—	1975
Golden Treasury of Indo-Anglian Poetry	—	1970
Literatures in Modern Indian Languages	—	1970
An Integral view of Poetry	—	1975
Collected and Recollected Poems	—	1974
The Agony and the Glory (Abridged 'ಸಮರಸವೇ ಜೀವನ')	—	1992
Narahari - Prophet of New India	—	1972
The Life's Temple (Collected poems)	—	1965
The concept of Indian Literatures	—	1979
The Song of Life and other Poems	—	1947
India and World culture	—	1972
Some aspects of Hinduism	—	1979

ಹಿಂದಿಗೆ ಅನುವಾದಿಸಲ್ಪಟ್ಟ ಗ್ರಂಥಗಳು

सौंदर्य मीमांसा - डा. टी. आर भट्ट - 1990
समुंदर के उसपार - डा. टी. आर भट्ट - 1991

ಗೋಕಾಕ ಅವರನ್ನು ಕುರಿತ ಗ್ರಂಥಗಳು

ಕನ್ನಡದಲ್ಲಿ

ವಿನಾಯಕ ವಾಙ್ಮಯ - ಸಂ. ಹಾ. ಮಾ. ನಾಯಕ ಮತ್ತು ಸಂಧವಳ್ಳಿ ಅನಂತಮೂರ್ತಿ - 1969
ವಿನಾಯಕ ಮಹಾದರ್ಶನ - ಎನ್. ಕೆ. - 1986
ವಿನಾಯಕ ಒಂದು ಅಧ್ಯಯನ : ಶಿವರಾಮ ಕಾಡನಕುಪ್ಪೆ - 1986
ವಿನಾಯಕ - ಒಂದು ಅಧ್ಯಯನ : ಎಸ್. ಚೆನ್ನಪ್ಪ - 1986
ವಿನಾಯಕ : ಜಿ. ಬಿ. ಜೋಶಿ ಮತ್ತು ಕೆ. ಡಿ. ಕುರ್ತಕೋಟಿ - 1958
ವಿನಾಯಕರ ಸಮುದ್ರ ಗೀತೆಗಳು : ಎಚ್. ಜಿ. ಶ್ರೀಧರ - 1987
ಸಿದ್ಧಿ ವಿನಾಯಕ ಮೋದಕ : ಷಷ್ಟ್ಯಪೂರ್ತಿ ಸಮಾರಂಭದ ನೆನಪು - 1969
ವಿನಾಯಕ - 75 : ಚಿ. ನ. ಮಂಗಳ - 1984
ಕವಿ ವಿನಾಯಕ : ನೆಗಳೂರು ರಂಗನಾಥ - 1958
ವಿನಾಯಕ ಕೃಷ್ಣ ಗೋಕಾಕ : ಸಂ. ರಾ. ಬಾ. ಲಕ್ಷ್ಮೇಶ್ವರ ಮತ್ತು ಉಷಾ - 1970
ವಿನಾಯಕ ಸಾಹಿತ್ಯ ವಿಹಾರ : ಸಂ. ಎಸ್. ಚೆನ್ನಪ್ಪ ಅರ್ಕಾವತಿ - 1987

ಇಂಗ್ಲೀಷಿನಲ್ಲಿ

Vinayak K. Gokak : Dr. Shankar Mokashi Punekar - 1974

ಹಿಂದಿಯಲ್ಲಿ

कवि मनीषी : विनायक कृष्ण गोकाक - डा. टी. आर भट्ट - 1991

ಸಂಗ್ರಹ : – ಟಿ. ಆರ್. ಭಟ್ಟ

□□

ಪ್ರಸ್ತುತ

ಡಾ. ವಿ. ಕೃ. ಗೋಕಾಕ "ನಮ್ಮ ಮನೆಯಂಗಳದಿ ಬೆಳೆದೊಂದು ಹೂವು". ಕರ್ನಾಟಕ ಕಾಲೇಜಿನ ವಿದ್ಯಾರ್ಥಿಯಾಗಿ, ಪ್ರಾಚಾರ್ಯರಾಗಿ, ಕರ್ನಾಟಕ ವಿಶ್ವವಿದ್ಯಾಲಯದ ಪ್ರಗತಿಯಲ್ಲಿ ಪಾಲುಗಾರರಾದ ಅವರು ನಮ್ಮ ಹೆಮ್ಮೆ, ನಮ್ಮ ಅಭಿಮಾನ. ಭಾರತ ದ ಉನ್ನತ ಪುರಸ್ಕಾರವೆನಿಸಿದ "ಜ್ಞಾನಪೀಠ ಪ್ರಶಸ್ತಿ" ಅವರಿಗೆ ಪ್ರಾಪ್ತವಾದ ಸಂದರ್ಭದಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಸಲ್ಲಿಸುತ್ತಲಿರುವ ರಾಜ್ಯಮಟ್ಟದ ಸನ್ಮಾನದ ಅಂಗವಾಗಿ "ಡಾ ವಿ. ಕೃ. ಗೋಕಾಕ ವಿಶೇಷಾಂಕ" ಪ್ರಕಟವಾಗುತ್ತಲಿದೆ.

ಡಾ. ವಿನಾಯಕ ಕೃಷ್ಣ ಗೋಕಾಕರು ನಮ್ಮ ನಾಡಿನ ಬಹುದೊಡ್ಡ ಸ್ವತ್ತು, ನಮ್ಮ ದೇಶದ ಬಹುದೊಡ್ಡ ಆಸ್ತಿ. ಚಿಕ್ಕ ಹಳ್ಳಿಯಲ್ಲಿ ಹುಟ್ಟಿ ಕಾವ್ಯಪ್ರತಿಭೆ, ಜ್ಞಾನಸಂಪತ್ತು, ದೈವೀಶ್ರದ್ಧೆ, ಮಾನವೀಯ ಅಂತಃಕರಣಗಳ ಕೋಶವಾಗಿರುವ ಅವರು ದೇಶದ ಗಡಿಗೆರೆಗಳನ್ನು ದಾಟಿ ಬೆಳೆದ ವಿಶ್ವ ಭಾರತೀಯ. ದೈತ್ಯ ಪ್ರತಿಭೆಯ ಅವರು ಸೃಷ್ಟಿಸಿದ ಸಾಹಿತ್ಯ ಅಪಾರ. ಅದು ಪೂರ್ವ ಪಶ್ಚಿಮಗಳ ಅಪೂರ್ವಸಂಗಮ. ಕನ್ನಡ ಇಂಗ್ಲೀಷ ಸಂಸ್ಕೃತ ಮರಾಠಿ ಭಾಷೆಗಳಲ್ಲಿ ಸಮಾನ ಪ್ರಭುತ್ವವನ್ನು ಪಡೆದ ಅವರು ಕಾವ್ಯ, ಕಾದಂಬರಿ, ನಾಟಕ, ವಿಮರ್ಶೆ, ಪ್ರಬಂಧ, ಅನುವಾದ ಪ್ರಕಾರಗಳಲ್ಲಿ ತಮ್ಮ ನೂತನ ಹೆಜ್ಜೆಗುರುತುಗಳನ್ನು ಮೂಡಿಸಿದ್ದಾರೆ. ನವೋದಯದಿಂದ ಪ್ರಾರಂಭವಾದ ಅವರ ಸಾಹಿತ್ಯಸೃಷ್ಟಿ "ಸಮುದ್ರ ಗೀತೆಗಳು" ಕೃತಿಯ ಮೂಲಕ ಕನ್ನಡದಲ್ಲಿ 'ನವ್ಯಮಾರ್ಗ'ವನ್ನು ತೆರೆದುದು, ವಿಮರ್ಶೆಯನ್ನು ನವೀಕರಣಗೊಳಿಸಿದುದು ಈಗಾಗಲೇ ಇತಿಹಾಸದ ವಿಷಯವಾಗಿದೆ. ಡಾ. ಗೋಕಾಕ ಅವರ ಪ್ರತಿಭೆ, ಪಾಂಡಿತ್ಯ, ಸಾಹಿತ್ಯ ದರ್ಶನಗಳ ಹಾಸುಬೀಸುಗಳನ್ನು ಗರ್ಭೀಕರಿಸಿಕೊಂಡ ಸುಮಾರು ಮೂವತ್ತೈದು ಸಾವಿರ ಪಂಕ್ತಿವ್ಯಾಪ್ತಿಯ - ಮಹಾ ಕಾವ್ಯ 'ಭಾರತ

ಸಿಂಧುರಶ್ಮಿ' ಅವರ ಕಾವ್ಯ ಸಿದ್ಧಿಯ ಉನ್ನತ ಶಿಖರವೆನಿಸಿದರೆ, ಸುಮಾರು ಹದಿಮೂರು ನೂರು ಪುಟ ವಿಸ್ತಾರದ "ಸಮರಸವೇ ಜೀವನ" ಕಾದಂಬರಿ ಅವರ ಗದ್ಯರಚನಾಸಿದ್ಧಿಯ ಮೈಲುಗಲ್ಲಾಗಿದೆ.

ಸಾಹಿತ್ಯಸೃಷ್ಟಿ ಡಾ. ಗೋಕಾಕ ಅವರ ಬದುಕಿನ ಒಂದು ಮುಖವಾದರೆ, ಶೈಕ್ಷಣಿಕ ಸಾಧನೆ ಮತ್ತೊಂದು ಮುಖ. ಪ್ರಾಧ್ಯಾಪಕ, ಪ್ರಾಚಾರ್ಯ, ನಿರ್ದೇಶಕ, ಕುಲಪತಿ - ಹೀಗೆ ವಿವಿಧ ಹುದ್ದೆಗಳಲ್ಲಿ ತಮ್ಮ ಪ್ರತಿಭೆಯನ್ನು ಹಂಚಿಕೊಂಡ ಅವರು ಶೈಕ್ಷಣಿಕ ಶಿಸ್ತು, ಕಾರ್ಯಕ್ಷಮತೆ, ದೂರದೃಷ್ಟಿ, ಕರ್ತೃತ್ವಶಕ್ತಿಗಳಿಂದ ವಹಿಸಿಕೊಂಡ ಸ್ಥಾನವನ್ನು ಅರ್ಥಪೂರ್ಣಗೊಳಿಸುವುದರ ಜೊತೆಗೆ, ಅದರ ಘನತೆಯನ್ನೂ ಹೆಚ್ಚಿಸಿದ್ದಾರೆ.

ಡಾ. ಗೋಕಾಕ ಅವರದು ಸರಳ - ಗಂಭೀರ ವ್ಯಕ್ತಿತ್ವ. ಧಾರವಾಡದ ಗೆಳೆಯರ ಗುಂಪಿನ ಭಾಗವಾಗಿ, ಶೈಕ್ಷಣಿಕ, ಸಾಂಸ್ಕೃತಿಕ ಸಂಸ್ಥೆಗಳ ಸದಸ್ಯರಾಗಿ, ಕೇಂದ್ರ ಸಾಹಿತ್ಯ ಅಕಾಡೆಮಿ, ಜ್ಞಾನಪೀಠ ಸಂಸ್ಥೆಯ ಕಾರ್ಯಸಮಿತಿಯ ಅನಿವಾರ್ಯ ಅಂಗವಾಗಿ, ಅಂತರ್‌ರಾಷ್ಟ್ರೀಯ ಸಂಘ ಸಂಸ್ಥೆಗಳ ಸಂಪರ್ಕವುಳ್ಳವರಾಗಿ ಇವರು ಗಳಿಸಿಕೊಂಡ ಸಾಹಿತಿಗಳ, ಸ್ನೇಹಿತರ, ಆತ್ಮೀಯರ ಬಳಗ ದೊಡ್ಡದು. ಅದು "ಕಾವೇರಿಯಿಂದಮಾ ಗೋದಾವರಿ"ಯನ್ನು ಮೀರಿ ಕನ್ಯಾಕುಮಾರಿ-ಹಿಮಾಲಯಗಳನ್ನೂ ದಾಟಿದೆ.

ಇಂಥ ವೈವಿಧ್ಯಮಯ ಜೀವನಾನುಭವ-ಗಂಭೀರವಾದ ಜೀವನ ಧೋರಣೆ, ಗಾಢವಾದ ಚಿಂತನಶೀಲತೆಗಳಿಂದ ರೂಪಿತವಾದ ಅವರ ವ್ಯಕ್ತಿತ್ವಕ್ಕೆ ಅಕಾಡೆಮಿ ಪುರಸ್ಕಾರ, ಪದ್ಮಶ್ರೀ ಪ್ರಶಸ್ತಿಗಳು ಹುಡುಕಿಕೊಂಡು ಬಂದುದು ಯಥಾ ಯೋಗ್ಯವಾಗಿದೆ. ಈಗ ಅವರಿಗೆ ಲಭಿಸಿದ ಜ್ಞಾನಪೀಠ ಪ್ರಶಸ್ತಿ ಗಗನಗಾಮಿಯಾದ ಕನ್ನಡವಕ್ಕಿಗೆ ಮತ್ತೊಂದು ಚಿನ್ನದ ಗರಿ.

೧೪ ಅಕ್ಟೋಬರ ೧೯೬೭ ರಲ್ಲಿ ಡಾ. ಗೋಕಾಕ ಅವರನ್ನು ಗೌರವ ಡಿ.ಲಿಟ್. ಪದವಿಯಿಂದ ಗೌರವಿಸಿದ ಕರ್ನಾಟಕ ವಿಶ್ವವಿದ್ಯಾಲಯ , ಈ ಸಂದರ್ಭದಲ್ಲಿ ಅವರನ್ನು ಸತ್ಕರಿಸುತ್ತಿದ್ದು, ಅದರ ಮುಖವಾಣಿಯಾದ ' ಕರ್ನಾಟಕ ಭಾರತಿ' ವಿಶೇಷಾಂಕ ಮೂಲಕ ಅಭಿನಂದಿಸುತ್ತಿದೆ.

ಈ ಸಂಚಿಕೆಯಲ್ಲಿ ಗೋಕಾಕ ಅವರ ವ್ಯಕ್ತಿತ್ವ, ಪ್ರತಿಭೆ, ಬಹುಶ್ರುತತ್ವ, ಕಾವ್ಯ, ನಾಟಕ, ಪ್ರಬಂಧ, ಕಾದಂಬರಿ, ವಿಮರ್ಶೆ ಮತ್ತು ಇಂಗ್ಲೀಷ ಬರಹಗಳಿಗೆ ಸಂಬಂಧಿಸಿದ ಲೇಖನಗಳನ್ನು ಅಳವಡಿಸಲಾಗಿದೆ. ಇಂಥ ಒಂದು ಸಂಪುಟವನ್ನು ಹೊರತರಲು ಪ್ರೋತ್ಸಾಹಿಸಿದ ಮಾನ್ಯ ಕುಲಪತಿ ಡಾ. ಎಸ್ ರಾಮೇಗೌಡ ಅವರಿಗೂ ಸಂಪಾದಕ ಮಂಡಳದ ಸದಸ್ಯರಿಗೂ ಲೇಖನಗಳನ್ನು ಪೂರೈಸಿದ್ದ ವಿದ್ವಾಂಸರಿಗೂ 'ಭಾರತಿ' ಕೃತಜ್ಞತೆಗಳನ್ನು ಸಲ್ಲಿಸುತ್ತದೆ.

- ಸಂಪಾದಕರು

ಲೇಖಕರ ವಿಳಾಸ

ಶ್ರೀ ಸದಾನಂದ ಕನವಳ್ಳಿ
ನಿರ್ದೇಶಕರು, ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಪ್ರೊ. ಶ್ರೀನಿವಾಸ ಕುಲಕರ್ಣಿ
ಕನ್ನಡ ಅಧ್ಯಾಪಕರು,
ರಾಣಿ ಪಾರ್ವತಿದೇವಿ ಕಾಲೇಜು, ಬೆಳಗಾವಿ

ಪ್ರೊ. ಕೀರ್ತಿನಾಥ ಕುರ್ತಕೋಟಿ
ನಿವೃತ್ತ ಇಂಗ್ಲೀಷ ಪ್ರಾಧ್ಯಾಪಕರು,
ದೇಸಾಯಿ ಕಾಲನಿ, ಶ್ರೀನಗರ, ಧಾರವಾಡ.

ಡಾ. ಪ್ರಧಾನ ಗುರುದತ್ತ
ಪ್ರವಾಚಕರು, ಕನ್ನಡ ಅಧ್ಯಯನ ಸಂಸ್ಥೆ,
ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಡಾ. ಬುದ್ಧಣ್ಣ ಹಿಂಗಮಿರೆ
ಪ್ರವಾಚಕರು, ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಶ್ರೀ. ಟಿ. ನ. ಮಂಗಳಾ
ನಿವೃತ್ತ ಪ್ರಾಚಾರ್ಯರು,
'ಮಾಹೇಶ್ವರಿ ಪ್ರಸಾದ', ೩೪೫, ೪ನೆಯ ಮುಖ್ಯರಸ್ತೆ,
ಸದಾಶಿವನಗರ, ಬೆಂಗಳೂರು.

ಡಾ. ಜಿ. ಎಂ. ಹೆಗಡೆ
ಕನ್ನಡ ಅಧ್ಯಾಪಕರು,
ಕಿಟೆಲ್ ಕಲಾ ಮಹಾವಿದ್ಯಾಲಯ, ಧಾರವಾಡ.

ಪ್ರೊ. ಸಿದ್ಧಲಿಂಗ ಪಟ್ಟಣಶೆಟ್ಟಿ
ಮುಖ್ಯಸ್ಥರು, ಹಿಂದಿ ವಿಭಾಗ,
ಕರ್ನಾಟಕ ಕಲಾ ಮಹಾವಿದ್ಯಾಲಯ, ಧಾರವಾಡ

ಪ್ರೊ. ಎಚ್. ವಿ. ನಾಗೇಶ
ಉಪಪ್ರಾಚಾರ್ಯರು ಹಾಗೂ ಪ್ರಾಧ್ಯಾಪಕರು,
ಸಮಾಜಶಾಸ್ತ್ರ ವಿಭಾಗ, ಜೆ. ಎಸ್. ಎಸ್. ಕಾಲೇಜು, ಧಾರವಾಡ.

ಶ್ರೀ. ಜಿ. ಬಿ. ಸಜ್ಜನ
ನಿವೃತ್ತ ಪ್ರಾಚಾರ್ಯರು,
ಮಠಪತಿಗಲ್ಲಿ, ವಿಜಾಪುರ.

ಡಾ. ಟಿ. ಆರ್. ಭಟ್ಟ
ಪ್ರವಾಚಕರು, ಹಿಂದಿ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

❑ ❑

ಮನುಕುಲದ ಕವಿಯಾಗು, ಕುಲಕೋಟಿಗಳನು ತಿಳಿ
ಯಾವ ನುಡಿಯನೆ ಇರಲಿ ವಾಣಿ ನುಡಿದು

ನಂಬದಿರು ಒಂದೆ ಧರ್ಮವ, ಒಂದೆ ಮಾರ್ಗವನು
ಇಂಬುಗೊಡದಿರು ಯಾವುದೊಂದು ಶ್ರುತಿಗೆ

ಹೋದ ಮೇಲೆ ಸುತ್ತಬೇಕು ಏಳುಕೋಟೆ ದ್ವಾರವು
ಹಾದಿಯಲ್ಲಿ ತೀರದಂಥ ದುಃಖವಿಹುದಪಾರವು
ಸಾಧಿಸುತ್ತ ಜಯಿಸುವುದೇ ಬಾಳುವುದರ ಸಾರವು

Impressions, Bgm. Tel. 24849